
# ನಾಲ್ಕನೇ ಆಯಾಮ

ಸಂಪುಟ-4 ಸಾಂಸ್ಕೃತಿಕ



ಪದ್ಮರಾಜ ದಂಡಾವತಿ

ಪದ್ಮರಾಜ ದಂಡಾವತಿ

# ನಾಲ್ಕನೇ ಆಯಾಮ

ಸಂಪುಟ-4

# ಸಾಂಸ್ಕೃತಿಕ

ಸಪ್ನ ಬುಕ್ ಹೌಸ್®
3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009
ದೂರವಾಣಿ : 40114455

NALKANE AAYAMA Vol.-4 (Cultural): by Padmaraj Dandavati, published by Sapna Book House (P) Ltd., R.O. #11, 3rd Main Road, Gandhinagar, Bangalore-560009 Ph: 080-40114455

ISBN:978-81-280-2149-7

[KB-2010]

ಹಕ್ಕುಗಳು: ಪ್ರಜಾವಾಣಿ

ದಿ ಪ್ರಿಂಟರ್ಸ್ (ಮೈಸೂರು) ಪ್ರೈ.ಲಿ. ಸಂಸ್ಥೆಯ ಅನುಮತಿ

ಮೇರೆಗೆ ಈ ಪುಸ್ತಕದ ಲೇಖನಗಳನ್ನು ಬಳಸಿಕೊಳ್ಳಲಾಗಿದೆ

ಪ್ರಥಮ ಮುದ್ರಣ : ಮಾರ್ಚ್ 2013

| | |
|---|---|
| ಪುಟಗಳು : XII+138 = 150 | ಪ್ರತಿಗಳ ಸಂಖ್ಯೆ : 1000 |
| ರೂ. : * 95/- | Paper Used: 18.6 Kg (70 gsm) D/D N.S. Light Weight Maplitho Book Size : 1/8th Demi |

ಹಂಚಿಕೆದಾರರು

ಬೈಟ್ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟ ರ್ಸ್

ರೈಲ್ವೇ ಪ್ಯಾರಲಲ್ ರೋಡ್

ಕುಮಾರಪಾರ್ಕ್ ಈಸ್ಟ್

ಬೆಂಗಳೂರು - 560 001

ಪುಟ ವಿನ್ಯಾಸ : ಈಶ್ವರ ಬಡಿಗೇರ

ಮುಖಪುಟ ವಿನ್ಯಾಸ : ಎಸ್. ವಿಷ್ಣುಕುಮಾರ್, ಬೆಂಗಳೂರು

ಮುದ್ರಣ : ಪ್ರಿಂಟೆಕ್ ಪ್ರಿಂಟರ್, ಬೆಂಗಳೂರು

# ಅರ್ಪಣೆ

ಡಾ.ಎಂ.ಎಂ.ಕಲಬುರ್ಗಿ

ಮತ್ತು

ಡಾ.ಮನು ಬಳಿಗಾರ್

ಅವರಿಗೆ

# ಪರಿಚಯ

ಪದ್ಮರಾಜ ದಂಡಾವತಿ ಹುಟ್ಟಿದ್ದು ವಿಜಾಪುರ ಜಿಲ್ಲೆ ಮುದ್ದೇಬಿಹಾಳದಲ್ಲಿ. 1955, ನವೆಂಬರ್ 8. ಕರ್ನಾಟಕ ವಿಶ್ವವಿದ್ಯಾಲಯದಿಂದ ಕನ್ನಡ ಸ್ನಾತಕೋತ್ತರ ಎಂ.ಎ ಪದವಿ. ಎಸ್ಸೆಸ್ಸೆಲ್ಸಿಯಿಂದ ಎಂ.ಎ ವರೆಗೆ ಉದ್ದಕ್ಕೂ ಕಾಯ್ದುಕೊಂಡ ಪ್ರಥಮ ಶ್ರೇಣಿ, ಅರಂಭದಿಂದಲೂ ಸಾಹಿತ್ಯದಲ್ಲಿ ಆಸಕ್ತಿ. ಆಗಬೇಕು ಅಂದುಕೊಂಡುದು ಕನ್ನಡ ಉಪನ್ಯಾಸಕ, ಒಂದು ಬಂದುದು ಪತ್ರಿಕೋದ್ಯಮ, ನೌಕರಿ ಸಿಗದೆ ಅಲೆದಾಡುತ್ತಿದ್ದಾಗ ಶೂದ್ರ ಸಾಹಿತ್ಯ ಮಾಸಿಕದಲ್ಲಿ ಸಹ-ಸಂಪಾದಕನಾಗಿ ನಾಲ್ಕು ವರ್ಷ ಕೆಲಸ. ಅನೇಕ ಲೇಖನಗಳ ಪ್ರಕಟಣೆ, ಕೃತಿ ವಿಮರ್ಶೆ. ಕಳೆದ ಮೂವತ್ತು ವರ್ಷಗಳಿಂದ ಪ್ರಜಾವಾಣಿಯಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ ಇದೀಗ ಕಾರ್ಯ ನಿರ್ವಾಹಕ ಸಂಪಾದಕ, ಪ್ರತಿ ಭಾನುವಾರ ಪ್ರಕಟವಾಗುವ ನಾಲ್ಕನೇ ಆಯಾಮ ಅಂಕಣ ತುಂಬ ಜನಪ್ರಿಯ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಪ್ರವಾಸ ಹೀಗೆ ವೈವಿಧ್ಯಮಯ ಸಂಗತಿಗಳು ಅವರ ಅಂಕಣದ ವಸ್ತು.

ಪತ್ರಿಕಾ ಭಾಷೆ, ರಿಪೋರ್ಟಿಂಗ್ (ಎರಡೂ ತೃತೀಯ ಮುದ್ರಣ) ಅವಲೋಕನ, ಗೊಮ್ಮಟ ಮತ್ತು ನಾಲ್ಕನೇ ಆಯಾಮ ಸಂಪುಟ 1-2 ಅವರ ಪ್ರಕಣತ ಕೃತಿಗಳು. 2009ರಲ್ಲಿ ಅಮೆರಿಕಾ ಸರ್ಕಾರವು ತನ್ನ ವಿದೇಶಾಂಗ ನೀತಿ ಕುರಿತ * ಅಂತರರಾಷ್ಟ್ರೀಯ ಸಂದರ್ಶಕರ ನಾಯಕತ್ವ ಶಿಬಿರಕ್ಕೆ ಇವರನ್ನು ಆಯ್ಕೆ ಮಾಡಿ ತನ್ನ ಅತಿಥಿಯಾಗಿ 15 ದಿನಗಳ . ಕಾಲ ದೇಶದಲ್ಲಿ ಇಟ್ಟುಕೊಂಡಿತ್ತು. ಆ ವರ್ಷ ದೆಹಲಿ ಬಿಟ್ಟರೆ ಇಡೀ ಭಾರತದಿಂದ ಈ ಶಿಬಿರಕ್ಕೆ ಆಯ್ಕೆಯಾಗಿದ್ದ ಏಕೈಕ ವ್ಯಕ್ತಿ ಇವರು. ರಾಜ್ಯೋತ್ಸವ ಮತ್ತು ಮಾಧ್ಯಮ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿರುವ ದಂಡಾವತಿ ನೇಪಾಳ, ಬ್ಯಾಂಕಾಕ್, ಫ್ರಾನ್ಸ್, ಇಟಲಿ, ದಕ್ಷಿಣ ಆಫ್ರಿಕಾ ಮತ್ತು ಜೋರ್ಡಾನ್ ದೇಶಗಳನ್ನು ಸುತ್ತಿ ಬಂದಿದ್ದಾರೆ. ಪತ್ನಿ, ಒಬ್ಬ ಪುತ್ರ ಮತ್ತು ಒಬ್ಬ ಪುತ್ರಿಯ ಪುಟ್ಟ ಸಂಸಾರ ಅವರದು.

# ನನ್ನ ಮಾತು

ನಾಲ್ಕನೇ ಆಯಾಮ ಅಂಕಣದಲ್ಲಿ ಪ್ರಕಟವಾದ ಲೇಖನಗಳ ನಾಲ್ಕನೇ ಸಂಪುಟ ಇದು. ಪ್ರತಿ ಪುಸ್ತಕ ಹೊರಗೆ ಬರುವಾಗಲೂ ಲೇಖಕನಿಗೆ ಒಂದಿಷ್ಟು ಕೃತಾರ್ಥ ಭಾವ ಇದ್ದೇ ಇರುತ್ತದೆ. ಅಂಕಣ ಬರೆಯುವ ಕಷ್ಟ ಏನು ಎಂಬುದನ್ನು ನಾನು ಪ್ರತಿ ವಾರ ಅನುಭವಿಸಿದ್ದೇನೆ. ಲೇಖಕನ ಮಿತಿ ಮತ್ತು ಸಾಧ್ಯತೆ ಎರಡನ್ನೂ ತಿಳಿಸುವ ಒಂದು ಮಾಧ್ಯಮ ಇದು. ನನ್ನ ಮಿತಿ ಮತ್ತು ಸಾಧ್ಯತೆ ಏನು ಎಂದು ನನಗೆ ಗೊತ್ತಿದೆ. ಅದರಲ್ಲಿ ನನಗೆ ಯಾವ ಹುಸಿ ಅಹಂಕಾರವೂ ಇಲ್ಲ. ಆದರೂ ಪ್ರತಿ ವಾರದ ಅಂಕಣ ನನಗೇ ತಿಳಿಯದಂತೆ ಒಂದು ಓದುಗ ವಲಯವನ್ನು ಸೃಷ್ಟಿಸಿದೆ. ಯಾವುದೋ ಊರಿನ ಮೂಲೆಯಿಂದ ಒಬ್ಬ ಹೆಣ್ಣು ಮಗಳು 'ನಾನು ನಿಮ್ಮ ಅಭಿಮಾನಿ ನಿಮ್ಮ ಅಂಕಣ ಪ್ರತಿವಾರ ಓದುತ್ತೇನೆ' ಎಂದು, ಇನ್ನೊಬ್ಬರು ಭಾನುವಾರ ಬೆಳಿಗ್ಗೆ ಹಲ್ಲು ಉಜ್ಜುವುದಕ್ಕಿಂತ ಮುಂಚೆ ನಿಮ್ಮ ಅಂಕಣ ಓದುತ್ತೇನೆ' ಎಂದು ಹೇಳುವಾಗ ಮನಸ್ಸು ತುಂಬಿ ಬರುತ್ತದೆ. ಏನು ಕೊಟ್ಟರೂ ಸಿಗದ ನಿರ್ವ್ಯಾಜ ಪ್ರೀತಿಯಿದು. ಹೀಗೆ ಕರೆ ಮಾಡಿ ಹೇಳುವ ಓದುಗರು ಹಲವರಾದರೆ ಕರೆ ಮಾಡದೇ ಓದುವ ಅನೇಕ ಓದುಗರೂ ಇದ್ದಾರೆ ಎಂದು ನಾನು ಬಲ್ಲೆ. ಅಪ್ಪಿ ತಪ್ಪಿ ಒಂದು ವಾರ ಅಂಕಣ ಬರೆಯದೇ ಇದ್ದರೆ ನನ್ನ ಜವಾಬ್ದಾರಿಯನ್ನು ನಿಷ್ಠುರವಾಗಿ ನೆನಪಿಸುವ ಓದುಗರೂ ಇದ್ದಾರೆ. ಇಲ್ಲಿನ ಲೇಖನಗಳಿಗೆ ಬಂದ ಹಲವು ಪ್ರತಿಕ್ರಿಯೆಗಳಲ್ಲಿ ಕೆಲವನ್ನು ಆಯ್ದು ಈ ಪುಸ್ತಕದ ಕೊನೆಯಲ್ಲಿ ಪ್ರಕಟಿಸಿದ್ದೇನೆ. ಪ್ರತಿವಾರ ನನ್ನ ಜತೆಗೆ ಮಾತನಾಡದೇ ಇದ್ದರೆ ಭಾನುವಾರ ಪೂರ್ತಿಯಾಗುವುದಿಲ್ಲ ಎನ್ನುವ ಒಂದು ದೊಡ್ಡ ಓದುಗ ಬಳಗವೇ ನಿರ್ಮಾಣವಾಗಿದೆ. ಅವರೆಲ್ಲರ ಹೆಸರು ಇಲ್ಲಿ ಹೇಳಲು ಆಗದು. ಆದರೆ, ಅವರಿಗೆ ಈ ಮೂಲಕ ನನ್ನ ಪ್ರಣಾಮಗಳನ್ನು ಸಲ್ಲಿಸುವೆ.

ಈ ಪುಸ್ತಕದಲ್ಲಿ ಕೇವಲ ಸಾಂಸ್ಕೃತಿಕ ಬರಹಗಳನ್ನು ಮಾತ್ರ ಒತ್ತಟ್ಟಿಗೆ ತಂದಿದ್ದೇನೆ. ನನಗೆ ಮತ್ತು ಓದುಗರಿಗೆ ಹೆಚ್ಚು ಖುಷಿ ಕೊಟ್ಟ ಲೇಖನಗಳು ಇವು. ಈ ಲೇಖನಗಳನ್ನು ಬರೆಯುವಾಗ ನಾನು ಓದಿದ

ಸಾಹಿತ್ಯ ನನ್ನ ಕೈ ಹಿಡಿದಿದೆ. ಗದ್ಯದಲ್ಲಿ ನಿಮ್ಮ ಸಾಧನೆ ದೊಡ್ಡದು ಎಂದು ನಾನು ತುಂಬ ಗೌರವಿಸುವ ಲೇಖಕ ಚಂದ್ರಶೇಖರ ಕಂಬಾರರು ನನಗೆ ಮತ್ತೆ ಮತ್ತೆ ಹೇಳಿ ಬೆನ್ನು ತಟ್ಟಿದ್ದಾರೆ. ಅವರ ಪ್ರೀತಿ ದೊಡ್ಡದು.

ಈ ಪುಸ್ತಕಕ್ಕೆ ಮುನ್ನುಡಿ ರೂಪದ ನಾಲ್ಕು ಮಾತು ಬರೆಯಬೇಕು ಎಂದು ಕೇಳಿಕೊಂಡಾಗ ತುಂಬು ಪ್ರೀತಿಯಿಂದ ಬರೆದುಕೊಟ್ಟ ಅವರಿಗೆ ಮತ್ತು ಬೆನ್ನುಡಿ ಬರೆಯಬೇಕು ಎಂದು ಕೇಳಿಕೊಂಡಾಗ ಪ್ರೀತಿಯಿಂದ ಒಪ್ಪಿಕೊಂಡು ಬರೆದ ಗೆಳತಿ ಆರ್.ಪೂರ್ಣಿಮಾ ಅವರಿಗೆ ನನ್ನ ನಮಸ್ಕಾರಗಳು.

ಇಲ್ಲಿನ ಲೇಖನಗಳನ್ನು ಪುಸ್ತಕ ರೂಪದಲ್ಲಿ ತರಲು ಅನುಮತಿ ಕೊಟ್ಟ ನನ್ನ ಸಂಪಾದಕರಾದ ಶ್ರೀ.ಕೆ.ಎನ್.ಶಾಂತಕುಮಾರ್ ಅವರನ್ನು ' ಗೌರವದಿಂದ ನೆನಪಿಸಿಕೊಳ್ಳುತ್ತೇನೆ. ನನ್ನ ಆತ್ಮೀಯ ಗೆಳೆಯರಾದ ಗೋಪಾಲಕೃಷ್ಣ ಹೆಗಡೆ, ಗಂಗಾಧರ ಮೊದಲಿಯಾರ್, ಎಂ.ಎ.ಪೊನ್ನಪ್ಪ, ಆಶಾ ಕೃಷ್ಣಸ್ವಾಮಿ, ಎಸ್.ಎ.ಮಾನ್ವಿ, ಗಂಗಾಧರ ಬೆಳಗಲಿ, ಬಿ.ಆರ್.ಹಿರೇಮಠ ಮತ್ತು ನ್ಯಾಯಮೂರ್ತಿ ಅಶೋಕ ಬಿ.ಹಿಂಚಿಗೇರಿ ಅವರ ಬೆಚ್ಚನೆಯ ಸ್ನೇಹವನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದು ನನ್ನ ಕರ್ತವ್ಯ ಎಂದು ಭಾವಿಸಿದ್ದೇನೆ.

ಈ ಪುಸ್ತಕದಲ್ಲಿ ಪ್ರಕಟವಾದ ಎಲ್ಲ ಲೇಖನಗಳನ್ನು ನುಡಿ ತಂತ್ರಾಂಶಕ್ಕೆ ಬದಲಿಸಿ ಚಂದವಾಗಿ ಪುಟ ವಿನ್ಯಾಸ ಮಾಡಿದ ಸಹೋದ್ಯೋಗಿ ಈಶ್ವರ ಬಡಿಗೇರ ಅವರ ದಣಿವರಿಯದ ಆಕರ್ಷಕ ಕೆಲಸಕ್ಕೆ, ಮುಖಚಿತ್ರ ಬರೆದ ಕಲಾವಿದ ಎಸ್.ವಿಷ್ಣುಕುಮಾರ್ ಅವರಿಗೆ, ನನ್ನ ಅಂದವಾದ ಭಾವಚಿತ್ರ ತೆಗೆದ ವಿಶ್ವನಾಥ ಸುವರ್ಣ ಅವರಿಗೆ, ಎಂದಿನ ಪ್ರೀತಿಯಿಂದ ಪುಸ್ತಕ ಪ್ರಕಟಿಸುತ್ತಿರುವ ಸಪ್ನ ಸಂಸ್ಥೆಯ ಮಾಲೀಕರಾದ ನಿತಿನ್ ಶಹಾ, ಸಂಸ್ಥೆಯ ಕನ್ನಡ ವಿಭಾಗ ನೋಡಿಕೊಳ್ಳುವ ಶ್ರೀ ದೊಡ್ಡಗೌಡ ಅವರಿಗೆ ನನ್ನ ನೆನಕೆಗಳು,

ನೆನೆದಾಗಲೆಲ್ಲ ನನ್ನ ಮನಸ್ಸನ್ನು ಆದ್ರ್ರಗೊಳಿಸುವ ವಿದ್ಯಾಗುರು ಡಾ.ಎಂ.ಎಂ.ಕಲಬುರ್ಗಿಯವರಿಗೆ ಮತ್ತು ಎರಡು ದಶಕಗಳಿಂದ ನನ್ನ ಬಗ್ಗೆ ಕುಂದಿಲ್ಲದ ಪ್ರೀತಿಯನ್ನು ತೋರಿಸಿಕೊಂಡು ಬಂದಿರುವ ಅಣ್ಣ ಡಾ.ಮನು ಬಳಿಗಾರ್ ಅವರಿಗೆ ಈ ಪುಸ್ತಕವನ್ನು ಅರ್ಪಿಸಿದ್ದೇನೆ.

ನನ್ನ ಕಷ್ಟ ಸುಖಗಳಲ್ಲಿ ಒಂದಾಗಿ ನನ್ನ ಬಾಳ ದೋಣಿ ಹಾಯಿ ತಪ್ಪದಂತೆ ನೋಡಿಕೊಂಡು ಬಂದಿರುವ ಪತ್ನಿ ಲಲಿತಾ, ಮಗ ಅಶ್ವಿನ್ ಕುಮಾರ್ ಮತ್ತು ಮಗಳು ವರ್ಷಾ ಅವರ ಪ್ರೀತಿಯನ್ನು ಅಕ್ಷರಗಳಲ್ಲಿ ಹಿಡಿದು ಇಡುವುದು ಕಷ್ಟ. ಅವರಿಗೆ ಮತ್ತು ನನ್ನ ಏಳಿಗೆ ತಮ್ಮದೇ ಎಂದು ಭಾವಿಸುವ ನನ್ನ ಕುಟುಂಬದ ಎಲ್ಲ ಬಂಧು ಬಾಂಧವರನ್ನು ಈ ಪುಸ್ತಕ ಹೊರಬರುತ್ತಿರುವ ಸಂದರ್ಭದಲ್ಲಿ ಪ್ರೀತಿ ಗೌರವದಿಂದ ನೆನಪಿಸಿಕೊಳ್ಳುತ್ತೇನೆ.

**ಪದ್ಮರಾಜ ದಂಡಾವತಿ**

# ಮುನ್ನುಡಿ

ಪದ್ಮರಾಜ ದಂಡಾವತಿ ನಾನು ಇಷ್ಟಪಡುವ ಪತ್ರಕರ್ತರಲ್ಲಿ ಒಬ್ಬರು. 'ಪ್ರಜಾವಾಣಿ'ಯಲ್ಲಿ ವಾರವಾರವೂ ಅವರು ಬರೆದ ಲೇಖನಗಳ ಒಂದು ಸಂಗ್ರಹವಿದು, ಸರಣಿಕೆಯಲ್ಲಿ ನಾಲ್ಕನೆಯದು. ದಂಡಾವತಿ ಗದ್ದಲದವರಲ್ಲ, ವಿವಾದಕ್ಕೆ ಒಳಗಾದವರಲ್ಲ, ಹರಕು ಬಾಯಿಯವರಲ್ಲ. ಸೋರುವ ಕಿವಿಯವರಲ್ಲ. ಭ್ರಷ್ಟತೆ, ಅವಾಂತರಗಳ ನಾತವಿಲ್ಲದ, ಪತ್ರಕರ್ತನಾದರೂ ಪತ್ರಕರ್ತನ 'ಸಾಮರ್ಥ್ಯ'ವನ್ನರಿಯದ ಅಥವಾ ಅರಿತೂ ಉಪಯೋಗಿಸದ ಸಜ್ಜನ, ವಾರವಾರವೂ ಅಂದಂದಿನ ವಿದ್ಯಮಾನಗಳ ವಿಶ್ಲೇಷಣೆ ಮಾಡಿ ಬರೆದ ಲೇಖನಗಳಿಗೆ ಸ್ಪಂದಿಸಿ ಅಭಿಪ್ರಾಯ ರೂಪಿಸಿಕೊಂಬ ಓದುಗರ ಅಭಿಮಾನ ಗಳಿಸಿದವರು. ತನಗೆ ನ್ಯಾಯವೆಂದು, ಉಚಿತವೆಂದು ಅನ್ನಿಸಿದ್ದನ್ನ ಸಂದೇಹಕ್ಕೆ ಎಡೆಯಿಲ್ಲದಂತೆ ಹೇಳುವವರು. ಬರವಣಿಗೆಯಲ್ಲಿ ಉತ್ತರ ಕರ್ನಾಟಕದ ಗಟ್ಟಿತನ, ದಕ್ಷಿಣ ಕರ್ನಾಟಕದ ತಿಳಿವಳಿಕೆ, ಪತ್ರಕರ್ತನ ದೂರದೃಷ್ಟಿಗಳಿಂದ ಹುರಿಗೊಂಡವರು.

ಆಧುನಿಕ ಭಾರತಕ್ಕೆ ಇತಿಹಾಸದ ಹೊಸಕಲ್ಪನೆ ಪ್ರವೇಶವಾದ ಮೇಲೆ ಇಲ್ಲಿಂದ ಬದುಕಿಗೆ 'ಎಲ್ಲೆಲ್ಲಿಗೋ ಕರೆದೊಯ್ಯುವ' ಬದಲಾವಣೆಗಳ ಮಹಾಪೂರ ಬಂತು. ಅಘಟಿತ ಘಟನೆಗಳು ಘಟಿಸತೊಡಗಿದುವು. ಇಪ್ಪತ್ತೊಂದನೇ ಶತಮಾನದ ಮನುಷ್ಯದೈವ ರಾಜಕಾರಣದ ಮೂಲಕ ಅಭಿವ್ಯಕ್ತಗೊಳ್ಳುತ್ತದೆಂದು ಹಿರಿಯರು ಹೇಳಿದ್ದು ಭಾರತದ ಮಟ್ಟಿಗಂತೂ ನಿಜವಾಗಿದೆ. ಹಣವೇ ಧರ್ಮವಾಗಿ, ಧರ್ಮವೇ ಜಾತಿಯಾಗಿ, ಜಾತಿಯೇ ನೀತಿಯಾಗಿ-ಇವೆಲ್ಲವುಗಳ ಮುಖಜ ಭೂಮಿ ರಾಜಕಾರಣವಾದಾಗ ಪ್ರಜಾಪ್ರಭುತ್ವದ ಭವಿಷ್ಯವಿರಲಿ ಅದರ ಅಸ್ತಿತ್ವದ ಬಗ್ಗೆಯೇ ಆತಂಕವಾಗತೊಡಗುತ್ತದೆ. ಹಾಗಂತ ಕೈಚೆಲ್ಲಿ ಕೂರಬಾರದಲ್ಲ. ನಮ್ಮ ಅಂತಃಕರಣವನ್ನ ಜೀವಂತವಾಗಿ ಎಚ್ಚರವಾಗಿಡಲಿಕ್ಕೆ ಇಂಥ ಲೇಖನಗಳು ಬೇಕು. ರಾಜಕಾರಣಿಗಳ ಜತೆ ಪ್ರಜೆಗಳೂ ಭ್ರಷ್ಟರಾದರೆ ರಾಜಕಾರಣಿಗಳಿಗೆ ಬುದ್ಧಿ ಹೇಳುವ ಅಧಿಕಾರ ಕಳೆದುಕೊಳ್ಳುತ್ತಾರೆ. ನೈತಿಕ ಮೌಲ್ಯಗಳ ಜವಾಬ್ದಾರಿ ಜನರದು. ಜನರ ನೈತಿಕತೆಯನ್ನು ಎಚ್ಚರಿಸುವ, ಜಾಗೃತಗೊಳಿಸುವ ಲೇಖನಗಳಿವು.

ಇತಿಹಾಸದ ಸಣ್ಣಪುಟ್ಟ ಘಟನೆಗಳನ್ನು ದಾಖಲಿಸುತ್ತಲೇ ಅದಕ್ಕೊಂದು ನೈತಿಕ ಮಾರ್ಗದರ್ಶನ ಮಾಡುವ ಅಥವಾ ಅಭಿಪ್ರಾಯ ರೂಪಿಸಿಕೊಳ್ಳುವ ಅವಕಾಶವನ್ನ ಸೃಷ್ಟಿಸುವುದು ಈ ಲೇಖನಗಳ ಉದ್ದೇಶವೆಂದು ಅನಿಸುತ್ತದೆ.

ಇಲ್ಲಿ ಸಣ್ಣವರ ದೊಡ್ಡತನಗಳಿವೆ, ದೊಡ್ಡವರ ಸಣ್ಣತನಗಳಿವೆ. ಇತಿಹಾಸ ಹೇಳಿದ ಚಾಡಿಗಳಿವೆ. ತಪ್ಪು ದಾರಿ ಹಿಡಿದ ಆಡಳಿತವಿದೆ. ಆಡಳಿತದ ಆಳದ ಕೊಳಕನ್ನ ತೊಳೆಯಲಾರದ ಮಂತ್ರಿಗಳಿದ್ದಾರೆ. ಇಡೀ ನಾಡನ್ನ ತನ್ನ ಸ್ವಂತ ಆಸ್ತಿಯೆಂದು ತಿಳಿದ ಮಂತ್ರಿಗಳಿದ್ದಾರೆ. ಪತ್ರಕರ್ತರನ್ನು ಹಾಳು ಮಾಡಿದ ರಾಜಕಾರಣಿಗಳಿದ್ದಾರೆ. ಹೃದಯ ಕಲಕುವ ಕನ್ನಡ ಶಾಲೆಗೆ ಮಾದರಿಯಿದ್ದರೂ ಮನಸ್ಸು ಇಲ್ಲದ ಸರಕಾರವಿದೆ. ಜೊತೆಗೆ ಬರೀ ಪ್ರಶ್ನೆಗಳೇ ಇರುವ ಲೇಖನವೊಂದಿದೆ: “ಇದು ಪ್ರಾಮಾಣಿಕನ ಸೋಲೇ? ಭ್ರಷ್ಟ ವ್ಯವಸ್ಥೆಯ ಗೆಲುವೇ?” ಉತ್ತರ ಲೇಖಕರಿಗೂ ಸಿಕ್ಕಿಲ್ಲ. ಅಣ್ಣಾ ಹಜಾರೆ... ಎಂಬಲ್ಲಿಗೆ ಬಂದು ಅಲ್ಲಿಗೇ ತುಟಿಕಚ್ಚಿಕೊಂಡು ನಿಂತಿದ್ದಾರೆ!

ಈ ಲೇಖನಗಳ ಗದ್ಯಶೈಲಿಯ ಬಗ್ಗೆ ಕೊನೆಗೊಂದು ಮಾತನ್ನು ಹೇಳಲೇಬೇಕು; ಇದು ತುಂಬ ಸುಂದರವಾದ ಗದ್ಯ, ಕಲಾತ್ಮಕವಾದ ಗದ್ಯ, ಸೃಜನಶೀಲವಾದ ಗದ್ಯ, ಉದಾಹರಣೆ ನೋಡಿ: 'ಬಡವರ ಪುಟ್ಟ ಪುಟ್ಟ ಮನೆಗಳ ಮುಂದೆ ದೊಡ್ಡ ರಾಜಕಾಲುವೆ ಬಾಯಿ ತೆರೆದುಕೊಂಡು ನಿಂತಿದೆ. ಆಚೆ ಮನೆ ಇದೆ. ಈಚೆ ರಸ್ತೆ ಇದೆ. ತೆರೆದ ರಾಜಕಾಲುವೆಗಳಲ್ಲಿ ನೀರು, ಕೊಳಚೆ, ಕಕ್ಕಸು ಎಲ್ಲ ಹರಿದು ಹೋಗುತ್ತದೆ. ಅದರ ಅಂಚಿನಲ್ಲಿಯೇ ಜನರು ಜೀವನ ಮಾಡಬೇಕು. ಅವರು ಮನೆಗಳಲ್ಲಿ ಹೇಗೆ ಊಟ ಮಾಡುತ್ತಾರೋ, ತೆರೆದ ಚಂಡಿಗಳಲ್ಲಿ ಹುಟ್ಟಿಕೊಂಡು ರಾತ್ರಿಯೆಲ್ಲ ಆಕ್ರಮಿಸುವ ಸೊಳ್ಳೆಗಳ ಕಾಟದ ನಡುವೆ ಹೇಗೆ ಮಲಗುತ್ತಾರೋ ಗೊತ್ತಿಲ್ಲ.' (ಚೂರು ಚೂರಾದ ಊರಿಗೆ ಯಾರು ದೊರೆ?) ಇತ್ಯಾದಿ, ದಂಡಾವತಿಯವರಿಂದ ಇಂಥ ಇನ್ನಷ್ಟು ಉತ್ತಮೋತ್ತಮ ಲೇಖನಗಳು ಬರಲೆಂದು ಹಾರೈಸೋಣ.

-ಚಂದ್ರಶೇಖರ ಕಂಬಾರ

# ಪುಟ ತೆರೆದಂತೆ..


| | |
|---|---|
| ಯರಗಲ್ಲಿನಿಂದ ಧಾರವಾಡದ ದಾರಿ ದೂರ... | 01 |
| ನಾವು ಪ್ರವಾಸೋದ್ಯಮ ಬೆಳೆಸಬೇಕಾದ ಬಗೆ ಹೀಗಲ್ಲ | 06 |
| ಒಬಾಮ ಬಂದರು. ನೋಡಿದರು. ಆದರೆ ಗೆದ್ದರೇ? | 11 |
| ಮನೆಯೊಳಗೆ ಮನೆಯೊಡೆಯ ಇದ್ದಾನೆಯೇ? ಇಲ್ಲವೇ? | 15 |
| ಮುರುಘಾ ಶರಣರು ನಿಜವನ್ನೇ ಹೇಳಿದ್ದಾರೆ! | 19 |
| ಮೊಹ್ಮದ್ ಹನೀಫ್ ನಿಮಗೆ ಅಭಿನಂದನೆಗಳು! | 24 |
| ಬಿಸಿಲೆಯ ರಸ್ತೆಯೂ ಕೆಮ್ಮಣ್ಣುಗುಂಡಿಯ ಕೊಠಡಿಯೂ.. | 28 |
| ಇಂಥ 'ಬೇಂದ್ರೆ ಹುಚ್ಚರು' ಎಲ್ಲಾದರೂ ಇದ್ದಾರೆಯೇ? | 32 |
| ಇತಿಹಾಸ ಬರೆಯಿತು ಬೆಂಗಳೂರು ಸಮ್ಮೇಳನ | 37 |
| ವಿವಾದದ ನಡುವೆ ವಿಶ್ವ ಕನ್ನಡ ಮೇಳ ನರಳುವುದು ಬೇಡ | 41 |
| ಭೀಮಸೇನ ಜೋಶಿ ಹಾಡಿದರೆಂದರೆ... | 46 |
| ಮೈ ಜುಂ ಎನ್ನಿಸಿದ ಸಂಭ್ರಮದ ನಡುವೆ ಮರೆತು ಹೋದ ಸಂಗತಿಗಳು | 50 |
| ಕನ್ನಡ ಶಾಲೆಗೆ ಮಾದರಿಯಿದ್ದರೂ ಮನಸ್ಸು ಇಲ್ಲ! | 55 |
| ಇದು ಪ್ರಾಮಾಣಿಕನ ಸೋಲೇ? ಭ್ರಷ್ಟ ವ್ಯವಸ್ಥೆಯ ಗೆಲುವೇ? | 60 |
| ಹೇಳಿದ್ದನ್ನೇ ಹೇಳುತ್ತ... ಕಲಿಸಿದ್ದನ್ನೇ ಕಲಿಸುತ್ತ | 65 |
| ನಾರಾಯಣಮೂರ್ತಿ ಅವರಿಗೆ ನಮಸ್ಕಾರ.... | 69 |
| ಆಮಿಷಗಳ ಹರಾಜಿನಲ್ಲಿ ಸೋತ ರಾಜಕಾರಣಿ, ಗೆದ್ದ ಮತದಾರ | 74 |

| | |
|---|---|
| ಮಧ್ಯಪ್ರಾಚ್ಯದಲ್ಲಿ ಪತ್ರಕರ್ತನಾಗಿರುವುದೆಂದರೆ... | 79 |
| ಪ್ರೇಮ ಎಂದರೆ ಸಾಮಾನ್ಯವೇ? | 84 |
| ಹೊಸ ಹುಡುಗ-ಹುಡುಗಿಯರಿಗೆ ಮನೋಭಾವದ ಸಮಸ್ಯೆಯೇ? | 88 |
| ಮನೋಭಾವ ಎಂಬ ಮನೆ ಮನೆಯ ಕಥೆ | 92 |
| ನ್ಯಾಯದ ಹೆಜ್ಜೆ ನಿಧಾನ ಆದರೆ... | 97 |
| ಅಧಿಕಾರದ ಅಮಲು ಅವರಿಗೇಕಿಲ್ಲ?.. ನಮಗೇಕಿದೆ?... | 102 |
| ಇವರಿಗೆ ಆತ್ಮಹತ್ಯೆ ಬಿಟ್ಟು ಬೇರೆ ಏನು ದಾಲಿ ಇದೆ?... | 106 |
| ಚೂರು ಚೂರಾದ ಊರಿಗೆ ಯಾರು ದೊರೆ? | 111 |
| ಈ ಜೀವನ ಮತ್ತೆ ಸಿಗುವುದಿಲ್ಲ... | 116 |
| ಮಣ್ಣು ಎಂಬ ಮಾಯೆಯ ಬೆನ್ನ... | 120 |
| ತವಕ್ಕುಲ್: ಹೋರಾಟಕ್ಕೆ ಒಂದು ನಂಬಿಗೆ | 125 |
| ಕನ್ನಡದ ಕೆಲಸವನ್ನು ಹೀಗೂ ಮಾಡಬಹುದು | 129 |

# ಯರಗಲ್ಲಿನಿಂದ ಧಾರವಾಡದ

# ದಾಲಿ ದೂರ...

ಅಪ್ಪನಿಗೆ ಮಗ ತಲಾಠಿ ಆದರೆ ಸಾಕು ಅನಿಸಿತ್ತು. ಆತ ಊರಿನ ಓಲೇಕಾರ. ಹಳ್ಳಿಯ ಕುಲಕರ್ಣಿ, ಗೌಡರು ಕೊಡುವ ಪತ್ರಗಳನ್ನು ತಾಲ್ಲೂಕು ಕಚೇರಿಗೆ ಮುಟ್ಟಿಸುವುದು, ಅಲ್ಲಿ ಕೊಡುವ ಪತ್ರಗಳನ್ನು ಊರಿಗೆ ತರುವುದು ಆತನ ಕೆಲಸ. ಹಳ್ಳಿಯಲ್ಲಿ ಕುಲಕರ್ಣಿ, ಗೌಡರ ದರ್ಬಾರು ನೋಡಿದ್ದ. ಮಗ ಕುಲಕರ್ಣಿ, ಗೌಡ ಎರಡೂ ಆಗಲು ಸಾಧ್ಯವಿರಲಿಲ್ಲ. ಬೇಗ ತಲಾಠಿಯಾದರೂ ಸಾಕು, ತನ್ನ ಓಲೇಕಾರ ಕೆಲಸ ಬಿಟ್ಟು ಹಾಯಾಗಿ ಇರಬಹುದು ಎಂದುಕೊಂಡಿದ್ದ. ಅದಕ್ಕಾಗಿ ಮಗನಿಗೆ ಶಾಲೆಗೆ ಸೇರಿಸುವ ವಯಸ್ಸು ಆಗುವುದಕ್ಕಿಂತ ಮುಂಚೆಯೇ ಎರಡು ವರ್ಷ ಹೆಚ್ಚಿಗೆ ಮಾಡಿ ಹೆಸರು ಹಚ್ಚಿದ. ಆಗ ಎಸ್ಸೆಸ್ಸೆಲ್ಸಿ ಮುಗಿಸಿದ್ದರೂ ನೌಕರಿ ಬರಬಹುದಿತ್ತು. ಮಗ ತಲಾಠಿ ಆಗಲಿಲ್ಲ. ಕಷ್ಟಪಟ್ಟು ಓದಿದ. ಈಗ ಆತ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ. ಅವರ ಹೆಸರು ಡಾ.ಎಚ್.ಬಿ.ವಾಲೀಕಾರ. ಮೊನ್ನೆ ಸೋಮವಾರ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಜೀವನವೇ ಹಾಗೆ, ನಮ್ಮನ್ನು ಎಲ್ಲೆಲ್ಲಿಗೋ ಕರೆದುಕೊಂಡು ಹೋಗುತ್ತದೆ. ಅಂದುಕೊಂಡುದು ಒಂದು ಆದರೆ, ಆಗುವುದು

ಇನ್ನೊಂದು. ವಾಲೀಕಾರರು ಕುರುಬ ಸಮುದಾಯದವರು. ಆ ಸಮುದಾಯದಲ್ಲಿ ಓದಿದವರು ಕಡಿಮೆ. ವಿಜಾಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ಯರಗಲ್ಲಿನ ಬಡಕುಟುಂಬದಲ್ಲಿ ಹುಟ್ಟಿದ ಒಬ್ಬ ಹುಡುಗ ಗಣಿತದಲ್ಲಿ ಅಂತರ ರಾಷ್ಟ್ರೀಯ ಖ್ಯಾತಿ ಗಳಿಸಿ ತಾನು ಓದಿದ ವಿಶ್ವವಿದ್ಯಾಲಯದಲ್ಲಿ ಪಾಠ ಮಾಡಿ ಅಲ್ಲಿಯೇ ಕುಲಪತಿ ಆಗುವುದು ಒಂದು ಕನಸಿನಂಥ ಘಟನೆ. ವಾಲೀಕಾರರ ಬದುಕಿನಲ್ಲಿ ಇದು ನಿಜ ಆಗಿದೆ. ಅವರ ಹೆಸರು ಕಳೆದ ಆರೆಂಟು ವರ್ಷಗಳಿಂದ ಒಂದಲ್ಲ ಒಂದು ವಿಶ್ವವಿದ್ಯಾಲಯದ ಕುಲಪತಿ ಸ್ಥಾನಕ್ಕೆ ಕೇಳಿ ಬರುತ್ತಿತ್ತು. ಆದರೆ, ಅಂತಿಮವಾಗಿ ನೇಮಕವಾಗುವ ಹಂತದಲ್ಲಿ ಬಿದ್ದು ಹೋಗುತ್ತಿತ್ತು. ಈ ಸಾರಿಯೂ ರಾಜ್ಯಪಾಲರ ಅಧಿಕಾರ ಚಲಾವಣೆಯಿಂದಲೇ ಅವರ ನೇಮಕ ಆಗಿದೆ.

ವಾಲೀಕಾರರ ಜೀವನದಲ್ಲಿ ಇಂಥ ಅನಿರೀಕ್ಷಿತಗಳು ಉದ್ದಕ್ಕೂ ನಡೆದಿವೆ. ಅವರ ಶಿಕ್ಷಣ ಹೈಸ್ಕೂಲ್ ಮಟ್ಟಕ್ಕೆ ಬರುವ ವೇಳೆಗೆ ಅಪ್ಪ ಎಲ್ಲ ಆಸ್ತಿ ಕಳೆದುಕೊಂಡಿದ್ದರು. ತಾಯಿ ಮಲ್ಲವ್ವ ತನ್ನ ತವರುಮನೆಯವರ ಹೊಲದಲ್ಲಿ ಕೆಲಸ ಮಾಡಿ ಅದಕ್ಕೆ ಕೂಲಿ ಪಡೆದು ಮಕ್ಕಳನ್ನು ಓದಿಸಿದಳು. ಓದಿನಲ್ಲಿ ಜಾಣನಾಗಿದ್ದ ಈ ಮಗನ ಮೇಲೆಯೇ ಆಕೆಗೆ ಭರವಸೆ, ಯರಗಲ್ಲಿನಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುವಾಗಲೇ ಗಣಿತದಲ್ಲಿ ವಾಲೀಕಾರರಿಗೆ ಆಸಕ್ತಿ ಬೆಳೆಯಿತು. ಜೋಷಿ ಎಂಬ ಶಿಕ್ಷಕರು ಅದ್ಭುತವಾಗಿ ಗಣಿತ ಕಲಿಸುತ್ತಿದ್ದರು. ಹೈಸ್ಕೂಲ್ ಶಿಕ್ಷಣಕ್ಕಾಗಿ ಮುದ್ದೇಬಿಹಾಳಕ್ಕೆ ಬಂದ ಅವರು ನಮ್ಮ ಮನೆಯ ಪಡಸಾಲೆಯಲ್ಲಿ ಒಂದೆರಡು ವರ್ಷ ವಾಸವಾಗಿದ್ದರು. 10/15 ಅಡಿ ಜಾಗದಲ್ಲಿ ನಾನು, ವಾಲೀಕಾರ ಮತ್ತು ನನ್ನ ಈಗಿನ ಭಾವ ಮೂವರೂ ಸೇರಿಕೊಂಡು ಸೀಮೆ ಎಣ್ಣೆ ಬುಡ್ಡಿ ದೀಪದಡಿ ಓದುತ್ತಿದ್ದೆವು. ಊರಿನಿಂದ ಎರಡು ದಿನಕ್ಕೆ ಒಮ್ಮೆ ಅವರಿಗೆ ಬುತ್ತಿ ಬರುತ್ತಿತ್ತು. ಬುತ್ತಿ ಬಂದ ದಿನ ಮಾತ್ರ ರೊಟ್ಟಿ ಜತೆಗೆ ಪಲ್ಯ ಇರುತ್ತಿತ್ತು. ಮರುದಿನ ಅಗಸಿ ಚಟ್ನಿಗೆ ನೀರು ಹಾಕಿಕೊಂಡು ವಾಲೀಕಾರ ತಿನ್ನುತ್ತಿದ್ದರು. ನನ್ನ ಕುಟುಂಬಕ್ಕೂ ಕಡುಬಡತನ ಕಾಡುತ್ತಿತ್ತು. ನಮ್ಮ ಮನೆಯಲ್ಲಿ ಪಲ್ಯ-ಚಟ್ನಿ ಇಲ್ಲದಿದ್ದಾಗ ವಾಲೀಕಾರರ ಚಟ್ನಿಯಲ್ಲಿ ನೀರು ಹಾಕಿಕೊಂಡು ನಾನೂ ಊಟ ಮಾಡುತ್ತಿದ್ದೆ.

ಮುದ್ದೇಬಿಹಾಳದಲ್ಲಿ ಯನ್ನಾಳ, ಚಳಗೇರಿ ಮತ್ತು ನಾವದಗಿ ಗುರುಗಳು ವಾಲೀಕಾರರ ಗಣಿತವನ್ನು ಮತ್ತಷ್ಟು ಗಟ್ಟಿ ಮಾಡಿದರು. ಮುದ್ದೇಬಿಹಾಳದಲ್ಲಿ ವಿಜ್ಞಾನ ಕಾಲೇಜು ಇಲ್ಲದೇ ಇದ್ದುದರಿಂದ ಪಿಯುಸಿಯಲ್ಲಿ ಗಣಿತ ವಿಷಯ ತೆಗೆದುಕೊಂಡು ವಿದ್ಯಾಭ್ಯಾಸ ಮುಂದುವರಿಸಿದ ವಾಲೀಕಾರ ನಂತರ ಹುನಗುಂದದಲ್ಲಿ ಪದವಿ ಪೂರೈಸಿದರು. ಪದವಿ ಕಲಿಯುತ್ತಲೇ ಪಿಯುಸಿ ವಿದ್ಯಾರ್ಥಿಗಳಿಗೆ ಗಣಿತ ಪಾಠ ಮಾಡಿ ತಿಂಗಳಿಗೆ ತಲಾ ಹತ್ತು ರೂಪಾಯಿಯಂತೆ ಗಳಿಸಿದರು.. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ ಮಾಡಲು ಹೋದಾಗ ಹೀಗೆ ಗಳಿಸಿದ ಮನೆಪಾಠದ ಹಣ ಒಟ್ಟಾಗಿ 180 ರೂಪಾಯಿ ಆಗಿತ್ತು. ಎಂ.ಎ ಪದವಿಗೆ ಪ್ರವೇಶ ಪಡೆಯಲು 185 ರೂಪಾಯಿ ಶುಲ್ಕ ಕಟ್ಟಬೇಕಿತ್ತು. ಈ ಹುಡುಗ ನೇರವಾಗಿ ಆಗಿನ ಕುಲಪತಿ ಆರ್.ಸಿ.ಹಿರೇಮಠರ ಕೊಠಡಿಗೆ ಹೋದ. 'ನಾನು ಬಿ.ಎ.ದಲ್ಲಿ ಬ್ಯಾಂಕ್ ಗಳಿಸಿದ್ದೇನೆ. ಹತ್ತು ರೂಪಾಯಿ ಮಾತ್ರ ಅರ್ಜಿ ಶುಲ್ಕ ಕಟ್ಟಿಕೊಂಡು ನನಗೆ ಪ್ರವೇಶ ಕೊಡಿ. ಎಲ್ಲ

ಶುಲ್ಕ ಕಟ್ಟಲು ಹಣವಿಲ್ಲ. ನನಗೆ ಮುಂದೆ ಬರುವ ಮೆರಿಟ್ ಸ್ಕಾಲರ್‌ಶಿಫ್‌ನಲ್ಲಿ ಶುಲ್ಕವನ್ನು ಮುರಿದುಕೊಳ್ಳಿರಿ' ಎಂದ. ಹಿರೇಮಠರು ಬೆಕ್ಕಸ ಬೆರಗಾದರು. 'ಆಯಿತು' ಎಂದು ಪ್ರವೇಶ ಕೊಟ್ಟರು. ವಿದ್ಯಾರ್ಥಿ ಹೊರಗೆ ಹೊರಟಿದ್ದ. 'ತಮ್ಮಾ ಬಾ ಇಲ್ಲಿ. ಊಟಕ್ಕ ತೊಂದರಿ ಆದರ ನನ್ನ ಬಂದ ಕಾಣು' ಎಂದರು. ಆದರೆ, ಊಟಕ್ಕೆ ಹುಬ್ಬಳ್ಳಿಯಲ್ಲಿ ಕುರುಬ ಸಮಾಜದ ವೈ.ಎಂ.ಪಾಟೀಲ-ಶಾಂತಮ್ಮ ದಂಪತಿ ಈ ಹುಡುಗನಿಗೆ ವ್ಯವಸ್ಥೆ ಮಾಡಿದರು. ಮನೆಯ ಮಗನ ಹಾಗೆ ನೋಡಿಕೊಂಡರು. ಆದರೆ, ಹುಬ್ಬಳ್ಳಿ-ಧಾರವಾಡ ಮಧ್ಯೆ ಓಡಾಟದಲ್ಲಿ ಓದಿಗೆ ತೊಂದರೆಯಾಗುತ್ತದೆ ಎಂದು ಹುಡುಗ ಧಾರವಾಡಕ್ಕೆ ಬಂದು ರೂಮು ಬಾಡಿಗೆ ಹಿಡಿದ. ಹಳ್ಳಿಯಿಂದ ತರಿಸಿದ ನವಣಕ್ಕಿಯ ಅನ್ನ ಮಾಡಿಕೊಂಡು ತಿಂದು ಓದಿದ. ಪ್ರಥಮ ದರ್ಜೆಯಲ್ಲಿ ಎಂ.ಎ ಪಾಸು ಮಾಡಿದ.

ಬರೀ ಎಂ.ಎ ಮಾಡಿದರೆ ಸಾಲದು ಎಂದು ಪಿಎಚ್.ಡಿ ಮಾಡಲು ಹೊರಟ. ಗಣಿತ ವಿಭಾಗದ ಮುಖ್ಯಸ್ಥ ಪ್ರೊ.ಸಂಪತ್ ಕುಮಾರ್‌ಗೆ ಬೀಡಿ ಸೇದುತ್ತಿದ್ದ ಇವನನ್ನು ಕಂಡರೆ ಅಷ್ಟಕ್ಕಷ್ಟೆ. ನೀನು ಒಂದು ಬೀಡಿ ಅಂಗಡಿ ಇಟ್ಟುಕೊ, ಅಲ್ಲೇ ಬೀಡಿ ಸೇದುತ್ತ ಕೂರಬಹುದು' ಎಂದು ತಾತ್ಸಾರ ಮಾಡಿದರು. ಹುಡುಗ ಬಿಡಲಿಲ್ಲ. ಕುರುಬ ಸಮುದಾಯದ ಆಗಿನ ಶಾಸಕ ಕಲ್ಲಣ್ಣನವರ್ ಮನೆಗೆ ಹೋದ. ಕಲ್ಲಣ್ಣನವರ್ ಮತ್ತು ಐ.ಜಿ.ಸನದಿ ಕೂಡಿಕೊಂಡು ಮತ್ತೆ ಹಿರೇಮಠರ ಮನೆಗೆ ಹೋದರು. ಹಿರೇಮಠರು ಸಂಪತ್ ಕುಮಾರ್‌ಗೆ ಮಾತನಾಡಿ ಪಿಎಚ್.ಡಿಗೆ ಸೇರಿಸಿಕೊಳ್ಳಲು ಸೂಚಿಸಿದರು. ಸಂಪತ್ ಕುಮಾರ್‌ಗೆ ಅದು ಇಷ್ಟವಾಗಲಿಲ್ಲ. ಆದರೆ, ಆರು ತಿಂಗಳಲ್ಲಿಯೇ ಈತ ಪ್ರತಿಭಾವಂತ ಎಂದು ಗೊತ್ತಾಯಿತು. ಪ್ರೀತಿಯಿಂದ ಮಾರ್ಗದರ್ಶನ ಮಾಡಿದರು. ಈ ಹುಡುಗ ಬರೆದ ಪಿಎಚ್.ಡಿ ಪ್ರಬಂಧದ ಮೌಲ್ಯಮಾಪನ ಮಾಡಿದ ಅಮೆರಿಕೆಯ ಕ್ಲಮ್ಬಿನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ.ಸ್ಟೀಫನ್ ಹೆಡೆಟ್ನೈಮಿ ಎಂಬುವರು 'ಇದು ಒಂದು ಮಾಸ್ಟರ್ ಪೀಸ್ ಪ್ರಬಂಧ, ಆ ಹುಡುಗನಿಗೆ ನನಗೆ ಮೌಲ್ಯಮಾಪನಕ್ಕೆ ಕೊಡುವ ಸಂಭಾವನೆಯನ್ನು ಬಹುಮಾನವಾಗಿ ಕೊಡಿ' ಎಂದು ಶಿಫಾರಸು ಮಾಡಿದರು. ಮುಂದೆ ವಾಲೀಕಾರರು ಧಾರವಾಡದ ಕರ್ನಾಟಕ ಕಾಲೇಜು, ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಪಾಠ ಮಾಡಿ ಕರ್ನಾಟಕ ಆಗಿ ನೇಮಕಗೊಂಡರು. ಅವರು ಬೆಳಗಾವಿ ವಿಶ್ವವಿದ್ಯಾಲಯಕ್ಕೆ ರೀಡರ್ ಸ್ನಾತಕೋತ್ತರ ಕೇಂದ್ರದ ಆಡಳಿತಾಧಿಕಾರಿಯಾಗಿಯೂ ಕೆಲ ವರ್ಷ ಕೆಲಸ ಆಗಿ ನೇಮಕ ಆಗುವಾಗ ಅವರ ಕರ್ನಾಟಕ ಮಾಡಿದ್ದರು. ಕುಲಪತಿ ವಿಶ್ವವಿದ್ಯಾಲಯದ ಕಂಪ್ಯೂಟರ್ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿದ್ದರು. ಈ ನಡುವೆ ಅಂತರ ರಾಷ್ಟ್ರೀಯ ಗಣಿತ ಜರ್ನಲ್‌ಗಳಲ್ಲಿ ಅವರ 56 ಪ್ರಬಂಧಗಳೂ ಪ್ರಕಟವಾದುವು.

ಈಗ ಹಿಂತಿರುಗಿ ನೋಡಿದರೆ ವಾಲೀಕಾರರಿಗೇ ಅಚ್ಚರಿಯಾಗುತ್ತದೆ. ಅವರು ಅದೇ ಯರಗಲ್ಲಿನ ಹಳ್ಳಿಗನ ಹಾಗೆಯೇ ಇದ್ದಾರೆ. ಮೊನ್ನೆ ಮೂರು ದಿನಗಳ ಹಿಂದೆ ಬೆಂಗಳೂರಿಗೆ ಬಂದಿದ್ದರು. ಕಾಫಿ ಹೌಸಿನಲ್ಲಿ ಕಾಫಿ ಕುಡಿಯುತ್ತಿದ್ದೆವು. ಕಾಫಿಯನ್ನು

ಬಸಿಯಲ್ಲಿ ಹಾಕಿಕೊಂಡು ಕುಡಿಯತೊಡಗಿದರು. 'ನೀವು ಈಗ ಕುಲಪತಿ ಹೀಗೆಲ್ಲ ಕುಡಿಯಬಾರದು' ಎಂದೆ. 'ಬಿಡ್ರಿ ಇವನ, ನಾವೇನು ಬದಲಾಗೂದು ಬ್ಯಾಡ' ಎಂದರು. ಕಳೆದ ಆರು ವರ್ಷಗಳಲ್ಲಿ ಅವರು ಕುಲಪತಿ ಹುದ್ದೆಯ ಹಿಂದೆ ಬೆನ್ನು ಬಿದ್ದಿದ್ದರು. ತನಗೆ ಅರ್ಹತೆ ಇದೆ ಅದು ಸಿಗಬೇಕು ಎಂದು ಪಟ್ಟು ಹಿಡಿದರು. ಸಿದ್ದರಾಮಯ್ಯ, ವಿಶ್ವನಾಥ್ ಎಂದೆಲ್ಲ ಕುರುಬ ಮುಖಂಡರನ್ನು ಭೇಟಿ ಮಾಡಿದರು. ಅವರೂ ತಮ್ಮ ಸಮುದಾಯದವನು ಒಬ್ಬ ಮೇಲೆ ಬರಲಿ ಎಂದು ಪ್ರಯತ್ನ ಪಟ್ಟಿರಬಹುದು. ಸಿದ್ದರಾಮಯ್ಯ ಉಪಮುಖ್ಯಮಂತ್ರಿ ಆಗಿದ್ದಾಗ ತುಮಕೂರು ವಿಶ್ವವಿದ್ಯಾಲಯಕ್ಕೆ ಪ್ರಥಮ ಕುಲಪತಿ ಆಗಿ ಇವರ ನೇಮಕ ಆಗಬೇಕಿತ್ತು. ಆದರೆ ಆಗಲಿಲ್ಲ. ಆದರೆ, ವಾಲೀಕಾರರು ನಿರಾಶರಾಗಿರಲಿಲ್ಲ. ಈ ಸಾರಿ ಹಿರಿತನ, ಅರ್ಹತೆ, ಸಾಮಾಜಿಕ ನ್ಯಾಯದ ಆಧಾರದ ಮೇಲೆ ಅವರ ನೇಮಕ ಆಯಿತು. ಕರ್ನಾಟಕದಲ್ಲಿ ಈಗ ಎಂಟು ಮಂದಿ ಲಿಂಗಾಯತ 'ಕುಲಪತಿಗಳಿದ್ದಾರೆ. ಮುಖ್ಯಮಂತ್ರಿಗಳನ್ನು ಕೇಳಿದರೆ 'ಏನು ಗುಜರಾತಿನಲ್ಲಿ ಲಿಂಗಾಯತರನ್ನು ಹೀಗೆ ನೇಮಕ ಮಾಡಲಾಗುತ್ತದೆಯೇ ಎಂದು ಕೇಳಬಹುದು. ಹನ್ನೊಂದು ಮಂದಿ ಮಾಡಲಾಗುತ್ತದೆಯೇ' ಎಂದು ಲಿಂಗಾಯತರನ್ನು ಸಂಪುಟದಲ್ಲಿ ಹೊಂದಿರುವುದಕ್ಕೂ ಅವರು ಇದೇ ಸಮರ್ಥನೆ ಕೊಡಬಹುದು. ಬಹುಸಂಖ್ಯಾತ ಸಮುದಾಯಗಳು ಹಿಂದುಳಿದವರನ್ನು, ಸಣ್ಣ ಪುಟ್ಟ ಸಮುದಾಯಗಳನ್ನು ತೆಕ್ಕೆಯಲ್ಲಿ ತೆಗೆದುಕೊಂಡು ಹೋಗಬೇಕಾಗುತ್ತದೆ. ಆ ಔದಾರ್ಯವನ್ನು, ದೊಡ್ಡಸ್ತಿಕೆಯನ್ನು ದೊಡ್ಡ ಸಮುದಾಯಗಳು ತೋರಿಸಬೇಕಾಗುತ್ತದೆ. ಇಲ್ಲವಾದರೆ ಅರ್ಹತೆ ಇದ್ದರೂ ಸಣ್ಣಪುಟ್ಟ ಸಮುದಾಯಗಳ ಪ್ರತಿಭಾವಂತರು ನರಳಬೇಕಾಗುತ್ತದೆ. ಇದು ಗೊತ್ತಿದ್ದರೆ, ಸರ್ಕಾರ, 'ವಾಲೀಕಾರರ ನೇಮಕಕ್ಕೆ ನಮ್ಮ ಸಮ್ಮತಿ ಇಲ್ಲ' ಎಂದು ಬಹಿರಂಗವಾಗಿಯೇ ಹೇಳುವ ಸಣ್ಣತನ ಮಾಡುತ್ತಿರಲಿಲ್ಲ

ಸಣ್ಣ ಪುಟ್ಟ ಸಮಾಜದವರೂ ಅಧಿಕಾರಕ್ಕೆ ಬಂಡ ಮೇಲೆ ಎಚ್ಚರಿಕೆಯಿಂದ ನಡೆದುಕೊಳ್ಳಬೇಕಾಗುತ್ತದೆ. ಅವರನ್ನು ಕಾಯುವ ಸಾವಿರ ಕಣ್ಣುಗಳು ಸುತ್ತಲೂ ಹೊಂಚು ಹಾಕುತ್ತ ಇರುತ್ತವೆ. ವಾಲೀಕಾರರು ಕರ್ನಾಟಕ ವಿಶ್ವವಿದ್ಯಾಲಯದ ಮೊದಲ ಕುಲಪತಿ, ಗಣಿತ ವಿಷಯದಲ್ಲಿ ಪ್ರಕಾಂಡ ಪಂಡಿತರಾಗಿದ್ದ ರಾಂಗ್ಲ ಡಿ.ಸಿ.ಪಾವಟೆ ಅವರ ಹೆಸರಿನಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಒಂದು ಗಣಿತ ಸಂಸ್ಥೆಯನ್ನು ಸ್ಥಾಪಿಸಬೇಕು ಎಂದು ಕನಸು ಕಂಡಿದ್ದಾರೆ. ಕಲಿಕೆಯ ಉದ್ದಕ್ಕೂ ಹಸಿವಿನ ಅನುಭವ ಇರುವುದರಿಂದ ಕಡಿಮೆ ದರದಲ್ಲಿ ವಿದ್ಯಾರ್ಥಿಗಳಿಗೆ ಊಟ ಕೊಡಿಸಬೇಕು ಎಂಬ ಆಸೆಯನ್ನೂ ಇಟ್ಟುಕೊಂಡಿದ್ದಾರೆ. ಅವರ ಆಸೆ ಈಡೇರಲಿ.' ಅವರು ಕುಲಪತಿಯಾಗಿ ಅಧಿಕಾರ ವಹಿಸಿಕೊಂಡ ದಿನ ಅವರ ಗುರುಗಳಾದ ಪ್ರೊ. ಸಂಪತ್‌ಕುಮಾರ್ ಮೈಸೂರಿನಿಂದ ಫೋನ್ ಮಾಡಿ, 'ಅದು ಪಾವಟೆಯವರು ಕುಳಿತ ಕುರ್ಚಿ. ಅವರ ನೆನಪು ಸದಾ ಇರಲಿ. ನೀನು ನನ್ನ ಶಿಷ್ಯ ಎಂಬುದೂ ನೆನಪು ಇರಲಿ, ಪಾವಟೆ ಮತ್ತು ನನ್ನ ಮಾನ ಕಳೆಯಬೇಡ" ಎಂದರಂತೆ. ಯಾವುದೇ ಒಬ್ಬ ಗುರು ಅಧಿಕಾರದ ಕುರ್ಚಿಗೆ ಏರಿದ ಶಿಷ್ಯನಿಗೆ ಹೇಳಲೇಬೇಕಾದ ಮಾತು ಇದು. ಪತ್ನಿ

ಅನಸೂಯಾ, ಎಂಜಿನಿಯರಿಂಗ್ ಓದಿ ನೌಕರಿ ಮಾಡುತ್ತಿರುವ ಸುದರ್ಶನ್, ಸುರೇಂದ್ರ ಮತ್ತು ಸಂಪತ್ ಕುಮಾರ್ (ಗುರುವಿನ ಹೆಸರು) ಎಂಬ ಮೂರು ಮಕ್ಕಳ ಸುಖ ಸಂಸಾರದ ವಾಲೀಕಾರರು ವಿಶ್ವವಿದ್ಯಾಲಯದಲ್ಲಿ ದುಡ್ಡು ಮಾಡಬೇಕಾಗಿಲ್ಲ. ಅವರಿಗೆ ಅವರ ಗುರುಗಳು ಹೇಳಿದ ಮಾತು ಸದಾ ನೆನಪಿನಲ್ಲಿ ಇದ್ದರೆ ಸಾಕು.

31-10-2010

# ನಾವು ಪ್ರವಾಸೋದ್ಯಮ

# ಬೆಳೆಸಬೇಕಾದ ಬಗೆ ಹೀಗಲ್ಲ

ಆಸಪಾಟು ಟೇಬಲ್ ಮೌಂಟನ್ ಬೆಟ್ಟದ ಮೇಲೆ ನಿಂತು ಯೋಚಿಸುತ್ತಿದ್ದೆ. ಸಮುದ್ರ ಮಟ್ಟದಿಂದ 5,400 ಅಡಿ ಎತ್ತರದ ಆ ಬೆಟ್ಟದ ಮೇಲೆ ಕಲ್ಲು ಮತ್ತು ಕುರುಚಲು ಗಿಡಗಳು ಮಾತ್ರ ಇವೆ. ಮೇಲೆ ನಿಂತು ನೋಡಿದರೆ ಸುತ್ತಲೂ ದೃಷ್ಟಿ ಹಾಯಿಸಿದಷ್ಟು ದೂರ ಸಮುದ್ರ, ಒಂದು ಕಡೆ ಕೇಪ್‌ಟೌನ್ ನಗರ, ದಕ್ಷಿಣ ಆಫ್ರಿಕಾ ಸರ್ಕಾರ ಈ ಬೆಟ್ಟವನ್ನು ತೋರಿಸಲು ನಮ್ಮನ್ನು ಭಾರತದಿಂದ ಕರೆದುಕೊಂಡು ಹೋಗಿತ್ತು. ಭಾರತಕ್ಕೆ ತಮ್ಮ ದೇಶವನ್ನು 'ಮಾರುವ ಉದ್ದೇಶ ಅವರದು. ಕನಿಷ್ಠ ಎರಡು ವರ್ಷಕ್ಕೊಮ್ಮೆ ಭಾರತದಿಂದ ಹೀಗೆ ಮಾಧ್ಯಮದವರನ್ನು ತಮ್ಮ ದೇಶದ ವಿವಿಧ ಕಡೆಗಳಿಗೆ ಕರೆದುಕೊಂಡು ಹೋಗಿ ಪರಿಚಯಿಸುವ ಕೆಲಸವನ್ನು ದಕ್ಷಿಣ ಆಫ್ರಿಕಾ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಮಾಡುತ್ತಿದೆ.

ಒಂದು ವಾರ ಆ ದೇಶದಲ್ಲಿ ಇದ್ದ ಕಾಲದಲ್ಲಿ ಒಂದು ತಾಜ್‌ಮಹಲ್, ಒಂದು ಗೋಳಗುಮ್ಮಟ, ಒಬ್ಬ ಬಾಹುಬಲಿಯನ್ನು ಅವರೇನು ನಮಗೆ ತೋರಿಸಲಿಲ್ಲ. ಕಾಡು ಸುತ್ತಿಸಿದರು, ಬೆಟ್ಟ ಹತ್ತಿಸಿದರು ಅಷ್ಟೆ. ಅವರಲ್ಲಿ ಇದ್ದುದೂ ಅಷ್ಟೇ. ಭಾರತದ ಸಮಸ್ಯೆಯೇ ಅದು; ನಮ್ಮಲ್ಲಿ ಎಲ್ಲವೂ

ಇದೆ. ಅದನ್ನು ನಾವು ಚೆನ್ನಾಗಿ ಪ್ಯಾಕೇಜ್ ಮಾಡಿ ಸಾದರಪಡಿಸುವುದಿಲ್ಲ. ಆ ಸಪಾಟು ಬೆಟ್ಟದ ಮೇಲೆ ನಿಂತಾಗ ನನಗೆ ಅನಿಸುತ್ತಿತ್ತು. ನಮ್ಮಲ್ಲೂ ಸಮುದ್ರವಿದೆ, ಬೀಚುಗಳು ಇವೆ, ಐತಿಹಾಸಿಕ ತಾಣಗಳು ಇವೆ. ಅದ್ಭುತ ಎನ್ನುವಂಥ ಶಿಲ್ಪಸೃಷ್ಟಿಗಳು ಇವೆ. ಜೀವನದಲ್ಲಿ ಒಮ್ಮೆ ನೋಡಲೇಬೇಕಾದ ಜೋಗದ ಗುಂಡಿ ಇದೆ. ನಾವು ಇದೆಲ್ಲವನ್ನು ವಿದೇಶದಲ್ಲಿನ ಪ್ರವಾಸಿಗರಿಗೆ ಸಾದರ ಪಡಿಸಿದ್ದೇವೆಯೇ? ಇಲ್ಲ ಎನಿಸತೊಡಗಿತು. ನಮ್ಮ ಅಧಿಕಾರಿಗಳು ವಿದೇಶಕ್ಕೆ ಹೋಗಿ ಅಲ್ಲಿ ಏನಿದೆ ಎಂದು ನೋಡಿಕೊಂಡು ಬರುತ್ತಾರೆ. ನಮ್ಮಲ್ಲಿ ಇರುವುದನ್ನು ಅವರಿಗೆ ಹೇಗೆ ತೋರಿಸಬೇಕು ಎಂದು ಕಲಿತು ಬರುವುದಿಲ್ಲ.

ದಕ್ಷಿಣ ಆಫ್ರಿಕಾಕ್ಕೆ ಹೋಗುವುದಕ್ಕಿಂತ ಕೆಲವೇ ದಿನಗಳ ಮುಂಚೆ ನಾನು, ನನ್ನ ಸಂಪಾದಕರು ಜೋಗ ಜಲಪಾತಕ್ಕೆ ಹೋಗಿದ್ದೆವು. ಇನ್ನೇನು ಸಂಜೆಯ ಮಬ್ಬು ಕವಿಯತೊಡಗಿತ್ತು. ಸೂರ್ಯ ಮುಳುಗುವುದಕ್ಕೆ ಮುಂಚೆ ಜಲಪಾತ ಸೇರೋಣ ಎಂದು ಧಾವಿಸಿದೆವು. ಮುಖ್ಯದ್ವಾರವನ್ನು ದಾಟಿ ಒಳಗೆ ಹೋಗುವಾಗಲೇ 'ವಿಘ್ನ' ಕಾದಿತ್ತು. ನಮ್ಮ ಕಾರಿನ ಬಲಬದಿಯಲ್ಲಿ ಒಂದು ದೊಡ್ಡ ಖಾಸಗಿ ಬಸ್ ನಿಂತಿತ್ತು. ವಾಹನಗಳು ಮುಂದೆಯೂ ಹೋಗದೆ, ಹಿಂದೆಯೂ ಹೋಗದೆ ಒದ್ದಾಡುತ್ತಿದ್ದುವು. ಅಲ್ಲಿ ಇದ್ದ ಒಬ್ಬ ಕಾನ್ಸ್ ಟೇಬಲ್‌ನನ್ನು ಯಾರೂ ಕೇರ್ ಮಾಡುವ ಸ್ಥಿತಿ ಇರಲಿಲ್ಲ. ಸಿಕ್ಕಿ ಹಾಕಿಕೊಂಡಿದ್ದ ವಾಹನ ಚಾಲಕರೆಲ್ಲ ಹಾರ್ನ್ ಹಾಕತೊಡಗಿದಂತೆ ಬಸ್ ಚಾಲಕ ಏನೂ ಆಗಿಯೇ ಇಲ್ಲ ಎನ್ನುವಂತೆ ಬಂದು ತನ್ನ ವಾಹನವನ್ನು ತೆಗೆದುಕೊಂಡು ಹೋದ. ಸ್ವಲ್ಪ ಒಳಗೆ ಹೋದರೆ ವಾಹನಗಳ ನಿಲುಗಡೆಗೆ ಸಾಕಷ್ಟು ಜಾಗ ಇತ್ತು. ಕೇಪ್‌ಟೌನ್‌ನ ಟೇಬಲ್ ಮೌಂಟನ್ ಬೆಟ್ಟಕ್ಕೆ ಹೋಗುವ ದಾರಿಯಲ್ಲಿ ಇದೇ ರೀತಿ ವಾಹನ ನಿಲುಗಡೆಗೆ ಜಾಗ ಕಲ್ಪಿಸಲಾಗಿದೆ. ಜೋಗದಲ್ಲಿ ಇರುವಷ್ಟು ಜಾಗವೇನೂ ಅಲ್ಲಿ ಇರಲಿಲ್ಲ. ಆದರೂ ಎಲ್ಲರೂ ಅಚ್ಚುಕಟ್ಟಾಗಿ ಸರದಿಯಲ್ಲಿ ತಮ್ಮ ವಾಹನ ನಿಲ್ಲಿಸಿ ಕೇಬಲ್‌ಕಾ ಮೂಲಕ ಬೆಟ್ಟದ ಮೇಲೆ ಹತ್ತಿ ಹೋದರು. ಕೆಳಗೆ ಇಳಿದು ಬಂದು ತಮ್ಮ ವಾಹನದಲ್ಲಿ ಹೊರಟು ಹೋದರು. ಭಾರತದಲ್ಲಿ ಅಥವಾ ಕರ್ನಾಟಕದಲ್ಲಿ ಹೀಗೆ ಅಡ್ಡಾದಿಡ್ಡಿ ವಾಹನ ನಿಲ್ಲಿಸುವುದು ದೊಡ್ಡ ವಿಚಾರವೇನೂ ಅಲ್ಲ. ನಾವು ದಿನಾ ಇದನ್ನು ಅನುಭವಿಸುತ್ತೇವೆ.

ಜೋಗದ ಜಲಪಾತದ ಮುಂದೆ ಒಂದು ಅರ್ಧಗಂಟೆ ನಿಂತೆವು. ಅದೊಂದು ನಿಸರ್ಗ ವೈಭವ, ಸಂಜೆ ಕತ್ತಲೆ ಕವಿಯತೊಡಗಿತು. ಇದ್ದಕಿದ್ದಂತೆ ಮಂಜಿನ ಪರದೆ ಇಡೀ ಜಲಪಾತದ ಗುಡ್ಡವನ್ನು ಆವರಿಸಿತು; ನಿಸರ್ಗದ ವೈಭವಕ್ಕೆ ಅಂಕದ ಪರದೆ ಬಿದ್ದಂತೆ. ಎಲ್ಲ ಜಾಗ ಖಾಲಿ ಮಾಡತೊಡಗಿದರು. ಅಲ್ಲಿಂದ ಕಾಲು ಕೀಳಲು ಆಗದೆ ಜಲಪಾತಕ್ಕೆ ಎದುರಾಗಿ ದಿನ್ನೆಯ ಮೇಲೆ ದೊಡ್ಡ ಹೋಟೆಲ್ ಕಡೆ ನಡೆದು ಹೊರಟೆವು. ನಾವು ಶಿವಮೊಗ್ಗದಲ್ಲಿ ಉಳಿದುಕೊಳ್ಳಲು ವ್ಯವಸ್ಥೆಯಾಗಿತ್ತಾದರೂ ಇಲ್ಲೇ ಏಕೆ ಉಳಿದುಕೊಳ್ಳಬಾರದು ಎಂದು ಯೋಚಿಸಿ ಊಟಕ್ಕೆ ಅನುಕೂಲ ಇದೆಯೇ ಎಂದು ವಿಚಾರಿಸಿದೆವು. ಇರಲಿಲ್ಲ. ಅಷ್ಟು ದೊಡ್ಡ ಹೋಟೆಲ್ ಕಟ್ಟಿಸಿದರೂ ಅಲ್ಲಿ ಊಟಕ್ಕೆ ವ್ಯವಸ್ಥೆ ಇಲ್ಲ ಎಂದರೆ ಜನ ಅಲ್ಲಿ ಏಕೆ ಉಳಿದುಕೊಳ್ಳುತ್ತಾರೆ? ಹಾಗಾದರೆ

ಅಷ್ಟು ದೊಡ್ಡ ಹೋಟೆಲ್ ಕಟ್ಟಿಸಿದ್ದು ಏಕೆ? ಅದು ವ್ಯರ್ಥವಲ್ಲವೇ? ಸರ್ಕಾರವೇ ಎಲ್ಲವನ್ನೂ ಮಾಡಲು ಹೋಗಿ ಹೀಗೆ ಆಗುತ್ತದೆಯೇ? ತಾನು ಸರಿಯಾಗಿ ಮಾಡಲಾಗದ್ದನ್ನು ಸರ್ಕಾರ ಖಾಸಗಿಯವರಿಗೆ ಏಕೆ ಬಿಟ್ಟುಕೊಡುವುದಿಲ್ಲ?

ನಾವು ಜೋಗಕ್ಕೆ ಹೊರಟುದು ಭಟ್ಕಳದಿಂದ, ಭಟ್ಕಳದಿಂದ ಹೊನ್ನಾವರ ತಲುಪುವ ದಾರಿಯಲ್ಲಿ ಲೆಕ್ಕವಿಲ್ಲದಷ್ಟು ಗುಂಡಿಗಳು ಇದ್ದುವು. ಅದು ರಾಷ್ಟ್ರೀಯ ಹೆದ್ದಾರಿ. ರಾಷ್ಟ್ರೀಯ ಹೆದ್ದಾರಿಯ ಗತಿಯೇ ಹೀಗಾದರೆ ರಾಜ್ಯ ಹೆದ್ದಾರಿಗಳ ಗತಿ ಇನ್ನು ಹೇಗೆ ಇರಬೇಡ? ದಕ್ಷಿಣ ಆಫ್ರಿಕಾದಲ್ಲೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಾವು ಸಂಚರಿಸಿದೆವು. ಒಂದೇ ಒಂದು ರಸ್ತೆಯಲ್ಲಿ ಒಂದೇ ಒಂದು ಗುಂಡಿ ಬಿದ್ದುದು ನಮಗೆ ಕಾಣಲಿಲ್ಲ. ಒಂದೇ ಒಂದು ರಸ್ತೆ ಉಬ್ಬೂ ಇರಲಿಲ್ಲ. ನೇರವಾದ, ಅಗಲವಾದ ರಸ್ತೆಗಳ ತಿರುವುಗಳಲ್ಲಿ ವೇಗ ನಿಯಂತ್ರಿಸಲು ರಸ್ತೆಯನ್ನು ಒಂದಿಷ್ಟು ಹುರುಕುಬರುಕು ಮಾಡಿದ್ದಾರೆ. ವಾಹನದ ವೇಗ ತನ್ನಿಂದ ತಾನೇ ನಿಯಂತ್ರಣಕ್ಕೆ ಬರುತ್ತದೆ. ಮತ್ತೆ ವೇಗ ಪಡೆಯುತ್ತದೆ. ತಮಗೆ ನಿಗದಿಯಾದ ರಸ್ತೆಯಲ್ಲಿ ವಾಹನಗಳು ನಿಗದಿಯಾದ ವೇಗದಲ್ಲಿ ಓಡುತ್ತವೆ.

ವಿಶಾಲವಾದ ರಸ್ತೆಗಳನ್ನು ಮತ್ತಷ್ಟು ಅಗಲಗೊಳಿಸುವ ಕೆಲಸವನ್ನು ಅವರೂ ಮಾಡುತ್ತಿದ್ದಾರೆ. ಆದರೆ, ಈಗ ಇರುವ ರಸ್ತೆಯಲ್ಲಿ ಸಂಚಾರಕ್ಕೆ ಯಾವುದೇ ಅಡಚಣೆ ಆಗದಂತೆ ನಿಗಾ ವಹಿಸಿದ್ದಾರೆ. ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಸಾರಿ ನೀವು ಸಂಚರಿಸಿ ನೋಡಿ. ಮೊದಲು ಅಲ್ಲಿ ಸಾಕಷ್ಟು ಒಳ್ಳೆಯ ರಸ್ತೆಯೇ ಇತ್ತು. ಈಗ ಅದನ್ನು ಅಗಲ ಮಾಡಲು ಹೋಗಿ ಇದ್ದ ರಸ್ತೆಯನ್ನು ಎಷ್ಟು ಕೆಡಿಸಬಹುದೋ ಅಷ್ಟು ಕೆಡಿಸಿ ಹಾಕಿದ್ದಾರೆ. ಭಾರತದಲ್ಲಿ ಅಥವಾ ಕರ್ನಾಟಕದಲ್ಲಿ ಅಡ್ಡಾದಿಡ್ಡಿ ವಾಹನ ನಿಲ್ಲಿಸುವುದು ದೊಡ್ಡ ವಿಚಾರವಲ್ಲ. ಒಳ್ಳೆಯ ರಸ್ತೆಯನ್ನು ಅಗೆದು ಹಾಕಿ ಅದನ್ನು ಅಗಲಗೊಳಿಸುವುದೂ ದೊಡ್ಡ ವಿಚಾರವಲ್ಲ. ನಾವು ಅದನ್ನು ದಿನಾ ಅನುಭವಿಸುತ್ತೇವೆ.

ಕರ್ನಾಟಕದಲ್ಲಿ ರಸ್ತೆಗಳ ಸ್ಥಿತಿ ಉಉದಾಸೀನ' ಸಚಿವರು ಇರುವ ವರೆಗೆ ಸರಿ ಹೋಗುವುದೇ ಇಲ್ಲ. ಮುಖ್ಯಮಂತ್ರಿಯವರು ಅವರನ್ನು ಬದಲಿಸುವುದೂ ಇಲ್ಲ. ಜನರಿಗೆ ಹೇಗೂ ತಾಳ್ಮೆ ಇದೆಯಲ್ಲ? ಅದನ್ನು ಅತ್ತ ಬಿಟ್ಟು ಬಿಡೋಣ. ಭಟ್ಕಳ ಪಟ್ಟಣದ ಸಮುದ್ರ ದಂಡೆಗೆ ಬೆಳ್ಳಂಬೆಳಿಗ್ಗೆಯೇ ಹೋಗಿದ್ದೆವು. ಸಮುದ್ರ ದಂಡೆಯಲ್ಲಿ ಚಿನ್ನದ ಬಣ್ಣದ ಮರಳು. ವಿದೇಶಿಯರಿಗೆ ಅದು ಬಲು ಇಷ್ಟ ಎಂದು ನಮ್ಮ ನಾಗೇಂದ್ರ ಹೇಳಿದ. ಆದರೆ, ನಾವು ಬೆಳ್ಳಂ ಬೆಳಿಗ್ಗೆಯೇ ಹೋಗಿದ್ದುದಕ್ಕೋ ಏನೋ ಬೀಚಿನ ಮೇಲೆಲ್ಲ ಗುಪ್ಪೆ, 'ಗುಪ್ಪೆ! ಗಬ್ಬು ವಾಸನೆ. ಊರಿನ ಜನರಿಗೆ ಇದಕ್ಕಿಂತ 'ಆನಂದದ ತಾಣ' ಬೇರೆ ಇದ್ದಂತೆ ಕಾಣಲಿಲ್ಲ! ಭಟ್ಕಳದ ಬೀಚಿನಲ್ಲಿ ಚಿನ್ನದ ಬಣ್ಣದ ಮರಳೇ ಇರಬಹುದು. ಆದರೆ, ಅದನ್ನು ಕಕ್ಕಸು ತಾಣವಾಗಿ ಮಾಡಿದ ಭಟ್ಕಳದ ಜನರು ವಿದೇಶಿಗರನ್ನು ಹೋಗಲಿ ರಾಜ್ಯದ ಜನರನ್ನೇ ಅಲ್ಲಿಗೆ ಆಕರ್ಷಿಸಲು ಸಾಧ್ಯವಿಲ್ಲ. ಯಾರು ಬರುತ್ತಾರೆ ಅಲ್ಲಿಗೆ? ಭಾರತದಲ್ಲಿ, ಕರ್ನಾಟಕದಲ್ಲಿ ಹೀಗೆ ಬೀಚುಗಳನ್ನು ಕಕ್ಕಸಾಗಿ ಬಳಸುವುದು ದೊಡ್ಡ ವಿಚಾರವೇನೂ ಅಲ್ಲ. ನಾವು ಅದನ್ನು

ದಿನಾ ಅನುಭವಿಸುತ್ತೇವೆ. ನೋಡುತ್ತೇವೆ. ಕವಿ ರವೀಂದ್ರರು ಮೆಚ್ಚಿದ ಕಾರವಾರದ ಬೀಚಿನಲ್ಲಿಯೂ ಇದೇ ಗೋಳು. ನಮಗೆ ಯಾವುದೂ ಹೊಸ ವಿಚಾರವಲ್ಲ.

ಹೊಸ ವಿಚಾರಗಳನ್ನು ನೋಡಿ ಕಲಿಯಲೂ ನಾವು ಪ್ರಯತ್ನ ಮಾಡುವುದಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ಕಾಡು, ಬೆಟ್ಟ ಬಿಟ್ಟರೆ ನೋಡಲು ಮತ್ತೇನೂ ಇಲ್ಲ. ಆದರೆ, ಆ ಕಾಡನ್ನು ಆ ಜನ ಹೃದಯಕ್ಕೆ ಹಚ್ಚಿಕೊಂಡಿದ್ದಾರೆ. ಕಾಡಿನಲ್ಲಿನ ಪ್ರಾಣಿಗಳು ಅವರ ಜೀವನದ ಒಂದು ಭಾಗವೇ ಹೇಗೆ ಆಗಿವೆ ಎಂದರೆ ಅಚ್ಚರಿ ಅನಿಸುತ್ತದೆ. ಸನ್‌ಸಿಟಿಯಲ್ಲಿ ನಾವು ಇದ್ದ ಪ್ಯಾಲೇಸ್ ಹೋಟೆಲ್ ಕಟ್ಟಡದ ತುಂಬೆಲ್ಲ ಪ್ರಾಣಿ ಚಿತ್ರಗಳೇ, ಗೋಡೆ, ಕಂಬ, ಕಾರಂಜಿ, ಕಾರಿಡಾರ್ ಹೀಗೆ ಎಲ್ಲ ಕಡೆ, ಹುಲಿ, ಸಿಂಹ, ಆನೆ, ಜಿರಾಫೆ, ಸಾರಂಗಗಳ ಚಿತ್ರಗಳು ಶಿಲ್ಪಗಳು ಆವರಿಸಿಕೊಂಡಿವೆ. ಆ ಹೋಟೆಲ್‌ನ ಕಾರಿಡಾರ್‌ನಲ್ಲಿ ಇಟ್ಟಿದ್ದ ಒಂದು ಆನೆಯ ತೂಕ ಮೂರು ಟನ್‌ಗೂ ಹೆಚ್ಚು. ಪ್ರವೇಶದ್ವಾರದಲ್ಲಿ ಶಿರಬಾಗಿ, ಕೈ ಮುಗಿದು ಕರೆಯುವ ಸಾರಂಗಗಳ ತಲೆಯಿಂದ ಜಿಗಿಯುವ ಕಾರಂಜಿ, ಟೇಬಲ್ ಮೌಂಟನ್ ಬೆಟ್ಟದ ಮೇಲೆ ಕುರುಚಲು ಗಿಡ ಬಿಟ್ಟು ಬೇರೇನೂ ಇಲ್ಲ. ಆದರೂ, ಅದನ್ನು ಆ ದೇಶದ ಮೊದಲ ಕಪ್ಪು ಅಧ್ಯಕ್ಷ ನೆಲ್ಸನ್ ಮಂಡೇಲಾ ರಕ್ಷಿತ ಅರಣ್ಯ ಎಂದು ಘೋಷಿಸಿ ವರ್ಷಗಳೇ ಕಳೆದಿವೆ. ಈ ಪ್ರೀತಿ ಎಲ್ಲಿಂದ ಬರುತ್ತದೆ? ನಮಗೆ ಆ ಪ್ರೀತಿಯ ಕೊರತೆ ಏಕೆ? ಯಾವುದನ್ನೂ ನಾವು ಅಷ್ಟು ಹಚ್ಚಿಕೊಳ್ಳುವುದಿಲ್ಲವೇ?

ಪ್ರೀತಿ ಎಂಬುದು ಇನ್ನೊಬ್ಬರ ಬಗೆಗಿನ ಕಾಳಜಿಯ ಪ್ರತೀಕ. ಕೇಪ್‌ಟೌನ್ ನಗರದಲ್ಲಿ ಚರಂಡಿ ದುರಸ್ತಿ ಕೆಲಸ ನಡೆದಿತ್ತು. ಚರಂಡಿಯಿಂದ ಅಗೆದ ಮಣ್ಣಿನ ಒಂದು ಕಣ ಕೂಡ ಪಕ್ಕದ ರಸ್ತೆ ಮೇಲೆ ಬಿದ್ದಿರಲಿಲ್ಲ. ಅದು ಬೀಳಬಾರದು ಎಂದು ಚರಂಡಿ ಕೆಲಸ ನಡೆದ ಜಾಗಕ್ಕೆ ಎರಡೂ ಕಡೆ ಬೇಲಿ ಹಾಕಿದ್ದರು. ದಕ್ಷಿಣ ಆಫ್ರಿಕಾವೇನು ಮುಂದುವರಿದ ಭಾರಿ ದೊಡ್ಡ ದೇಶವಲ್ಲ. ಅಲ್ಲಿಯೂ ನಿರಕ್ಷರತೆ ಇದೆ. ಬಡತನವಿದೆ. ಕಳ್ಳ ಕಾಕರು ಇದ್ದಾರೆ. ಆದರೂ ಅಲ್ಲಿ ಒಂದು ಶಿಸ್ತು ಇದೆ. ಮಾಡುವ ಕೆಲಸದ ಬಗ್ಗೆ ಶ್ರದ್ಧೆ ಇದೆ. ಅದಕ್ಕೆ ಒಂದು ಘನತೆ ಇದೆ. ಅಲ್ಲಿಯೂ ಅನೇಕ ಫ್ಲೈ ಓವರ್‌ಗಳು ಇವೆ. ಫ್ಲೈ ಓವರ್‌ನ ಕಂಬಕ್ಕೆ ಬೆಂಗಳೂರಿನಲ್ಲಿ ಮಾಡಿದ ಹಾಗೆ ಬೇಕಾಬಿಟ್ಟಿ ಪೋಸ್ಟರ್‌ಗಳನ್ನು ಹಚ್ಚಿ ಹಾಳು ಮಾಡಿದ ದೃಶ್ಯ ನನಗೆ ಕಾಣಲಿಲ್ಲ. ಇಲ್ಲಿನ ಫ್ಲೈ ಓವರ್‌ಗಳ ಹಾಗೆ ಅಲ್ಲಿ ಭಾರಿ ಗಾತ್ರದ ಕಂಬಗಳೂ ನನಗೆ ಅಲ್ಲಿ ಕಾಣಲಿಲ್ಲ. ಹಾಗೆಂದು ಅವುಗಳ ಮೇಲೆ ಭಾರಿ ವಾಹನಗಳು ಸಂಚರಿಸುತ್ತಿರಲಿಲ್ಲ ಎಂದು ಅಲ್ಲ. ಕೆಲಸದಲ್ಲಿ ಶಿಸ್ತು, ಶ್ರದ್ಧೆ ಇದ್ದರೆ ಗುಣಮಟ್ಟವೂ ಇರುತ್ತದೆ. ಇನ್ನೊಬ್ಬರ ಹಣದಲ್ಲಿ ಈ ಕೆಲಸ ಮಾಡುತ್ತಿದ್ದೇವೆ ಎಂಬ ಕಾಳಜಿಯಿಂದ ಗುಣಮಟ್ಟ ಬರುತ್ತದೆ.

ಇವೆಲ್ಲ ಒಂದು ರೀತಿಯಲ್ಲಿ ಒಂದಕ್ಕೊಂದು ಸಂಬಂಧವಿಲ್ಲದ ಸಂಗತಿಗಳು. ಆದರೆ, ಒಟ್ಟಂದದಲ್ಲಿ ಒಂದಕ್ಕೊಂದು ಆಳವಾದ ಸಂಬಂಧವುಳ್ಳ ಸಂಗತಿಗಳು. ನಮ್ಮ ನಾಡಿಗೆ ಬಾದಾಮಿಯನ್ನು ನೋಡಲು ಬರುವ ಪ್ರವಾಸಿಗ ಅಲ್ಲಿನ ಗುಹೆಗಳಿಗೆ ಹೋಗುವ ರಸ್ತೆ ನೀಟಾಗಿ ಇರಲಿ ಎಂದು ಬಯಸುತ್ತಾನೆ. ಜೋಗಿಗೆ ಹೋದರೆ ಪಾರ್ಕಿಂಗ್ ಕಿರಿಕಿರಿ ಇರಬಾರದು ಎಂದು ಬಯಸುತ್ತಾನೆ. ಕಾರವಾರ ಬೀಚಿಗೆ ಹೋದರೆ ಗಬ್ಬು

ವಾಸನೆ ಇಲ್ಲದೇ ಇರಲಿ ಎಂದು ನಿರೀಕ್ಷಿಸುತ್ತಾನೆ. ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುವ ದಾರಿಯಲ್ಲಿ ಹಳ್ಳ ಗುಂಡಿಗಳು ಇರಬಾರದು ಎಂದು ಅಪೇಕ್ಷಿಸುತ್ತಾನೆ. ನಮಗೆ ಇದೆಲ್ಲ ದೊಡ್ಡ ವಿಚಾರವಲ್ಲ, ಇದರಲ್ಲಿಯೇ ನಾವು ಬದುಕುವುದು. ನಾವು ಬದಲಾಗುವುದೂ ಇಲ್ಲ ಎಂದರೆ ನಮ್ಮ ಪ್ರವಾಸೋದ್ಯಮ ಎಲ್ಲ ಇದ್ದೂ ಏನೂ ಇಲ್ಲದಂತೆ ಇರುತ್ತದೆ. ಬರೀ ಕಾಡು, ಕುರುಚಲು ಗುಡ್ಡ ಇರುವ ದಕ್ಷಿಣ ಆಫ್ರಿಕಾ ಕೂಡ ನಮಗಿಂತ ಮುಂದೆ ಹೋಗುತ್ತದೆ.

07-11-2010

# ಒಬಾಮ ಬಂದರು.

# ನೋಡಿದರು. ಆದರೆ ಗೆದ್ದರೇ?

ಅಮೆರಿಕವೆ ಹಾಗೆ, ಅದು ನಮ್ಮ ಎಲ್ಲ ಮಧ್ಯಮ ವರ್ಗದವರ ಕನಸು, ಗಮ್ಯ (ಡೆಸ್ಟಿನೇಷನ್), ಅಲ್ಲಿ ನೂರೆಂಟು ಸಮಸ್ಯೆಗಳು ಇರಬಹುದು, ಬಹುದು ಏಕೆ ಇವೆ. ಆದರೂ ಹೋದರೆ ನಮ್ಮ ಮಗ ಅಲ್ಲಿಗೇ ಹೋಗಿ ಕಲಿಯಲಿ, ಕೆಲಸ ಮಾಡಲಿ ಎಂಬುದು ಬಹುತೇಕರ ಬಯಕೆ. ಅಮೆರಿಕದ ಅಧ್ಯಕ್ಷರು ಕಳೆದ ವಾರ ಭಾರತಕ್ಕೆ ಭೇಟಿ ನೀಡಿದಾಗ ಕಂಡ ಸಂಭ್ರಮದ ಹಿಂದೆ ಮಧ್ಯಮ ವರ್ಗದ ಈ ಆಶಯವೇ ದೊಡ್ಡ ಕೆಲಸ ಮಾಡಿದೆ. ಟಿ.ವಿ ಮಾಧ್ಯಮಗಳು, ಪತ್ರಿಕೆಗಳು ಒಬಾಮ ಭೇಟಿಯನ್ನು ವೈಭವಿಸಿದ್ದಕ್ಕೂ ಇದೇ ಕಾರಣ ಇರಬಹುದು.

ಆದರೆ, ಒಬಾಮ ಇದನ್ನೆಲ್ಲ ಮೀರಿ ಎಲ್ಲರ ಮನ ಗೆದ್ದರು. ಅವರ ಭಾರತದ ಭೇಟಿಗೆ ವಿಶೇಷ ಮಹತ್ವ ಇತ್ತು. ಕಳೆದ 60 ವರ್ಷಗಳಲ್ಲಿ ಭಾರತಕ್ಕೆ ಭೇಟಿ ನೀಡಿದ ಐದನೇ ಅಮೆರಿಕ ಅಧ್ಯಕ್ಷ ಅವರು. ಅದಕ್ಕಿಂತ ಮುಖ್ಯವಾದುದು ತಮ್ಮ ಅಧ್ಯಕ್ಷತೆಯ ಮೊದಲ ಅವಧಿಯಲ್ಲಿಯೇ ಭಾರತಕ್ಕೆ ಭೇಟಿ ನೀಡಿದ ಮೊದಲ ಅಧ್ಯಕ್ಷರೂ ಅವರೇ. ಕಳೆದ ಹತ್ತು ವರ್ಷಗಳಲ್ಲಿ ಮೂವರು ಅಧ್ಯಕ್ಷರು ಭಾರತಕ್ಕೆ ಭೇಟಿ

ನೀಡಿದ್ದಾರಾದರೂ ಯಾವಾಗಲೂ ಇಂಥ ಸಂಭ್ರಮ ವ್ಯಕ್ತವಾಗಿರಲಿಲ್ಲ. ಅದಕ್ಕೆ ಕಾರಣಗಳು ಹಲವು ಇರಬಹುದು. ಮೊದಲ ಕಾರಣ ಒಬಾಮ ನಮ್ಮ ಹಾಗೆ ಅಥವಾ ನಮಗಿಂತ ಕೊಂಚ ಕಪ್ಪು ಮನುಷ್ಯ. ಇನ್ನೂ ಮಧ್ಯ ವಯಸ್ಕ, ಅದ್ಭುತವಾಗಿ ಅಮೆರಿಕದ ಅಧ್ಯಕ್ಷ ತಾನು ಎಂಬ ಬಿಗುಮಾನ ಇಲ್ಲದ ಸರಳ ವ್ಯಕ್ತಿ. ಎಲ್ಲರನ್ನೂ ತಬ್ಬಿಕೊಂಡು ಪ್ರೀತಿಯಿಂದ ಮಾತನಾಡುವಂಥ ಅಪರೂಪದ ಸರಳ. ಎಲ್ಲ ಭಾರತೀಯರ ಹಾಗೆ ಅಮ್ಮಾವ್ರ ಗಂಡ!

ಒಬಾಮ ತಮ್ಮ ದೇಶದಲ್ಲಿ ಕಷ್ಟದಲ್ಲಿ ಇದ್ದಾರೆ. ಅವರ ಜನಪ್ರಿಯತೆ ಕುಸಿಯುತ್ತಿದೆ. ಕಾಂಗ್ರೆಸ್ ಮತ್ತು ಸೆನೆಟ್‌ನಲ್ಲಿ ಅವರು ರಿಪಬ್ಲಿಕನ್‌ರಿಗೆ ಬಹುಮತ ಬಿಟ್ಟುಕೊಡುವ ಅಪಾಯದಲ್ಲಿ ಇದ್ದಾರೆ. ದೇಶದ ಅರ್ಥವ್ಯವಸ್ಥೆ ಇನ್ನೂ ಚೇತರಿಸಿಕೊಂಡಿಲ್ಲ. ಅದು ಸಾಲದು ಎಂದು ನಿರುದ್ಯೋಗಿಗಳ ಸಂಖ್ಯೆ ಭಯಂಕರ ಎನ್ನುವಂತೆ ಏರುತ್ತಿದೆ. ಇರಾಕ್, ಆಫ್ಘಾನಿಸ್ತಾನದಲ್ಲಿ ಅವರ ಸೈನಿಕರು ನಿತ್ಯ ಸೆಣಸುತ್ತಿದ್ದಾರೆ. ಆದರೆ, ಅವರ ದೇಹಭಾಷೆಯಲ್ಲಿ, ಮಾತಿನಲ್ಲಿ ಇದು ವ್ಯಕ್ತವಾಗುತ್ತಿಲ್ಲ. ಭಾರತದ ಮೂರು ದಿನಗಳ ಪ್ರವಾಸದಲ್ಲಿ ಮಾತನಾಡುವಾಗ ಅವರು ಎಲ್ಲಿಯೂ ತಡವರಿಸಲಿಲ್ಲ. ಅವರದು ಕಂಚಿನ ಕಂಠದ ವಾಗ್ವಿಲಾಸ.

ಒಬಾಮ ತಮ್ಮ ಅಧ್ಯಕ್ಷ ಹುದ್ದೆಯ ಮೊದಲ ಅವಧಿಯಲ್ಲಿಯೇ ಭಾರತದ ಭೇಟಿಯನ್ನು ಆಯ್ದುಕೊಂಡುದಕ್ಕೆ 'ಭಾರತವನ್ನು ಈಗ ಅಲಕ್ಷಿಸಲಾಗದು, ಅದು ಆರ್ಥಿಕವಾಗಿ ಬೆಳೆಯುತ್ತಿರುವ ಒಂದು ಬಲಿಷ್ಠ ರಾಷ್ಟ್ರ, ಅಮೆರಿಕಕ್ಕೆ ದೊಡ್ಡ ಮಾರುಕಟ್ಟೆ' ಎಂಬ ಲೆಕ್ಕಾಚಾರವೇ ಮುಖ್ಯ ಕಾರಣ. ಹಾಗೆ ನೋಡಿದರೆ ಇದೇನು ಅವರಿಗೆ ನಿನ್ನೆ ಮೊನ್ನೆ ಮನವರಿಕೆಯಾದ ಸಂಗತಿಯಲ್ಲ. ಅಮೆರಿಕ ಅಧ್ಯಕ್ಷರ ಮೊದಲ ಅಧಿಕೃತ ವಿದೇಶಿ ಅತಿಥಿಯಾದವರು ನಮ್ಮ ಪ್ರಧಾನಿ ಡಾ.ಮನಮೋಹನ ಸಿಂಗ್ ಅವರೇ. ಭಾರತಕ್ಕೂ ಅಮೆರಿಕದ ಬೆಂಬಲ ಅಷ್ಟೇ ಅಗತ್ಯವಾಗಿದೆ, ಬರೀ ಭಾರತಕ್ಕೆ ಮಾತ್ರವಲ್ಲ ಪೂರ್ವದ ಅನೇಕ ದೇಶಗಳಿಗೆ ಒಬಾಮ ಬೇಕಾಗಿದ್ದಾರೆ. ಚೀನಾದ ಆಕ್ರಮಣಶೀಲತೆಯನ್ನು ತಡೆದು ಏಷ್ಯಾ ಖಂಡದಲ್ಲಿ ಒಂದಿಷ್ಟು ಸಮತೋಲ ಸಾಧಿಸಬಲ್ಲವರು ಒಬಾಮ ಒಬ್ಬರೇ ಎಂದೇ ಈ ರಾಷ್ಟ್ರಗಳ ನಂಬಿಕೆ. ಆ ಕೆಲಸವನ್ನು ಒಬಾಮ ಭಾರತದ ಭೇಟಿಯಲ್ಲಿ ಮಾಡಿದ್ದಾರೆ. ತಮ್ಮ ಭೇಟಿಯ ಮೊದಲ ತಾಣವಾದ ಮುಂಬೈನ ತಾಜ್ ಹೋಟೆಲಿನಲ್ಲಿ ಪಾಕಿಸ್ತಾನವನ್ನು ಖಂಡಿಸದ ಒಬಾಮ ದೆಹಲಿಯಲ್ಲಿ ಒಬ್ಬ ಹುಡುಗಿಯ ಪ್ರಶ್ನೆಗೆ ಉತ್ತರಿಸುವಾಗ ಪಾಕಿಸ್ತಾನವನ್ನು ಹೆಸರಿಸಲೇಬೇಕಾಯಿತು. ಮುಂಬೈನಲ್ಲಿ ಪಾಕಿಸ್ತಾನವನ್ನು ಹೆಸರಿಸಲು ಅವರು ಹಿಂದೇಟು ಹಾಕಿದ್ದಕ್ಕೆ 'ಬಿಟ್ಟು ನೋಡೋಣ ಏನಾಗುತ್ತದೆ' ಎಂಬ ಧಾರ್ಷ್ಟ್ಯ ಕಾರಣವಾಗಿರಬಹುದು. ಅಥವಾ ಆಫ್ಘಾನಿಸ್ತಾನದಲ್ಲಿ ಸಮಸ್ಯೆಯಾಗಬಹುದು ಎಂಬ ಅಳುಕೂ ಇರಬಹುದು. ಆದರೆ, ಅಮೆರಿಕಾದವರಿಗೆ 9/11 ಎಷ್ಟು ಮಹತ್ವದ್ದೂ ಭಾರತಕ್ಕೆ 26/11 ಅಷ್ಟೇ ಮಹತ್ವದ್ದು ಎಂದು ತಿಳಿಯಲು ಅವರಿಗೆ ಬಹುಹೊತ್ತು ಹಿಡಿಯಲಿಲ್ಲ. ತಮ್ಮ ತಪ್ಪನ್ನು ಬೇಗ ತಿದ್ದಿಕೊಂಡರು. ಆದರೂ ಅವರಾಗಿಯೇ ಈ ಮಾತು ಹೇಳಿದ್ದರೆ ಅದಕ್ಕೆ ಹೆಚ್ಚು ಮಹತ್ವ ಮತ್ತು ಬಲ ಇರುತ್ತಿತ್ತು.

ಒಬಾಮ ಇದೇ ಮಾತನ್ನು ಸೆಂಟ್ರಲ್ ಹಾಲ್‌ನಲ್ಲಿಯೂ ಪುನರುಚ್ಚರಿಸಿದರು. ಆದರೆ, ಅವರಿಗೆ ಹೆಚ್ಚು ಚಪ್ಪಾಳೆ ಸಿಕ್ಕುದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಕಾಯಂ ಸ್ಥಾನ ನೀಡಲು ತನ್ನ ಬೆಂಬಲವಿದೆ ಎಂದು ಪ್ರಕಟಿಸಿದಾಗ, ನಿಜ, ನಮ್ಮ ಪ್ರಧಾನಿ ಮನಮೋಹನಸಿಂಗ್ ಅವರು ಕಳೆದ ಒಂದೂವರೆ ವರ್ಷದಿಂದ ಈ ಬೇಡಿಕೆಯನ್ನು ಬಲವಾಗಿ ಮಂಡಿಸಿದ್ದಾರೆ. ಕಳೆದ ವರ್ಷದ ಜುಲೈನಲ್ಲಿ ಇಟಲಿಯಲ್ಲಿ ನಡೆದ ಜಿ 8/5 ರಾಷ್ಟ್ರಗಳ ಸಭೆಯಲ್ಲಿ ಅವರು ಎಲ್ಲ ಅಂತರ ರಾಷ್ಟ್ರೀಯ ಸಂಸ್ಥೆಗಳ ಸಂರಚನೆಯಲ್ಲಿ ಕಾಲಕ್ಕೆ ತಕ್ಕಂತೆ ಸುಧಾರಣೆ ಆಗಬೇಕು ಎಂದಿದ್ದರು. ಎರಡನೇ ಜಾಗತಿಕ ಯುದ್ಧದ ನಂತರ ವಿಶ್ವಸಂಸ್ಥೆ ಹುಟ್ಟಿಕೊಂಡಾಗ ಜಗತ್ತಿನಲ್ಲಿ ಕೇವಲ ಎರಡು ಧ್ರುವಗಳು ಮಾತ್ರ ಇದ್ದುವು. ಆಗ ಇದ್ದ ರಾಷ್ಟ್ರಗಳಿಗೇ ಈಗಲೂ ಭದ್ರತಾ ಮಂಡಳಿಯಲ್ಲಿ ಸ್ಥಾನವಿದೆ. ಸೋಜಿಗ ಎಂದರೆ ಬ್ರಿಟನ್ ಮತ್ತು ಫ್ರಾನ್ಸ್‌ಗಿಂತ ಬಲಿಷ್ಠವಾದ ಜಪಾನ್ ಹಾಗೂ ಜರ್ಮನಿಯಂಥ ದೇಶಗಳಿಗೆ ಮಂಡಳಿಯಲ್ಲಿ ಸ್ಥಾನವಿಲ್ಲ. ಇದನ್ನೆಲ್ಲ ಪ್ರಸ್ತಾಪಿಸಿದ್ದ ಪ್ರಧಾನಿ, 'ವಿಶ್ವಸಂಸ್ಥೆ ಕಾಲಕ್ಕೆ ತಕ್ಕಂತೆ ಬದಲಾಗಬೇಕು. ಇಲ್ಲವಾದರೆ ಸಮಸ್ಯೆಯನ್ನು ಗುರುತಿಸುವುದು ಕಷ್ಟ. ಅದಕ್ಕೆ ಪರಿಹಾರಗಳನ್ನು ಕಂಡುಕೊಳ್ಳುವುದು ಇನ್ನೂ ಕಷ್ಟ' ಎಂದಿದ್ದರು. ಒಬಾಮ ಅವರಿಗೆ ಇದು ಮನವರಿಕೆಯಾದಂತೆ ಕಾಣುತ್ತದೆ. ಅವರು ನಮ್ಮ ಬೆಂಬಲಕ್ಕೆ ನಿಂತಿದ್ದಾರೆ. ಆದರೆ, ಅವರೇ ಹೇಳಿದಂತೆ ನಮಗೆ ಕಾಯಂ ಸ್ಥಾನ ಸಿಗುವುದಕ್ಕೆ ಇನ್ನೂ ಬಹಳಷ್ಟು ಕಾಲ ಹಿಡಿಯಬಹುದು, ಮುಂದಿನ ಜನವರಿಯಿಂದ ನಮಗೆ ಎರಡು ವರ್ಷಗಳ ಕಾಯಂ ಅಲ್ಲದ ಸ್ಥಾನ ಸಿಗುತ್ತಿದೆ. ಆ ಎರಡು ವರ್ಷ ಮುಗಿದ ಕೂಡಲೇ ನಮಗೆ ಕಾಯಂ ಸ್ಥಾನ ಸಿಗುವುದು ಕಷ್ಟವೇನೋ?

ಏಕೆಂದರೆ ನಮ್ಮ ನೆರೆಯ ಚೀನಾ ದೇಶ ಇದಕ್ಕೆ ಒಪ್ಪುವುದು ಕಷ್ಟ ಅಥವಾ ಅದು ಒಪ್ಪದಂತೆ ಪಾಕಿಸ್ತಾನ ಅದರ ಮೇಲೆ ಒತ್ತಡ ತರಬಹುದು. ಆರ್ಥಿಕವಾಗಿ ಅತ್ಯಂತ ಬಲಿಷ್ಠವಾಗಿರುವ ಜಪಾನ್ ದೇಶ ಇದಕ್ಕೆ ಏನು ಹೇಳುತ್ತದೆ ಎಂಬುದೂ ಮುಂದೆ ಗೊತ್ತಾಗಬಹುದು. ಬಹುಶಃ ಇದಕ್ಕೆ ಉತ್ತರ ಎಂದರೆ ವಿಶ್ವಸಂಸ್ಥೆಯ ಸಂರಚನೆಯನ್ನೇ ಬದಲಿಸುವುದು. ಅದರ ವ್ಯಾಪ್ತಿಯನ್ನು ಇನ್ನಷ್ಟು ಹೆಚ್ಚಿಸುವುದು. ಅದನ್ನೇ ಸುಧಾರಿತ ವಿಶ್ವಸಂಸ್ಥೆ ಎಂದು ಹೇಳುತ್ತಿರಬಹುದು. ಭದ್ರತಾ ಮಂಡಳಿಯಲ್ಲಿ ಭಾರತ ಸ್ಥಾನ ಬಯಸುವುದು ಒಂದು ಬಗೆ. ಅದಕ್ಕೆ ಅರ್ಹತೆ ಗಳಿಸುವುದು ಇನ್ನೊಂದು ಬಗೆ. ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ವಿಶ್ವಸಂಸ್ಥೆಯ (ಯುಎನ್‌ಡಿಪಿ) ವರದಿ ಭಾರತಕ್ಕೆ ಅವಮಾನಕಾರಿಯಾಗಿದೆ. 169 ದೇಶಗಳಲ್ಲಿ ಭಾರತಕ್ಕೆ 119ನೇ ಸ್ಥಾನವಿದೆ. ಅರೆಹೊಟ್ಟೆಯಲ್ಲಿ ಬದುಕು ಸವೆಸುವವರ ಸಂಖ್ಯೆ ದಿನದಿಂದ ದಿನಕ್ಕೆ ದೇಶದಲ್ಲಿ ಹೆಚ್ಚುತ್ತಿದೆ. ಶೇ 8 ಜಿ.ಡಿ.ಪಿ ವೃದ್ಧಿದರ ಸಾಧಿಸಿದ ನಂತರವೂ ಈ ವಿಪರ್ಯಾಸದ ಚಿತ್ರದಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಸದ್ಯೋಭವಿಷ್ಯದಲ್ಲಿ ಆಗುವಂತೆಯೂ ಕಾಣುವುದಿಲ್ಲ. ಬಹುಶಃ ಇದನ್ನು ದೃಷ್ಟಿಯಲ್ಲಿ ಇಟ್ಟುಕೊಂಡೇ ಒಬಾಮ ಭಾರತಕ್ಕೆ ಭೇಟಿ ನೀಡಿದ ದಿನ 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ದೊಡ್ಡ ಚಿತ್ರವೊಂದನ್ನು ತನ್ನ ಮುಖಪುಟದಲ್ಲಿ ಪ್ರಕಟಿಸಿತ್ತು. ರೈಲು ಹಳಿಯ ಆಚೆ ದಡದಲ್ಲಿ ಒಬಾಮ ಅವರ

ಭಿತ್ತಿಫಲಕ. ಈ ಕಡೆ ತಲೆಯ ಮೇಲೆ ದೊಡ್ಡ ಬುಟ್ಟಿಯನ್ನು ಇಟ್ಟುಕೊಂಡು ಹೊರಟಿದ್ದ ಕೂಲಿ ಮಹಿಳೆಯೊಬ್ಬಳು ನಡೆದುಹೋಗುವ ದೃಶ್ಯ ಆ ಚಿತ್ರದಲ್ಲಿ ಇತ್ತು. ಕವಿ ಕಂಬಾರರ ಕವನದಲ್ಲಿಯೂ ಇದೇ 'ಚಿತ್ರ' ಇತ್ತು. ಭಾರತದ ಹಸಿವಿನ ದೊಡ್ಡ ಹೊಟ್ಟೆಯನ್ನು ಆ ಚಿತ್ರ ಪ್ರತಿನಿಧಿಸುವಂತೆ ಇತ್ತು. ರೈಲು ಹಳಿಗಳು ಎಂದೂ ಕೂಡುವುದಿಲ್ಲ ಎಂಬುದೂ ಒಂದು ದೊಡ್ಡ ಸಂಕೇತ!

ಆದರೆ, ಒಬಾಮ ನಮಗೆ ಏನಾದರೂ ಕೊಡಲು ಬಂದಿದ್ದರೇ? ನನಗೆ ನೆನಪಿದೆ ನಾವು ಚಿಕ್ಕವರು ಇದ್ದಾಗ ಅಮೆರಿಕೆಯಿಂದ ಬಂದ ರವೆಯಲ್ಲಿಯೇ ಉಪ್ಪಿಟ್ಟು ಮಾಡಿ ಶಾಲೆಯಲ್ಲಿ ಬಡಿಸುತ್ತಿದ್ದರು. ಈಗ ಆ ಸನ್ನಿವೇಶವಿಲ್ಲ. ವಾಸ್ತವವಾಗಿ ಒಬಾಮ ವ್ಯಾಪಾರ ಮಾಡಲು ಬಂದಿದ್ದರು. ಅಮೆರಿಕ ನಮಗೆ 11 ಶತಕೋಟಿ ಡಾಲರ್‌ಗಳ ಯುದ್ಧ ವಿಮಾನಗಳನ್ನು ಮಾರಲಿದೆ. ಭಾರತದ ವಾಯುಪಡೆಯ ನಿಲ್ದಾಣಗಳಲ್ಲಿ ತನ್ನ ಯುದ್ಧ ವಿಮಾನಗಳಿಗೆ ಇಂಧನ ಭರ್ತಿ ಮಾಡಿಕೊಳ್ಳಲಿದೆ. ಭಾರತದ ಬಂದರುಗಳಲ್ಲಿ ಅಮೆರಿಕೆಯ ಯುದ್ಧ ನೌಕೆಗಳು ಲಂಗರು ಹಾಕಿ ನಿಲ್ಲಲಿವೆ. ಅತ್ತ ಪಾಕಿಸ್ತಾನಕ್ಕೆ 13.5 ಶತಕೋಟಿ ಡಾಲರ್ ಮೌಲ್ಯದ ಶಸ್ತ್ರಾಸ್ತ್ರ ನೆರವನ್ನು ಅಮೆರಿಕ ಕೊಟ್ಟಿದೆ. ಇನ್ನೂ ಎರಡು ಶತಕೋಟಿ ಮೌಲ್ಯದ ಶಸ್ತ್ರಗಳ ಸರಬರಾಜಿಗೆ ಭರವಸೆ ನೀಡಿದೆ. ಹೀಗೆ ಎರಡೂ ಕಡೆಯವರಿಗೆ ಶಸ್ತ್ರ ಪೂರೈಸಿ 'ನೀವು ಶಾಂತಿಯಿಂದ ಇರಬೇಕು, ಆಗಾಗ ಮಾತನಾಡಬೇಕು' ಎಂದು ಹೇಳುವುದು ಕೈಯಲ್ಲಿ ಬಡಿಗೆ, ಮಚ್ಚು, ಕತ್ತಿ ಕೊಟ್ಟು ಹೊಡೆದಾಡಬೇಡಿ ಎಂದು ಹೇಳಿದಂತೆ!

ಒಬಾಮ ಅವರ ಮಾತುಗಳಲ್ಲಿ ಇದ್ದ ಇನ್ನೊಂದು ವಿಪರ್ಯಾಸ ಎಂದರೆ ಅವರು ದೆಹಲಿಯಲ್ಲಿ ವಿದ್ಯಾರ್ಥಿಗಳ ಜತೆ ಮಾತನಾಡುತ್ತ ಭಾರತದ ಅರ್ಧದಷ್ಟು ಜನಸಂಖ್ಯೆ 30ಕ್ಕಿಂತ ಕಡಿಮೆ ವಯಸ್ಸಿನದು ಎಂದು ಶ್ಲಾಘಿಸಿದರು. ಆದರೆ, ಅವರಿಗೆ ಭಾರತದ, ಅದರಲ್ಲೂ ಬೆಂಗಳೂರಿನ ಹುಡುಗರನ್ನು ಕಂಡರೆ ಭಯ. ಬೆಂಗಳೂರಿಗಿಂತ ಬಫೆಲೊ ವಾಸಿ ಎಂದು ಅವರು ಹೇಳಿ ತಿಂಗಳುಗಳೇ ಕಳೆದಿವೆ. ನಮ್ಮ ಹುಡುಗರ ಗಣಿತ ಜ್ಞಾನದ ಬಗೆಗೂ ಅವರಿಗೆ ಅಂಜಿಕೆ. 'ನೋಡಿ ಭಾರತದಲ್ಲಿ ಹುಡುಗರು ಗಣಿತ ಕಲಿತ ಹಾಗೆ ನೀವೂ ಕಲಿಯಬೇಕು' ಎಂದು ಅವರು ಮತ್ತೆ ಮತ್ತೆ ಹೇಳಿದ್ದಾರೆ... ಇವೆಲ್ಲ ಸಹಜ ವೈರುಧ್ಯಗಳು, ಒಬಾಮ ಭಾರತದ ಹುಡುಗರಿಗೆಲ್ಲ ಕೆಲಸ ಕೊಡಲು ಆಗದು. ಆ ನಿರೀಕ್ಷೆಯೂ ನಮ್ಮಲ್ಲಿ ಇರಬಾರದು. ಅವರು ತಮ್ಮ ದೇಶದ ನಿರುದ್ಯೋಗ ಪರಿಹರಿಸಿದರೇ ಸಾಕಾಗಿದೆ. ಬರೀ ನಿರುದ್ಯೋಗ ಮಾತ್ರವಲ್ಲ ತಮ್ಮ ದೇಶದ ಆರ್ಥಿಕತೆಯನ್ನೂ ಸದೃಢಗೊಳಿಸಬೇಕಿದೆ. ತಮ್ಮ ನೆಲದಲ್ಲಿ ಭದ್ರವಾಗಿ ನೆಲೆಯೂರಲು ಸಾಧ್ಯವಾದರೆ ಮಾತ್ರ ಒಬಾಮ ಗೆದ್ದಂತೆ. ಈ ಕಪ್ಪು ಮನುಷ್ಯನಿಗೆ ಆ ಗೆಲುವು ಸಾಧ್ಯವಾಗಲಿ ಎಂಬುದು ಎಲ್ಲ ಭಾರತೀಯರ ಹಾರೈಕೆ.

14-11-2010

# ಮನೆಯೊಳಗೆ ಮನೆಯೊಡೆಯ

# ಇದ್ದಾನೆಯೇ? ಇಲ್ಲವೇ?

ವ್ಯತ್ಯಾಸ ಎದ್ದು ಕಾಣುತ್ತಿತ್ತು; ಕಣ್ಣಿಗೆ ಕುಕ್ಕುವಂತಿತ್ತು. ಅದು ಚಿಕ್ಕೋಡಿ ತಾಲ್ಲೂಕಿನ ಕೊನೆಯ ಗ್ರಾಮ. ಹೆಸರು ಬೋರಗಾಂವಿ, ಈ ಗ್ರಾಮದ ಗಡಿಯಲ್ಲಿಯೇ ಮಹಾರಾಷ್ಟ್ರ ರಾಜ್ಯ ಶುರುವಾಗುತ್ತದೆ. ಯಾವುದೋ ಓಬಿರಾಯನ ಕಾಲದಲ್ಲಿ ರಸ್ತೆ ಬದಿ ಹಾಕಿದ 'ಮಹಾರಾಷ್ಟ್ರ ಶಾಸನ್' ಎಂಬ ಫಲಕವಿದೆ. ಆದರೆ, ನಮಗೆ ಫಲಕ ನೋಡಿಯೇನೂ ಪಕ್ಕದ ರಾಜ್ಯದ ಗಡಿ ಶುರುವಾಯಿತು ಎಂದು ತಿಳಿಯಬೇಕಿರಲಿಲ್ಲ. ನಮ್ಮ ಕಾಲ ಕೆಳಗಿನ ರಸ್ತೆಯೇ ಅದನ್ನು ಹೇಳಿತು. ಗಡಿಯ ಈಚೆ ಕರ್ನಾಟಕದ ಗುಂಡಿ ಬಿದ್ದ ರಸ್ತೆ. ಆಚೆ ಅದರ ದುಪ್ಪಟ್ಟು ಅಗಲದ ವಿಶಾಲವಾದ ಅಚ್ಚುಕಟ್ಟಾದ ಡಾಂಬರು ರಸ್ತೆ, ಚಿಕ್ಕೋಡಿಯಿಂದ 30 ಕಿಲೋ ಮೀಟರ್ ದೂರದ ಬೋರಗಾಂವಿಗೆ ಬರುವಾಗ ಗೆಳೆಯ ಗೋಪಾಲ ಹೆಗಡೆ ಸಿಕ್ಕ ಸಿಕ್ಕವರಿಗೆಲ್ಲ ಶಾಪ ಹಾಕಿದ. ಅವನ ಹೊಸ ಕಾರಿನಲ್ಲಿ ನಾವು ಬೋರಗಾಂವಿಗೆ ಹೊರಟಿದ್ದೆವು. ಇಡೀ 30 ಕಿಲೋ ಮೀಟರ್ ರಸ್ತೆಯುದ್ದಕ್ಕೂ ಹಳ್ಳ ಗುಂಡಿಗಳನ್ನು ದಾಟಿಕೊಂಡು ಬಂದೆವು. ಡಾಂಬರು ಅಲ್ಲಿ ಇಲ್ಲಿ ಮರೀಚಿಕೆಯಂತೆ ಕಾಣುತ್ತಿತ್ತು.

ಬಂದ ದಾರಿಯಲ್ಲಿಯೇ ಹೋದರೆ ನಾವು ಧಾರವಾಡ ಮುಟ್ಟುವುದು ಮಧ್ಯರಾತ್ರಿಯಾದೀತು, ದಾರಿಯಲ್ಲಿ ಕಾರು ಕೆಟ್ಟು ಫಜೀತಿಯಾದೀತು ಎಂದು ಮಹಾರಾಷ್ಟ್ರದ ರಸ್ತೆಯಲ್ಲಿ ಹೋಗಲು ನಿರ್ಧರಿಸಿದೆವು. ಬಂದ ದಾರಿಗಿಂತ 30-40 ಕಿಲೋ ಮೀಟರ್ ರಸ್ತೆ ಹೆಚ್ಚಾಗುತ್ತದೆ ಎಂದು ಗೊತ್ತಿದ್ದೂ ಅದೇ ದಾರಿ ಹಿಡಿದೆವು. ಧಾರವಾಡ ಮುಟ್ಟಿದಾಗ ಇನ್ನೂ ರಾತ್ರಿ 9 ಗಂಟೆಯೂ ಆಗಿರಲಿಲ್ಲ! ಬೋರಗಾಂವಿಯಿಂದ ಕಾಗಲ್ ಬಳಿ ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಪ್ರವೇಶಿಸುತ್ತಿದ್ದಂತೆಯೇ ನನಗೆ ಸೋಜಿಗವಾಯಿತು. ಈ ರಸ್ತೆಯ ಬಗ್ಗೆ ನಾನು ಬಹಳ ಕೇಳಿದ್ದೆ. ಆದರೆ, ಪ್ರಯಾಣ ಮಾಡಿರಲಿಲ್ಲ. ವಾಜಪೇಯಿಯವರು ಪ್ರಧಾನಿಯಾಗಿದ್ದಾಗ ಸುವರ್ಣ ಚತುಷ್ಪಥ ರಸ್ತೆ ಯೋಜನೆಯಡಿ ಪೂಂಜ್ ಲಾಯ್ ಕಂಪೆನಿ ಈ ರಸ್ತೆಯನ್ನು ನಿರ್ಮಿಸಿದೆ. ದಕ್ಷಿಣ ಆಫ್ರಿಕಾಕ್ಕೆ ಹೋಗಿ ಬಂದ ನಂತರ ನಾನು ಅಲ್ಲಿನ ರಸ್ತೆಗಳನ್ನು ಹೊಗಳಿ ಬರೆದಿದ್ದೆ. ಈ ರಸ್ತೆಯನ್ನು ನೋಡಿದ್ದರೆ ಹಾಗೆ ಬರೆಯುತ್ತಿರಲಿಲ್ಲ ಅನಿಸಿತು.

ದಕ್ಷಿಣ ಆಫ್ರಿಕಾದ ಹಾಗೆ ಇದು ಷಟ್ಪಥ ರಸ್ತೆಯಲ್ಲ. ಆದರೆ, ರಸ್ತೆಯನ್ನು ನಿರ್ಮಿಸಿ ಆರು ವರ್ಷಗಳಾದರೂ ಈಗಷ್ಟೇ ಡಾಂಬರು ಹಾಕಿದಂತೆ ಕಪ್ಪಗೆ ಹೊಳೆಯುತ್ತದೆ. ರಸ್ತೆಯ ಮಧ್ಯದಲ್ಲಿ ಹಾಕಿದ ಬಿಳಿ ಬಣ್ಣದ ಪಟ್ಟಿಗಳೂ ಅಚ್ಚ ಹೊಸದಾಗಿ ಹೊಳೆಯುತ್ತವೆ. ರಸ್ತೆಯನ್ನು ವಿಭಜಿಸುವ ಮೀಡಿಯನ್‌ಗಳ ನಡುವೆ ಎದುರು ಬರುವ ವಾಹನಗಳ ದೀಪ ಕಣ್ಣು ಕುಕ್ಕದಿರಲಿ ಎಂದು ಗಿಡಗಳನ್ನು ಬೆಳೆಸಿದ್ದಾರೆ. ಅಡ್ಡಾದಿಡ್ಡಿ ಬೆಳೆದ ಗಿಡಗಳ ಟೊಂಗೆಗಳನ್ನು ಅಂದವಾಗಿ ಕತ್ತರಿಸಿದ್ದಾರೆ. ಚಿಕ್ಕೋಡಿಯಿಂದ ಬೋರಗಾಂವಿ ವರೆಗೆ ಬರುವಾಗ ಸಿಕ್ಕ ಸಿಕ್ಕವರಿಗೆ ಶಾಪ ಹಾಕಿದ ನಾವು ಈಗ ಪೂಂಜ್ ಲಾಯ್ಡ್ ಕಂಪೆನಿಯನ್ನು ನೆನಪಿಸಿಕೊಂಡೆವು. 'ಎಂಥ ಒಳ್ಳೆಯ ಕೆಲಸ!' ಎಂದು ಕೊಂಡಾಡಿದೆವು. ರಸ್ತೆ ಕೆಲಸ ಆಗುವಾಗ ಚಿಕ್ಕೋಡಿಯಲ್ಲಿಯೇ ಇದ್ದ ಶ್ರೀಪಾದ ಯರೇಕುಪ್ಪಿ ಕೂಡ ನಮ್ಮ ಜತೆಗಿದ್ದರು. 'ಪೂಂಜ್ ಲಾಯ್ ಕಂಪೆನಿ ನಿಗದಿಗಿಂತ ಮುಂಚೆಯೇ ಕೆಲಸ ಮುಗಿಸಿತು. ಅದಕ್ಕಾಗಿ ಶೇ 10ರಷ್ಟು ಪ್ರೋತ್ಸಾಹಧನವನ್ನೂ ಸರ್ಕಾರದಿಂದ ಪಡೆಯಿತು. ಆ ಹಣದಲ್ಲಿ ಪುಣೆಯಿಂದ ಬೆಳಗಾವಿ ನಡುವಿನ ಕೆಲವು ಊರುಗಳ ದೇವಸ್ಥಾನಗಳಿಗೆ ಹೆದ್ದಾರಿಯ ಮಾದರಿಯಲ್ಲಿಯೇ ರಸ್ತೆಯನ್ನೂ ಮಾಡಿಕೊಟ್ಟಿತು' ಎಂದು ಯರೇಕುಪ್ಪಿ ನೆನಪಿಸಿಕೊಂಡರು. ಒಳ್ಳೆಯ ಕೆಲಸ ಮಾಡಿದ ಆ ಕಂಪೆನಿಗೆ ಎಷ್ಟೊಂದು ಹರಕೆ, ಹಾರೈಕೆ ಎಂದುಕೊಂಡೆ.

ಹಾಗೆ ಅಂದುಕೊಳ್ಳುತ್ತಿರುವಾಗಲೇ ಚಿತ್ರದುರ್ಗ-ಹುಬ್ಬಳ್ಳಿ ನಡುವಿನ ಇದೇ ಹೆದ್ದಾರಿ ನೆನಪಾಯಿತು. ಆ ರಸ್ತೆ ಮಾಡುತ್ತಿರುವ ಗುತ್ತಿಗೆದಾರನಿಗೆ, ಬೇಗ ಕೆಲಸ ಮಾಡಿಸದ ಸರ್ಕಾರಕ್ಕೆ ಎಷ್ಟೊಂದು ಜನ ಶಾಪ ಹಾಕುತ್ತಿರಬಹುದು ಅನಿಸಿತು. ಈ ರಸ್ತೆಯ ಕೆಲಸವೂ ಆಗಲೇ ಮುಗಿಯಬೇಕಿತ್ತು. ಕೇಂದ್ರದಲ್ಲಿ ಯುಪಿಎ ಸರ್ಕಾರ ಬಂದ ಕೂಡಲೇ ಮಾಡಿದ ಮೊದಲ ಕೆಲಸ ಸುವರ್ಣ ಚತುಷ್ಪಥ ರಸ್ತೆಯ ನಿರ್ಮಾಣವನ್ನು ಅಲಕ್ಷಿಸಿದ್ದು, ನಮ್ಮವರೇ ಆದ ಕೆ.ಎಚ್.ಮುನಿಯಪ್ಪ ಆಗ ಭೂ ಸಾರಿಗೆ ಸಚಿವರು. ಅವರು ಮನಸ್ಸು ಮಾಡಿದ್ದರೆ ಈ ಕೆಲಸ ಮುಗಿಸುವುದು ಅಷ್ಟು ಕಷ್ಟವೇನೂ ಇರಲಿಲ್ಲ.

ಅವರಿಗೆ ಆಸಕ್ತಿಯೇ ಇರಲಿಲ್ಲವೇ? ಗುತ್ತಿಗೆದಾರ ಹಾಗೂ ಸರ್ಕಾರದ ನಡುವಿನ ಕಾನೂನು ಸಮರವೇ ಅಷ್ಟು ದೀರ್ಘವಾಗಿತ್ತೇ? ರಾಜ್ಯ ಸರ್ಕಾರ ತೂಕಡಿಕೆ ಬಿಟ್ಟು ಏಳಲೇ ಇಲ್ಲವೇ? ಹೇಳುವುದು ಕಷ್ಟ ಪರಿಣಾಮ ಏನು ಎಂದರೆ ರಸ್ತೆಯ ಕೆಲಸ ಆಗಲಿಲ್ಲ. ಇನ್ನೂ ಯಾವಾಗ ಆಗುತ್ತದೆ ಎಂದೂ ಗೊತ್ತಿಲ್ಲ. ರಸ್ತೆಗಳು ದೇಶದ ಜೀವನಾಡಿ, ಒಳ್ಳೆಯ ಒಂದು ರಸ್ತೆ ಉಳಿಸುವ ಇಂಧನ ದೇಶದ ಸಂಪತ್ತನ್ನು ಉಳಿಸಿದಂತೆ. ಹಾಗೆಂದು ಯಾರಿಗೆ ಹೇಳುವುದು?...

ಮರುದಿನ ಧಾರವಾಡದಿಂದ ಸವದತ್ತಿ ಮೂಲಕ ರಾಮದುರ್ಗಕ್ಕೆ ಹೊರಟೆ. ಧಾರವಾಡ ಮತ್ತು ಸವದತ್ತಿ ನಡುವಿನ ಅಂತರ 35 ಕಿಲೋ ಮೀಟರ್, ಚಿಕ್ಕೋಡಿ- ಬೋರಗಾಂವಿ ನಡುವಿನದಕ್ಕಿಂತ ಕೆಟ್ಟ ರಸ್ತೆಯದು. ಇಲ್ಲಿಯೂ ಡಾಂಬರು ಮರೀಚಿಕೆ. ಎಲ್ಲೆಂದರಲ್ಲಿ ಹಳ್ಳ ದಿಣ್ಣೆಗಳು ಇವೆ. ಯಾವ ವಾಹನವಾದರೂ ಗಂಟೆಗೆ ಹತ್ತು ಕಿಲೋ ಮೀಟರ್‌ಗಿಂತ ಹೆಚ್ಚು ವೇಗದಲ್ಲಿ ಹೋಗಲು ಸಾಧ್ಯವಿಲ್ಲ. ಕೇವಲ ಎಂಟು ತಿಂಗಳ ಹಿಂದೆ 15 ಕೋಟಿ ರೂಪಾಯಿ ವೆಚ್ಚದಲ್ಲಿ ಈ ರಸ್ತೆಯನ್ನು ನಿರ್ಮಿಸಲಾಗಿತ್ತು; ಅದೂ 80 ಕೋಟಿ ರೂಪಾಯಿ ವೆಚ್ಚದಲ್ಲಿ ಈ ರಸ್ತೆಯ ಅಗಲೀಕರಣ ಕೆಲಸ ಇನ್ನೇನು ಆರಂಭವಾಗಲಿದೆ ಎಂದು ಗೊತ್ತಿದ್ದ ನಂತರವೂ. ಈಗ ರಸ್ತೆಯ ಬಣ್ಣ ಬಯಲಾಗಿದೆ. ಸವದತ್ತಿಗೆ ಹೋದರೆ ಈ ದುಡ್ಡು ಯಾರ ಜೇಬಿಗೆ ಹೋಗಿದೆ ಎಂದು ಜನರು ರಸ್ತೆಯಲ್ಲಿಯೇ ಮಾತನಾಡಿಕೊಳ್ಳುವುದು ಕೇಳಿಸುತ್ತದೆ. ಆ ಮಾತು ಆಳುವವರ ಕಿವಿಗೆ ಬಿದ್ದಿದೆಯೋ, ಬಿದ್ದರೂ ಕೇಳದಂತೆ ಸುಮ್ಮನಿದ್ದಾರೋ? ಯಾರಿಗೆ ಹೇಳುವುದು?...

ರಾಮದುರ್ಗಕ್ಕೆ ಹೋಗಿ ನಿಮ್ಮ ಊರಿಗೆ ರಸ್ತೆಯೇ ಇಲ್ಲವಲ್ಲ' ಎಂದು ಅತ್ತಿಗೆಗೆ ಹೇಳಿದೆ. 'ನೀವು ಪೇಪರ್‌ನಲ್ಲಿ ಏಕೆ ಇದ್ದೀರಿ? ಬರೆಯಿರಿ.' ಎಂದು ಅವರು ನನಗೇ ದಬಾಯಿಸಿದರು. ನನ್ನ ಅಧಿಕಾರದ ಬಗ್ಗೆ ಅವರಿಗಿದ್ದ ಭ್ರಮೆ ನೋಡಿ ಒಳಗೊಳಗೆ ಮುಸಿ ಮುಸಿ ನಕ್ಕೆ. 'ಪೇಪರ್‌ನಲ್ಲಿ ಬರೆದು ಬಿಟ್ಟರೆ ರಸ್ತೆ ಆಗುತ್ತದೆಯೇ? ಬರೆದು ಬರೆದು ನಮ್ಮ ಕೈ ಸವೆದುವು' ಎಂದೆ. 'ಆ ಯಡಿಯೂರಪ್ಪ ಆ ಕಡೆ ಒಂದು, ಈ ಕಡೆ ಒಂದು ಮಗುವನ್ನು ಬಗಲಲ್ಲಿ ಇಟ್ಟುಕೊಂಡು ಚಿತ್ರ ತೆಗೆಸಿಕೊಳ್ಳುತ್ತಾರೆ. ನೀವು ಅದನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತೀರಿ. ನಮ್ಮ ಊರುಗಳ ಗೋಳು ಕೇಳುವವರು ಯಾರು' ಎಂದು ಅವರು ಮತ್ತೆ ನನಗೇ ಜೋರು ಮಾಡಿದರು. “ಊರಿಗೆ ಬಂದ ವೇಳೆಯೇ ಸರಿಯಿಲ್ಲ!' ಎಂದು ನಾನೇ ವಿಷಯ ಬದಲಿಸಿದೆ.

ಆದರೆ ಆ ಹೆಣ್ಣುಮಗಳು ಹೇಳಿದ್ದರಲ್ಲೂ ಅರ್ಥವಿದೆ ಅನ್ನಿಸಿತು. ಸರ್ಕಾರ ವೈಯಕ್ತಿಕ ಲಾಭದ ಯೋಜನೆಗಳ ಮೇಲೆ ಹಣ ಖರ್ಚು ಮಾಡುತ್ತ ಹೋದಂತೆ, ಅದು ವೋಟು ತಂದು ಕೊಡುತ್ತದೆ ಎಂಬ ಭ್ರಮೆಯಲ್ಲಿ ತೇಲುತ್ತ ಇದ್ದಂತೆ ಸಾಮುದಾಯಿಕ ಪ್ರಯೋಜನದ ಯೋಜನೆಗಳ ಕಡೆಗೆ ಗಮನ ಕಡಿಮೆಯಾಗುತ್ತದೆ. ಗಮನ ಇದ್ದರೂ ಖರ್ಚು ಮಾಡಲು ಹಣ ಇರುವುದಿಲ್ಲ. ಕರ್ನಾಟಕದಲ್ಲಿ ಧರ್ಮಸಿಂಗ್ ಅವರು ಲೋಕೋಪಯೋಗಿ ಸಚಿವರಾಗಿದ್ದಾಗ ಮಾತ್ರ ಒಂದಿಷ್ಟು ರಸ್ತೆ ಅಭಿವೃದ್ಧಿ ಕೆಲಸ ಆಯಿತು. ಈಗಿನ ಲೋಕೋಪಯೋಗಿ ಸಚಿವರು ವರ್ಷಕ್ಕೆ ಒಮ್ಮೆ ವರದಿಗಾರರ ಜತೆಗೆ ಮಾತನಾಡಿದಾಗಲೆಲ್ಲ 20,000 ಕೋಟಿ ರೂಪಾಯಿ

ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಮಾಡುವ ಮಾತು ಆಡುತ್ತಾರೆ. ಅವರು ಒಮ್ಮೆ ಚಿಕ್ಕೋಡಿಯಿಂದ ಬೋರಗಾಂವಿಗೆ, ಧಾರವಾಡದಿಂದ ಸವದತ್ತಿಗೆ ಅಥವಾ ಹಾವೇರಿ ಸುತ್ತಮುತ್ತ ಕಾರಿನಲ್ಲಿ ಅಡ್ಡಾಡಿದರೂ ಸಾಕು ರಸ್ತೆಗಳ ಸ್ಥಿತಿ ಹೇಗಿದೆ ಎಂದು ತಿಳಿಯುತ್ತದೆ. ಗೋಪಾಲ ಮೊನ್ನೆಯಷ್ಟೇ ಕೊಪ್ಪಳ ಮಾರ್ಗವಾಗಿ ಹೊಸಪೇಟೆಗೆ ಹೋಗಿದ್ದ. 'ಹೊಸಪೇಟೆ ಇನ್ನೂ ಮೂರು ಕಿಲೋ ಮೀಟರ್್ರ ಇರುವಾಗ ರಸ್ತೆಯಲ್ಲಿ ಎಂಥೆಂಥ ದೊಡ್ಡ ಕಂದಕಗಳು ಬಿದ್ದಿವೆ ಎಂದರೆ ಬಳ್ಳಾರಿ ಜಿಲ್ಲೆಯ ಎಲ್ಲ ಶಾಸಕರನ್ನು, ಸಚಿವರನ್ನು ಅದರಲ್ಲಿ ಹೂತು ಹಾಕಬಹುದು' ಎಂದು ಕೂಗಾಡುತ್ತಿದ್ದ. ಹೊಸಪೇಟೆಯಿಂದ ಬಳ್ಳಾರಿಗೆ ಹೋಗುವ ರಸ್ತೆಯ ಸ್ಥಿತಿಯದೂ ಅದೇ ಕಥೆ. ಯಾರಿಗೆ ಹೇಳುವುದು?...

ಬೆಂಗಳೂರಿಗೆ ವಾಪಸು ಬರುವ ರಾತ್ರಿ, ಹುಬ್ಬಳ್ಳಿಯಲ್ಲಿ ಬಿ.ವಿ.ಬಿ ಕಾಲೇಜಿನಿಂದ ಕಿಮ್ಸ್ ಕಾಲೇಜಿನ ವರೆಗೆ ಪಾದಚಾರಿ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದೆ. ಯಾವಾಗಲೋ ಪಾದಚಾರಿ ರಸ್ತೆಯಲ್ಲಿ ಹಾಕಿದ್ದ ಕಾಂಕ್ರೀಟ್ ಚಪ್ಪಡಿಗಳು ಉದ್ದಕ್ಕೂ ಕಿತ್ತುಕೊಂಡು ಬಂದಿವೆ. ಚಪ್ಪಡಿಗಳನ್ನು ಮತ್ತೆ ಮತ್ತೆ ಜಿಗಿದೇ ರಸ್ತೆಯಲ್ಲಿ ನಡೆಯಬೇಕು. ಚರಂಡಿಯಲ್ಲಿ ಆಳೆತ್ತರ ಕಾಂಗ್ರೆಸ್ ಹುಲ್ಲು ಬೆಳೆದಿದೆ. ರಸ್ತೆಯ ಆಚೆ ಬದಿಯೂ ಅದೇ ಹುಲ್ಲಿನ ಸಾಮ್ರಾಜ್ಯ ಹಳ್ಳಿಗಳನ್ನೂ ನಗರಗಳನ್ನೂ ನಾವು ಹೇಗೆ ಹಾಳು ಮಾಡಿದೆವಲ್ಲ ಅನಿಸಿತು. ಅಭಿವೃದ್ಧಿಗೆ ಬಂದ ಹಣ ಎಲ್ಲಿ ಹೋಗುತ್ತದೆ? ಕರ್ನಾಟಕದ ಎರಡನೇ ರಾಜಧಾನಿ ಹುಬ್ಬಳ್ಳಿಯ ಮುಖ್ಯ ರಸ್ತೆಯ ಪಾಡೇ ಇದಾದರೆ ಒಳಗಿನ ರಸ್ತೆಗಳ ಕಥೆ ಹೇಗಿರಬೇಡ? ನಗರಾಭಿವೃದ್ಧಿ ಸಚಿವ ಸುರೇಶಕುಮಾರ್ ಪಾಲಿಕೆಗಳಿಗೆ ಕೋಟಿ ಕೋಟಿ ದುಡ್ಡು ಕೊಟ್ಟಿದ್ದಾರೆ. ಅಥವಾ ಹಾಗೆಂದು ಅವರು ಹೇಳುತ್ತಿದ್ದಾರೆ. ಸ್ವಚ್ಛತೆ ಕಾಪಾಡುವ ಪಾಲಿಕೆಗಳಿಗೆ ಬಹುಮಾನ ಕೊಡುವುದಾಗಿಯೂ ಮೊನ್ನೆ ಪ್ರಕಟಿಸಿದ್ದಾರೆ. ಹುಬ್ಬಳ್ಳಿ ರಸ್ತೆಯನ್ನು ಒಂದು ಸಾರಿ ಬಂದು ಅವರೇ ನೋಡಬೇಕೇ? ಅವಳಿ ನಗರದಲ್ಲಿ ಮೇಯರ್ ಇಲ್ಲವೇ? ಪುರಪಿತೃಗಳು ಇಲ್ಲವೇ? ಆಯುಕ್ತರು ಎಂದು ಸರ್ಕಾರದ ಒಬ್ಬ ಪ್ರತಿನಿಧಿ ಇಲ್ಲವೇ? ಇದನ್ನೆಲ್ಲ ಯಾರಿಗೆ ಕೇಳುವುದು?...

ಕೆಲವು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಗುಂಡಿ ಬಿದ್ದ ರಸ್ತೆಗಳಲ್ಲಿ ಬಿಜೆಪಿಯ ಧುರೀಣರೊಬ್ಬರು ಗಿಡಗಳನ್ನು ನೆಟ್ಟು ಆಗಿನ ಕಾಂಗ್ರೆಸ್ ಸರ್ಕಾರವನ್ನು ಅಣಕಿಸಿದ್ದರು. 'ಎಂಥ ಒಳ್ಳೆಯ ಐಡಿಯಾ?' ಎಂದು ನಾನು ಅವರನ್ನು ಅಭಿನಂದಿಸಿದ್ದೆ.

ಈಗ ರಾಜ್ಯದಲ್ಲಿ ಬಿಜೆಪಿ ಸರ್ಕಾರವೇ ಇದೆ. ಮೊನ್ನೆ ಬಿದ್ದ ಮಳೆಗೆ ರಸ್ತೆಗಳಲ್ಲಿ ಅಡಗಿದ್ದ ಗುಂಡಿಗಳು ಎದ್ದು ಕುಳಿತಿವೆ. ಪಾಲಿಕೆಗೆ ಚುನಾವಣೆ ನಡೆಯುವುದಕ್ಕಿಂತ ಮುಂಚೆ ಒಳ್ಳೆಯ ರಸ್ತೆಗಳ ಮೇಲೆ ಮತ್ತೆ ಮತ್ತೆ ಹಾಕಿದ್ದ ಡಾಂಬರು ಹರಿದುಕೊಂಡು ಹೋಗಿದೆ. ಈ ಗುಂಡಿಗಳಲ್ಲಿ ತಾವೂ ಗಿಡ ನೆಟ್ಟು ಬಿಜೆಪಿಯವರನ್ನು ಅಣಕಿಸಬಹುದು ಎಂಬುದೂ ವಿರೋಧ ಪಕ್ಷಗಳಿಗೆ ಹೊಳೆಯುತ್ತಿಲ್ಲ.

ಮನೆಯೊಳಗೆ ಮನೆಯೊಡೆಯ ಇಲ್ಲದೇ ಇದ್ದರೆ ಹೊಸ್ತಿಲಲ್ಲಿಯೇ ಹುಲ್ಲು ಬೆಳೆಯುತ್ತದೆ ಎಂದರು ಬಸವಣ್ಣ. ಮನೆಯೊಳಗೆ ಮನೆಯೊಡೆಯ ಇದ್ದಾನೆಯೇ? ಇಲ್ಲವೇ? ಗೊತ್ತಿಲ್ಲ.

# ಮುರುಘಾ ಶರಣರು

# ನಿಜವನ್ನೇ ಹೇಳಿದ್ದಾರೆ!

ಚಿತ್ರದುರ್ಗದ ಮುರುಘಾ ಶರಣರಿಗೆ ಸಿಟ್ಟು ಬಂದುದು ಕಡಿಮೆ. ಮೊನ್ನೆ ಅವರು ಉಗ್ರರಾಗಿದ್ದರು. ಪತ್ರಕರ್ತರನ್ನು ತಾರಾಮಾರಾ ಬೈದರು. ಇವರು ಕಾವಲು ನಾಯಿಗಳಾಗಬೇಕಿತ್ತು. ಆದರೆ, ನಾಯಿಗಳಾಗಿದ್ದಾರೆ. ಹಕ್ಕೊಂಡು ತಿನ್ನುತ್ತಿದ್ದಾರೆ. ವಸೂಲಿ ವೀರರಾಗಿದ್ದಾರೆ. ಭ್ರಷ್ಟಾಚಾರದಲ್ಲಿ ರಾಜಕಾರಣಿಗಳನ್ನೂ ಮೀರಿಸುತ್ತಾರೆ.' ಬೈಗುಳದ ಭಂಡಾರವನ್ನೇ ಅವರು ಪತ್ರಕರ್ತರ ಮೇಲೆ ಸುರಿದರು. ಪತ್ರಕರ್ತರಿಂದ, ಅವರನ್ನು ಪ್ರತಿನಿಧಿಸುವ ಸಂಘಟನೆಗಳಿಂದ ನಿರೀಕ್ಷಿತ ಪ್ರತಿಕ್ರಿಯೆಯೇ ವ್ಯಕ್ತವಾಯಿತು. ಎಲ್ಲರೂ ಅವರ ಮೇಲೆ ಬಿದ್ದರು. ಶರಣರು ಶರಣಾದರು. ಅವರು ಕ್ಷಮೆ ಕೇಳಬೇಕಿರಲಿಲ್ಲ. ಕೆಲವರು ಪತ್ರಕರ್ತರು ಇಂಥವರು' ಎಂದು ಮೊದಲೇ ಅವರು ಹೇಳಿದ್ದರೆ ಸುರಕ್ಷಿತವಾಗಿ ಇರಬಹುದಿತ್ತೇನೋ?

ಶರಣರು ಸತ್ಯವನ್ನೇ ಹೇಳಿದ್ದಾರೆ. ಒಟ್ಟಾರೆ ಪತ್ರಿಕೋದ್ಯಮ ಈಗ ಪವಿತ್ರವಾಗಿ ಉಳಿದಿಲ್ಲ. ಯಾರ ಕಪಾಟಿನಿಂದ ಯಾವಾಗ ತಲೆಬುರುಡೆ ಉರುಳಿ ಬೀಳುತ್ತದೋ ಎಂದು ಹೇಳುವುದು ಕಷ್ಟ. ಈಗಾಗಲೇ ತಲೆಬುರುಡೆಗಳು



ಒಂದೊಂದಾಗಿ ಹೊರಗೆ ಬೀಳುತ್ತಿವೆ. ದೂರದ ದೆಹಲಿಯಲ್ಲಿ ದೊಡ್ಡ ದೊಡ್ಡವರ ಕಪಾಟುಗಳ ತುಂಬ ಬರೀ ಬುರುಡೆಗಳೇ ಇದ್ದಂತೆ ಇವೆ! ಏಕೆ ಹೀಗೆ ಆಯಿತು? ಪತ್ರಕರ್ತರಿಗೆ ಸಣ್ಣಪುಟ್ಟ ಆಮಿಷಗಳು ಯಾವಾಗಲೂ ಇದ್ದುವು. ರಾಜಕಾರಣಿಗಳು, ಉದ್ಯಮಿಗಳು, ಅಧಿಕಾರಿಗಳು ಆಗಾಗ ಕರೆದು ಗುಂಡು ಪಾರ್ಟಿ ಕೊಡುತ್ತಿದ್ದರು. ಆದರೆ, ಮನೆಗೆ ಹೋಗುವಾಗ ಪಾಕೀಟು ಕೊಟ್ಟು ಕಳಿಸುವ ಧೈರ್ಯವನ್ನು ಯಾರೂ ಮಾಡುತ್ತಿರಲಿಲ್ಲ. ವಾಣಿಜ್ಯ ಪತ್ರಿಕಾಗೋಷ್ಠಿಗಳಲ್ಲಿ ಗುಂಡು, ತುಂಡಿನ ಜತೆಗೆ ಒಂದು ವಾಚನ್ನೋ, ಇಸ್ತ್ರಿ ಪೆಟ್ಟಿಗೆಯನ್ನೂ ಕೊಟ್ಟು ಕಳಿಸುವ ರೂಢಿಯೂ ಹೊಸದೇನಲ್ಲ. ವಾಚು ಅಥವಾ ಇಸ್ತ್ರಿಪೆಟ್ಟಿಗೆಯನ್ನು ಬಿಟ್ಟು ಹೋಗುವವರು ಆಗಲೂ ಇದ್ದರು, ಈಗಲೂ ಇದ್ದಾರೆ. ಆದರೆ, ಉದ್ಯಮಿಗಳು ಕೊಡುವ ಪಾಕೀಟಿನ ಗಾತ್ರದ ಮೇಲೆ ವಾಣಿಜ್ಯ ಸುದ್ದಿಯ ಅಳತೆಯೂ ಅವಲಂಬಿತವಾಗಿರುತ್ತದೆ ಎಂದು 16 ವರ್ಷಗಳ ಹಿಂದೆಯೇ ಹಿರಿಯ ವಾಣಿಜ್ಯ ಪತ್ರಕರ್ತ ಟಿ.ಎನ್. ನೈನನ್ ನನಗೆ ಹೇಳಿದ್ದರು. ಬರುಬರುತ್ತ ವಾಣಿಜ್ಯೋದ್ಯಮಿಗಳ ಜತೆಗೆ

ಏಕಾಂಗಿಯಾಗಿ (ಒನ್ ಟು ಒನ್) ಸಂದರ್ಶನಕ್ಕೆ ವ್ಯವಸ್ಥೆ ಮಾಡುವ ಮಟ್ಟಕ್ಕೆ ಸಾರ್ವಜನಿಕ ಸಂಪರ್ಕ ಸಂಸ್ಥೆಗಳು ಹೆಚ್ಚಿಕೊಂಡುವು. ಪತ್ರಕರ್ತರೂ ಅದನ್ನು ಬಯಸತೊಡಗಿದರು. ಈ ಸಂದರ್ಶನದಲ್ಲಿ ಕಂಪೆನಿಗಳ ಷೇರುಗಳನ್ನು ಜೇಬಿಗೆ ಹಾಕಿಕೊಂಡ ಪತ್ರಕರ್ತರ ಸುದ್ದಿಗಳೂ ಹೊರಗೆ ಬರತೊಡಗಿದುವು.

ಆದರೆ, ಪತ್ರಕರ್ತರನ್ನು ದೊಡ್ಡದಾಗಿ ಹಾಳು ಮಾಡಿದವರು ರಾಜಕಾರಣಿಗಳು, ಅವರು ಪ್ರಚಾರಜೀವಿಗಳು, ಅವರಿಗೆ ಪ್ರಚಾರ ಎಷ್ಟು ಮುಖ್ಯ ಎಂದು ಪತ್ರಕರ್ತರಿಗೂ ಅರಿವಾಗತೊಡಗಿತು. ಹಾದಿಗೆ ಒಂದು ಬೀದಿಗೆ ಒಂದು ಪತ್ರಿಕೆಗಳು ಹುಟ್ಟಿಕೊಂಡವು. ಇವು ಒಂದೋ ಜಾಹೀರಾತಿನ ಮೇಲೆ ಇಲ್ಲವೇ ರಾಜಕಾರಣಿಗಳು ಕೊಡುವ ಬಿಟ್ಟಿ ಹಣದ ಮೇಲೆ ಅವಲಂಬಿತವಾದುವು. ತಮ್ಮ ಸಂಖ್ಯೆ ದೊಡ್ಡದಾದಂತೆ ಅವರು ಸಂಘಟಿತರೂ ಆದರು. ಸಭೆ-ಸಮಾರಂಭಗಳಲ್ಲಿ ಕುಳಿತುಕೊಳ್ಳಲು ಕುರ್ಚಿ ಕೊಡದಿದ್ದರೆ ಇಡೀ ಸಭೆಗೇ ಬಹಿಷ್ಕಾರ ಹಾಕಿ ಹೊರಗೆ ನಡೆಯುವ, ಸಂಘಟಕರಿಗೆ ಮುಜುಗರ ಮಾಡುವ ಪರಂಪರೆ ಬೆಳೆಯತೊಡಗಿತು. ದೊಡ್ಡ ಪತ್ರಿಕೆಯ ವರದಿಗಾರನಾದರೆ ಅವನ ಮಾಲೀಕರಿಗೆ ಅಥವಾ ಸಂಸ್ಥೆಯ ಮುಖ್ಯಸ್ಥರಿಗೆ ದೂರು ಕೊಟ್ಟು ಇಂಥ ವರ್ತನೆಯನ್ನು ನಿಯಂತ್ರಿಸಲು ಸಾಧ್ಯ. ಅವನೇ ಸಂಪಾದಕ, ಅವನೇ ವರದಿಗಾರನಾದರೆ ಅವನನ್ನು ನಿಯಂತ್ರಿಸುವವರು ಯಾರು? ಅವರ ಸಂಖ್ಯೆಯೇ ಹೆಚ್ಚಾಗತೊಡಗಿತು. ವಿಚಿತ್ರ ಎಂದರೆ ಬಹಿಷ್ಕಾರ ಸಂಪ್ರದಾಯವನ್ನು ದೊಡ್ಡ ಪತ್ರಿಕೆಗಳ ವರದಿಗಾರರೂ ಅನುಸರಿಸತೊಡಗಿದರು. ಆ ಸಭೆ, ಸಮಾರಂಭ ನಡೆಯುತ್ತಿದ್ದುದು ತಮಗಾಗಿ ಅಲ್ಲ, ಸಾರ್ವಜನಿಕರಿಗಾಗಿ ಎಂಬ ಕನಿಷ್ಠ ತಿಳಿವಳಿಕೆಯೂ ಬಹಿಷ್ಕಾರ ಹಾಕುವವರಿಗೆ ಇರಲಿಲ್ಲ. ತನ್ನ ಕೆಲಸ ಸುದ್ದಿ ಬರೆಯುವುದು, ಅದನ್ನು ಸಾರ್ವಜನಿಕರಿಗೆ ತಿಳಿಯಪಡಿಸುವುದು, ಅದಕ್ಕಾಗಿಯೇ ಸಂಸ್ಥೆ ತನಗೆ ಸಂಬಳ ಕೊಟ್ಟು ಇಟ್ಟುಕೊಂಡಿದೆ ಎಂಬುದನ್ನು ಅವರು ಮರೆತರು. ಪತ್ರಕರ್ತರು ಸ್ವತಃ ಸೃಷ್ಟಿಸಿಕೊಂಡ ಅಥವಾ ಅವರ ಸುತ್ತ ಸಮಾಜ ಸೃಷ್ಟಿಸಿದ ಪ್ರಭಾವಳಿ ದೊಡ್ಡದಾಗುತ್ತ ಹೋದಂತೆ ಈ



ಸಮಸ್ಯೆ ಇನ್ನೂ ಕ್ಲಿಷ್ಟವಾಗುತ್ತ ಹೋಯಿತು. ಮುರುಘಾ ಶರಣರು ಹೆದರಿದ್ದು ಈ ಪ್ರಭಾವಳಿಗಾಗಿ,

ನನ್ನ ವಾರಿಗೆಯವರು ವೃತ್ತಿಗೆ ಸೇರಿದಾಗ ನಮಗೆ ಇದ್ದ ಸಂಬಳ ಸಾವಿರ ರೂಪಾಯಿ ಮೀರಿರಲಿಲ್ಲ. ಅದೂ ಇದೂ ಕಡಿತವಾಗಿ ಕೈಗೆ ಎಂಟು ನೂರು ರೂಪಾಯಿ ಸಿಗುತ್ತಿತ್ತು. ಮನೆ ಬಾಡಿಗೆಗೆ ನಾನೂರು ರೂಪಾಯಿ ಹೋಗುತ್ತಿತ್ತು. ಉಳಿದ ಹಣದಲ್ಲಿಯೇ ಸಂಸಾರ ಸಾಗುತ್ತಿತ್ತು. ಹೆಂಡತಿಯ ಕೊರಳಲ್ಲಿ ಕರಿಮಣಿ ಸರ ಮಾತ್ರ ಇರುತ್ತಿತ್ತು. ಅಕ್ಕಿ ಆರಿಸುವಾಗ ಅವಳ ಕೈಯಿಂದ ಬರೀ ಬಳೆಗಳ ಕಿಂಕಿಣಿ ನಾದ ಕೇಳಿ ಬರುತ್ತಿತ್ತು. ಆದರೆ, ಮನಸ್ಸು ನಿರಾಳವಾಗಿ ಇರುತ್ತಿತ್ತು. ಯಾರ ವಿರುದ್ಧ ಬರೆಯುವಾಗಲೂ ಕೈ 'ಹಿಡಿ'ದಂತೆ ಆಗುತ್ತಿರಲಿಲ್ಲ. ನನ್ನ ವಾರಿಗೆಯವರ ಮುಂದೆಯೇ ಜಗತ್ತು

ಬದಲಾಗಿ ಹೋಯಿತು. 'ನಮ್ಮ ಪತ್ರಿಕೆ ಸರ್ಕಾರವನ್ನು ಉರುಳಿಸಬಹುದು' ಎಂದುಕೊಂಡ ತಲೆಮಾರಿನವರು ನಾವು. ಆದರೆ, ಈಗ 'ಮಂತ್ರಿಗಳನ್ನು ಮಾಡಬಲ್ಲೆವು, ಅವರಿಗೆ ಬೇಕಾದ ಖಾತೆಗಳನ್ನು ಕೊಡಿಸಬಲ್ಲೆವು' ಎಂಬ ಕಾಲ! ಕಾಲ ಎಷ್ಟು ಬೇಗ ಬದಲಾಯಿತು?

ನಮ್ಮ ಮಹತ್ವಾಕಾಂಕ್ಷೆ ಬೆಳೆದಂತೆ ನಾವು ರಾಜಕಾರಣಿಗಳ ಕೈಗೆ ದಾಳವಾದೆವು. ವಿಧಾನಸೌಧ ಸುತ್ತುವ ಪತ್ರಕರ್ತರಿಗೆ ತಾವು ಅಧಿಕಾರಿಗಳನ್ನು ವರ್ಗ ಮಾಡಿಸಬಹುದು ಎಂಬುದು ತಿಳಿಯಿತು. ಇದು ಪತ್ರಕರ್ತರಿಗೇ ತಿಳಿಯಿತೇ ಅಥವಾ ರಾಜಕಾರಣಿಗಳೇ ಹೇಳಿಕೊಟ್ಟರೇ ಗೊತ್ತಿಲ್ಲ. ಅಧಿಕಾರಿಯ ಹುದ್ದೆ ದೊಡ್ಡದಾದಷ್ಟೂ ಆತನಿಂದ ಬರುವ ಪ್ರತಿಫಲ ದೊಡ್ಡದಾಗುತ್ತ ಹೋಯಿತು. ಪತ್ರಕರ್ತರು ಶಾಲಾ ಶಿಕ್ಷಕರ ವರ್ಗಾವಣೆ ಏಕೆ ಮಾಡಿಸುತ್ತಾರೆ? ಲೋಕೋಪಯೋಗಿ, ನೀರಾವರಿ ಇಲಾಖೆಯ ಎಂಜಿನಿಯರ್‌ಗಳ, ಅಬ್ಕಾರಿ ಅಧಿಕಾರಿಗಳ ವರ್ಗ ಮಾಡಿಸಿದರು. ಶ್ರೀಮಂತರ ಮಕ್ಕಳಿಗೆ ವೈದ್ಯಕೀಯ ಕಾಲೇಜುಗಳಲ್ಲಿ ಎಂ.ಡಿ, ಎಂ.ಎಸ್ ಸೀಟು ಕೊಡಿಸಿದರು. ಇಂಥ ಒಂದು ವರ್ಗ, ಒಂದು ಸೀಟು ಇಡೀ ವರ್ಷದ ಉಂಬಳಿಗೆ ಸಾಕಾಗುವಷ್ಟು ಆಯಿತು. 'ದೊಡ್ಡ' ಪತ್ರಕರ್ತರು ಇಂಥ ದೊಡ್ಡ ದೊಡ್ಡ 'ಕೆಲಸ' ಮಾಡಿದರೆ ಸಣ್ಣ ಪುಟ್ಟ ಪತ್ರಕರ್ತರು ರಾಜಕಾರಣಿಗಳ ಮುಂದೆ ಹಲ್ಲು ಗಿಂಜಿ ಕೆಲಸ ಮಾಡಿಸಿಕೊಂಡರು. ವಿಧಾನಸೌಧದಲ್ಲಿ ಪ್ರತಿದಿನ ಸಂಜೆ 4.30ಕ್ಕೆ ಸಚಿವಾಲಯ ಎಂಬ ರೌಂಡ್‌ಗೆ ಇದೇ ಕಾರಣಕ್ಕಾಗಿ 420 (ಫೋರ್‌ಟ್ವೆಂಟಿ) ರೌಂಡ್ ಎಂಬ ಹೆಸರು ಬಂತು. ಮೊದಲು ಕೊಠಡಿಯಲ್ಲಿ ಇದ್ದ ಸಚಿವರನ್ನು ಹುಡುಕಿಕೊಂಡು ಹೋಗಿ ಸುದ್ದಿ ಕೇಳುವ ಕಾಲ ಇತ್ತು. ಬರುಬರುತ್ತ ಕೆಲವರು ಪತ್ರಕರ್ತರು ಸಚಿವರನ್ನು ಆ ವೇಳೆಗೆ ಕೊಠಡಿಗೆ ಬರಲು ಹೇಳಿ ಅವರನ್ನು ಭೇಟಿ ಮಾಡಿಸುವ' ಕಾಲ ಬಂತು. ಈಗ ಯಾರಾದರೂ ಸಿಕ್ಕರೆ ಸಾಕು ಎನ್ನುವ ಕಾಲ! ಅವರನ್ನು ಕಂಡು 'ಏನಾದರೂ ಸುದ್ದಿ ಕೊಡಿ' ಎನ್ನುವ ಕಾಲ! ಏಕೆಂದರೆ ಪತ್ರಕರ್ತರು ರೌಂಡ್ ಬರುವ ವೇಳೆಗೆ ಈಗ ಯಾವ ಸಚಿವರೂ ತಮ್ಮ ಕೊಠಡಿಯಲ್ಲಿ ಇರುವುದೇ ಇಲ್ಲ. ಇವರ ಸಹವಾಸವೇ ಬೇಡ ಎಂದುಕೊಂಡರೇ ಸಚಿವರು? ವೃತ್ತಿಯ ಮರ್ಯಾದೆ ಹೋದುದು ಹೀಗೆ, ಹೋಗುವುದು ಹೀಗೆ.

ನಾಲ್ಕನೇ ಆಯಾಮ (21

ಹಣ ಕೊಟ್ಟರೆ ಸುದ್ದಿ ಬರುತ್ತದೆ ಎಂಬುದರಲ್ಲಿ ಈಗ ಶಂಕೆಯೇನೂ ಇಲ್ಲ. ಸಂದೇಶವನ್ನು ನಾವೇ ಕೊಟ್ಟಿದ್ದೇವೆ. ಪತ್ರಿಕಾ ಹೇಳಿಕೆಗಳ ಮೇಲೆ ಮೂಲೆಯಲ್ಲಿ "ಎಂ.ಜಿ-ಮನಿ ಗಿವನ್' ಎಂಬ ಒಕ್ಕಣೆ ಇರುತ್ತಿದ್ದ ಕಾಲ ಈಗಿನದೇನೂ ಅಲ್ಲ. ಹಾಗೆ ಒಕ್ಕಣೆ ಇದ್ದ ಸುದ್ದಿಗಳಿಗೆ ಮೊದಲು ಜಾಗ, ನಂತ ಬಾಕಿ ಸುದ್ದಿಗಳಿಗೆ, ಬಹುಶಃ ಮುರುಘಾ ಶರಣರು ಕಾರ್ಯಕ್ರಮಕ್ಕೆ ಕರೆಯೋಲೆ ಜತೆಗೆ ಹಣವನ್ನೂ ಕಳುಹಿಸಬೇಕು, ಕಾರೂ ಕಳುಹಿಸಬೇಕು ಎಂದು ಈ ಹಿನ್ನೆಲೆಯಲ್ಲಿಯೇ ಹೇಳಿರಬೇಕು. ಕೆಲವು ದಿನಗಳ ಹಿಂದೆ ಎಂ.ಪಿ.ಪ್ರಕಾಶ್ ಅವರು 'ನಾನೇ ಅಲ್ಲಿ, ಇಲ್ಲಿ ಚಾನೆಲ್‌ಗಳಲ್ಲಿ ಕೆಲಸ ಕೊಡಿಸಿದ ಹುಡುಗರೇ ನನ್ನ ಕಾರ್ಯಕ್ರಮಕ್ಕೆ ಬರಲು, ಸಾವಿರ ರೂಪಾಯಿ ಕೇಳುತ್ತಿದ್ದಾರೆ' ಎಂದು ನನ್ನ ಮುಂದೆ ಗೊಣಗಿದ್ದರು.

ಭೌತಿಕ ಆಮಿಷಗಳು ನಮ್ಮನ್ನು ಈಗೇನೂ ಆಕ್ರಮಿಸಿಲ್ಲ. ಈಗ ಅದು ಜಾಸ್ತಿಯಾಗಿರಬಹುದು. ಪತ್ರಿಕೋದ್ಯಮದ ಪಿತಾಮಹ ಎಂದೇ ಹೆಸರಾಗಿದ್ದ ಡಿ.ವಿ.ಗುಂಡಪ್ಪನವರು 60 ವರ್ಷಗಳ ಹಿಂದೆಯೇ, 'ಸುದ್ದಿ ಬರೆಯಲು 50 ರೂಪಾಯಿ, ಬರೆಯದೇ ಇರಲು 100 ರೂಪಾಯಿ ಎಂಬ ಮಟ್ಟಕ್ಕೆ ಪತ್ರಕರ್ತರು ಇಳಿಯಬಾರದು' ಎಂದಿದ್ದರು. ಈ ಕಳಂಕ ನಮ್ಮ ವೃತ್ತಿಗೆ ಆಗಲೂ ಅಂಟಿತ್ತು. ಈಗ ಜಾಸ್ತಿ ಅಂಟಿದೆ ಅಷ್ಟೇ. ಆದರೆ, ಆಗ ಅನೇಕ ಪತ್ರಕರ್ತರು ಈ ವೃತ್ತಿಯನ್ನು ಒಂದು ಮಿಷನ್, ಆಂದೋಲನ ಎಂದು ತಿಳಿದುಕೊಂಡಿದ್ದರು. ಬದುಕು-ಬರಹದ ನಡುವೆ ದೊಡ್ಡ ಕಂದರ ಇರಲಿಲ್ಲ. ಅವರ ಮುಂದೆ ನಿರ್ದಿಷ್ಟ ಗುರಿಗಳೂ ಇದ್ದುವು. ಸ್ವಸ್ಥ, ಶ್ರೀಮಂತ ಸಮಾಜ ಕಟ್ಟುವುದು ಅವರ ಧ್ಯೆಯವಾಗಿತ್ತು. 'ಈಗ ಸಮಾಜ ಹಾಳಾಗಿ ಹೋಗಲಿ ನಾವು ಸ್ವಸ್ಥವಾಗಿದ್ದರೆ ಸಾಕು, ಶ್ರೀಮಂತರಾದರೆ ಸಾಕು' ಎನ್ನುವುದು ಧ್ಯೆಯ. ವ್ಯತ್ಯಾಸ ಬಹಳ. ಆಗ ನಾಲ್ಕಾರು ಪತ್ರಕರ್ತರು ಸೇರಿಕೊಂಡು ರಾತ್ರಿ ಹಗಲು, ಕೆಲಸ ಮಾಡಿ ಒಂದು ಪತ್ರಿಕೆ ತರುತ್ತಿದ್ದರು. ರಾತ್ರಿ ತಡವಾದರೆ ಪತ್ರಿಕಾ ಕಚೇರಿಯಲ್ಲಿ ಪೇಪರ್ ಹಾಸಿಕೊಂಡು ಮಲಗಿ ಬಿಡುತ್ತಿದ್ದರು. ಈಗ ಹಾಗೆ ಮಲಗುವವರು ಯಾರಾದರೂ ಉಂಟೇ? ಬಿಡುದೀಪ ಹಚ್ಚಿಕೊಂಡು ಹುಡುಕಬೇಕು.

ಈಗ ಪ್ರಾಮಾಣಿಕರನ್ನೂ ಬಿಡುದೀಪ ಹಚ್ಚಿಕೊಂಡು ಹುಡುಕಬೇಕು ಎನ್ನುವಂಥ ಪರಿಸ್ಥಿತಿ ಏಕೆ ಬಂತು? ಇದು ಆದರ್ಶಗಳೇ ಇಲ್ಲದ ಕಾಲ. ಈಗ ಹಣ ಮಾತನಾಡುತ್ತದೆ. ಮಾತನಾಡಿಸುತ್ತದೆ. ನಾವು ಮಕ್ಕಳಾಗಿದ್ದಾಗ ಒಂದು ಬಿಸ್ಕತ್ತು, ಒಂದು ಚಾಕಲೇಟ್‌ನ್ನೂ ತಿನ್ನದೇ ನಮ್ಮ ಬಾಲ್ಯ ಕಳೆದು ಹೋಯಿತು. ಆಗ ಹೋಟೆಲ್‌ಗೆ ಹೋಗಿ ತಿಂಡಿ ತಿನ್ನುವುದು 'ಉಡಾಳತನ' ಎನಿಸುತ್ತಿತ್ತು. ಧರ್ಮವನ್ನು ರಕ್ಷಿಸಿದರೆ ಧರ್ಮ ನಮ್ಮನ್ನು ರಕ್ಷಿಸುತ್ತದೆ ಎಂದು ನಮ್ಮ ಶಿಕ್ಷಕರು ನಮಗೆ ಹೇಳಿ ಕೊಡುತ್ತಿದ್ದರು. ಈಗ ಹಾಗೆ ಹೇಳಿಕೊಡುತ್ತಿಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ, ಹಾಗೆ ಹೇಳುವುದೇ ಅರ್ಥಹೀನ ಎನಿಸುತ್ತದೆ. ಸಮಾಜಕ್ಕೆ ಯಾವಾಗಲೂ ಆದರ್ಶಗಳು, ನಾಯಕತ್ವ ಸಿಕ್ಕುದು ರಾಜಕೀಯ ನಾಯಕರಿಂದ, ಈಗ ಅಲ್ಲಿಯೇ ಸಮಸ್ಯೆ ಇದೆ. ಇದು ಒಂದು ವಿಷ ಚಕ್ರ, ರಾಜಕಾರಣಿಗಳನ್ನು ನಾವು ಹಾಳು ಮಾಡಿದೆವೇ? ಅಥವಾ ಅವರು ನಮ್ಮನ್ನು ಹಾಳು ಮಾಡಿದರೇ ಎಂಬ ಪ್ರಶ್ನೆ 'ಬೀಜ

ಮೊದಲೋ ಗಿಡ ಮೊದಲೋ' ಎಂಬ ಪ್ರಶ್ನೆಯಷ್ಟೇ ಕ್ಲಿಷ್ಟವಾದುದು.

ಯಾವ ವೃತ್ತಿಯೂ ಈಗ ಪರಮ ಪವಿತ್ರ ಎನ್ನುವಂತೆ ಉಳಿದಿಲ್ಲ. ಎಲ್ಲೆಲ್ಲೂ ಕಪ್ಪುಕುರಿಗಳು ಇದ್ದೇ ಇವೆ. ತಮ್ಮ ಸಂಘಟನೆಗೆ ಒಳಪಟ್ಟ ಪತ್ರಕರ್ತರ ಭ್ರಷ್ಟಾಚಾರದ ಬಗ್ಗೆ ಯಾವ ಸಂಘವೂ ಚಕಾರ ಎತ್ತಿದ್ದು ನನಗೆ ನೆನಪಿಲ್ಲ. 'ಪತ್ರಕರ್ತರ ಭ್ರಷ್ಟಾಚಾರ ತಡೆಯುವುದು ಹೇಗೆ?' ಎಂಬ ಒಂದು ವಿಚಾರ ಗೋಷ್ಠಿಯನ್ನು ಯಾವ ಸಂಘವೂ ಏರ್ಪಡಿಸುವ ಧೈರ್ಯ ಮಾಡಿಲ್ಲ. ಹೋಗಲಿ, ಪತ್ರಕರ್ತರ ಸಮ್ಮೇಳನದಲ್ಲಿ ಇದು ಚರ್ಚೆಯಾದುದೂ ನನಗೆ ನೆನಪಿಲ್ಲ. ಎಲ್ಲಿಯೋ ಮುರುಘಾ ಶರಣರಂಥವರು ಧೈರ್ಯ ಮಾಡಿ, 'ಪತ್ರಕರ್ತರು ವಸೂಲಿ ವೀರರು' ಎಂದರೆ ನಾವು ಅವರ ಮೇಲೆ ನಾಯಿ-ನರಿಗಳ ಹಾಗೆ ಬೀಳಬಾರದು. ನಮ್ಮ ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳುವ ಕನಿಷ್ಠ ಸೌಜನ್ಯವನ್ನಾದರೂ ನಾವು ಬೆಳೆಸಿಕೊಳ್ಳಬೇಕು.

19-12-2010

# ಮೊಹ್ಮದ್ ಹನೀಫ್

# ನಿಮಗೆ ಅಭಿನಂದನೆಗಳು!

ಅದು ಅಕ್ಷರಶಃ ಏಕಾಂಗಿ ಹೋರಾಟ. ಹೆಚ್ಚ ಕಡಿಮೆ ಅವರು ಅಪರಾಧಿ ಸ್ಥಾನದಲ್ಲಿ ನಿಂತಿದ್ದರು. ಆಸ್ಟ್ರೇಲಿಯಾ ದೇಶದ ಇತಿಹಾಸದಲ್ಲಿ ಅಪರಾಧವೊಂದರಲ್ಲಿ ಸಿಲುಕಿ ಅತಿದೀರ್ಘ ಅವಧಿಗೆ ಪೊಲೀಸ್ ವಶದಲ್ಲಿ ಇದ್ದರು. ನನಗೆ ಇನ್ನೂ ಚೆನ್ನಾಗಿ ನೆನಪಿದೆ; ಪೊಲೀಸ್ ವಶದಲ್ಲಿ ಇದ್ದ ಬೆಂಗಳೂರಿನ ಯುವ ಡಾಕ್ಟರ್ ಮೊಹ್ಮದ್ ಹನೀಫ್ (31) ಅವರು ಮುಖ ಮುಚ್ಚಿಕೊಂಡು ವಾಹನದಲ್ಲಿ ಕುಳಿತಿದ್ದ ಚಿತ್ರ ಜಗತ್ತಿನ ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಆಗ ಅವರು ಅನುಭವಿಸಿದ ಅವಮಾನ, ಹಿಂಸೆ ಈಗಲೂ ಅವರಿಗೆ ಒಂದು ದುಃಸ್ವಪ್ನದಂತೆ ಕಾಡುತ್ತಿರಬಹುದು. ಅಂದು ಬೆಂಗಳೂರಿನ ಬಿಟಿಎಂ ಬಡಾವಣೆಯ ಹನೀಫ್ ಮನೆಯ ಮುಂದೆ ದೇಶದ ಎಲ್ಲ ಚಾನೆಲ್‌ಗಳ, ಪತ್ರಿಕೆಗಳ ವರದಿಗಾರರು ಘೇರಾಯಿಸಿದ್ದರು. ಅವರು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಟ್ಟು ಕೊಟ್ಟು ಮನೆಯವರಿಗೆ ಸಾಕಾಗಿ ಹೋಗಿತ್ತು. ತಮ್ಮ ಮಗ ಭಯೋತ್ಪಾದಕರ ಜತೆಗೆ ಸಂಬಂಧ ಹೊಂದಿಲ್ಲ ಎಂದು ಸಾಬೀತು ಮಾಡಲು ಅವರು ಭೂಮಿ ಆಕಾಶ ಒಂದು ಮಾಡಬೇಕಿತ್ತು. ಏಕೆಂದರೆ ಅವರ ಮಾತನ್ನು ಯಾರೂ

ನಂಬುವ ಸ್ಥಿತಿಯಲ್ಲಿ ಇರಲಿಲ್ಲ. ಹನೀಫ್ ಉದ್ದಕ್ಕೂ ಒಂದನೇ ಪುಟದ ಸುದ್ದಿಯಾಗಿದ್ದರು. ಖಳನಾಯಕ ಎಂದೇ ಬಿಂಬಿತರಾಗಿದ್ದರು.

ಅವರನ್ನು 25 ದಿನಗಳ ಕಾಲ ಪೊಲೀಸ್ ಬಂಧನದಲ್ಲಿ ಇಟ್ಟುಕೊಂಡು ನಾನಾ ರೀತಿಯಲ್ಲಿ ವಿಚಾರಣೆ ಮಾಡಿದರೂ ಹನೀಫ್ ವಿರುದ್ಧ ಇದ್ದ ಆರೋಪ ಸಾಬೀತು ಮಾಡಲು ಯಾವುದೇ ಪುರಾವೆ ಸಿಗದಿದ್ದಾಗ ಆಸ್ಟ್ರೇಲಿಯಾ ಸರ್ಕಾರ ಅವರನ್ನು ಬಿಡುಗಡೆ ಮಾಡಿತ್ತು. ಆದರೆ, ಹನೀಫ್ ಇನ್ನೂ ಕಳಂಕ ಮುಕ್ತರಾಗಿರಲಿಲ್ಲ. ಅವರ ಬರುವಿಕೆಯ ಸುದ್ದಿಯನ್ನು 'ಪ್ರಜಾವಾಣಿ' ಮುಖಪುಟದಲ್ಲಿಯೇ ಲೀಡ್ ಸುದ್ದಿಯ ರೂಪದಲ್ಲಿ 'ಹನೀಫ್ ಆಗಮನ' ಎಂದು ಪ್ರಕಟಿಸಿತ್ತು. ಅಂದು 'ಪ್ರಜಾವಾಣಿ'ಗೆ ಅನೇಕ ಆಕ್ಷೇಪದ ಕರೆಗಳು ಬಂದಿದ್ದುವು. ಆತನೇನು ಸ್ವಾತಂತ್ರ್ಯ ಯೋಧನೆ?' 'ಸಚಿನ್ ಹಾಗೆ ಸೆಂಚುರಿ ಬಾರಿಸಿದವನೇ?' ಎಂದೆಲ್ಲ ಕರೆ ಮಾಡಿದವರು ದೂರಿದ್ದರು. ಇದು ಒಂದು ಸಮುದಾಯದವರ ವಿರುದ್ಧ ನಮ್ಮನ್ನು ಒಳಗೇ ಕೊಳೆಸುವ ಮನಃಸ್ಥಿತಿ.

ಈಗ ಹನೀಫ್ ದೊಡ್ಡದಾಗಿ ಗೆದ್ದಿದ್ದಾರೆ. ಆಸ್ಟ್ರೇಲಿಯಾ ಸರ್ಕಾರ ಅವರಿಗೆ ಎಷ್ಟೋ ಪರಿಹಾರ ಕೊಟ್ಟಿದೆ. ಆ ಮೊತ್ತವನ್ನು ಅದು ಪ್ರಕಟ ಮಾಡಿಲ್ಲ. ಅದಕ್ಕಿಂತ ಹೆಚ್ಚಾಗಿ ಆ ಸರ್ಕಾರ ಬಹಿರಂಗವಾಗಿ ಕ್ಷಮೆ ಕೇಳಿದೆ. ಹನೀಫ್ ಹೇಳುವ ಹಾಗೆ ಆ ದೇಶ ಕ್ಷಮೆ ಕೇಳುವುದು ತಡವಾಗಿರಬಹುದು. ಆದರೆ, ಒಂದು ದೇಶ ಕ್ಷಮೆ ಕೇಳುವುದು ಸಣ್ಣ ವಿಚಾರವಲ್ಲ. ಹೀಗೆ ಯಾವ ದೇಶವೂ ಕ್ಷಮೆ ಕೇಳಿದ ಘಟನೆ ನನ್ನ ನೆನಪಿನಲ್ಲಿ ಇಲ್ಲ. ಹನೀಫ್ ಅವರಿಗೆ ಸಿಕ್ಕ ಪರಿಹಾರದ ಮೊತ್ತ ಎಷ್ಟೇ ದೊಡ್ಡದಿದ್ದರೂ ಅದು ದೊಡ್ಡದಲ್ಲ. ಆ ದೇಶ ಕ್ಷಮೆ ಕೇಳುವಂತೆ ಮಾಡಿದ ಈ ಯುವಕನ ಹೋರಾಟ ದೊಡ್ಡದು. ಅದು ಬರೀ ಬೆಂಗಳೂರಿನ ಈ ಯುವಕನ ವೈಯಕ್ತಿಕ ಗೆಲುವಲ್ಲ. ಒಂದು ಸಮುದಾಯದ ಗೆಲುವು. ಒಂದು ದೇಶದ ಗೆಲುವು. 'ಎಲ್ಲ ಮುಸ್ಲಿಮರು ಭಯೋತ್ಪಾದಕರಲ್ಲ' ಎಂದು ಇದಕ್ಕಿಂತ ದೃಢವಾಗಿ ಹೇಳುವ ವಿಧಾನ ಮತ್ತೊಂದು ಇದೆ ಎಂದು ನನಗೆ ಅನಿಸುವುದಿಲ್ಲ.

ಹನೀಫ್ ತಮ್ಮ ವಿರುದ್ಧ ಆರೋಪ ಎದುರಿಸುವಾಗ ಒಂಟಿಯಾಗಿದ್ದರು. ಆದರೆ, ಅವರು ಯಾವಾಗ ನಿರಪರಾಧಿ ಎಂದು ಗೊತ್ತಾಯಿತೋ ಆಗ ಧ್ವನಿ ಎತ್ತಿದ್ದು ಆಸ್ಟ್ರೇಲಿಯಾದ ಮಾಧ್ಯಮ. ಅವು, ಆ ದೇಶದ ವಲಸೆ ಖಾತೆಯ ಸಚಿವ ಕೆವಿನ್ ಆಂಡ್ರಸ್ ಅವರನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡವು. ಭಾರತದ ಮಾಧ್ಯಮಗಳು ಮತ್ತು ಸರ್ಕಾರವೂ ಹಿಂದೆ ಬೀಳಲಿಲ್ಲ. ಆದರೂ, ಆಸ್ಟ್ರೇಲಿಯಾ ಸರ್ಕಾರ ಹನೀಫ್‌ಗೆ ಪರಿಹಾರ ಕೊಡುತ್ತದೆ, ಕ್ಷಮೆ ಕೇಳುತ್ತದೆ ಎಂದು ಅನಿಸಿರಲಿಲ್ಲ. ಇದು ಒಂದು ಸರ್ಕಾರಕ್ಕೆ ಅತ್ಯಂತ ಕಷ್ಟದ ಕೆಲಸ. ಆ ದೇಶಕ್ಕೆ ಕಲಿಯಲು ಹೋಗಿರುವ ಭಾರತದ ಹುಡುಗರನ್ನು ಅಲ್ಲಿನ ಜನರು ಸಿಕ್ಕ ಸಿಕ್ಕಲ್ಲಿ ಥಳಿಸುತ್ತಿದ್ದರೂ ಅದು 'ಜನಾಂಗೀಯ ದ್ವೇಷದ ನಡೆ' ಎಂದು ಒಪ್ಪಿಕೊಳ್ಳಲು ಅಲ್ಲಿನ ಸರ್ಕಾರ ಅನೇಕ ದಿನ ಹಿಂದೇಟು ಹಾಕಿತ್ತು. ಆಸ್ಟ್ರೇಲಿಯಾದಲ್ಲಿ ಥಳಿಸಿಕೊಂಡ ಹುಡುಗರಿಗೆ ಅವರ ಮೈಬಣ್ಣವೇ

ವೈರಿಯಾಗಿತ್ತು. ಹನೀಫ್ ಅವರಿಗೆ ಅವರ ಹುಟ್ಟೇ ವೈರಿಯಾಗಿತ್ತು. ಆತ ಮುಸ್ಲಿಂ ಆಗಿರದೇ ಇದ್ದರೆ ಅವರ ಬಂಧನ ಇಡೀ ಜಗತ್ತಿನ ಗಮನವನ್ನು ಇಷ್ಟು



ಸೆಳೆಯುತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಭಯೋತ್ಪಾದನೆಯ ಕಳಂಕದಿಂದ ನಲುಗಿರುವ ಒಂದು ಸಮುದಾಯದ ಬಿಕ್ಕಟ್ಟು ಅದು. 'ನಾನು ಮುಸ್ಲಿಂ. ಆದರೆ, ಭಯೋತ್ಪಾದಕನಲ್ಲ' ಎಂದು ಹೇಳಿಕೊಳ್ಳುವುದು, ನಂಬಿಸುವುದು ಇದೆಯಲ್ಲ ಅದು ತುಂಬ ಕಷ್ಟದ್ದು.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯ ಒಬ್ಬ ಶಿಕ್ಷಕನ ಮಗನಾಗಿ ಹುಟ್ಟಿದ ಹನೀಫ್ ಪಿಯುಸಿ ಓದಿದ್ದು ಉಜಿರೆಯ ಎಸ್.ಡಿ.ಎಂ ಕಾಲೇಜಿನಲ್ಲಿ. ವೈದ್ಯಕೀಯ ಪದವಿ ಪೂರೈಸಿದ್ದು ಬೆಂಗಳೂರಿನ ಅಂಬೇಡ್ಕರ್ ಕಾಲೇಜಿನಲ್ಲಿ. ಕೆಲಸಕ್ಕೆ ಸೇರಿಕೊಂಡುದು ಆಸ್ಟ್ರೇಲಿಯಾದಲ್ಲಿ. ಅವರಿಗೆ ಪತ್ನಿ ಮತ್ತು ಮೂರು ವರ್ಷದ ಮಗಳಿದ್ದಾಳೆ. ಅವರ ಸೋದರ ಸಂಬಂಧಿಗಳಿಬ್ಬರು ಬ್ರಿಟನ್‌ನ ಗ್ಯಾಸ್ಗೊ ವಿಮಾನ ನಿಲ್ದಾಣದ ಮೇಲೆ ಆತ್ಮಾಹುತಿ ದಾಳಿ ಮಾಡುವುದಕ್ಕಿಂತ ಮುಂಚೆ ಕಳುಹಿಸಿದ ಇ- ಮೇಲ್ ಆಧಾರದ ಮೇಲೆ ಹನೀಫ್ ಅವರನ್ನು ಬಂಧಿಸಲಾಗಿತ್ತು. ಈಗ ಹನೀಫ್, ಅರಬ್ ದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಮತ್ತೆ ಆಸ್ಟ್ರೇಲಿಯಾಕ್ಕೆ ಹೋದರೂ ಹೋಗಬಹುದು. ಮತ್ತೆ ಗೋಲ್ಡ್ ಕೋಸ್ಟ್ ಆಸ್ಪತ್ರೆಯಲ್ಲಿ ಕೆಲಸ ಮಾಡಬಹುದು. ಆಯ್ಕೆ ಅವರ ಮುಂದೆಯೇ ಇದೆ. ಹನೀಫ್ ಪರ ಉದ್ದಕ್ಕೂ ನಿಂತು ವಾದಿಸಿ ಜಯಸಿದವರು ಅಲ್ಲಿನ ವಕೀಲ ಪೀಟರ್ ರುಸ್ಕೊ.

ರೂಸ್ಸೊ ಮತ್ತು ಹನೀಫ್ ಕೂಡಿಕೊಂಡು ಆಸ್ಟ್ರೇಲಿಯಾ ಸರ್ಕಾರವನ್ನು ಮಣಿಸಿದ್ದು, ಪರಿಹಾರ ಗಳಿಸಿದ್ದು, ಬಹಿರಂಗ ಕ್ಷಮೆ ಕೇಳುವಂತೆ ಮಾಡಿದ್ದು ನಮ್ಮ ಅನೇಕ ಪತ್ರಿಕೆಗಳಿಗೆ ದೊಡ್ಡ ಸುದ್ದಿ ಅನಿಸಲಿಲ್ಲ. ಹನೀಫ್‌ಗೆ ಪರಿಹಾರ ಸಿಕ್ಕ ಸುದ್ದಿ ಕೆಲವು ಪತ್ರಿಕೆಗಳಿಗೆ ಸುದ್ದಿಯೇ ಅನಿಸಲಿಲ್ಲ. ಇನ್ನು ಕೆಲವು ಪತ್ರಿಕೆಗಳಿಗೆ ಅದು ಮುಖಪುಟದ ಸುದ್ದಿ ಎಂದು ಅನಿಸಲಿಲ್ಲ. ಬಹುತೇಕ ಪತ್ರಿಕೆಗಳಿಗೆ ಇದು ಒಂದು ಸಂಪಾದಕೀಯ ಬರೆಯಬೇಕಾದ ವಿದ್ಯಮಾನ ಎಂದೂ ಅನಿಸಲಿಲ್ಲ. ಹನೀಫ್ ಬಂಧಿತರಾದಾಗ ಬೆಂಗಳೂರಿನ ಅವರ ಮನೆಯ ಮುಂದೆ ಓಬಿ ವ್ಯಾನ್‌ಗಳನ್ನೇ ಸಾಲಾಗಿ ನಿಲ್ಲಿಸಿ ಮನೆಯವರನ್ನು ಕ್ಷಣ ಕ್ಷಣಕ್ಕೂ ಪ್ರಶ್ನಿಸಿ ಬೇಟೆಯಾಡಿದ್ದ ಚಾನೆಲ್‌ಗಳಿಗೆ ಈಗ ಮತ್ತೆ ಅವರ ಮನೆಯ ಮುಂದೆ ಹೋಗಿ ಅದೇ ರೀತಿ ವ್ಯಾನ್‌ಗಳನ್ನು ನಿಲ್ಲಿಸಿ ಕ್ಷಣಕ್ಕೆ ಒಮ್ಮೆ ಸುದ್ದಿ ಬಿತ್ತರಿಸಬೇಕು ಎಂದು ಅನ್ನಿಸಲಿಲ್ಲ. ಇದು ನಮ್ಮ ವೃತ್ತಿಗೆ ಅಂಟಿರುವ ನೇತ್ಯಾತ್ಮಕ ರೋಗ. ಈಗ ಹನೀಫ್ ಮನೆಯ ಮುಂದೆ ವಾಹನ ನಿಲ್ಲಿಸಿ ಕ್ಷಣಕ್ಕೊಮ್ಮೆ ಸುದ್ದಿ ಬಿತ್ತರಿಸಿದ್ದರೆ

ಅದು ಹಾಸ್ಯಾಸ್ಪದ ಎನಿಸುವಂಥ ನೇತ್ಯಾತ್ಮಕ ಮನಃಸ್ಥಿತಿಯನ್ನು ನಮ್ಮ ಓದುಗರಲ್ಲಿಯೂ ನಾವು ನಿರ್ಮಿಸಿದ್ದೇವೆ. ಹೋಗಲಿ, ಹನೀಫ್ ಅವರನ್ನು ಅಭಿನಂದಿಸಬೇಕು ಎಂದು ಕೋಮುವಾದಿ' ಪಕ್ಷಗಳಿಗೆ ಬಿಡಿ, 'ಜಾತ್ಯತೀತ' ಎಂದು ಢಾಣಾ ಡಂಗುರ ಸಾರುವ ಪಕ್ಷಗಳ ನಾಯಕರಿಗೂ ಹೊಳೆಯಲಿಲ್ಲ.

ಅವರು ಬಿಡಿ ಹೇಗೂ ರಾಜಕೀಯ ಮಾಡುವುದಕ್ಕೆ ನಿಂತವರು. ಅವರಿಗೆ ಇಂಥದೆಲ್ಲ ಹೊಳೆಯುವುದಿಲ್ಲ. ಕೊನೆಯ ಪಕ್ಷ ಮುಸ್ಲಿಂ ಸಮುದಾಯದ ನಾಯಕರಾದರೂ ಸಿಹಿ ಹಂಚಿ ಸಂಭ್ರಮಪಡಬೇಕಿತ್ತು. ಆ ಸಮುದಾಯದ 26 \



ನಾಯಕರಿಗೆ, ಧರ್ಮ ಗುರುಗಳಿಗೆ ಇದೊಂದು ದೊಡ್ಡ ಅವಕಾಶವಾಗಿತ್ತು. ಅವರೂ ಅದನ್ನು ಬಳಸಿಕೊಳ್ಳಲಿಲ್ಲ.

ನಾನು ಭಾವುಕನಾಗಿ ಈ ಮಾತು ಹೇಳುತ್ತಿಲ್ಲ: ಇದು ಬರೀ ಮುಸ್ಲಿಂ ಸಮುದಾಯ ಮಾತ್ರ ಸಂಭ್ರಮಪಡಬೇಕಾದ ಸಂಗತಿಯಲ್ಲ. ಪ್ರತಿಯೊಬ್ಬ ಭಾರತೀಯ ಸಂಭ್ರಮಪಡಬೇಕಾದ ಗಳಿಗೆ... ಮೊಹ್ಮದ್ ಹನೀಫ್ ನಿಮಗೆ ಅಭಿನಂದನೆಗಳು...

26-12-2010

# ಬಿಸಿಲೆಯ ರಸ್ತೆಯೂ

# ಕೆಮ್ಮಣ್ಣಗುಂಡಿಯ ಕೊರಡಿಯೂ..

ಬಿಸಿಲೆ ಅರಣ್ಯ ಪ್ರದೇಶಕ್ಕೆ ಹೋಗೋಣ' ಎಂದರು ಉಮೇಶ್, ಅವರು ಸಕಲೇಶಪುರದ ಪರಿಸರವಾದಿ. ಪ್ರತಿಯೊಂದು ಗಿಡ, ಮರ, ಹೂವು, ಬೇರು, ನಾರು ಎಲ್ಲದರ ಬಗ್ಗೆ ಮಾಹಿತಿಯುಳ್ಳ ಮನುಷ್ಯ ಬಿಸಿಲೆ, ಪಶ್ಚಿಮ ಘಟ್ಟಗಳ ಸಾಲು ಸಾಲು ಶೃಂಗಗಳಿಗೆ ಮೈಯೊಡ್ಡಿದ ಪ್ರದೇಶ. ಸೂರ್ಯಾಸ್ತವನ್ನೂ ನೋಡಿದರಾಯಿತು ಎಂದು ಅಂದುಕೊಂಡೆ. ಮಧ್ಯಾಹ್ನ 2 ಗಂಟೆಗೆ ಸಕಲೇಶಪುರ ಬಿಟ್ಟು ಬಿಸಿಲೆಯತ್ತ ಹೊರಟರೆ 40 ಕಿಲೋ ಮೀಟರ್ ದಾರಿ ಕ್ರಮಿಸಲು ಒಂದು ಗಂಟೆ ಸಾಕು ಎಂದುಕೊಂಡಿದ್ದೆ. ನಾವು ಅಲ್ಲಿಗೆ ತಲುಪಿದಾಗ ಸೂರ್ಯ ದಿಗಂತದಲ್ಲಿ ಮುಳುಗಿ ಹೋಗಿದ್ದ. ಮತ್ತೆ ಅದೇ ಗೋಳು, ರಸ್ತೆಯಲ್ಲಿ ಹೊಂಡವೋ, ಹೊಂಡದಲ್ಲಿ ರಸ್ತೆಯೋ ಅರ್ಥವಾಗುತ್ತಿರಲಿಲ್ಲ. ವಾಹನದ ಚಾಲಕ ಒಂದು ಸಾರಿ ರಸ್ತೆಯ ಬಲಕ್ಕೆ ಇನ್ನೊಂದು ಸಾರಿ ಎಡಕ್ಕೆ ಬಂದು ಹೊಂಡಗಳನ್ನು ತಪ್ಪಿಸಲು ಹೆಣಗಾಡುವುದರಲ್ಲಿ ನಮ್ಮ ಮೈ ಕೈಯೆಲ್ಲ ನುಗ್ಗಾಗಿ ಹೋಗಿತ್ತು. ಏಕಾದರೂ ಇಲ್ಲಿಗೆ ಬಂದೆವು ಎಂದು ಬೇಸರವಾಯಿತು. ಬಿಸಿಲೆಯ ಸೊಬಗನ್ನು ಸವಿಯುವ

ಮನಸ್ಸು ಉಳಿದಿರಲಿಲ್ಲ. ಅಲ್ಲಿಂದ ಕುಕ್ಕೆ ಸುಬ್ರಹ್ಮಣ್ಯಕ್ಕೆ ಕೇವಲ 20 ಕಿಲೋ ಮೀಟರ್ ದಾರಿ. ನಾನು ಸುಬ್ರಹ್ಮಣ್ಯ ಇದುವರೆಗೆ ನೋಡಿಲ್ಲ. ಹೋಗುವ ಆಸೆಯಿದ್ದರೂ ಆ 20 ಕಿಲೊ ಮೀಟರ್ ಕ್ರಮಿಸಲು ಮತ್ತೆ ಮೂರು ಗಂಟೆ ಬೇಕು ಎಂದು ತಿಳಿದು, ಬಂದ ದಾರಿಗೆ ಸುಂಕವಿಲ್ಲ ಎಂದುಕೊಂಡೆ. ಮತ್ತೆ 40 ಕಿಲೋ ಮೀಟರ್ ವಾಪಸು ಬರುವುದರೊಳಗೆ ಮೈ ಕೈಗೆ ಎಣ್ಣೆ ಹಚ್ಚಿಕೊಂಡು ಕಾಯಿಸಿಕೊಳ್ಳುವಂಥ ಸ್ಥಿತಿ ಬಂದಿತ್ತು.

ಉಮೇಶ್ ಹೇಳುತಿದ್ದರು. ನಮಗೆ ಸರ್ಕಾರದಿಂದ ಏನೂ ಬೇಡ. ಒಳ್ಳೆಯ ರಸ್ತೆ ಹಾಗೂ ವಿದ್ಯುತ್ ಕೊಟ್ಟರೆ ಸಾಕು. ಆದರೆ, ಸರ್ಕಾರ ಎರಡನ್ನೂ ಕೊಡುತ್ತಿಲ್ಲ. ಇದೇ ರಸ್ತೆಯಲ್ಲಿ ಮೊನ್ನೆ ಬಾಳೆಗಿಡವನ್ನು ನೆಟ್ಟು ಪ್ರತಿಭಟಿಸಿದೆವು. ಪ್ರಯೋಜನವಾಗಲಿಲ್ಲ. ನಮ್ಮ ಜಿಲ್ಲೆಯಲ್ಲಿ ಬಿಜೆಪಿಯಿಂದ ಒಬ್ಬ ಶಾಸಕನೂ ಆಯ್ಕೆಯಾಗಿಲ್ಲ. ಸರ್ಕಾರ ಅದಕ್ಕಾಗಿಯೇ ನಮಗೆ ಪಾಠ ಕಲಿಸುತ್ತಿದೆ' ಎಂದರು. 'ಈ ರಸ್ತೆ ಬೇಡ' ಎಂದು ಶಿರಾಡಿ ಘಟ್ಟದ ಮೂಲಕ ಸುಬ್ರಹ್ಮಣ್ಯಕ್ಕೆ ಹೊರಟರೂ ಸ್ಥಿತಿ ಭಿನ್ನವಾಗಿಯೇನೂ ಇಲ್ಲ. ಅಲ್ಲಿಯೂ ಹಳ್ಳ ಕೊಳ್ಳಗಳದೇ ಸಾಮ್ರಾಜ್ಯ ಮರುದಿನ ಹಾಸನ ಬಳಿಯ ಕಾಡುಮನೆ ಟೀ ಎಸ್ಟೇಟ್‌ಗೆ ಹೊರಟೆ. ವಿಪರ್ಯಾಸ ನೋಡಿ, ಅದು ಒಂದು ಖಾಸಗಿ ಎಸ್ಟೇಟ್. ಹಾಸನದಿಂದ ಹತ್ತು ಕಿಲೋ ಮೀಟರ್ ದೂರದಲ್ಲಿ ಇದೆ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಸುಮಾರು ಆರರಿಂದ ಎಂಟು ಅಂಗುಲ ಎತ್ತರ ಸಿಮೆಂಟ್ ಹಾಕಿ ಎಸ್ಟೇಟಿಗೆ ಹೋಗಲು ಎಂಟು ಕಿಲೋ ಮೀಟರ್ ರಸ್ತೆಯನ್ನು ಸರ್ಕಾರ ನಿರ್ಮಿಸಿ ಕೊಟ್ಟಿದೆ. ಉಳಿದ ಎರಡು ಕಿಲೋ ಮೀಟರ್ ಅನ್ನು ಬೇಕೆಂತಲೇ ಬಿಟ್ಟುದು ಗೊತ್ತಾಗುತ್ತದೆ. ಈಗ ಸಿಮೆಂಟ್ ರಸ್ತೆಯ ಕಾಲರ್‌ಗಳಿಗೆ ಮಣ್ಣು ಹಾಕಿ ರಸ್ತೆ ಅಗಲ ಮಾಡುವ ಕೆಲಸವೂ ನಡೆದಿದೆ. ಆ ದಾರಿಯಲ್ಲಿ ನನಗೆ ಒಂದೇ ಒಂದು ಸಾರಿಗೆ ವಾಹನ ಎದುರಾಗಲಿಲ್ಲ. ಬಿಸಿಲೆಗೆ ಹೋಗುವ ರಸ್ತೆಯಲ್ಲಿ ನಮ್ಮ ಜತೆಗೇ ಒಂದು ಸಾರಿ ಬಲಗಡೆಗೆ ಇನ್ನೊಂದು ಸಾರಿ ಎಡಗಡೆಗೆ ವಾಲುತ್ತ ವಾಹನಗಳು ಸಾಲು ಸಾಲಾಗಿ ಸಂಚರಿಸುತ್ತಿದ್ದುವು. ಬಹುಶಃ ಕಾಡುಮನೆ ಎಸ್ಟೇಟಿಗೆ ಸಿಮೆಂಟ್ ರಸ್ತೆ ನಿರ್ಮಿಸಲು ಖರ್ಚು ಮಾಡಿದ ಹಣದಲ್ಲಿ ಸಕಲೇಶಪುರದಿಂದ ಸುಬ್ರಹ್ಮಣ್ಯಕ್ಕೆ ಒಳ್ಳೆಯ ಟಾರು ರಸ್ತೆಯನ್ನೇ ನಿರ್ಮಿಸಬಹುದಿತ್ತೇನೋ? ಭೂಲೋಕದ ಮೇಲಿನ ಸ್ವರ್ಗದಂತಿರುವ 4,000 ಎಕರೆಯಷ್ಟು ದೊಡ್ಡದಾದ ಕಾಡುಮನೆ ಎಸ್ಟೇಟಿಗೆ ಸಿಮೆಂಟ್ ರಸ್ತೆ ನಿರ್ಮಾಣ ಮಾಡಿದ್ದಕ್ಕೆ ಸಕಲೇಶಪುರದಲ್ಲಿ ಏನೇನೋ ಕಾರಣಗಳನ್ನು ಹೇಳುತ್ತಾರೆ. ಅದನ್ನೆಲ್ಲ ನಾನು ನಂಬಲಿಲ್ಲ. ಬೇಕಾದರೆ, ಯಡಿಯೂರಪ್ಪನವರು ಸಂಶೋಧನೆ ಮಾಡಬಹುದೋ ಏನೋ?!

ಮೂರು ದಿನ ರಜೆ ಮಾಡಿದರಾಯಿತು ಎಂದುಕೊಂಡ ನನ್ನ ಕಷ್ಟಗಳಿಗೆ ಕೊನೆ ಇರಲಿಲ್ಲ. ನನ್ನ ಸಂಪಾದಕರ ಜತೆಗೆ ಒಂದು ವರ್ಷದ ಹಿಂದೆ ದುಃಸ್ವಪ್ನದಂಥ ರಸ್ತೆಯಲ್ಲಿ ಕೆಮ್ಮಣ್ಣುಗುಂಡಿಗೆ ತೆರಳಿದ್ದೆ. ಚಿಕ್ಕಮಗಳೂರಿನಿಂದ 61 ಕಿಲೋ ಮೀಟರ್ ದೂರದ ಕೆಮ್ಮಣ್ಣುಗುಂಡಿಗೆ ತೆರಳಲು ಎರಡು ದಾರಿಗಳು ಇವೆ. ಒಂದು ದಾರಿ ಬಾಬಾಬುಡನ್ ಗಿರಿಯ ಮೂಲಕ. ಇನ್ನೊಂದು ತರೀಕೆರೆ ಬಳಿಯ ಲಿಂಗದಳ್ಳಿ

ಮೂಲಕ. ನಾನು ಮತ್ತು ನನ್ನ ಸಂಪಾದಕರು ದಾರಿ ತಪ್ಪಿ ಬಾಬಾಬುಡನ್‌ಗಿರಿ ಮೂಲಕ ಕೆಮ್ಮಣ್ಣಗುಂಡಿಗೆ ಹೋಗಿದ್ದೆವು. ಇಡೀ 61 ಕಿಲೋ ಮೀಟರ್ ದಾರಿ ಕ್ರಮಿಸಲು ನಾವು ಅನುಭವಿಸಿದ ಕಷ್ಟವನ್ನು ಅವರು ಈಗಲೂ ಮರೆತಿಲ್ಲ. ಅಲ್ಲಿ ಅಕ್ಷರಶಃ ರಸ್ತೆಯೇ ಇಲ್ಲ. ಬರೀ ಕಲ್ಲು ಗುಂಡಿಗಳು ಮಾತ್ರ ಇದ್ದುವು. ಈ ಸಾರಿ ಲಿಂಗದಳ್ಳಿ ಮೂಲಕ ಹೊರಟರೂ ಸ್ಥಿತಿ ಬೇರೆಯೇನೂ ಇರಲಿಲ್ಲ. ಲಿಂಗದಳ್ಳಿಯಿಂದ ಕೆಮ್ಮಣ್ಣಗುಂಡಿಗೆ 21 ಕಿಲೋ ಮೀಟರ್ ದಾರಿ. ಆರಂಭದಲ್ಲಿ ರಸ್ತೆ ಉತ್ತಮವಾಗಿದೆ. ಆದರೆ, ಕೆಮ್ಮಣ್ಣ ಗುಂಡಿ ಹತ್ತಿರ ಬರುತ್ತಿದ್ದಂತೆಯೇ ಕಂದರಗಳು ಬಾಯಿ ತೆರೆದುಕೊಳ್ಳುತ್ತವೆ. ಹಲವು ಸಾರಿ ನಮ್ಮ ವಾಹನ ಕಂದರ ದಾಟಲಾಗದೇ ಹಿಮ್ಮುಖವಾಗಿ ಚಲಿಸತೊಡಗಿತು. ಸುತ್ತಲೂ ಕಾವಳ ಕತ್ತಲು. ಸ್ವಲ್ಪ ನಿಯಂತ್ರಣ ತಪ್ಪಿದರೂ ಆಳದ ಕಂದರಕ್ಕೆ ವಾಹನ ಜರಿದು ಹೋಗಬಹುದಿತ್ತು. ಕೆರೆಯ ಏರಿಯ ಮೇಲೆ ವಾಹನ ಓಡಿಸುವುದಕ್ಕಿಂತಲೂ ಹೆಚ್ಚು ಅಪಾಯಕಾರಿ ಕಸರತ್ತು ಇದು. ಹಾಸನ ಜಿಲ್ಲೆಯ ಜನರು ಬಿಜೆಪಿ ಶಾಸಕರನ್ನು ಆರಿಸಲಿಲ್ಲವೇನೋ ನಿಜ. ಅದಕ್ಕಾಗಿ ಸರ್ಕಾರಕ್ಕೆ ಅವರ ಮೇಲೆ ಸಿಟ್ಟು ಇರಬಹುದು. ಆದರೆ, ಚಿಕ್ಕಮಗಳೂರು ಜಿಲ್ಲೆಯ ಎಲ್ಲ ಐದು ಕ್ಷೇತ್ರಗಳಲ್ಲಿಯೂ ಬಿಜೆಪಿ ಶಾಸಕರೇ ಆಯ್ಕೆಯಾಗಿದ್ದಾರೆ. ಆದರೂ ಸರ್ಕಾರಕ್ಕೆ ಜನರ ಮೇಲೆ ಏಕೆ ಇಷ್ಟು ಸಿಟ್ಟು?

ಕೆಮ್ಮಣ್ಣಗುಂಡಿಯಂಥ ಗಿರಿಧಾಮ ಕರ್ನಾಟಕದಲ್ಲಿ ಮತ್ತೊಂದು ಇರಲಾರದು. ಭೂರಮೆಯ ಎಲ್ಲ ಸೊಬಗು ಇಲ್ಲಿ ಮೈವೆತ್ತು ನಿಂತಿದೆ. ಶನಿವಾರ, ಭಾನುವಾರ ಜನರ ದಂಡೇ ಅಲ್ಲಿಗೆ ಬರುತ್ತದೆ. ಲಿಂಗದಳ್ಳಿ ಬಳಿಯಿಂದ ಕೆಮ್ಮಣ್ಣಗುಂಡಿಗೆ ಹೋಗುವ ರಸ್ತೆಯ ಆಜೂಬಾಜು ಪ್ರದೇಶ ಊಟಿ ರಸ್ತೆಯ ಸೌಂದರ್ಯಕ್ಕೆ ಸರಿಸಾಟಿ ಎನ್ನುವಂತೆ ಇದೆ. ಆಳ ಕಂದರಗಳಿಂದ ನೆಟ್ಟಗೆ ನಿಗುರಿ ನಿಂತು ಆಕಾಶ ಚುಂಬಿಸುವ ಸಬೂಳ ಮರಗಳು, ದಟ್ಟ ಕಾಡು. ಅಲ್ಲಿ ಇಲ್ಲಿ, ಸಂದಿಗಳಿಂದ ಹರಿಯುವ ಜರಿಗಳು, ತೊರೆಗಳು, ಸದಾ ಚಿರುಗುಟ್ಟುವ ಕಾಡು ಕೀಟಗಳು, ಕೂಗುವ ಪಕ್ಷಿಗಳು, ಆಹ್! ಭೂಮಿಯ ಮೇಲಿನ ಸ್ವರ್ಗವೇ ಅದು! ಆದರೆ, ಆ ಸ್ವರ್ಗಸುಖ ಅನುಭವಿಸಲು ನರಕಸದೃಶ ರಸ್ತೆಗಳು ಬಿಡುವುದೇ ಇಲ್ಲ. ಏಕೆ ಹೀಗೆ?

ಕೆಮ್ಮಣ್ಣಗುಂಡಿಯ ಕೃಷ್ಣರಾಜೇಂದ್ರ ಗಿರಿಧಾಮದ 'ರಾಜಭವನ' ವಸತಿಗೃಹದಲ್ಲಿ ನಮಗೆ ಕೊಠಡಿಯನ್ನು ಕಾದಿರಿಸಲಾಗಿತ್ತು. 'ರಾಜಭವನ'ದ ಕೊಠಡಿ ಎಂದು ಕೇಳಿ ನನಗೆ ಕೊಂಚ ಅಳುಕಾಗಿತ್ತು; ಬಾಡಿಗೆ ಎಷ್ಟು ಇರುತ್ತದೋ ಏನೋ ಎಂದು! ಬಾಡಿಗೆ ಜಾಸ್ತಿಯೇನೂ ಇರಲಿಲ್ಲ. 1974ರಲ್ಲಿ ಆಗಿನ ಸಚಿವೆ ಇವಾ ವಾಜ್ ಉದ್ಘಾಟಿಸಿದ 'ರಾಜಭವನ' ಆಗ ಹೇಗಿತ್ತೋ ಈಗಲೂ ಹಾಗೆಯೇ ಇದೆ. ಗೋಡೆಗೆ ಒಂದಿಷ್ಟು ಬಣ್ಣ ಹಚ್ಚಿದ್ದು ಬಿಟ್ಟರೆ ಕೊಠಡಿಗಳೂ ಹಾಗೆಯೇ ಇವೆ. ಅದೇ 74ರಲ್ಲಿ ಹಾಕಿರಬಹುದಾದ ನಾರಿನ ಹಾಸು, ಸೋರುವ ಗೋಡೆಗಳು, ವಾಸನೆ ಬೀರುವ ಹಾಸಿಗೆಗಳು, ಬಚ್ಚಲು ಮನೆಯಲ್ಲಿ ಕೆಲಸ ಮಾಡದ ನಲ್ಲಿಗಳು, ಬಾಯಿ ತೆರೆದು ನಿಂತಿರುವ ಕಟ್ಟಿಗೆಯ ನೆಲಹಾಸು, ಕಿತ್ತುಕೊಂಡು ಹೋದ ಗೀಜರ್‌ನ ಸಂಪರ್ಕಗಳು. ಅಷ್ಟು ಎತ್ತರದಿಂದ ಕೆಳಗೆ ಬಿಟ್ಟ ಗೀಜರ್ ಪೈಪ್ ಮೂಲಕವೇ ಬಿಸಿ ನೀರು

ಹಿಡಿದುಕೊಳ್ಳಬೇಕು. ಗಂಟೆಗಟ್ಟಲೆ ಗೀಸರ್ ಹಚ್ಚಿದರೂ ನೀರು ಕಾಯುವುದಿಲ್ಲ. ಕೆಳಗೆ ಇಳಿದು ಹೋಟೆಲ್‌ಗೆ ತಿಂಡಿ ತಿನ್ನಲು ಬಂದರೆ ಅವರು ಹೇಳಿದ್ದೇ ದರ. 'ಬಿಸಿ ಇಡ್ಲಿ ಇದೆಯೇ' ಎಂದರೆ 'ಸಾಂಬಾರು ಬಿಸಿ ಇದೆ' ಎನ್ನುವ ಮಾಲೀಕ! 'ಇಡ್ಲಿ ಬಿಸಿ ಇದೆಯೇ' ಎಂದು ಮತ್ತೆ ಕೇಳಿದರೆ 'ಯಾವ ಲೋಕದಿಂದ ಬಂದ ಪ್ರಾಣಿ ಇವ ಎನ್ನುವ ತಾತ್ಸಾರ ನೋಟ.

ಕೆಮ್ಮಣ್ಣುಗುಂಡಿ ತೋಟಗಾರಿಕೆ ಇಲಾಖೆಯ ಒಡೆತನಕ್ಕೆ ಸೇರಿದ ಗಿರಿಧಾಮ. ಇಲ್ಲಿನ ವಸತಿಗೃಹಗಳ ಒಡೆತನವೂ ಅದರದೇ. ತೋಟಗಾರಿಕೆ ಇಲಾಖೆಗೂ ಹೋಟೆಲ್‌ಗಳನ್ನು ನಡೆಸುವುದಕ್ಕೂ ಏನು ಸಂಬಂಧ ಎಂದು ಅರ್ಥವಾಗುವುದಿಲ್ಲ. 'ರಾಜಭವನ'ದಲ್ಲಿ ಒಬ್ಬರೋ ಇಬ್ಬರೋ ಸಿಬ್ಬಂದಿ ಇದ್ದಾರೆ. ಇಡೀ ದಿನ ಅವರೇ ತೇಕಬೇಕು. ಕಸ ಗುಡಿಸುವವರು, ಕೊಠಡಿ ಸ್ವಚ್ಛ ಮಾಡುವವರು ಯಾರೂ ಇಲ್ಲ. ರಾತ್ರಿ ವೇಳೆಯಲ್ಲಿ ಗುಂಪಾಗಿ ಬಂದು ಗುಂಡು ಹಾಕಿ ಹೋಗುವವರಿಗೆ ಹೇಳಿ ಮಾಡಿಸಿದ ಜಾಗ ಅದು. ಅಮಲಿನಲ್ಲಿ ಯಾವ ವಾಸನೆಯೂ ಗೊತ್ತಾಗುವುದಿಲ್ಲ! ಹೇಗೋ ಬಿದ್ದುಕೊಂಡು ಮರುದಿನ ಎದ್ದು ಹೋಗುತ್ತಾರೆ. ಗಿರಿಧಾಮದ 'ಅತ್ಯುತ್ತಮ', 'ಅತಿ ದುಬಾರಿ' ಕೊಠಡಿಗಳ ಕಥೆಯೇ ಹೀಗಾದರೆ ಉಳಿದ ಕೊಠಡಿಗಳ, ಅಲ್ಲಿನ ಸೌಕರ್ಯಗಳ ಅವಸ್ಥೆ ಹೇಗಿರಬಹುದು ಎಂಬುದು ಊಹೆಗೆ ಬಿಟ್ಟ ವಿಚಾರ. ನನಗೆ ಮತ್ತೆ ದಕ್ಷಿಣ ಆಫ್ರಿಕಾದ ಕೊಠಡಿಗಳು ಕಾಡಿದುವು. ದಟ್ಟ ಕಾಡಿನಲ್ಲಿ ವಿಜಯ ಮಲ್ಯ ನಿರ್ಮಿಸಿದ ಮಬುಲಾದಲ್ಲಿ ಒಂದು ನಲ್ಲಿಯಲ್ಲಿ ಕೊರೆಯುವ ತಣ್ಣೀರು. ಪಕ್ಕದ ಇನ್ನೊಂದು ನಲ್ಲಿಯಲ್ಲಿ ಕೈಯಲ್ಲಿ ಹಿಡಿಯಲಾಗದಂಥ ಸುಡುವ ನೀರು. ಮಲ್ಯ ಅವರ ಕೊಠಡಿಯ ದರಕ್ಕೂ, 'ರಾಜಭವನ'ದ ದರಕ್ಕೂ ಹೋಲಿಕೆಯೇ ಇಲ್ಲ. ಹಾಗೆಂದು ಇಷ್ಟು ಕೆಟ್ಟ ಅವಸ್ಥೆಯ ಕೊಠಡಿಗಳನ್ನು ಏಕೆ ಇಟ್ಟುಕೊಳ್ಳಬೇಕು? ಯಾರಿಗಾಗಿ ಇಟ್ಟುಕೊಳ್ಳಬೇಕು? ಕೊಠಡಿಯ ಬಾಡಿಗೆ ಮೇಲೆ ತೋಟಗಾರಿಕೆ ಇಲಾಖೆ ತೆರಿಗೆಯನ್ನೂ ಆಕರಿಸುತ್ತದೆ. ಹಾಗೆಂದು ನಿಮಗೆ ರಸೀತಿ ಕೊಡುವುದಿಲ್ಲ. ಅಲ್ಲಿ ಇಟ್ಟ ಪುಸ್ತಕದಲ್ಲಿ ನಿಮ್ಮ ಹೆಸರನ್ನು ನೀವೇ ಬರೆದು ಕೊಠಡಿಯ ಬಾಡಿಗೆ ಮೊತ್ತವನ್ನೂ ಬರೆಯಬೇಕು. ಅಷ್ಟೇ!

ಸಮುದ್ರ ತಟದಿಂದ 4,700 ಅಡಿಯಷ್ಟು ಎತ್ತರದ, ದಟ್ಟ ಅರಣ್ಯದ ನಡುವಿನ ಕೆಮ್ಮಣ್ಣುಗುಂಡಿಯನ್ನು ಬ್ರಿಟಿಷರು ಹೇಗೆ ಕಂಡು ಹಿಡಿದರೋ ಗೊತ್ತಿಲ್ಲ. ಬೇರೆ ದೇಶದಲ್ಲಿ ಇಂಥ ಒಂದು ಗಿರಿಧಾಮ ಇದ್ದಿದ್ದರೆ ಅದನ್ನು ಹೇಗೆ ಇಟ್ಟುಕೊಳ್ಳಬಹುದಿತ್ತು ಎಂದು ಊಹಿಸಲು ಕಷ್ಟವೇನೂ ಬೇಡ, ತೋಟಗಾರಿಕೆ ಇಲಾಖೆ ಗಿರಿಧಾಮದ ಆವರಣದಲ್ಲಿ ಅದ್ಭುತವಾದ ತೋಟ ಬೆಳೆಸಿದೆ. ಹೂ ಗಿಡಗಳನ್ನು ಪೋಷಿಸುತ್ತಿದೆ. ಸೂರ್ಯಾಸ್ತ ನೋಡಲು ತಾಣಗಳನ್ನು ಕಟ್ಟಿದೆ. ಆದರೆ, ಕೊಠಡಿಯಲ್ಲಿ ಒಂದು ರಾತ್ರಿ ನೆಮ್ಮದಿಯಿಂದ ತಂಗುವ ವಾತಾವರಣವನ್ನು ನಿರ್ಮಾಣ ಮಾಡಿಲ್ಲ. ರಾಜ್ಯದ ತೋಟಗಾರಿಕೆ ಸಚಿವರು ಒಮ್ಮೆಯಾದರೂ ಅಲ್ಲಿ ಹೋಗಿ ಇದ್ದು ಬಂದಿದ್ದಾರೋ ಇಲ್ಲವೋ ಗೊತ್ತಿಲ್ಲ. ಸರ್ಕಾರ ಯಾವುದನ್ನೂ ಚೆನ್ನಾಗಿ ಇಟ್ಟುಕೊಳ್ಳುವುದಿಲ್ಲ, ಚೆನ್ನಾಗಿ ಮಾಡುವುದಿಲ್ಲ ಎಂಬುದು ವಿಧಿಲಿಖಿತವೇ?

02-01-2011

# ಇಂಥ 'ಬೇಂದ್ರೆ ಹುಚ್ಚರು

# ಎಲ್ಲಾದರೂ ಇದ್ದಾರೆಯೇ?

ಇದು ಎತ್ತಣ ಮಾಮರ, ಎತ್ತಣ ಕೋಗಿಲೆಯ ಕಥೆ. ಐದು ವರ್ಷಗಳ ಹಿಂದಿನ ಮಾತು. ಬೆಂಗಳೂರಿನ ಪರಪ್ಪನ ಅಗ್ರಹಾರದ ಸಾರಿಗೆ ಕಚೇರಿಗೆ ಹೋಗಿದ್ದೆ, ಅಲ್ಲಿ ಕುಳಿತಿದ್ದ ಸಹಾಯಕ ಸಾರಿಗೆ ಅಧಿಕಾರಿಯವರಿಗೆ ನನ್ನ ಕಾರ್ಡ್ ಕೊಟ್ಟು ಡ್ರೈವಿಂಗ್ ಲೈಸೆನ್ಸ್ ನವೀಕರಿಸಲು ಕೋರಿಕೊಂಡೆ. ಅವರು ನನ್ನ ಕೈ ಹಿಡಿದುಕೊಂಡು ನಮ್ಮ ಕಚೇರಿಯಲ್ಲಿ ತಮಗೆ ಪರಿಚಯ ಇರುವ ನನ್ನ ಸಂಪಾದಕರೂ ಸೇರಿದಂತೆ ಎಲ್ಲರ ಹೆಸರು ಹೇಳತೊಡಗಿದರು. ಅವರ ಮೇಜಿನ ಮೇಲೆ ಇದ್ದ ಹೆಸರಿನ ಫಲಕದಲ್ಲಿ ಡಾ.ಜಿ.ಕೃಷ್ಣಪ್ಪ ಎಂದು ಇದ್ದುದನ್ನು ನೋಡಿ ನೀವು ಎಂಥ ಡಾಕ್ಟರು' ಎಂದು ಕೇಳಿದೆ. ಅವರು, 'ನಾನು ಕವಿ ಬೇಂದ್ರೆ ಅವರ ಮೇಲೆ ಪಿಎಚ್.ಡಿ ಮಾಡಿರುವೆ' ಎಂದಾಗ ಕನ್ನಡ ಎಂ.ಎ ಮಾಡಿದ ನನಗೇ ಗಲಿಬಿಲಿ, ನಾನು ಅಷ್ಟು ಪ್ರಶ್ನೆ ಕೇಳಿದ್ದು ಸಾಕಿತ್ತು. ಡಾ.ಕೃಷ್ಣಪ್ಪ ನನ್ನ ಕೈ ಹಿಡಿದುಕೊಂಡು ಒಂದು ಗಂಟೆ ಮಾತನಾಡಿದರು. ಅತ್ತ ನನ್ನ ಲೈಸೆನ್ಸ್‌ಗೆ ಸಂಬಂಧಪಟ್ಟಂತೆ ಕೆಲಸ ಸಾಗಿತ್ತು. ಆಗೀಗ ಕಾಗದ ಪತ್ರಗಳು ಬರುತ್ತಿದ್ದುವು ಅದಕ್ಕೆ ಅವರು ಸಹಿ ಹಾಕುತ್ತಿದ್ದರು.

ಆದರೆ, ಬೇಂದ್ರೆ ಕವನಗಳನ್ನು ಕಂಠೋದ್ಗತವಾಗಿ ಕೃಷ್ಣಪ್ಪ ಹೇಳುತ್ತಿದ್ದ ರೀತಿ, ಕವಿತೆಗಳನ್ನು ಅರ್ಥೈಸುತ್ತಿದ್ದ ರೀತಿ ನನ್ನನ್ನು ದಂಗು ಬಡಿಸಿತು. 'ಹೀಗೂ ಉಂಟೇ? ಇವರ ಹಾಗೆ ಎಷ್ಟು ಜನ ಕನ್ನಡ ಅಧ್ಯಾಪಕರು, ವಿದ್ಯಾರ್ಥಿಗಳು ಬೇಂದ್ರೆಯವರನ್ನು ಓದಿಕೊಂಡಿದ್ದಾರೆ' ಎಂದು ಮನಸ್ಸಿನಲ್ಲಿಯೇ ಉದ್ಧರಿಸಿದೆ.

ಕೃಷ್ಣಪ್ಪ ಹುಟ್ಟಿದ್ದು ಬೆಂಗಳೂರಿನಲ್ಲಿ, ಮನೆಯಲ್ಲಿ ಕಡುಬಡತನ, ತಂದೆ, ಲಕ್ಷ್ಮೀಶನ ಜೈಮಿನಿ ಭಾರತವನ್ನು ಪಠಿಸುತ್ತಿದ್ದರು. ತಾಯಿಗೆ ಕಥೆ ಹೇಳುವುದರಲ್ಲಿ ಆಸಕ್ತಿ. ಕೃಷ್ಣಪ್ಪ ಅವರಿಗೆ ಕಲಿಸಿದವರು ಜಿ.ಶಂ.ಪರಮಶಿವಯ್ಯ, ಕೋಣಂದೂರು ಲಿಂಗಪ್ಪ ಅವರಂಥ ಶ್ರೇಷ್ಠ ಶಿಕ್ಷಕರು, ಬೇಂದ್ರೆಯವರ 'ಇಳಿದು ಬಾ ತಾಯಿ, 'ಕುಣಿಯೋಣು ಬಾರಾ' ಕವಿತೆಗಳ ಪಾಠ ಕೇಳಿದ ಕೃಷ್ಣಪ್ಪ ಅವರಿಗೆ ಬೇಂದ್ರೆ ಕಾವ್ಯದ ಬಗ್ಗೆ ಆಸಕ್ತಿ ಬೆಳೆಯತೊಡಗಿತು. ಇನ್ನಷ್ಟು ಮತ್ತಷ್ಟು ಬೇಂದ್ರೆ ಕವಿತೆಗಳನ್ನು ಓದಬೇಕು ಎಂದರೆ ಪುಸ್ತಕ ಕೊಳ್ಳಲು ಹಣ ಇರಲಿಲ್ಲ. ಯಾರೋ ಹೇಳಿದರು ಸೆಂಟ್ರಲ್ ಲೈಬ್ರರಿಗೆ ಹೋದರೆ ಅಲ್ಲಿ ಪುಸ್ತಕಗಳು ಸಿಗುತ್ತವೆ ಎಂದು. ಕೃಷ್ಣಪ್ಪ ಹಳೆಯ ನೋಟುಪುಸ್ತಕದ ಹಾಳೆಗಳನ್ನು ತೆಗೆದುಕೊಂಡು ಲೈಬ್ರರಿಗೆ ಹೋಗಿ ಬೇಂದ್ರೆ ಕವಿತೆಗಳನ್ನು ಬರೆದುಕೊಂಡು ಬಂದರು. ಮನೆಯಲ್ಲಿ ಕುಳಿತು ಓದಿದರು.

ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಗಾಂಧಿ ಸಾಹಿತ್ಯ ಸಂಘದಲ್ಲಿ ಕೃಷ್ಣಪ್ಪ ಮತ್ತು ಅವರ ತಂಗಿ, ಜಿ.ಪಿ.ರಾಜರತ್ನಂ ಹಾಗೂ ಸಿದ್ದವನಹಳ್ಳಿ ಕೃಷ್ಣಶರ್ಮರ ತರಗತಿಗಳಿಗೆ ತಪ್ಪದೇ ಹಾಜರಾಗುತ್ತಿದ್ದರು. ರಾಜರತ್ನಂ ಕನ್ನಡದ ದೊಡ್ಡ ಪರಿಚಾರಕ. ಅವರು ಕೃಷ್ಣಪ್ಪ ಮತ್ತು ಅವರ ತಂಗಿಗೆ, 'ಕನ್ನಡದ ಕೆಲಸವನ್ನು ನಿಮಗೆ ಸರಿಕಂಡ ರೀತಿಯಲ್ಲಿ ಮಾಡಿರಿ' ಎಂದು ಸೂಚಿಸಿದ್ದರು. ರಾಜರತ್ನಂ ಒಂದು ಕಡೆ ಬುದ್ಧನಂತೆ, ಇನ್ನೊಂದು ಕಡೆ ಮಹಾವೀರನಂತೆ ಕಾಣುತ್ತಿದ್ದರು. ಅವರು ಹೇಳಿದ ಮಾತು ಕೃಷ್ಣಪ್ಪನವರ ಮನದಲ್ಲಿ ಆಲದ ಮರದ ಹಾಗೆ ಬೇರು ಬಿಟ್ಟಿತು. ಅದು ಹೆಮ್ಮರವಾಗಿ ಬೆಳೆಯಲು ಹೆಚ್ಚು ಕಾಲ ಹಿಡಿಯಲಿಲ್ಲ. ಕನ್ನಡ ಓದಿದರೆ ನೌಕರಿ ಸಿಗುವುದಿಲ್ಲ ಎಂದು ಎಸ್.ಜೆ.ಪಾಲಿಟೆಕ್ನಿಕ್‌ನಲ್ಲಿ ಆಟೊಮೊಬೈಲ್ ಡಿಪ್ಲೊಮಾಕ್ಕೆ ಸೇರಿಕೊಂಡರು. ಅಲ್ಲಿ ಇಲ್ಲಿ ಕೆಲಸ ಮಾಡಿ ನಂತರ 1978ರಲ್ಲಿ ಸಾರಿಗೆ ಇಲಾಖೆಯಲ್ಲಿ ಇನ್ಸ್ಪೆಕ್ಟರ್ ಆಗಿ ಸೇರಿಕೊಂಡರು.

1986ರಲ್ಲಿ ಬೆಳಗಾವಿಗೆ ವರ್ಗವಾದಾಗ ಗೋಕಾಕಿನಲ್ಲಿ ನಿಂಗಣ್ಣ ಸಣ್ಣಕ್ಕಿ ಮತ್ತು ಕೃಷ್ಣಪ್ಪ ಸೇರಿಕೊಂಡು ಶಾಲಾ ಮಕ್ಕಳಿಗೆ ಮೊದಲ ಬೇಂದ್ರೆ ಗೀತ ಗಾಯನ ಸ್ಪರ್ಧೆ ಏರ್ಪಡಿಸಿದರು. ಆಗಿನಿಂದ ಈಗಿನ ವರೆಗೆ ಕೃಷ್ಣಪ್ಪ ಇಂಥ ಮುನ್ನೂರಕ್ಕೂ ಹೆಚ್ಚು ಕಾರ್ಯಕ್ರಮ ಮಾಡಿದ್ದಾರೆ. ತಮ್ಮದೇ ಹಣ ಹಾಕಿಕೊಂಡು ಊರೂರು ಸುತ್ತಿದ್ದಾರೆ. ಸಭೆ, ಸಮಾರಂಭದ ಏರ್ಪಾಡಿಗೆಂದು ಅವರು ಎಂದೂ ಹಣ ಖರ್ಚ ಮಾಡಿಲ್ಲ. ಒಂದು ಶಾಲೆ, ಅಲ್ಲಿ ಒಂದು ಮೇಜು, ಒಂದೆರಡು ಕುರ್ಚಿ, ಮೇಜಿನ ಮೇಲೆ ಬೇಂದ್ರೆ ಫೋಟೊ, ಅದರ ಮುಂದೆ ಒಂದು ದೀಪ, ಶಾಲೆಯ ಶಿಕ್ಷಕರೇ ಗಾಯನ ಸ್ಪರ್ಧೆಯ ತೀರ್ಪುಗಾರರು, ವಿದ್ಯಾರ್ಥಿಗಳಿಗೆ ಬೇಂದ್ರೆ ಪುಸ್ತಕಗಳೇ ಬಹುಮಾನ. ಅದಕ್ಕೆ ಕೃಷ್ಣಪ್ಪನವರದೇ ದುಡ್ಡು. ಈ ಸ್ಪರ್ಧೆಗಳು, ಬೇಂದ್ರೆ ಕಾವ್ಯದ ದೊಡ್ಡ ಗುಣವಾದ ಉತ್ತರ ಕರ್ನಾಟಕದ ಗಂಡುಮೆಟ್ಟಿನ ಭಾಷೆಯ ಪ್ರದೇಶಗಳಿಗೆ ಮಾತ್ರ

ಸೀಮಿತವಾಗಿರಲಿಲ್ಲ. ಕೆ.ಜಿ.ಎಫ್ ಗಡಿಯಲ್ಲಿನ ದೊಡ್ಡಪೆನ್ನಾಂಡಹಳ್ಳಿಯಂಥ ತೆಲುಗು ಪ್ರಧಾನ ಊರಿನಲ್ಲಿಯೂ ಅದು ಯಶಸ್ಸು ಕಂಡಿತು. ಉರ್ದು ಪ್ರಾಬಲ್ಯದ ಬೀದರ್‌ನ ಗಡಿ ಹಳ್ಳಿಗಳಲ್ಲೂ ವಿಜೃಂಭಿಸಿತು. ಗುಂಡ್ಲುಪೇಟೆಯ ಕೆ.ಎಸ್.ನಾಗರತ್ನಮ್ಮ ಪ್ರೌಢಶಾಲೆಯ ಸ್ಪರ್ಧೆಯಲ್ಲಿ ಮುಸ್ಲಿಂ ಮಕ್ಕಳೇ ಬಹುಮಾನ ಬಾಚಿಕೊಂಡರು! 'ಬೇಂದ್ರೆಗೆ ಭಾಷೆಯ ಗಡಿಯಿಲ್ಲ ಸರ್' ಎಂದ ಕೃಷ್ಣಪ್ಪ ಅವರ ಕಣ್ಣಂಚಿನಲ್ಲಿ ಮಿಂಚು, ತುದಿ ಒದ್ದೆ ಮಾಡಿದ ಹನಿ.

ಮೈಸೂರಿನಲ್ಲಿ ಕೆಲಸ ಮಾಡುತ್ತಲೇ ಬಾಹ್ಯವಾಗಿ ಬಿ.ಎ, ಎಂ.ಎ ಮಾಡಿಕೊಂಡ ಕೃಷ್ಣಪ್ಪ ಅವರು 'ಬೇಂದ್ರೆ ಸಾಹಿತ್ಯದಲ್ಲಿ ಸ್ತ್ರೀ: ಒಂದು ಅಧ್ಯಯನ' ಎಂಬ ವಿಷಯದಲ್ಲಿ, ಪ್ರೊ.ಹರಿಶಂಕರ್ ಮಾರ್ಗದರ್ಶನದಲ್ಲಿ ಪಿಎಚ್.ಡಿಗೆ ನೋಂದಾಯಿಸಿಕೊಂಡರು. ಆದರೆ, ಬೇಂದ್ರೆ ಪದ್ಯಗಳಲ್ಲಿನ ಉತ್ತರ ಕರ್ನಾಟಕದ ಭಾಷೆ ಅರ್ಥವಾಗಬೇಕಾದರೆ ಧಾರವಾಡಕ್ಕೆ ಹೋಗಬೇಕು ಎಂದು ಅನಿಸತೊಡಗಿತು. ಆ ವೇಳೆಗಾಗಲೇ ಕೃಷ್ಣಪ್ಪ ಅವರಿಗೆ ಬೇಂದ್ರೆ ಒಂದು ಉನ್ಮಾದವಾಗಿ ಕಾಡತೊಡಗಿದ್ದರು. ಪ್ರತಿ ಶಬ್ದ, ಸಾಲು, ಅದರಲ್ಲಿನ ಲಯ, ಛಂದಸ್ಸು ಅವರ ನಿದ್ದೆಗೆಡಿಸಿತ್ತು. ಮೂರೂ ಹೊತ್ತು ಅದೊಂದೇ ಧ್ಯಾನ, ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಾಪಕರು ಕೃಷ್ಣಪ್ಪ ಅವರ ಪ್ರಶ್ನೆಗಳಿಗೆ ಉತ್ತರ ಹೇಳಲಾಗದೆ ಸಾಗಹಾಕತೊಡಗಿದರು. ಡಾ.ಸಿ.ಡಿ.ನರಸಿಂಹಯ್ಯ ಅವರ 'ಧ್ವನ್ಯಾಲೋಕ'ದಲ್ಲಿ ಬೇಂದ್ರೆ ಕಾವ್ಯ ಕುರಿತ ವಿಚಾರ ಸಂಕಿರಣದಲ್ಲಿ ಬೇಂದ್ರೆ ಬಗ್ಗೆ ಲಘುವಾಗಿ ಮಾತನಾಡಿದ ವಿಮರ್ಶಕರೊಬ್ಬರನ್ನು ವೇದಿಕೆಯ ಮೇಲಿಂದಲೇ ಕೃಷ್ಣಪ್ಪ ತರಾಟೆಗೆ ತೆಗೆದುಕೊಂಡರು. ಕಾರ್ಯಕ್ರಮ ದಿಢೀರ್ ಬರ್ಖಾಸ್ತಾಯಿತು. ಕೃಷ್ಣಪ್ಪ ಧಾರವಾಡದ ಹಾದಿ ಹಿಡಿದರು. ಬೇಂದ್ರೆ ಅಧ್ಯಯನ ಮತ್ತು ಅವರ ಜತೆಗಿನ 'ವಾಗ್ವಾದ' ಮುಗಿದಿರಲೇ ಇಲ್ಲ. ಬೇಂದ್ರೆ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ ಕೀರ್ತಿನಾಥ ಕುರ್ತಕೋಟಿಯವರನ್ನೇ ಕೃಷ್ಣಪ್ಪ ತಡವಿದರು. ಬೇಂದ್ರೆಯವರ 'ಅಲೌಕಿಕ' ಕವಿತೆಯಲ್ಲಿ ತಾಯಿ ತನ್ನ ಮಗನನ್ನು ನನ್ನ ಮಾನಸದ ಮದಗವೇ? ಎಂದು ಕರೆದಿದ್ದಳು. ಅದನ್ನು ಕುರ್ತಕೋಟಿಯವರು 'ಮದಗಜವೇ' ಎಂದು ಓದಿಕೊಂಡು ಅರ್ಥೈಸಿದ್ದರು. ಕೃಷ್ಣಪ್ಪ ಮದಗ ಶಬ್ದದ (ಕೆರೆತುಂಬಿ ಹರಿದು ಹೊರಚೆಲ್ಲಿದ ತೂಬಿನ ನೀರು-ಇಲ್ಲಿನ ಕೆರೆ, ತೂಬಿನ ಶಬ್ದಗಳ ಶ್ಲೇಷೆ ಅದ್ಭುತವಾದುದು) ಅರ್ಥ ತಿಳಿದುಕೊಂಡು ನೀವು ಅರ್ಥೈಸಿದ ರೀತಿ ತಪ್ಪಲ್ಲವೇ ಎಂದು ಪತ್ರ ಬರೆದರು. ಕುರ್ತಕೋಟಿ ತಪ್ಪು ಒಪ್ಪಿಕೊಂಡರು. ಯಾರಿಂದಲೂ ಕಾವ್ಯಕ್ಕೆ ಅಪಚಾರವಾಗಬಾರದು ಎಂದರು. ನಾವೆಲ್ಲ ಬೇಂದ್ರೆ ಕಾವ್ಯದ ವಿದ್ಯಾರ್ಥಿಗಳು ಎಂದು ವಿನಯ ತೋರಿದರು.

ಬೇಂದ್ರೆ ಬಗ್ಗೆ ಅಷ್ಟೇ ಅಧಿಕೃತವಾಗಿ ಮಾತನಾಡಬಲ್ಲವರಾಗಿದ್ದ ಶಂಕರ ಮೊಕಾಶಿ ಪುಣೇಕರ್, ಕೃಷ್ಣಪ್ಪನವರ 'ಹೂತದ ಹುಣಸಿ' ಪುಸ್ತಕಕ್ಕೆ ಮುನ್ನುಡಿ ಬರೆಯುತ್ತ, 'ಈ ಪುಸ್ತಕ ಓದಿದ ನಂತರ ಬೇಂದ್ರೆಯವರನ್ನು ನಾನು ತಿಳಿದುಕೊಳ್ಳಬಲ್ಲೆ ಎಂಬ ನನ್ನ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ' ಎಂದು ಪ್ರಾಂಜಲವಾಗಿ ಒಪ್ಪಿಕೊಂಡರು. 'ಇಂಥ ಪುಸ್ತಕಕ್ಕಾಗಿ 50 ವರ್ಷಗಳಿಂದ ಕಾಯುತ್ತಿದ್ದೆ' ಎಂದು ನಮ್ರವಾಗಿ ನುಡಿದರು. ಸಾರಿಗೆ

ಇಲಾಖೆಯಲ್ಲಿ ಇನ್ಸ್‌ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದ ಕೃಷ್ಣಪ್ಪ ಅವರಿಗೆ ಜೀವನದಲ್ಲಿ ಸಾರ್ಥಕತೆ ತಂದ ಮಾತುಗಳು ಇವು. ಬೇಂದ್ರೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ 'ನಾಕು ತಂತಿ' ಸಂಕಲನವನ್ನು ಗೇಲಿ ಮಾಡಿದವರೇ ಹೆಚ್ಚು. ಆ ಸಂಕಲನದ ಬಗ್ಗೆ ಕೃಷ್ಣಪ್ಪ ಬರೆದ ಒಂದು ಪುಟ್ಟ ಪುಸ್ತಕ ಸಂಕಲನದ ಅರ್ಥ ತಿಳಿಯದೇ 'ಗಳಹುತ್ತಿದ್ದ ವಿದ್ವಾಂಸರ ಬಾಯಿ ಮುಚ್ಚಿಸಿತು. ಅದೇ ಕೃತಿಯ ಬಗ್ಗೆ ಖ್ಯಾತ ವಿದ್ವಾಂಸ ಸಿ.ಪಿ.ಕೆ 'ನಾನೂ ನಾಕು ತಂತಿಯ ಬಗ್ಗೆ ಬರೆದಿದ್ದೇನೆ, ಆದರೆ ನಿಮ್ಮಷ್ಟು ಆಳಕ್ಕೆ ಇಳಿಯದೆ' ಎಂದು ಮೆಚ್ಚು ಮಾತು ಆಡಿದರು. ಬೇಂದ್ರೆ ಪದ್ಯಗಳಲ್ಲಿನ ಪದಗಳ ಅರ್ಥಕ್ಕಾಗಿ ಕೃಷ್ಣಪ್ಪ ಊರೂರು ಸುತ್ತಿದರು. ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾದ ಬೇಂದ್ರೆ ಕಾವ್ಯಕ್ಕೆ ಅಲ್ಲಿಯೇ ಅರ್ಥ ಸಿಕ್ಕಿತು. 'ನಾಕು ತಂತಿ'ಯ ವಿಮರ್ಶೆಗಾಗಿ ಅವರು ಓದದ ಸಾಹಿತ್ಯವೇ ಇಲ್ಲ. ಈಗಲೂ 'ನಾಕು ತಂತಿ'ಯ ಅರ್ಥ ಕೃಷ್ಣಪ್ಪ ಅವರಿಗೆ ಕಂಠೋತ. ಅರ್ಥ ಮಾಡಿಕೊಂಡು ಮಾತನಾಡುವುದಕ್ಕೂ ಅರ್ಥ ಮಾಡಿಕೊಳ್ಳದೇ ಮಾತನಾಡುವುದಕ್ಕೂ ಇರುವ ವ್ಯತ್ಯಾಸವೇ ಅದು. ಅದರ ಹಿಂದಿನ ಶ್ರಮಕ್ಕೆ ಬೆಲೆ ಕಟ್ಟುವುದು ಕಷ್ಟ. ಇಂಥ ನಿರ್ವ್ಯಾಜ ಕಾವ್ಯ ಪ್ರೀತಿಯನ್ನು ಬೇರೆಡೆ ಹುಡುಕುವುದೂ ಕಷ್ಟ, ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟು ಕೃಷ್ಣಪ್ಪ ಅವರ 'ಬರೆಹದಲ್ಲಿ ಬೇಂದ್ರೆ ಬದುಕು' ಪುಸ್ತಕವನ್ನು ಪ್ರಕಟಿಸಿದ್ದರೆ ಟ್ರಸ್ಟ್‌ನ ಮೊದಲ ಫೆಲೋಶಿಪ್ (ರೂ.25,000) ಪಡೆದ ಶ್ರೇಯಸ್ಸಿನ ಕೃಷ್ಣಪ್ಪ 'ಅಂಬಿಕಾತನಯದತ್ತರ ಬಾಲ್ಯಕಾಂಡ ಕುರಿತು ಪುಸ್ತಕ ಬರೆದರು.

ನಿವೃತ್ತಿಯ ನಂತರ, ಕಳೆದ ಐದು ವರ್ಷಗಳಿಂದ ಕೃಷ್ಣಪ್ಪ ಮತ್ತು ಗೆಳೆಯರು ದ.ರಾ.ಬೇಂದ್ರೆ ಕಾವ್ಯಕೂಟ ಮಾಡಿಕೊಂಡು ವಿದ್ಯಾರ್ಥಿಗಳಿಗಾಗಿ ದ.ರಾ.ಬೇಂದ್ರೆ ಸ್ಮೃತಿ ಲೇಖನ ಸ್ಪರ್ಧೆ' ಏರ್ಪಡಿಸುತ್ತಿದ್ದಾರೆ. ಈಚಿನ ಸ್ಪರ್ಧೆಯ ಫಲಿತಾಂಶ ಮೊನ್ನೆ ಪ್ರಕಟವಾಗಿದೆ. ನಾಳೆ ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಆಗಲಿದೆ. ಇಷ್ಟು ವರ್ಷ ಒಬ್ಬ ಕವಿಯನ್ನು ಮುಂದಿಟ್ಟುಕೊಂಡು ಇಷ್ಟೊಂದು ಕಾರ್ಯಕ್ರಮ ಮಾಡಿದ ಕೃಷ್ಣಪ್ಪ ಒಂದೇ ಒಂದು ದಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹೋಗಿ ಹಣ ಕೇಳಲಿಲ್ಲ. 'ನಿಮ್ಮ ಬಳಿ ಹಣ ಇರುವಷ್ಟು ದಿನ ಕಾರ್ಯಕ್ರಮ ಮಾಡಿ, ಇಲ್ಲವಾದ ದಿನ ನಿಲ್ಲಿಸಿಬಿಡಿ' ಎಂದು ಹೆಂಡತಿ ಸರೋಜಮ್ಮ ಹೇಳಿದ ಮಾತನ್ನೇ ಅನುಸರಿಸಿಕೊಂಡು ಬಂದಿದ್ದಾರೆ. ಬೇಂದ್ರೆಯವರನ್ನು ಒಬ್ಬ ಅವಧೂತ ಎನ್ನುತ್ತಾರೆ. ಯಾವತ್ತೂ ನನಗೆ ಯಾವ ಕಾರ್ಯಕ್ರಮ ಮಾಡಲೂ ಹಣದ ಅಡಚಣೆ ಆಗಿಲ್ಲ. ಹೇಗೋ ಅದು ಕೂಡಿ ಬಂದಿದೆ. ಕೆಲವು ಕಡೆ ಜನ ಸ್ವತಃ ತಾವೇ ದುಡ್ಡು ಹಾಕಿ ಪೆಂಡಾಲ್ ಹಾಕಿದ್ದಾರೆ' ಎಂದು ಹೇಳುತ್ತ ಕೃಷ್ಣಪ್ಪ ಮತ್ತೆ ಕಣ್ಣಂಚಿನಲ್ಲಿ ಮಿಂಚಾಗುತ್ತಾರೆ.

ನಾಳೆ ಬೇಂದ್ರೆಯವರ ಜನ್ಮದಿನ. ಧಾರವಾಡದಲ್ಲಿ ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟಿನ ಪ್ರತಿಷ್ಠಿತ ಪ್ರಶಸ್ತಿ ಪ್ರದಾನವಾಗುತ್ತಿದೆ. ನಿಮಗೆ ಈ ಪ್ರಶಸ್ತಿ ಸಿಗಬೇಕಿತ್ತಲ್ಲವೇ ಎಂದು ಕೃಷ್ಣಪ್ಪ ಅವರನ್ನು ಸುಮ್ಮನೇ ಕೆಣಕಿದೆ. 'ಆಶೆಗಳ ಕೆಣಕದಿರು... ಪಾಶಗಳ ಬಿಗಿಯದಿರು...' ಎಂದು ಅವರು ನನಗೆ ಮಂಕುತಿಮ್ಮನ ಕಗ್ಗದ ಪಾಠ ಹೇಳಿದರು. 'ಆಸೆ ಪಟ್ಟರೆ ಮನಸ್ಸು ಕಹಿಯಾಗುತ್ತದೆ. ಆಸೆಯೇ ಇಲ್ಲದಿದ್ದರೆ ಸಮಸ್ಯೆಯೇ ಇಲ್ಲ'

ಎಂದರು. 'ತಾವು ಸಂಪಾದಿಸಿದ ಬೇಂದ್ರೆ ಲೇಖನಗಳ 'ಸಾಹಿತ್ಯ ಯೋಗ' ಎಂಬ ಕೃತಿಯನ್ನು ವಾಮನ ಬೇಂದ್ರೆಯವರು 1995ರಲ್ಲಿಯೇ ನನ್ನ ಮತ್ತು ನನ್ನ ಕುಟುಂಬಕ್ಕೆ ಅರ್ಪಿಸಿದ್ದಾರೆ. ಅದಕ್ಕಿಂತ ಹೆಚ್ಚಿನ ಪ್ರಶಸ್ತಿ ಇನ್ನೇನಿದೆ' ಎಂದು ಕೃಷ್ಣಪ್ಪ ಮತ್ತೆ ಪ್ರಶ್ನೆ ಹಾಕಿದರು. 2005ರ ಸುಮಾರಿಗೆ ನಾನು ಕೃಷ್ಣಪ್ಪ ಅವರನ್ನು ಮೊದಲ ಬಾರಿ ಭೇಟಿ ಮಾಡಿದಾಗ ಖಾಸಗಿ ವಾಹಿನಿಯೊಂದರಲ್ಲಿ ಬೇಂದ್ರೆ ಕುರಿತು ಕವಿಯೊಬ್ಬರು ಒಂದು ಕಾರ್ಯಕ್ರಮ ನಡೆಸಿಕೊಡುತ್ತಿದ್ದರು. ಆ ಕಾರ್ಯಕ್ರಮದಲ್ಲಿ ಕೃಷ್ಣಪ್ಪ ಅವರಿಗೆ ಅವಕಾಶ ಸಿಕ್ಕಿರಲಿಲ್ಲ. ನಿಮ್ಮನ್ನು ಕರೆಯಬಹುದಿತ್ತಲ್ಲವೇ ಎಂದು ಆಗ ಕೇಳಿದ್ದೆ. 'ನನ್ನನ್ನು ಹೇಗೆ ಕರೆಯುತ್ತಾರೆ?' ಎಂದು ಕೃಷ್ಣಪ್ಪ ಮತ್ತೆ ಪ್ರಶ್ನೆ ಹಾಕಿದ್ದರು. ಆಗಲೂ ಅವರ ಮನಸ್ಸಿನಲ್ಲಿ ಕಹಿ ಇರಲಿಲ್ಲ. ಅಥವಾ ಎಲ್ಲ ಕಹಿಯನ್ನು ನುಂಗುವ ವಿದ್ಯೆಯನ್ನು ಅವರಿಗೆ ಬೇಂದ್ರೆಯವರೇ ಕಲಿಸಿಕೊಟ್ಟಿರುವರೋ ಗೊತ್ತಿಲ್ಲ. ಯಾವುದೋ ಸಮ್ಮೇಳನದಲ್ಲಿ ಒಂದೇ ಒಂದು ಸಾರಿ ಭೇಟಿ ಮಾಡಿದ ಒಬ್ಬ ಕವಿಯ ಬಗ್ಗೆ ಹೀಗೆ ಹುಚ್ಚು ಹಚ್ಚಿಕೊಂಡು ಯಾವ ಅಪೇಕ್ಷೆಗಳೂ ಇಲ್ಲದೆ ಕೆಲಸ ಮಾಡಿದ ನಿದರ್ಶನ ನನಗಂತೂ ನೆನಪಿಲ್ಲ. ಇದಕ್ಕಿಂತ ದೊಡ್ಡ ಸಾಹಿತ್ಯ ಪರಿಚಾರಿಕೆ ಯಾವುದಾದರೂ ಇರಲು ಸಾಧ್ಯ ಎಂದೂ ಅನಿಸುತ್ತಿಲ್ಲ.

30-01-2011

# ಇತಿಹಾಸ ಬರೆಯಿತು

## ಬೆಂಗಳೂರು ಸಮ್ಮೇಳನ

ಇದು ಒಂದು ಇತಿಹಾಸ, ಬೆಂಗಳೂರಿನಲ್ಲಿ ಸಾಹಿತ್ಯ ಸಮ್ಮೇಳನ ಎಂದಾಗ ಅದು ಖಂಡಿತ ನಡೆಯುತ್ತದೆ ಯಶಸ್ವಿಯಾಗುವುದಿಲ್ಲ ಎಂದು ಬಾಜಿ ಕಟ್ಟಿದವರೇ ಹೆಚ್ಚು, ಬೇರೆ ಊರಿನಲ್ಲಿ ಸಮ್ಮೇಳನ ನಡೆದರೆ, ಊರಿನ ಮರ್ಯಾದೆ ಹೋಗುತ್ತದೆ ಎಂದು ಅಂಜಿ, ಅಳುಕಿ ಸಮ್ಮೇಳನದ ಯಶಸ್ಸಿಗೆ ದುಡಿಯುವವರ ಪಡೆಯೇ ಹುಟ್ಟಿಕೊಳ್ಳುತ್ತದೆ. ಅಲ್ಲಿನ ಮಠ ಮಾನ್ಯಗಳು ನೇತೃತ್ವ ವಹಿಸುತ್ತವೆ. ಬೆಂಗಳೂರಿನಲ್ಲಿ ಹಾಗೆ ಊರಿನ ಮರ್ಯಾದೆಗೆ ಹೆದರುವವರು ಯಾರು? ಹಾಗೆ ಹೆದರುತ್ತಿದ್ದರೆ ಚುನಾವಣೆ ನಡೆದಾಗಲೆಲ್ಲ ಕೇವಲ ಶೇ 40ರಷ್ಟು ಮಂದಿ ಮಾತ್ರ ಯಾಕೆ ಮತ ಚಲಾವಣೆ ಮಾಡುತ್ತಿದ್ದರು? ನಿಜ, ಬೆಂಗಳೂರು ಯಾರಿಗೆ ಸೇರಿದ್ದು ಎಂದು ಕೇಳಿದರೆ ಉತ್ತರ ಕೊಡುವುದು ಕಷ್ಟ. ನಾನಾ ಕಾರಣಗಳಿಂದಾಗಿ ಇಲ್ಲಿ ಕನ್ನಡಿಗರು ಅಲ್ಪಸಂಖ್ಯಾತರು. ಹೊರಗಿನ ಊರಿನಿಂದ ಬಂದವರಿಗೆ ಬೆಂಗಳೂರಿನ ಬಗ್ಗೆ ಪ್ರೀತಿ ಇರುವುದು ಕಷ್ಟ. ಅಂಥವರ ಸಂಖ್ಯೆಯೇ ಹೆಚ್ಚು! ಅಂಥ ಒಂದು ಕಡೆಯಲ್ಲಿ 40 ವರ್ಷಗಳ ಹಿಂದೆ ಸಮ್ಮೇಳನ ಸಂಘಟಿಸುವುದಕ್ಕೂ ಈಗ ಸಂಘಟಿಸುವುದಕ್ಕೂ ಅಂತರ ಬಹಳ. ಅದಕ್ಕಾಗಿಯೇ, ಗದಗ ಸಮ್ಮೇಳನದಲ್ಲಿ 'ಬೆಂಗಳೂರಿನಲ್ಲಿ ಮುಂದಿನ ಸಮ್ಮೇಳನ' ಎಂದು ಘೋಷಿಸಿದಾಗ ಮೇಲೆ ಏರಿದ ಹುಬ್ಬುಗಳು ಮೊನ್ನೆ ಸಮ್ಮೇಳನ ಮುಗಿಯುವ ವರೆಗೂ ಕೆಳಗೆ ಇಳಿದಿರಲಿಲ್ಲ!

ಫೆಬ್ರುವರಿ 4 ರಿಂದ 6 ರವರೆಗೆ ನಡೆದ 77ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ಮುಗಿಯಿತು. ಅರೆಕೊರೆಗಳು ಎಲ್ಲ ಕಡೆಯೂ ಇದ್ದೇ ಇರುತ್ತವೆ. ಇಲ್ಲಿಯೂ ಇದ್ದುವು. ಊಟದ್ದೇ ದೊಡ್ಡ ಸಮಸ್ಯೆ. ಅದಕ್ಕೆ ಪರದಾಟ ಮುಗಿಯುವುದೇ ಇಲ್ಲ. ಅನ್ನಬ್ರಹ್ಮನ ಅಗ್ನಿದಾಹವನ್ನು ತಣಿಸುವುದು ಯಾರಿಗೂ ಕಷ್ಟವೇ. ಗೋಷ್ಠಿಗಳ ವಿಷಯ ಇನ್ನಷ್ಟು ಉತ್ತಮವಾಗಿ ಇರಬಹುದಿತ್ತು ಎಂಬ ಆಕ್ಷೇಪವೂ ನಿಜವೇ. ಗದಗಿನಲ್ಲಿ ಇದ್ದ ಕನ್ನಡ ಸರಿಯಾಗಿ ಬಾರದ ನಿರೂಪಕರ ಹಾವಳಿ ಇಲ್ಲಿಯೂ ಮುಂದುವರಿದಿತ್ತು. ಅದು ಬಿಟ್ಟರೆ ಬೆಂಗಳೂರು ಸಮ್ಮೇಳನದ ಬಗ್ಗೆ ವಿಶೇಷ ದೂರುಗಳೇನೂ ಇರಲಿಲ್ಲ. ಮೊದಲ ದಿನ ಇದ್ದ ಸಂಭ್ರಮ ಕೊನೆಯ ದಿನದ ವರೆಗೂ ಇತ್ತು. ಒಂದು ಅಂದಾಜಿನ ಪ್ರಕಾರ ಮೂರೂ ದಿನಗಳ ಸಮ್ಮೇಳನಕ್ಕೆ ಬಂದ ಸಭಿಕರ ಸಂಖ್ಯೆ ಐದು ಲಕ್ಷ ದಾಟಿತ್ತು. ಇಷ್ಟು ಮಂದಿ ಕನ್ನಡಿಗರು ಎಲ್ಲಿ ಅಡಗಿದ್ದರು? ಬೆಂಗಳೂರು ಸಮ್ಮೇಳನ ಎಂದು ಅವರೆಲ್ಲ ಬಂದರೇ? ಅಥವಾ ಬೆಂಗಳೂರಿನ ಮೂಲೆ ಮೂಲೆಯ ಕನ್ನಡಿಗರ ಮನಸ್ಸಿನಲ್ಲಿ ಒಂದೇ ಸಾರಿ ಕನ್ನಡ ಪ್ರಜ್ಞೆ ಜಾಗೃತವಾಯಿತೇ? ಎರಡೂ ನಿಜ. ಮೊದಲ ದಿನ ನಾನು, ನನ್ನ ಸಂಪಾದಕರು ಮತ್ತು ಗೆಳೆಯ ಪೊನ್ನಪ್ಪ ಸಮ್ಮೇಳನಕ್ಕೆ ಹೋಗಿದ್ದೆವು. ಅಲ್ಲಿನ ಜನ ಜಾತ್ರೆ ನೋಡಿ ಸಂಪಾದಕರು, 'ಆಫೀಸ್ ಮರೆತು ಇಲ್ಲಿಯೇ ಇದ್ದು ಬಿಡೋಣ' ಎಂದರು. ಮನಸ್ಸು ಹಾಗೆ ತುಂಬಿ ಬರಲು ಪುಸ್ತಕದ ಮಳಿಗೆಗಳಲ್ಲಿ, ಸಭಾಂಗಣದಲ್ಲಿ, ರಸ್ತೆಗಳಲ್ಲಿ ತುಂಬಿ ತುಳುಕುತ್ತಿದ್ದ ಜನರ ಗಿಜಿ, ಗಿಜಿ, ವಾಹನಗಳ ಸಂದಣಿ, ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಕುಣಿಯುತ್ತಿದ್ದ ಕನ್ನಡಿಗರ ಸಂಭ್ರಮ. ಎಲ್ಲವೂ ಮೈ ತುಂಬಿ ಬರುವಂತೆ ಇತ್ತು. ಅದು ನಿಜಕ್ಕೂ ಕನ್ನಡದ ಹಬ್ಬ.

ಈ ಸಮ್ಮೇಳನದ ಮುಖ್ಯ ಯಶಸ್ಸು ದಾಖಲೆ ಪ್ರಮಾಣದಲ್ಲಿ ಆದ ಪುಸ್ತಕ ಮಾರಾಟದಲ್ಲಿ ಎದ್ದು ಕಂಡಿತು. ಪರಿಷತ್ತಿನ ಅಧ್ಯಕ್ಷ ನಲ್ಲೂರು ಪ್ರಸಾದ್ ಅವರ ಪ್ರಕಾರ ಒಂಬತ್ತು ಕೋಟಿ ರೂಪಾಯಿಗಳ ಪುಸ್ತಕಗಳು ಮಾರಾಟ ಆಗಿವೆ. ಪರಿಷತ್ತಿನ ಪ್ರಕಟಣೆಗಳ ಮಾರಾಟವೇ ಒಂಬತ್ತು ಲಕ್ಷ ರೂಪಾಯಿ ಮೀರಿದೆ. 'ಸಪ್ನ' ಮಳಿಗೆಯಲ್ಲಿ 11 ಲಕ್ಷ ರೂಪಾಯಿ ಮೊತ್ತದ ಪುಸ್ತಕಗಳು ಮಾರಾಟಗೊಂಡುವು. ಹಾಗಾದರೆ, ಕನ್ನಡ ಪುಸ್ತಕಗಳಿಗೆ ಬೇಡಿಕೆ ಇಲ್ಲ ಎಂಬುದು ಸುಳ್ಳೇ? ಸುಳ್ಳು ಎನಿಸುತ್ತದೆ. ಗುಣಮಟ್ಟದ ಪುಸ್ತಕಗಳಿಗೆ, ಒಂದೇ ಕಡೆ ಹಲವು ಬಗೆಯ ಪುಸ್ತಕಗಳ ಮಾರಾಟಕ್ಕೆ ವ್ಯವಸ್ಥೆ ಇದ್ದರೆ ಹಾಗೂ ಕನ್ನಡಿಗರ ಸಹಜ ಸ್ವಭಾವಕ್ಕೆ ಪೂರಕವಾಗಿ ರಿಯಾಯಿತಿ ಇದ್ದರೆ ಪುಸ್ತಕಗಳ ಮಾರಾಟ ಆಗಿಯೇ ಆಗುತ್ತದೆ. ಶೇ 50ರ ಸೋಡಿ ಇದ್ದರೆ 'ಮನಗಂಡ' ವ್ಯಾಪಾರ ಆಗುತ್ತದೆ ಎಂಬುದಕ್ಕೆ ಕನ್ನಡ ವಿಶ್ವವಿದ್ಯಾಲಯದ ಮಳಿಗೆಯೇ ಸಾಕ್ಷಿಯಾಗಿತ್ತು. ಹಾಗೆ ನೋಡಿದರೆ ನಮ್ಮ ಎಲ್ಲ ವಿಶ್ವವಿದ್ಯಾಲಯಗಳ ಪ್ರಸಾರಾಂಗಕ್ಕಿಂತ ಒಳ್ಳೆಯ ಗುಣಮಟ್ಟದ ಪುಸ್ತಕಗಳನ್ನು ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದೆ. ವಸ್ತು ಮತ್ತು ಉತ್ಪಾದನೆಯಲ್ಲಿ ಶ್ರೇಷ್ಠವಾಗಿದ್ದ ಅಲ್ಲಿನ ಎಲ್ಲ ಪುಸ್ತಕಗಳು ಕಡಲೆ ಪುರಿಯ ಹಾಗೆ ಮಾರಾಟವಾಗಿ ಹೋದುವು. ಆ ದೃಷ್ಟಿಯಿಂದ ಆ ವಿಶ್ವವಿದ್ಯಾಲಯ ಹಾಕಿದ ಮಾದರಿಯನ್ನು ಇತರ ವಿಶ್ವವಿದ್ಯಾಲಯಗಳ ಅನುಸರಿಸಬೇಕು. ಪ್ರಸಾರಾಂಗಗಳೂ ಪರಿಷತ್ತಿನ

ಪ್ರಕಟಣೆಗಳಿಗೂ, ಸುವರ್ಣ ಕರ್ನಾಟಕ ವರ್ಷದಲ್ಲಿ ಪ್ರಕಟಗೊಂಡ ಸರ್ಕಾರದ ಕನ್ನಡ ಪುಸ್ತಕಗಳಿಗೂ ಇದು ಅನ್ವಯಿಸುವ ಮಾತು. ಈ ಸಾರಿ ಸಮ್ಮೇಳನದಲ್ಲಿ ಆದ ಪುಸ್ತಕಗಳ ಭರ್ಜರಿ ಮಾರಾಟ ನೋಡಿ ಕನ್ನಡ ಪುಸ್ತಕ ಪ್ರಾಧಿಕಾರ ರಾಜ್ಯದ ಎಲ್ಲ ನಗರ-ಪಟ್ಟಣಗಳಲ್ಲಿ ಇದೇ ಬಗೆಯ ಪುಸ್ತಕ ಪ್ರದರ್ಶನ ಏರ್ಪಡಿಸಿದರೆ ಓದುವ ಹಸಿವಿನ ಕನ್ನಡಿಗ ಖಂಡಿತವಾಗಿಯೂ ಸಕಾರಾತ್ಮಕವಾಗಿಯೇ ಸ್ಪಂದಿಸುತ್ತಾನೆ. ಅದು ಕನ್ನಡ ಪುಸ್ತಕ ಪ್ರಕಾಶನಕ್ಕೆ ನವಚೈತನ್ಯವನ್ನೂ ತುಂಬುತ್ತದೆ.

ಬೆಂಗಳೂರು ಸಮ್ಮೇಳನ ಭಾವನಾತ್ಮಕವಾಗಿ ಕನ್ನಡಿಗರನ್ನು ಬಡಿದೆಬ್ಬಿಸಲು ರಾಜ್ಯಪಾಲರೂ ತಮ್ಮ ಕಾಣಿಕೆ ಸಲ್ಲಿಸಿದರು. ಅವರು ಏನು ಅಂದುಕೊಂಡಿದ್ದರೋ ಅಥವಾ ಅವರಿಗೆ ಅಧಿಕಾರಿಗಳು ತಪ್ಪು ಮಾಹಿತಿ ನೀಡಿದ್ದರೋ ಡಾ.ಎಂ.ಚಿದಾನಂದಮೂರ್ತಿ ಅವರಿಗೆ ಬೆಂಗಳೂರು ವಿಶ್ವವಿದ್ಯಾಲಯ ಕೊಡಲು ಬಯಸಿದ್ದ ಗೌರವ ಡಾಕ್ಟರೇಟ್‌ಗೆ ಸಮ್ಮತಿ ನೀಡಲು ನಿರಾಕರಿಸಿದರು. ಆಮೇಲೆ, 'ತಡೆ ಹಿಡಿಯಲಾಗಿತ್ತು' ಎಂದು ತಿದ್ದಿಕೊಂಡರು. ಅದು ಏನೇ ಇದ್ದರೂ ಮೂರ್ತಿಯವರ ಪರವಾಗಿ ಇಡೀ ಕನ್ನಡ ನಾಡು ನಿಂತ ಬಗೆ ಐತಿಹಾಸಿಕವಾದುದು. ಗಾತ್ರದಲ್ಲಿ ಚಿಕ್ಕವರಾದ ಮೂರ್ತಿಯವರ ಪ್ರತಿಮೆ' ಅಗಾಧವಾಗಿ ಎದ್ದು ನಿಂತಂತೆ ಭಾಸವಾಯಿತು. ಮೂರ್ತಿಯವರ ಜತೆಗೆ ಭಿನ್ನಾಭಿಪ್ರಾಯ ಇದ್ದವರೂ ರಾಜ್ಯಪಾಲರ ತೀರ್ಮಾನವನ್ನು ಉಗ್ರವಾಗಿ ಖಂಡಿಸಿದರು. ಅಷ್ಟು ಸಾಕಿತ್ತು ಇಡೀ ಸಮ್ಮೇಳನದಲ್ಲಿ ಕನ್ನಡ ಭಾವನೆ ಉದ್ದೀಪ್ತವಾಗಲು, ಒಬ್ಬ ವ್ಯಕ್ತಿಯ ಪರವಾಗಿ ಸಮ್ಮೇಳನ ನಿರ್ಣಯವನ್ನೇ ಅಂಗೀಕರಿಸಿತು. ಅಲ್ಲಿಗೆ ಒಂದು ಇತಿಹಾಸ ಸೃಷ್ಟಿಯಾಯಿತು. ರಾಜ್ಯಪಾಲರು ಮಣಿದರು. ಚಿದಾನಂದಮೂರ್ತಿಯವರು ಮಾಡಿದ ಅವಿಶ್ರಾಂತ, ನಿಷ್ಕಳಂಕ ಕನ್ನಡ ಸೇವೆ ಅವರ ಕೈ ಹಿಡಿಯಿತು.

ಬೆಂಗಳೂರು ಸಮ್ಮೇಳನ ಬರೀ ಒಕ್ಕಲಿಗರ ಸಮ್ಮೇಳನವಾಗಿತ್ತೇ? ಟಿ.ಎ.ನಾರಾಯಣಗೌಡರಿಗೆ ಮೆರವಣಿಗೆ ಸಮಿತಿ ಅಧ್ಯಕ್ಷರನ್ನಾಗಿ ಮಾಡಬೇಕಿತ್ತೇ? ಹೀಗಾದರೆ ಒಂದು ದಿನ ನಾರಾಯಣಗೌಡರು ಪರಿಷತ್ತಿನ ಅಧ್ಯಕ್ಷರೇ ಆಗಿ ಬಿಡಬಹುದೇ? ಇವು ಈ ಸಮ್ಮೇಳನ ಎತ್ತಿದ ಕೆಲವು ಪ್ರಶ್ನೆಗಳು, ಇದಕ್ಕೆ ಪರಿಷತ್ತು ಸಕಾರಣ ಉತ್ತರಗಳನ್ನೂ ಕೊಡಬಹುದು. ಅದು ಪ್ರಶ್ನೆ ಎತ್ತಿದವರಿಗೆ ಸಮಾಧಾನ ತರಬಹುದು. ತರದೆಯೂ ಇರಬಹುದು. ರಾಜಕಾರಣಿಗಳನ್ನು ಸಮ್ಮೇಳನದಿಂದ ದೂರ ಇಡಬೇಕೇ ಇಡಬಾರದೇ ಎಂಬ ಪ್ರಶ್ನೆಯ ಹಾಗೆಯೇ ಇದು ಕೂಡ. ಈ ಸಾರಿಯ ಸಮ್ಮೇಳನದ ಅಧ್ಯಕ್ಷರು, 'ರಾಜಕಾರಣಿಗಳನ್ನು ಏಕೆ ದೂರ ಇಡಬೇಕು' ಎಂಬ ಪ್ರಶ್ನೆ ಕೇಳಿದ್ದಾರೆ. ಬಹುಶಃ ಅದು ನಿಜ ಅನಿಸುತ್ತದೆ. ಈ ಪ್ರಶ್ನೆ ಪ್ರತಿ ಸಾರಿ ಸಮ್ಮೇಳನ ನಡೆದಾಗಲೂ ಎದ್ದಿದೆ. ಆದರೆ, ಕರ್ನಾಟಕದಲ್ಲಿ ರಾಜಕಾರಣಿಗಳನ್ನು ದೂರವಿಟ್ಟು ಸಮ್ಮೇಳನ ಮಾಡುವುದು ಸದ್ಯೋಭವಿಷ್ಯದಲ್ಲಿ ಸಾಧ್ಯವಿಲ್ಲ ಅನಿಸುತ್ತದೆ. ಆದರೆ, ಸಮ್ಮೇಳನದ ಅಧ್ಯಕ್ಷರು ಇದಕ್ಕಿಂತ ದೊಡ್ಡ ಕಾಳಜಿಯೊಂದನ್ನು ವ್ಯಕ್ತಪಡಿಸಿದ್ದಾರೆ. ಅದು ಪರಿಷತ್ತಿನ ಅಧ್ಯಕ್ಷತೆಯ ಚುನಾವಣೆಗೆ ಸಂಬಂಧಪಟ್ಟುದು. ಈಗ ಪರಿಷತ್ತಿನಲ್ಲಿ 1.20 ಲಕ್ಷ ಸದಸ್ಯರು ಇದ್ದಾರೆ. ಚುನಾವಣೆ ನಡೆಯುವಾಗ

ಅವರಿಗೆಲ್ಲ ಎರಡು ಸಾರಿ ಪತ್ರ ಬರೆದರೂ ಕನಿಷ್ಠ ಹತ್ತು ಲಕ್ಷ ರೂಪಾಯಿ ಖರ್ಚು ಆಗುತ್ತದೆ. ಇಷ್ಟು ಖರ್ಚು ಮಾಡಲು ಸಿದ್ಧರಾಗಿ ಯಾರಾದರೂ ಚುನಾವಣೆಗೆ ನಿಲ್ಲಲು ಆಗುತ್ತದೆಯೇ? ಹಣವಂತರು ಮಾತ್ರ ಚುನಾವಣೆಗೆ ನಿಂತರೆ ಪರಿಷತ್ತಿನ ಸಾಹಿತ್ಯ ಸ್ವರೂಪಕ್ಕೆ ಧಕ್ಕೆ ಆಗುತ್ತದೆಯೇ? ಅಥವಾ ಪರಿಷತ್ತಿನ ಮತದಾರರು ಅಭ್ಯರ್ಥಿಯ ಅರ್ಹತೆಯನ್ನು ಮಾತ್ರ ನೋಡಿ, ಪತ್ರ ಬರೆಯಲಿ ಬಿಡಲಿ, ಮತ ಹಾಕುವುದು ಒಳ್ಳೆಯದೇ? ಈಗಿನ ಅಧ್ಯಕ್ಷ ನಲ್ಲೂರು ಪ್ರಸಾದ್ ಅವರ ಪ್ರಕಾರ, 'ಪರಿಷತ್ತಿನ ಮತದಾರರಲ್ಲಿ ಅಂಥ ಜಾಗೃತಿ ಇದೆ. ಯಾರು ಯಾರೋ ಅಧ್ಯಕ್ಷರು ಆಗಲು ಇಲ್ಲಿ ಸಾಧ್ಯವಿಲ್ಲ.' ಯಾರು ಯಾರೋ ಅಧ್ಯಕ್ಷರಾಗಿ ಬಿಡಬಹುದು ಎಂಬ ಭಯ ಇರುವವರಿಗೆ ಇದು ಒಂದು ಅಭಯ! ಪರಿಷತ್ತಿನ ಅಧ್ಯಕ್ಷರ ಪಟ್ಟಿಯನ್ನು ನೋಡಿದರೆ ಈ ಅಭಯಕ್ಕೆ ಆಧಾರ ಇದೆ ಎಂದೇನೂ ಅನಿಸುವುದಿಲ್ಲ. ಚುನಾವಣೆ ಎಂಬುದು ಒಂದು ನಡೆಯುವಲ್ಲಿ ಇಂಥ ಆಭಾಸ, ಅಪಭ್ರಂಶಗಳಿಗೆ ಅವಕಾಶ ಇದ್ದೇ ಇರುತ್ತದೆ ಅನಿಸುತ್ತದೆ.

ಗದಗ ಸಮ್ಮೇಳನದಲ್ಲಿ ಅಧ್ಯಕ್ಷರಿಗೆ ದೊಡ್ಡ ಮೊತ್ತದ ಹಮ್ಮಿಣಿ ಸಲ್ಲಿಸಿದ ನಂತರ ಸೃಷ್ಟಿಯಾದ ಆಭಾಸ ಇಲ್ಲಿ ಆಗಲಿಲ್ಲ ಎಂಬುದೊಂದೇ ಸಮಾಧಾನ. ಪರಿಷತ್ತಿನ ಅಧ್ಯಕ್ಷರು ತಕ್ಷಣ ಮುತುವರ್ಜಿ ವಹಿಸಿದ್ದೂ ಇದಕ್ಕೆ ಕಾರಣವಿರಬೇಕು. ಆದರೆ, ಮುಖ್ಯಮಂತ್ರಿಗಳು ಉದ್ಘಾಟನಾ ಸಮಾರಂಭದಲ್ಲಿ 25 ಕೋಟಿ ರೂಪಾಯಿ ವೆಚ್ಚದಲ್ಲಿ ಭುವನೇಶ್ವರಿ ಪ್ರತಿಮೆ ನಿರ್ಮಿಸುವ ಪ್ರಕಟಣೆ ಮಾಡಿದ್ದು ಕೊಂಚ ಅತ್ಯುತ್ಸಾಹದ ಮಾತು. ಅದು ಆಗುವ ಹೋಗುವ ಕೆಲಸವಲ್ಲವಾದ್ದರಿಂದ ಭುವನೇಶ್ವರಿ ನೆಮ್ಮದಿಯಿಂದ ಇರಬಹುದು! ಕನ್ನಡದ ಹೆಸರಾಂತ ಕವಿಗಳ, ಲೇಖಕರ ಕೃತಿಗಳನ್ನು ಕಡಿಮೆ ಬೆಲೆಗೆ ಕನ್ನಡಿಗರ ಮನೆ ಮನೆಗೆ ತಲುಪಿಸಿ ಅವರ ಮನಸ್ಸಿನಲ್ಲಿ ತಾಯಿ ಭುವನೇಶ್ವರಿಯ ಪ್ರತಿಮೆ' ನೆಲೆಗೊಳಿಸುವಂತೆ ಮಾಡುವುದೇ ಇದಕ್ಕಿಂತ ದೊಡ್ಡ ಕೆಲಸ. 25 ಕೋಟಿ ರೂಪಾಯಿ ವೆಚ್ಚದಲ್ಲಿ ಆ ಕೆಲಸವನ್ನು ಸರ್ಕಾರ ಖಂಡಿತ ಮಾಡಬಹುದು. ಬೆಳಗಾವಿ ವಿಶ್ವ ಕನ್ನಡ ಸಮ್ಮೇಳನದ ವೇಳೆಯಲ್ಲಿ ವಸ್ತು ಮತ್ತು ಗುಣಮಟ್ಟದ ದೃಷ್ಟಿಯಿಂದ ಉತ್ತಮ ಪುಸ್ತಕಗಳು ಕನ್ನಡಿಗರಿಗೆ ಸಿಕ್ಕಾವು ಎಂಬ ಆಸೆ ಅತಿಯಾದುದೇನೂ ಆಗಿರಲಿಕ್ಕಿಲ್ಲ.

ಬೆಂಗಳೂರಿನ ಸಮ್ಮೇಳನ ಕನ್ನಡಿಗರಲ್ಲಿ ಈಗ ಮೂಡಿಸಿರುವ ಜಾಗೃತಿ, ಅಭಿಮಾನ ಒಂದು ತಾತ್ಕಾಲಿಕ ಗುಳ್ಳೆ ಎಂದು ಅನಿಸಬಾರದು. ಹಾಗೆ ಅನಿಸಬಾರದು ಎನ್ನುವುದಾದರೆ ಮತ್ತೆ ಮತ್ತೆ ರಾಜಧಾನಿಯಲ್ಲಿ ಸಮ್ಮೇಳನ ನಡೆಯುವಂತೆ ಆಗಬೇಕು... ಗಂಗಾವತಿಯಲ್ಲಿ 78ನೇ ಸಮ್ಮೇಳನ ನಡೆಸುವುದಕ್ಕಿಂತ ಮುಂಚೆಯೇ ಈಗಿನ ಪದಾಧಿಕಾರಿಗಳ ಅಧಿಕಾರ ಅವಧಿ ಮುಗಿಯುತ್ತದೆ. ಆರು ತಿಂಗಳು ಅಧಿಕಾರ ಮುಂದುವರಿಸಿಕೊಂಡು ಮುಂದಿನ ಸಮ್ಮೇಳನ ನಡೆಸಲು ಅವರ ಮೇಲೆ ಒತ್ತಡ ಇದೆ. ಅವರು ಏನು ಮಾಡುತ್ತಾರೆ ತಿಳಿಯದು. ಆದರೆ, ಬೆಂಗಳೂರು ಸಮ್ಮೇಳನದ ಯಶಸ್ಸಿಗಾಗಿ ದುಡಿದ ನಲ್ಲೂರು ಪ್ರಸಾದ್ ಮತ್ತು ಅವರ ತಂಡಕ್ಕೆ ಅಭಿನಂದನೆ ಸಲ್ಲಬೇಕು.

13-02-2011

# ವಿವಾದದ ನಡುವೆ ವಿಶ್ವ ಕನ್ನಡ

# ಮೇಳ ನರಳುವುದು ಬೇಡ

ನಾವು ಯಾವುದನ್ನೂ ವಿವಾದವಿಲ್ಲದೆ ಮಾಡುವುದು ಸಾಧ್ಯವಿಲ್ಲ ಅನಿಸುತ್ತದೆ. ವಿಶ್ವ ಕನ್ನಡ ಸಮ್ಮೇಳನಕ್ಕೂ ಈಗ ವಿವಾದದ ಗ್ರಹಣ ಹಿಡಿದಿದೆ. ಕೆಲವು ವಿವಾದಗಳು ವ್ಯಕ್ತವಾಗಿವೆ. ಕೆಲವು ಅವ್ಯಕ್ತವಾಗಿವೆ. ವ್ಯಕ್ತವಾದ ವಿವಾದಗಳನ್ನು ಹೇಗಾದರೂ ಬಗೆಹರಿಸಬಹುದು, ಆದರೆ ಮಸಲತ್ತಿನಂಥ ಅವ್ಯಕ್ತ ವಿವಾದಗಳು ಸಮ್ಮೇಳನದ ಯಶಸ್ಸಿನ ಮೇಲೆ ಕಪ್ಪು ನೆರಳು ಕವಿಯುವಂತೆ ಮಾಡಿವೆ. ಈ ತಿಂಗಳು 11 ರಿಂದ ಮೂರು ದಿನಗಳ ಕಾಲ ನಡೆಯುವ ಸಮ್ಮೇಳನದ ಆಮಂತ್ರಣ ಪತ್ರ ಇನ್ನೂ ಸಿದ್ಧವಾಗಿಲ್ಲ, ಸಿದ್ಧವಾಗಿದ್ದರೂ ಅದು ಬಹಿರಂಗವಾಗಿಲ್ಲ. ಅದು ಬಹಿರಂಗವಾಗುವ ವರೆಗೆ ಸಮ್ಮೇಳನದ ಸ್ವರೂಪ ಹೇಗಿರುತ್ತದೆ ಎಂಬುದನ್ನು ತಿಳಿಯುವುದು ಕಷ್ಟ. ಸಮ್ಮೇಳನದ ಉದ್ಘಾಟಕರ ವಿಚಾರವೇ ಈಗ ತೀವ್ರ ವಿವಾದಕ್ಕೆ ಎಡೆ ಮಾಡಿದೆ. ಇನ್ಫೋಸಿಸ್‌ನ ಸ್ಥಾಪಕ ಮುಖ್ಯಸ್ಥ ಎನ್.ಆರ್.ನಾರಾಯಣಮೂರ್ತಿ ಅವರು ಇಂಗ್ಲಿಷ್ ಮಾಧ್ಯಮದ ಪರವಾಗಿ ಇದ್ದಾರೆ ಎಂಬ ಕಾರಣಕ್ಕಾಗಿ ಅವರಿಗೆ ಈ ಗೌರವ ಕೊಡಬಾರದು ಎಂಬ ವಾದ ಹುಟ್ಟಿಕೊಂಡಿದೆ. ಕೆಲವು ವರ್ಷಗಳ ಹಿಂದೆ ಯಾವ

ಮಾಧ್ಯಮದಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಬೇಕು ಎಂಬ ವಿಚಾರದ ಚರ್ಚೆ ನಡೆದಾಗ ಅನೇಕ ಸಾಹಿತಿಗಳು ಅದರಲ್ಲಿಯೂ ದಲಿತ ಸಾಹಿತಿಗಳು ಇಂಗ್ಲಿಷ್ ಮಾಧ್ಯಮದಲ್ಲಿಯೇ ಶಿಕ್ಷಣ ಕೊಡಬೇಕು ಎಂಬ ವಾದ ಮುಂದೆ ಇಟ್ಟಿದ್ದರು. ಹಾಗಾದರೆ ಆ ಎಲ್ಲ ಸಾಹಿತಿಗಳಿಗೆ ಸಮ್ಮೇಳನದಲ್ಲಿ ಭಾಗವಹಿಸುವ ಅವಕಾಶ ಇರಬಾರದೇ? ಅನಂತಮೂರ್ತಿಯವರು ಗೋಕಾಕ್ ಚಳವಳಿಯನ್ನು 'ಸಮೂಹ ಸನ್ನಿ' ಎಂದಿದ್ದರು. ಮೂರ್ತಿಯವರು ನಂತರ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೇ ಆದರು. ಕನ್ನಡ ಮಾಧ್ಯಮದಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಬೇಕು ಎಂಬುದು ನಿರ್ವಿವಾದದ ಸಂಗತಿಯಾದರೂ ಆ ವಾದವನ್ನು ಮುಂದೆ ಇಡುತ್ತಿರುವ ಸಾಹಿತಿಗಳು ಮತ್ತು ಕನ್ನಡ ಚಳವಳಿಗಾರರು ವೈಯಕ್ತಿಕವಾಗಿ ಅಪ್ರಾಮಾಣಿಕರು ಎಂಬ ಭಾವನೆ ಜನಜನಿತವಾಗಿದೆ. ಈ ವಾದ ಮಾಡುವ ಎಷ್ಟು ಜನ ಸಾಹಿತಿಗಳು ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗಳಿಗೆ ಕಳುಹಿಸಿದ್ದಾರೆ ಎಂಬುದೇ ಆ ನೈತಿಕ ಪ್ರಶ್ನೆ, ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗೆ ಕಳಿಸಿ ಬೇರೆಯವರ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದಿಸಿ ಎಂದು ಹೇಳುವುದು ತಮ್ಮ ಮಕ್ಕಳಿಗೆ ಸಿಕ್ಕ ಫಾಯ್ದೆಯನ್ನು ಇತರರ ಮಕ್ಕಳಿಗೆ ವಂಚಿಸುವ ಹುನ್ನಾರ ಎಂಬ ವಿಚಿತ್ರ ವಾದವೂ ಚಾಲ್ತಿಯಲ್ಲಿ ಇದೆ. ಹಾಗಾಗಿ ಇಂಗ್ಲಿಷ್ ಮಾಧ್ಯಮದ ಪರವಾಗಿ ಇರುವುದು ದೊಡ್ಡ ಅಪರಾಧ ಎಂದು ಹೇಳುವ ಸ್ಥಿತಿಯಲ್ಲಿ ಈಗ ಯಾರೂ ಇಲ್ಲ.

ವಿಶ್ವ ಕನ್ನಡ ಸಮ್ಮೇಳನದಲ್ಲಿ ಬರೀ ಭಾಷೆಯ ವಿಚಾರ ಮಾತ್ರ ಚರ್ಚೆ ಆಗುತ್ತದೆಯೇ? ಆಗಬಾರದು. ಭಾಷೆಯನ್ನು ಮುಂದೆ ಇಟ್ಟುಕೊಂಡು ಒಟ್ಟು ನಾಡಿನ ಪ್ರಗತಿಯ ಬಗ್ಗೆ ಚರ್ಚೆ ಆಗಬೇಕು. ಸಾಹಿತ್ಯ ಸಮ್ಮೇಳನಕ್ಕೂ ವಿಶ್ವ ಕನ್ನಡ ಸಮ್ಮೇಳನಕ್ಕೂ ಇರುವ ವ್ಯತ್ಯಾಸವೇ ಅದು. ವಿಪ್ರೊ ಸಂಸ್ಥೆಯ ಮುಖ್ಯಸ್ಥರ ಹಾಗೆ ನಾರಾಯಣಮೂರ್ತಿಯವರು ಸಾಮಾಜಿಕ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸದೇ ಇದ್ದರೂ ಅವರು ಕರ್ನಾಟಕದ ಹೆಮ್ಮೆಯನ್ನು ಇಡೀ ಜಗತ್ತಿನಲ್ಲಿ ಎತ್ತಿ ಹಿಡಿದಿಲ್ಲವೇ? ನಾನು ನಾರಾಯಣಮೂರ್ತಿ ಅವರ ಪರವಾಗಿ ವಾದ ಮಾಡುತ್ತಿಲ್ಲ. ಕಲಿಕೆಯ ಮಾಧ್ಯಮದ ಬಗೆಗಿನ ಮೂರ್ತಿಯವರ ಅಭಿಪ್ರಾಯವನ್ನು ಬದಿಗಿಟ್ಟು ಒಟ್ಟು ನಾಡಿಗೆ ಅವರ ಕೊಡುಗೆಯೇನು ಎಂಬುದನ್ನು ಗಣಿಸುವುದು ಮುಖ್ಯ ಎನಿಸುತ್ತದೆ. ಆ ದೃಷ್ಟಿಯಿಂದಲೇ ಸರ್ಕಾರ ನಾರಾಯಣಮೂರ್ತಿ ಅವರನ್ನು ಆಯ್ಕೆ ಮಾಡಿದಂತೆ ಕಾಣುತ್ತದೆ. ಅಥವಾ ನಾರಾಯಣಮೂರ್ತಿಯವರ ಜಾಗತಿಕ ವರ್ಚಸ್ಸನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಸಮ್ಮೇಳನಕ್ಕೆ ಪ್ರಚಾರ ದೊರಕಿಸುವ ಉದ್ದೇಶವೂ ಅವರಿಗೆ ಕೊಟ್ಟ ಆಹ್ವಾನದ ಹಿಂದೆ ಕೆಲಸ ಮಾಡಿರಬಹುದು.

ಆದರೂ ನಾರಾಯಣಮೂರ್ತಿ ಅವರಿಗಿಂತ ಡಾ.ಸಿ.ಎನ್.ಆರ್.ರಾವ್ ಅವರಿಗೆ ಇಂಥ ಸಮ್ಮೇಳನ ಉದ್ಘಾಟಿಸಲು ಹೆಚ್ಚಿನ ಅರ್ಹತೆ ಇದೆ ಎಂದು ವಾದಿಸುವವನು ನಾನು. ರಾವ್ ಅವರು ಕನ್ನಡದಲ್ಲಿಯೇ ಓದಿದವರು. ನೊಬೆಲ್ ಪ್ರಶಸ್ತಿಗೆ ಹತ್ತಿರವಾದ ಬಹುತೇಕ ಎಲ್ಲ ಪ್ರಶಸ್ತಿಗಳನ್ನು ಮುಡಿಗೆ ಏರಿಸಿಕೊಂಡವರು. ಐ.ಟಿ, ಬಿ.ಟಿಗಿಂತ ಶುದ್ಧ ವಿಜ್ಞಾನದ ಕಲಿಕೆಯ ಅಗತ್ಯವನ್ನು ಹೋಗಿಬಂದಲ್ಲೆಲ್ಲ ಒತ್ತು ಕೊಟ್ಟು ಹೇಳಿದವರು.

ಅವರನ್ನು ಕರೆಯಬೇಕು ಎಂದು ಯಾರಿಗೂ ಏಕೆ ಅನಿಸಲಿಲ್ಲವೋ? ಅವರ ಹಾಗೆಯೇ ಕನ್ನಡ ಮಾಧ್ಯಮದಲ್ಲಿ ಓದಿ ಬಾಹ್ಯಾಕಾಶ ಕ್ಷೇತ್ರದಲ್ಲಿ ಹೆಸರು ಮಾಡಿದ ಯು.ಆರ್.ರಾವ್ ಅವರಿಗೆ ಕೂಡ ಸಮ್ಮೇಳನ ಉದ್ಘಾಟಿಸುವ ಅರ್ಹತೆ ಇತ್ತು. ರಾಹುಲ್ ದ್ರಾವಿಡ್ ಕನ್ನಡಿಗರಾದರೂ ಅವರ ಮಾತೃಭಾಷೆ ಕನ್ನಡವಲ್ಲ. ಅವರು ಕನ್ನಡದಲ್ಲಿ ಅಷ್ಟು ಸರಾಗವಾಗಿ ಮಾತನಾಡುವುದೂ ಇಲ್ಲ. ಆದರೆ, ಅನಿಲ ಕುಂಬ್ಳೆ ಅವರನ್ನು ಕರೆಯಬಹುದಿತ್ತಲ್ಲ? ಕ್ರಿಕೆಟ್‌ನಲ್ಲಿ ಅವರ ಸಾಧನೆಯೇನು ಕಡಿಮೆಯಲ್ಲ. ಹೀಗೆ ಭಿನ್ನ ಕ್ಷೇತ್ರಗಳ ಸಾಧನೆಯನ್ನು ಗುರುತಿಸಿದಾಗಲೇ ಮೇಳಕ್ಕೆ ಒಂದು ಘನತೆ ಬರುತ್ತದೆ. ಅದು ಎಲ್ಲ ಕ್ಷೇತ್ರಗಳನ್ನು ಒಳಗೊಳ್ಳುವ ವ್ಯಾಪ್ತಿಯನ್ನೂ ಪಡೆಯುತ್ತದೆ. ಒಟ್ಟು ಕನ್ನಡದ ಬದುಕನ್ನು, ಹೆಮ್ಮೆಯನ್ನು ವಿಶ್ವದ ಮುಂದೆ ಇಡಲು ಸಾಧ್ಯವಾಗುತ್ತದೆ. ಈಗ ಉದ್ಘಾಟನೆ ಸಮಾರಂಭ ಒತ್ತಟ್ಟಿಗಿರಲಿ, ಗೋಷ್ಠಿಗಳಲ್ಲಿಯಾದರೂ ಹೀಗೆ ಭಿನ್ನ ಕ್ಷೇತ್ರದವರು ಇದ್ದಾರೆಯೋ ಇಲ್ಲವೋ ತಿಳಿಯದು. ಹಾಗೆ ಇರದೇ ಬರೀ ಸಾಹಿತಿಗಳೇ ತುಂಬಿದ್ದರೆ ಅದು ಒಂದು ರೀತಿಯ ಸಾಹಿತ್ಯದ ದಬ್ಬಾಳಿಕೆಯಂತೆ ಆಗುತ್ತದೆ.

ಇಂಥ ಒಂದು ಸಮ್ಮೇಳನವನ್ನು ಸರ್ಕಾರ ಮಾಡಲು ಹೊರಟಾಗ ಅದಕ್ಕೆ ಅನೇಕ ಮಿತಿಗಳು ಹುಟ್ಟಿಕೊಳ್ಳುತ್ತವೆ. ಆ ಮಿತಿಗಳಲ್ಲಿ ರಾಜಕೀಯವೇ ದೊಡ್ಡ ಮಿತಿ, ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಮಹಾರಾಷ್ಟ್ರದವರು ಇರಬಹುದು. ಆದರೆ, ಅವರು ಬೆಳಗಾವಿಯ ಸಮ್ಮೇಳನಕ್ಕೆ ಬಂದು ಮರಾಠಿ ಪರವಾಗಿ ಮಾತನಾಡುತ್ತಿದ್ದರು ಎಂದು ಅನಿಸುವುದಿಲ್ಲ. ಅವರು ಮರಾಠಿ ಹೆಣ್ಣುಮಗಳು ಎಂಬ ಕಾರಣಕ್ಕಾಗಿಯೇ ಅವರ ಹೆಸರು ಬಿಟ್ಟು ಹೋಯಿತು. ಪ್ರಧಾನಿಯವರ ವೇಳೆಯೂ ಸಿಗಲಿಲ್ಲ. ಈಗ ನಾರಾಯಣಮೂರ್ತಿ ಅವರ ಹೆಸರು ನಿರ್ಧಾರವಾಗಿದೆ. ಅದರ ಸುತ್ತ ವಿವಾದ ಹುತ್ತಗಟ್ಟಿದೆ. ಸಮ್ಮೇಳನ ಉದ್ಘಾಟನೆ ದಿನ ಏನಾಗುತ್ತದೆ ಗೊತ್ತಿಲ್ಲ. ಇಂಥ ಏನಾದರೂ ಒಂದನ್ನು ನೆಪವಾಗಿ ಇಟ್ಟುಕೊಂಡು ಕಾಲು ಕೆದರಿ ಗಲಭೆ ಮಾಡಬೇಕು ಎನ್ನುವವರು ಕಿರಿಕಿರಿ ಮಾಡಬಹುದು ಎಂಬ ಆತಂಕ ಕಾಡುತ್ತಿದೆ. ಅದರ ಮೊಳಕೆಗಳು ಈಗ ಕಾಣುತ್ತಿವೆ. ಇದು ಬರೀ ಉದ್ಘಾಟನೆಗೆ ಮಾತ್ರ ಕಾಡುವ ಆತಂಕವಲ್ಲ. ಸಮ್ಮೇಳನದ ಒಟ್ಟು ಸಂಘಟನೆ ಹಲವರ ಕೈಗೆ ಸಿಕ್ಕಿ ಹಣ್ಣುಗಾಯಿ ನೀರುಗಾಯಿ ಆಗಿದೆ. ಪ್ರಭಾಕರ ಕೋರೆ, ಉಮೇಶ ಕತ್ತಿ ಮತ್ತು ಗೋವಿಂದ ಕಾರಜೋಳ ಅವರ ನಡುವಿನ ತಿಕ್ಕಾಟದಿಂದಾಗಿ ಸಮ್ಮೇಳನದ ಉಸ್ತುವಾರಿಗೆ ಐ.ಎಂ.ವಿಠಲಮೂರ್ತಿಯವರು ವಿಶೇಷ ಅಧಿಕಾರಿಯಾಗಿ ನೇಮಕವಾಗಿದ್ದಾರೆ. ಅವರು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಬಹಳ ನಿಕಟವಾದವರು ಎಂಬ ಕಾರಣಕ್ಕಾಗಿಯೇ ಮೂಲೆಗುಂಪಾದವರು. ಇದ್ದಕ್ಕಿದ್ದಂತೆ ಅವರಿಗೆ, ಅದೂ ಕೊನೆ ಗಳಿಗೆಯಲ್ಲಿ ಇಷ್ಟು ದೊಡ್ಡ ಸಮ್ಮೇಳನವನ್ನು ಯಶಸ್ವಿಯಾಗಿ ಸಂಘಟಿಸುವ ಶಕ್ತಿ ಇದೆ ಎಂದು ಸರ್ಕಾರಕ್ಕೆ ಏಕೆ ಅನಿಸಿತು ಎಂಬುದು ಅವರನ್ನು ಮೂಲೆಗುಂಪು ಮಾಡಿದಷ್ಟೇ ನಿಗೂಢವಾಗಿದೆ!

ಹಲವರು ಸೇರಿ ಮಾಡಿದ ಅಡುಗೆಗೆ ರುಚಿ ಸೇರಿಸುವ ಹೊಣೆಯನ್ನು ಈಗ ವಿಠಲಮೂರ್ತಿ ತಮ್ಮ ಹೆಗಲಿಗೆ ಏರಿಸಿಕೊಂಡಿದ್ದಾರೆ. ಅಡುಗೆಯ ಗತಿ ಏನಾಗಿರಬಹುದು ಎಂಬುದಕ್ಕೆ ಗೋಷ್ಠಿಗಳ ಆಯ್ಕೆಯಲ್ಲಿ ಆಗಿರುವ ಅವಾಂತರ ಸಾಕ್ಷಿ

ಎಂಬ ಪಿಸುಮಾತು ಈಗಾಗಲೇ ಸಾರಸ್ವತ ಲೋಕದಲ್ಲಿ ಚಾಲನೆ ಪಡೆದಿದೆ. ಪಾಟೀಲ ಪುಟ್ಟಪ್ಪ ಅವರು ಸಮ್ಮೇಳನದ ಗೋಷ್ಠಿಗೆ ಬರುವವರ ಆಯ್ಕೆಯಲ್ಲಿ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಮುಖ್ಯಮಂತ್ರಿಗಳಿಗೆ ದೂರಿದ್ದರು. ಈಗ ಸಮಾರೋಪ ಸಮಾರಂಭದಲ್ಲಿ ಪುಟ್ಟಪ್ಪನವರ ಹೆಸರು ಸೇರಿದೆ. ಅದು ಬರೀ ತೇಪೆ ಕೆಲಸವೇ ಅಥವಾ ಒಟ್ಟಾರೆಯಾಗಿ ಗೋಷ್ಠಿಗಳಲ್ಲಿ ಕರ್ನಾಟಕದ ಎಲ್ಲ ಭಾಗಗಳಿಗೆ ಪ್ರಾತಿನಿಧ್ಯ ಸಿಕ್ಕಿದೆಯೇ ಗೊತ್ತಿಲ್ಲ.

ವಿಶ್ವ ಕನ್ನಡ ಸಮ್ಮೇಳನ 21 ವರ್ಷಗಳ ನಂತರ ನಡೆಯುತ್ತಿದೆ. ಇದು ನಮ್ಮ ಪರಿಕಲ್ಪನೆಯಲ್ಲ. ವಿಶ್ವ ತೆಲುಗು ಸಮ್ಮೇಳನ ಮತ್ತು ಅದರ ಮಾದರಿಯಲ್ಲಿ ನಡೆದ ವಿಶ್ವ ತಮಿಳು ಸಮ್ಮೇಳನದ ನಂತರ 1985ರಲ್ಲಿ ಮೈಸೂರು ನಗರದಲ್ಲಿ ಇಂಥ ಒಂದು ಸಮ್ಮೇಳನ ನಡೆದಿತ್ತು. ಅದಕ್ಕೆ ಬೀಜ ಬಿದ್ದುದು 1979ರಲ್ಲಿ ಧರ್ಮಸ್ಥಳದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮಯದಲ್ಲಿ, ಆಗ ದೇವರಾಜ ಅರಸು ಮುಖ್ಯಮಂತ್ರಿ ಸಾಹಿತ್ಯ ಸಮ್ಮೇಳನದ ಜತೆಗೆ ವಿಶ್ವ ಕನ್ನಡ ಸಮ್ಮೇಳನವೂ ನಡೆಯಬೇಕು ಎಂದು ಅವರ ತಲೆಯಲ್ಲಿ ತುಂಬಿದವರು ಕನ್ನಡ ಸಾಹಿತ್ಯ ಪರಿಷತ್ತಿನ ಆಗಿನ ಅಧ್ಯಕ್ಷ ಡಾ.ಹಂಪನಾ, ಸಮ್ಮೇಳನ ಒಂದು ಸ್ವರೂಪ ಪಡೆಯುವ ವೇಳೆಗೆ ಅರಸು ಅಧಿಕಾರ ಕಳೆದುಕೊಂಡರು. ಅದೇ ವರ್ಷದ ಕೊನೆಯಲ್ಲಿ ತಿಪಟೂರಿನಲ್ಲಿ ವಿದ್ವಾಂಸ ಕೆ.ವೆಂಕಟರಾಮಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ತುಮಕೂರು ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಆಗಿನ ಮುಖ್ಯಮಂತ್ರಿ ಆರ್.ಗುಂಡುರಾವ್ ಬಂದಿದ್ದರು. ಹಂಪನಾ ಮತ್ತೆ ಆ ವಿಚಾರ ಪ್ರಸ್ತಾಪಿಸಿದರು. ಸ್ಥಳದಲ್ಲೇ ತೀರ್ಮಾನ ಪ್ರಕಟಿಸುವುದರಲ್ಲಿ ನಿಸ್ಸಿಮರಾಗಿದ್ದ ಗುಂಡುರಾವ್ 'ತಥಾಸ್ತು' ಎಂದರು. ಸಮ್ಮೇಳನ ನಡೆಯುವಾಗ ಅವರೂ ಮುಖ್ಯಮಂತ್ರಿ ಆಗಿರಲಿಲ್ಲ. ರಾಮಕೃಷ್ಣ ಹೆಗಡೆ ಅಧಿಕಾರಕ್ಕೆ ಬಂದಿದ್ದರು. ಮೈಸೂರು ಅರಮನೆಯನ್ನು ಹಿನ್ನೆಲೆಯಾಗಿ ಇಟ್ಟುಕೊಂಡಿದ್ದ ಭವ್ಯ ಮಂಟಪದಲ್ಲಿ ಆಗ ನಡೆದ ವಿಶ್ವ ಕನ್ನಡ ಸಮ್ಮೇಳನದ ಉದ್ಘಾಟನೆಗೆ ಬಂದವರು ರಾಷ್ಟ್ರಕವಿ ಕುವೆಂಪು ಮತ್ತು ಕಡಲ ತೀರದ ಭಾರ್ಗವ ಶಿವರಾಮ ಕಾರಂತ. ಅವರಿಬ್ಬರೂ ಒಂದೇ ವೇದಿಕೆಯಲ್ಲಿ ಸೇರದೇ ದಶಕಗಳೇ ಆಗಿದ್ದುವು. ಸಮ್ಮೇಳನದಲ್ಲಿ ಸೇರಿದ ಸಹಸ್ರಾರು ಕನ್ನಡಿಗರಿಗೆ ಅವರನ್ನು ಜತೆಯಾಗಿ ನೋಡುವುದಕ್ಕಿಂತ ದೊಡ್ಡ ಸಂಭ್ರಮ ಮತ್ತೊಂದು ಇರಲಿಲ್ಲ. ಆ ದೃಷ್ಟಿಯಿಂದ ಆ ಸಮ್ಮೇಳನದ್ದು ದೊಡ್ಡ ಯಶಸ್ಸು. ಅಂಥ ಶಿಖರ ವ್ಯಕ್ತಿಗಳು, ಸಾಹಿತಿಗಳು ಈಗ ಇಲ್ಲದೇ ಇರುವುದು ಒಂದು ಕೊರತೆ.

ಆಗಲೂ ವಿವಾದ ಇರಲಿಲ್ಲ ಎಂದು ಅಲ್ಲ. ಆಗ ರಾಜ್ಯದ ಬಹುತೇಕ ಭಾಗದಲ್ಲಿ ಬರ ಬಿದ್ದಿತ್ತು. ಬರ ಬಿದ್ದಾಗ ಸಮ್ಮೇಳನ ನಡೆಯಬೇಕೇ ಎಂದು ಕೆಲವರು ಆಕ್ಷೇಪಿಸಿದರು. ಕಾರಂತರು ಸಮ್ಮೇಳನದ ವೇದಿಕೆಯಿಂದ 'ಬರ ಬಿದ್ದಿದೆ ಎಂದು ಯಾರಾದರೂ ಮಸಾಲೆ ದೋಸೆ ತಿನ್ನುವುದನ್ನು ಬಿಟ್ಟಿದ್ದಾರೆಯೇ' ಎಂದರು. ಅದೇ ದೊಡ್ಡ ಸುದ್ದಿಯಾಯಿತು. ಕಾರಂತರನ್ನು 'ಮಸಾಲೆ ದೋಸೆ ಸಾಹಿತಿ' ಎಂದು ಅಣಕಿಸಿದ್ದು ಆಗಲೇ! ಆದರೆ, ಆ ಸಮ್ಮೇಳನದಲ್ಲಿ ಕನ್ನಡದ ನೂರು ಪ್ರಾತಿನಿಧಿಕ

ಕೃತಿಗಳನ್ನು ತುಂಬ ಅಚ್ಚುಕಟ್ಟಾಗಿ ಸುಲಭ ಬೆಲೆಯಲ್ಲಿ ಪ್ರಕಟಿಸಲಾಯಿತು. (ಈ ಸಾರಿಯೂ ನೂರು ಮೇರು ಕೃತಿಗಳನ್ನು 36 ಜನಪದ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮೈಸೂರಿನಲ್ಲಿ ಭವ್ಯ ಕಲಾಭವನಕ್ಕೆ ಶಂಕು ಸ್ಥಾಪನೆಯೂ ಆಯಿತು. ಆ ಕಲಾಭವನ ಈಗ ಮೈಸೂರಿನ ಎಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಒಂದು ವೇದಿಕೆಯಾಗಿದೆ. ಬೆಳಗಾವಿಯಲ್ಲಿ ಕನ್ನಡದ ವರ್ಚಸ್ಸನ್ನು ಹೆಚ್ಚಿಸಲು ಈ ಸಾರಿಯ ವಿಶ್ವ ಕನ್ನಡ ಮೇಳ ನಡೆಯುತ್ತಿದೆ. ಅದು ಆ ಭಾಗದ ಕೆಲವರು ಮರಾಠಿ ಧುರೀಣರ ಹೊಟ್ಟೆಯುರಿಗೂ ಕಾರಣವಾಗಬಹುದು. ವೈಯಕ್ತಿಕವಾಗಿ ಅಲ್ಲಿನ ಸಾಮಾನ್ಯ ಮರಾಠಿಗರು ಹೃದಯವಂತರು. ಅವರಿಗೆ ಕನ್ನಡಿಗರ ಜತೆಗೆ ಜಗಳವೇನೂ ಇಲ್ಲ. ಬಹುಸಂಖ್ಯಾತ ಮರಾಠಿಗರಿಗೆ ಕರ್ನಾಟಕದಲ್ಲಿಯೇ ಬಾಳುವ ಅನಿವಾರ್ಯತೆಯೂ ಮನವರಿಕೆಯಾಗಿದೆ. ಆದರೆ. ಅಲ್ಲಿಯೂ ರಾಜಕೀಯ ಇದೆ. ಮರಾಠಿ ಅಸ್ಮಿತೆ ಕಾಪಾಡುವ ಪಣ ತೊಟ್ಟ (?) ಪತ್ರಿಕೆಗಳು ಇವೆ. ಅವರ ಪ್ರತಿಕ್ರಿಯೆ ಹೇಗಿರುತ್ತದೆ ಎಂಬುದರ ಬಗೆಗೆ ಶಂಕೆ ಬೇಡ. ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆಗಿದ್ದಾಗಲೇ ಬೆಳಗಾವಿಯಲ್ಲಿ ಅತ್ಯಂತ ಯಶಸ್ವಿಯಾಗಿ ವಿಧಾನ ಮಂಡಲದ ವಿಶೇಷ ಅಧಿವೇಶನ ನಡೆದಿದೆ. ಅದಾದ ನಂತರ ಘಟಪ್ರಭೆ, ಮಲಪ್ರಭೆಗಳಲ್ಲಿ ಬೇಕಾದಷ್ಟು ನೀರು ಹರಿದಿದೆ. ಬೆಳಗಾವಿಯಲ್ಲಿ ವಿಧಾನಸೌಧ ಕಟ್ಟಡದ ನಿರ್ಮಾಣ ಭರದಿಂದ ಸಾಗಿದೆ. ಬೆಳಗಾವಿ ಯಾರಿಗೆ ಸೇರಿದ್ದು ಎಂಬುದರ ಬಗ್ಗೆ ಈಗ ಮರಾಠಿಗರಿಗೂ ಅನುಮಾನ ಉಳಿದಿಲ್ಲ. ಒಂದು ಸರ್ಕಾರವೇ ನಿಂತು ಇಂಥ ಒಂದು ಸಮ್ಮೇಳನ ಮಾಡುವಾಗ ಅವರು ಅಬ್ಬಬ್ಬ ಅಂದರೆ ಸಾಂಕೇತಿಕ ಪ್ರತಿಭಟನೆ ಮಾತ್ರ ಮಾಡಿಯಾರು.

ಇಂಥ ಸಣ್ಣಪುಟ್ಟ ಕಿರಿಕಿರಿಗಳನ್ನು, ಅವ್ಯಕ್ತ ಮಸಲತ್ತುಗಳನ್ನು ಮೀರಿ ವಿಶ್ವ ಕನ್ನಡ ಮೇಳ ಯಶ ಕಾಣಬೇಕಿದೆ. ಬೆಳಗಾವಿ, ಕುಂದಾ- ಕರದಂಟಿನ ಸಿಹಿತಿಂಡಿಯ ಜಿಲ್ಲೆ. ಅಲ್ಲಿಯ ಜನರ ಎದೆಯಲ್ಲಿಯೂ ಅದೇ ಬೆಚ್ಚನೆಯ ಪ್ರೀತಿ ಇದೆ. ಸಿಹಿ ಇದೆ. ಅವರ ಆತಿಥ್ಯದಲ್ಲಿ ಇಡೀ ವಿಶ್ವಕ್ಕೆ ಕನ್ನಡದ ಜನರ ಸೌಹಾರ್ದ, ಸೌಜನ್ಯ, ಹೃದಯವಂತಿಕೆ ಮನವರಿಕೆ ಆಗಬೇಕಿದೆ. ಕನ್ನಡದ ಜನರ ಭಾಷೆಯ ಜತೆಗೆ ಬದುಕಿಗೂ ಬಲ ತುಂಬುವ ಚಿಂತನೆ ನಡೆಯಬೇಕಿದೆ. ನಡೆದೀತು ಎಂದು ಅನಿಸುತ್ತದೆ.

06-03-2011

# ಭೀಮಸೇನ ಜೋಶಿ

# ಹಾಡಿದರೆಂದರೆ...

ನಿರ್ಮಲ ಜಲ ಸುಳಿದಾಡಿದಂತೆ, ನೀರಿಗೆ ನೋವಾದೀತು ಎಂದು ಸುಳಿಗಾಳಿ ಅದರ ಮೇಲೆ ಮೃದುವಾಗಿ ಕೈಯಾಡಿಸಿದಂತೆ, ಒಂದೇ ಸಾರಿ ಸಮುದ್ರ ಭೋರ್ಗರೆದು ಅಲೆಗಳು ಬಂದು ತೀರಕ್ಕೆ ಅಪ್ಪಳಿಸಿದಂತೆ, ಮೋಡ ಗುಡುಗಿದಂತೆ, ಒಡೆದು ಧಾರಾಕಾರ ಮಳೆ ಸುರಿದಂತೆ, ನಂದಾದೀಪ ಉರಿದಂತೆ, ನಕ್ಷತ್ರ ಬೆಳಗಿದಂತೆ... ಭೀಮಸೇನ ಜೋಶಿ ಹಾಡುತ್ತಿದ್ದರು.

ಭೀಮಸೇನರು ಬದುಕಿದ್ದಾಗ ನಾನು ಅವರ ಹಾಡು ಕೇಳಿರಲಿಲ್ಲ. ನನಗೆ ಹಾಗೂ ನನ್ನಂಥ ಅನೇಕರಿಗೆ ಆ ಭಾಗ್ಯ ಇರಲಿಲ್ಲ. ಗರುಡ ಮೂಗಿನ, ದೊಡ್ಡ ಕಿವಿಯ, ಉದ್ದ ಮುಖದ, ಭೀಮಕಾಯದ ಭೀಮಸೇನರು ಹಾಡಿದ ಒಂದೊಂದು ರಾಗ ಸ್ವತಃ ಗಾಯಕನನ್ನು ಅಲ್ಲಾಡಿಸಿದ ಹಾಗೆ ಕೇಳುಗನನ್ನೂ ಅಲ್ಲಾಡಿಸುತ್ತಿತ್ತು. ಹಾಡು ನಡೆಯುವ ವರೆಗೆ ಸಭಾಂಗಣದಲ್ಲಿ ನೆಲೆನಿಂತಿದ್ದ ದಿವ್ಯ ಮೌನ ನಂತರ ಚಪ್ಪಾಳೆಯಾಗುತ್ತಿತ್ತು. ಮತ್ತೊಂದು ರಾಗಕ್ಕೆ ತೆರೆದುಕೊಳ್ಳುತ್ತಿತ್ತು.

ಭೀಮಸೇನರು ಮತ್ತೆ ಇನ್ನೊಂದು ರಾಗದ ಬೆನ್ನು ಹತ್ತುತ್ತಿದ್ದರು. ರಾಗದ ಜತೆಗಿನ ಅನುಸಂಧಾನದಲ್ಲಿ ಅವರ ಆರ್ತತೆ, ಉತ್ಕಟತೆ, ರಾಗದಲ್ಲಿ ಮಾಧುರ್ಯ ಕರುಣಿಸುವಂತೆ ದೇವರಲ್ಲಿ ಮೊರೆ ಇಡುವ ಪರಿ, ಕೈಯನ್ನು ಹಿಂದಕ್ಕೆ ಮುಂದಕ್ಕೆ ಆಡಿಸುತ್ತ ಅದನ್ನು ಬಣ್ಣಿಸುವ ಬಗೆ ಎಲ್ಲವೂ ಒಂದು ಅನುಪಮ ಗಂಧರ್ವ ಕಲೆ. ಭೀಮಸೇನರ ಹಾಡು ಕೇಳುತ್ತ ಕೇಳುತ್ತ ಜೀವನ ಸಾಕು ಅನಿಸುತ್ತದೆ. ಕುಮಾರ

ಗಂಧರ್ವರು ತೀರಿಕೊಂಡಾಗ ಕೆ.ವಿ.ಸುಬ್ಬಣ್ಣ 'ಪ್ರಜಾವಾಣಿ'ಗೆ ಪತ್ರ ಬರೆದು 'ಕುಮಾರ ಗಂಧರ್ವರ ಆ ಹಾಡುಗಾರಿಕೆ ಕೇಳಿ ನನಗೆ ಜೀವನ ಸಾಕು ಅನಿಸಿತ್ತು' ಎಂದು ಬರೆದಿದ್ದರು. ಭೀಮಸೇನ, ಮಲ್ಲಿಕಾರ್ಜುನ ಮನ್ಸೂರ, ರಾಜಗುರು ಅಂಥವರ ಹಾಡು ಕೇಳಿದಾಗಲೆಲ್ಲ ಜೀವನ ಸಾಕು ಅನಿಸುತ್ತದೆ. ಅದು ಸಾವಿನ ಬಯಕೆಯ ಗಳಿಗೆಯಲ್ಲ. ಜೀವನದ ಸಾರ್ಥಕತೆಯ ಗಳಿಗೆ, 'ಇನ್ನು ಸಾಕು, ನಾನು ಕೇಳಬೇಕಾದುದು ಮತ್ತೇನೂ ಇಲ್ಲ' ಅನಿಸುವ ಗಳಿಗೆಯದು.

ಆದರೆ ಹಾಡುಗಾರನಿಗೆ ಹಾಗೆ ಅಲ್ಲ. ಪ್ರತಿ ರಾಗವೂ ಒಂದು ಹೊಸ ಬದುಕು, ಹೊಸ ಅನುಭವ. ನಾನು ಹಾಡಿದ್ದು ಸಾಲದು ಎಂಬ ಅರಕೆ ಒಮ್ಮೆ ಕಾಡಿದರೆ ಹಾಡುಗಾರಿಕೆ ಸಿದ್ಧಿಸಿ ಇಡೀ ದೇಹವೆಲ್ಲ ದಣಿದು ಸಂತೃಪ್ತಿ ಸಾಧಿಸಿದ ಅನುಭವ ಮತ್ತೊಮ್ಮೆ. ಹೆಣ್ಣು ಗಂಡಿನ ಸಂಗಮದ ಹಾಗೆ, ಒಮ್ಮೆ ತೃಪ್ತಿ. ಮತ್ತೊಮ್ಮೆ ಅತೃಪ್ತಿ. ಮತ್ತೆ ಅದೇ ರಾಗವನ್ನು ಹುಡುಕುತ್ತ ಅಲೆದಾಡುವುದು, ಭಗವಂತನನ್ನು, 'ಕರುಣಿಸು' ಎಂದು ಪ್ರಾರ್ಥಿಸುವುದು. ಇಡೀ ಜೀವನ ಹಾಡಿದರೂ, ಒಂದು ರಾಗವನ್ನಾದರೂ ಸಂಪೂರ್ಣವಾಗಿ ಹಾಡಿದೆ ಅದರ ಮೇಲೆ ಪ್ರಭುತ್ವ ಸಾಧಿಸಿದೆ' ಎಂದು ಬೀಗಲಾಗದೆ ಅಸಹಾಯಕತೆಯಲ್ಲಿ ಬೇಯುವುದು. ಎಲ್ಲ ಕಲಾವಿದರ, ಸಂಗೀತಗಾರರ, ಲೇಖಕರ ಅಳಲು ಇದು. ಸಿಕ್ಕಿತು ಎಂದು ಹಿಡಿಯಲು ಹೋಗುವುದರ ಒಳಗೆ ತಪ್ಪಿಸಿಕೊಂಡು ದೊಡ್ಡದಾಗಿ ನಿಲ್ಲುವ ಅದರ ಮುಂದೆ ಮತ್ತೆ ಬಾಗಿ ನಿಲ್ಲುವುದು, ವಿನೀತನಾಗುವುದು. ಅಂಥ ಕಲಾವಿದನ ವಿನಯದ ಮುಂದೆ ಕೇಳುಗ ಕೂಡ ವಿನೀತನಾಗುತ್ತಾನೆ. ಅವನ ಹುಡುಕಾಟದ ಜತೆಗೆ ತಾನೂ ಸೇರಿಕೊಳ್ಳುತ್ತಾನೆ. ಗಾಯಕನಿಗೆ ಸಿಕ್ಕುದು ತನಗೂ ಸಿಕ್ಕಿತು ಎಂದುಕೊಳ್ಳುತ್ತಾನೆ. ರಸಾನುಭೂತಿಯಲ್ಲಿ ಮಿಂದು ಏಳುತ್ತಾನೆ. ಹಾಡು ಮುಗಿಸಿದ ಗಾಯಕನಿಗೆ ಎದ್ದು ನಿಂತು ಚಪ್ಪಾಳೆ ತಟ್ಟಿ ತನ್ನ ಗೌರವ ಸೂಚಿಸುತ್ತಾನೆ.

ನಮಗೂ ಹಾಗೆಯೇ ಆಯಿತು. ಭೀಮಸೇನರು ಈಗ ಬದುಕಿಲ್ಲ. ಆದರೆ, ಅವರ ಗಾಯನದ ವಿಡಿಯೊ ಪ್ರದರ್ಶನಕ್ಕೆ ಲೇಖಕ ಎಸ್.ದಿವಾಕರ್ ಏರ್ಪಾಡು ಮಾಡಿದ್ದರು. ಬೆಂಗಳೂರಿನ ಗಾಯನ ಸಮಾಜ ಈ ಅಪರೂಪದ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲು ಭರ್ತಿಯಾಗಿತ್ತು. ಭೀಮಸೇನರ ಗಾಯನ ಕೇಳದವರು, ಕೇಳಿದವರು ಸಭಾಂಗಣದಲ್ಲಿ ಸೇರಿದ್ದರು. ಜೋಶಿಯವರು ತಮ್ಮ ವಯಸ್ಸಿನ ವಿವಿಧ ಘಟ್ಟಗಳಲ್ಲಿ ಕೊಟ್ಟ ಕಾರ್ಯಕ್ರಮಗಳು ಅವು. ಭೀಮಸೇನರದು ಯೌವನದಲ್ಲಿ ಆರ್ಭಟದ ಗಾಯನ. ವೇದಿಕೆಯ ಮೇಲೆ ಗಾಯನದ ಜತೆ ಜತೆಗೆ ಅವರದು ಅದ್ಭುತ ಆಂಗಿಕ ಅಭಿನಯ. ರಾಗವನ್ನು ಬಣ್ಣಿಸುವ ಬಗೆಯೇ ಅದು? ಅಥವಾ ಹಿಡಿದುಕೊಳ್ಳುವ ಹಟವೇ? ಗಾಯಕನೊಬ್ಬ ವೇದಿಕೆಯ ಮೇಲೆ ಏಕೆ ಹಾಗೆ ಕೈ ಮಾಡುತ್ತಾನೆ? ವೇಗವಾಗಿ ಹಿಂದೆ ಮುಂದೆ ಎಳೆದಾಡುತ್ತಾನೆ? ತೀಡುತ್ತಾನೆ? ಬೆರಳುಗಳಲ್ಲಿ ಬಣ್ಣಿಸುತ್ತಾನೆ? ಹಾಡುವಾಗ ಆತ ನೋವು ಪಡುತ್ತಾನೆಯೇ? ಸಂತೋಷ ಪಡುತ್ತಾನೆಯೇ? ಅಭಿವ್ಯಕ್ತಿಸುವಾಗ ಬರಹಗಾರನ, ಕಲಾವಿದನ ಸಂಕಟವೂ ಹೀಗೆಯೇ ಇರುತ್ತದೆ ಅನಿಸುತ್ತದೆ. ಬರಹಗಾರ ಶಬ್ದಗಳಲ್ಲಿ ಹಿಡಿದು ಇಡುವ ಪ್ರಯತ್ನವನ್ನು ಮಾಡಿದರೆ ಕಲಾವಿದ ರೇಖೆಗಳಲ್ಲಿ ಹಿಡಿದು ಕೊಡಲು ಹೆಣಗುತ್ತಾನೆ. ಹಾಡುಗಾರ ಅದನ್ನು ರಾಗದಲ್ಲಿ ತೋಡಿಕೊಳ್ಳುತ್ತಾನೆ.

ಬರಹಗಾರ, ಕಲಾವಿದ ಮತ್ತು ಹಾಡುಗಾರ ರಸಿಕನಿಗೆ ಉಣಬಡಿಸುವ ಅನುಭವ ಈ ಮೂವರಿಗಿಂತ ದೊಡ್ಡದಾಗಿರುತ್ತದೆಯೇ? ಅದಕ್ಕೇ ಅದನ್ನು ಹಿಡಿದುಕೊಡಲು ಆಗದೇ ಈ ಮೂವರೂ ಒದ್ದಾಡುತ್ತಾರೆಯೇ? ಸಂಕಟ ಪಡುತ್ತಾರೆಯೇ? ಸಿಕ್ಕಿತು ಎಂದಾಗ ಸಂಭ್ರಮ ಪಡುತ್ತಾರೆಯೇ? ದಣಿಯುತ್ತಾರೆಯೇ? ಅವನ ಕೈಗೆ ಸಿಕ್ಕ ಅನುಭವ ರಸಿಕನನ್ನು ಬುಡಮಟ್ಟ ಅಲ್ಲಾಡಿಸಿ ಬಿಡುತ್ತದೆಯೇ? ಭೀಮಸೇನರ ಗಾಯನ, ಗಾಯನ ಸಮಾಜದಲ್ಲಿ ಸೇರಿದವರನ್ನೆಲ್ಲ ಬುಡಮಟ್ಟ ಅಲ್ಲಾಡಿಸಿದ್ದು ನಿಜ.

ಸಂಗೀತ ಎಂಬುದು ಒಂದು ಗಂಧರ್ವ ಕಲೆ, ಅಪರಿಪೂರ್ಣತೆಯ ಜತೆಗಿನ ನಿರಂತರ ಹೋರಾಟ ಅದು. ಭೀಮಸೇನರಿಗೆ ಅವರ ಗುರು ಪ್ರತಿದಿನ ಒಂದೊಂದು ರಾಗ ಕಲಿಸುತ್ತಿರಲಿಲ್ಲ. ಪ್ರತಿದಿನ ಬೆಳಿಗ್ಗೆ ತೋಡಿ, ಮಧ್ಯಾಹ್ನ ಮುಲ್ತಾನ, ಸಂಜೆ ಪೂರಿಯಾ ಮತ್ತು ಮಾರವಾ, ರಾತ್ರಿ ಮಾಲಕಂಸ ಮತ್ತು ದರಬಾರಿ ರಾಗಗಳನ್ನು ಕಲಿಸುತ್ತಿದ್ದರು. ಈ ಕಲಿಕೆ ಸತತವಾಗಿ ಐದು ವರ್ಷಗಳ ಕಾಲ ನಡೆಯಿತು. ಪ್ರತಿ ದಿನವೂ ಒಂದೊಂದು ರಾಗ ಕಲಿಸುತ್ತ ಇದ್ದರೆ ಯಾವುದರ ಮೇಲೂ ಸಿದ್ಧಿ ಸಾಧಿಸದು ಎಂಬ ಕಾಳಜಿ ಗುರುವಿಗೂ ಇರುತ್ತದೆ. ಮತ್ತೆ ಮತ್ತೆ ಅದನ್ನೇ ಹೇಳಿಕೊಡುತ್ತ ಅದರಲ್ಲಿಯೇ ಸಿದ್ಧಿ ಸಾಧನೆಗೆ ಗುರು ಮಾರ್ಗದರ್ಶನ ಮಾಡುತ್ತಾನೆ. ಭೀಮಸೇನರೂ ಹಾಗೆಯೇ ಕಲಿತರು. ಪ್ರತಿ ಸಾರಿಯ ಹಾಡುಗಾರಿಕೆ ಒಂದು ಕಲಿಕೆ ಎಂದು ಕಲಿತರು. ಅದರಲ್ಲಿ ಸಿದ್ಧಿ ಸಾಧಿಸಿದರು.

ಸಮಾರಂಭದಲ್ಲಿ ಹಾಜರು ಇದ್ದ ಪಂಡಿತ ಪರಮೇಶ್ವರ ಹೆಗಡೆ ಹೇಳುತ್ತಿದ್ದರು. 'ಭೀಮಸೇನರು ಹೆಚ್ಚು ಮಾತನಾಡುತ್ತಿರಲಿಲ್ಲ. ಪಂಡಿತ ಅಮೀರಖಾನ್ ಹಾಡುಗಳನ್ನು ಸದಾ ತಮ್ಮ ಕೊಠಡಿಯಲ್ಲಿ ಹಾಕಿಕೊಂಡು ಕೇಳುತ್ತ ಇರುತ್ತಿದ್ದರು. ಮೌನ ಅವರ ಸಾಧನೆಗೆ ನೆರವಾಗುತ್ತಿತ್ತು. ಮೌನದಲ್ಲಿ ಸೃಷ್ಟಿಕ್ರಿಯೆ ಉತ್ಕಟವಾಗಿರುತ್ತದೆಯೇ? ಗಾಯನ ಸಮಾಜದಲ್ಲಿಯೂ ಭೀಮಸೇನರ ಹಾಡಿನ ಉದ್ದಕ್ಕೂ ಮೌನ ಆವರಿಸಿತ್ತು. ಅತ್ತ ಪ್ರದರ್ಶನಗೊಳ್ಳುತ್ತಿದ್ದ ವಿಡಿಯೊದ ಒಳಗಿನ ಸಭೆಗಳಲ್ಲಿಯೂ ದಿವ್ಯ ಮೌನವೇ ಇತ್ತು. ನಮ್ಮ ಸದ್ದು, ನಮ್ಮ ಪಿಸುಮಾತು ಗಾಯನಕ್ಕೆ ಭಂಗ ತಂದೀತು ಎಂಬ ತಿಳಿವಳಿಕೆ ಹೇಗೆ ಬರುತ್ತದೆ? ಗಂಧರ್ವ ಕಲೆಯ ಮುಂದೆ ಮಣಿಯುವ ಬಗೆಯೇ ಅದು? ನನ್ನ ಮನಸ್ಸಿನ ಒಳಗೇ ಅನಿಸುತ್ತಿತ್ತು : 'ಭೀಮಸೇನರ ಗಾಯನದ ಮುಂದೆ ಯಾವ ರಾಷ್ಟ್ರಪತಿ, ಯಾವ ಪ್ರಧಾನಿ ಯಾವ ಲೆಕ್ಕ?' ಎಂದು. ದಿವಾಕರರು ತಮ್ಮ ಪುಸ್ತಕ (ಪಂಡಿತ್ ಭೀಮಸೇನ ಜೋಶಿ-ವಸಂತ ಪ್ರಕಾಶನ-ಬೆಲೆ ರೂ.30)ದಲ್ಲಿ ಅದೇ ಮಾತುಗಳನ್ನು ಬರೆದಿದ್ದರು : 'ಇವತ್ತು ನಾವು ಬದುಕುತ್ತಿರುವ ಪ್ರಪಂಚವನ್ನು, ನಮ್ಮ ಜೀವನ ವಿಧಾನವನ್ನು, ನಮ್ಮ ಆಶೋತ್ತರಗಳನ್ನು ರೂಪಿಸಿದವರು ಚರಿತ್ರೆಯ ಮಹಾರಾಜರಲ್ಲ. ಧರ್ಮ, ತತ್ವಶಾಸ್ತ್ರ, ವಿಜ್ಞಾನ, ಅರ್ಥಶಾಸ್ತ್ರ, ಉದ್ಯಮ ಪರಿಸರ, ರಾಜಕೀಯ, ಸಮಾಜ ಸುಧಾರಣೆ ಮೊದಲಾದ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಕೆಲವೇ ಕೆಲವು ಮಂದಿ ಮಹಾನುಭಾವರು. ಇನ್ನು ಮುಂದಿನ ಸಮಾಜ ವೈಜ್ಞಾನಿಕ ಪ್ರಯೋಗಾಲಯಗಳಲ್ಲಿಯೋ, ಕಾಯ್ದೆ ರೂಪಿಸುವ ಶಾಶನಸಭೆಗಳಲ್ಲಿಯೋ ಹುಟ್ಟಿಕೊಳ್ಳಬಹುದೇ? ಇಲ್ಲ. ಅದು ಹುಟ್ಟುವುದು ವೈಚಾರಿಕ,

ವೈಜ್ಞಾನಿಕ ಕ್ಷೇತ್ರಗಳಲ್ಲಿ ಶ್ರಮಿಸುತ್ತಿರುವ ಸೃಜನಶೀಲ ಮನಸ್ಸುಗಳಲ್ಲಿ, ಅಮೆರಿಕದ ದಾರ್ಶನಿಕ ಎಮರ್ಸನ್ ಹೇಳಿದ ಹಾಗೆ 'ವಸ್ತುವನ್ನು ಬದಲಾಯಿಸುವವನು ಶ್ರೇಷ್ಠ ವ್ಯಕ್ತಿಯಲ್ಲ. ನನ್ನ ಮನಸ್ಸಿನ ಸ್ಥಿತಿಯನ್ನು ಬದಲಾಯಿಸುವವನೇ ಶ್ರೇಷ್ಠ ವ್ಯಕ್ತಿ.'

ಭೀಮಸೇನ ಜೋಶಿಯವರಂಥವರು ನಮ್ಮ ಮನಸ್ಸನು ಬದಲಾಯಿಸುವವರು, ರೂಪಿಸುವವರು. ಅದರಲ್ಲಿನ ಕಲ್ಮಶವನ್ನು ಹೋಗಲಾಡಿಸುವವರು. ವಿನಯವನ್ನು ತುಂಬುವವರು. ಭಾವುಕತೆಯನ್ನು ಸೃಷ್ಟಿಸುವವರು. ಜೀವನ ಸಾರ್ಥಕ ಎಂದು ಅನಿಸುವಂತೆ ಮಾಡುವವರು. ಭೀಮಸೇನರಂಥವರು ಕನ್ನಡ ನಾಡಿಗೆ ಸೇರಿದವರೇ? ಪುಣೆಯಲ್ಲಿಯೇ ಬಹುಕಾಲ ಕಳೆದರು ಎಂದು ಮಹಾರಾಷ್ಟ್ರಕ್ಕೆ ಸೇರಿದವರೇ? ಮತ್ತೆ ಸಮಾರಂಭದಲ್ಲಿ ಹಾಜರು ಇದ್ದ ರಾಮಚಂದ್ರ ಗುಹಾ ಹೇಳುತ್ತಿದ್ದರು. 'ವಿದೇಶದ ಯಾವುದೋ ಊರಿನ ಯಾವುದೋ ರಸ್ತೆಯ ಯಾರೋ ಒಬ್ಬ ಟ್ರಕ್ ಚಾಲಕ ಭೀಮಸೇನರ ಹಾಡು ಕೇಳುತ್ತ ಇರಬೇಕಾದರೆ ಭೀಮಸೇನರನ್ನು ಒಂದು ಊರಿಗೆ ಒಂದು ನಾಡಿಗೆ ಹೇಗೆ ಕಟ್ಟಿ ಹಾಕುವುದು?' ಕೊಲ್ಕತ್ತೆಯಲ್ಲಿ 'ಎನ್ನ ಪಾಲಿಸೋ ಕರುಣಾಕರ, ಪ್ಯಾರೀಸ್‌ನಲ್ಲಿ 'ಪಿಯಾ ಕೆ ಮಿಲನ್ ಕಿ ಆಸ್', ನ್ಯೂಯಾರ್ಕಿನಲ್ಲಿ 'ಜೋ ಬಜೆ ಹರಿ ಕೊ ಸದಾ' ಕೇಳಿ ಪ್ರೋತೃ ತಲೆದೂಗುತ್ತಾನೆ ಎಂದರೆ ಏನು ಅರ್ಥ? ಆಫ್ಘಾನಿಸ್ತಾನದಲ್ಲಿ ಭೀಮಸೇನರು ನಡೆಸಿಕೊಟ್ಟ ಕಾರ್ಯಕ್ರಮದಲ್ಲಿ ಜಪಮಣಿ ಹಿಡಿದು ಸಂಗೀತ ಕೇಳುತ್ತಿದ್ದ ಒಬ್ಬ ಮಧ್ಯವಯಸ್ಕ ಪ್ರೋತೃವಿನ ಕಣ್ಣಲ್ಲಿ ದಳ ದಳ ನೀರು ಇಳಿಯುವುದು ಏಕೆ? ಸಂಗೀತಕ್ಕೆ ಭಾಷೆ, ದೇಶದ ಗೋಡೆಯನ್ನು ಬೀಳಿಸುವ ಗುಣ ಇದೆ ಎಂದೇ ಅರ್ಥ ಅಲ್ಲವೇ?

11ನೇ ವರ್ಷಕ್ಕೇ ಮನೆ ಬಿಟ್ಟು ನಾದದೇವತೆಯ ಬೆನ್ನಟ್ಟಿ, ಗುರು ಸವಾಯಿ ಗಂಧರ್ವರ ಗುಲಾಮನಾಗಿ ಅವರ ಪ್ರೀತಿ, ತಿರಸ್ಕಾರ ಮತ್ತೆ ಪ್ರೀತಿ ಗಳಿಸಿ, ಅವರನ್ನು ಒಲಿಸಿಕೊಂಡ ಭೀಮಸೇನ ನಮ್ಮವರು ನಿಜ. ಆದರೆ, ಅವರು ಇಡೀ ಜಗತ್ತಿಗೇ ಸೇರಿದವರು ಎಂಬುದಕ್ಕೆ ಈ ನಿದರ್ಶನಗಳೇ ಸಾಕ್ಷಿ. ಸಂಗೀತ ಸಾಧನೆಗಾಗಿ ನಿತ್ಯ 'ಸತ್ತು ಸತ್ತು ಹುಟ್ಟಿದ' ಇಂಥವರು ಸತ್ತ ಮೇಲೂ ನೂರ್ಕಾಲ ಬದುಕುವವರು. ಬದುಕಿದವರ ಜೀವನದಲ್ಲಿ ಸಾರ್ಥಕತೆ ತುಂಬುವವರು. ಭೀಮಸೇನ ಜೋಶಿಯವರ ಹಾಡು ಕೇಳುತ್ತಿದ್ದಾಗ ನನಗೆ ಶ್ರವಣಬೆಳಗೊಳದ ಗೊಮ್ಮಟ ನೆನಪಾದ, ಪ್ರತಿ ಸಾರಿ ಗೊಮ್ಮಟನ ಮುಂದೆ ನಿಂತಾಗಲೆಲ್ಲ ನನಗೆ ಅನಿಸಿದೆ ಇದು ಮನುಷ್ಯಸೃಷ್ಟಿಯೇ, ದೈವ ಸೃಷ್ಟಿಯೇ ಎಂದು ಭೀಮಸೇನರ ಕಂಠ ಮಾಧುರ್ಯವೂ ಅದೇ ಪ್ರಶ್ನೆಯನ್ನು ಹುಟ್ಟಿಸುತ್ತದೆ. ಅದು ಮನುಷ್ಯನದೇ, ದೇವರದೇ? ಭೀಮಸೇನ ಗಾಯನ ಕೇಳಿ ಮನೆಗೆ ಓಡುತ್ತ ಓಡುತ್ತ ಬಂದೆ. ಬಂದವನೇ ಕಂಪ್ಯೂಟರ್ ಮುಂದೆ ಕುಳಿತು ಈ ಲೇಖನ ಬರೆದೆ. ನನಗೆ ಒಂದು ಸಂಗೀತ ಹೀಗೆ ಕಾಡಿದ್ದು ಇದೇ ಮೊದಲು. ಏಕೋ ಅಸ್ವಸ್ಥನಾದೆ ಅನಿಸಿತು, ಅಲ್ಲಾಡಿ ಹೋದೆ ಅನಿಸಿತು. ಭಾವುಕನಾದೆ ಅನಿಸಿತು... ಹೀಗೆ ಕಾಡಿದ ಕ್ಷಣವನ್ನು ಸೃಷ್ಟಿಸಿದ ದಿವಾಕರ್ ಮತ್ತು ಗೆಳೆಯರಿಗೆ ಸಂಗೀತದ ಬಗ್ಗೆ ಏನೇನೂ ಗೊತ್ತಿಲ್ಲದ ನನ್ನಂಥವರ ನಮಸ್ಕಾರಗಳು; ಕೃತಜ್ಞತೆಗಳು.

13-03-2011

ಹಾಗೇನೂ ಅಗಲಿಲ್ಲ. ಕ್ರೀಡಾಂಗಣದ ವರೆಗೆ ಬರುತ್ತಿದ್ದ ಜನ ಅಲ್ಲಿ ಜಾಗ ಸಿಗದೇ ಇದ್ದರೆ ಬಂದ ದಾರಿಗೆ ಸುಂಕವಿಲ್ಲ ಎನ್ನುವಂತೆ ಮತ್ತೆ ವಾಪಸು ಅದೇ ರಸ್ತೆಯಲ್ಲಿ ಹೊರಟು ಹೋಗುತ್ತಿದ್ದರು. ಆ ರಸ್ತೆಯ ಎರಡೂ ಭಾಗದಲ್ಲಿ ನಿತ್ಯ ಜನಸಾಗರ; ಇರುವೆ ಸಾಲು ಇಟ್ಟಂತೆ. ಅವರಲ್ಲಿ ಹಳ್ಳಿಯ ಜನರಿದ್ದರು, ನಗರದ ಜನರಿದ್ದರು. ಎಲ್ಲ ವಯೋಮಾನದವರೂ ಇದ್ದರು.

ವಿಶ್ವ ಕನ್ನಡ ಮೇಳದ ಮೂಲಕ ಇಡೀ ಜಗತ್ತಿಗೆ ಕನ್ನಡದ ಹಿರಿಮೆ ಸಾರಬೇಕು ಎಂಬ ಒತ್ತಡ ಅವರ ಹಾಜರಿಯ ಹಿಂದೆ ಇತ್ತೇ? ಅಥವಾ ಐಶ್ವರ್ಯ ರೈ ನೋಡಲು ಮಾತ್ರ ಅವರೆಲ್ಲ ಬಂದಿದ್ದರೇ? ಹಾಗೆ ಬಂದಿದ್ದರೆ ಮೊದಲ ದಿನ ಆಕೆಯನ್ನು ನೋಡಿ ಹೋಗಿ ಬಿಡಬಹುದಿತ್ತು. ಹಾಗೆ ಆಗಲಿಲ್ಲ. ಕೊನೆಯ ದಿನ ಸಮಾರೋಪಕ್ಕೂ ಅಷ್ಟೇ ಜನ ಸೇರಿದ್ದರು. ಅಲ್ಲಲ್ಲಿ ನಡೆದ ಮನರಂಜನೆ ಕಾರ್ಯಕ್ರಮಗಳು ಅವರ ಮನಸೂರೆಗೊಂಡವೇ? ಅದೂ ನಿಜವಲ್ಲ. 'ಸಾಂಸ್ಕೃತಿಕ ಕರ್ನಾಟಕ : ಒಂದು ಅವಲೋಕನ' ಗೋಷ್ಠಿ ಆರಂಭವಾಗುವುದಕ್ಕಿಂತ ಮುಂಚೆಯೇ ಕುಮಾರ ಗಂಧರ್ವ ರಂಗಮಂದಿರ ಸಂಪೂರ್ಣವಾಗಿ ಭರ್ತಿಯಾಗಿತ್ತು. ಬಹುತೇಕ ಎಲ್ಲ ಗೋಷ್ಠಿಗಳಲ್ಲಿಯೂ ಇದೇ ರೀತಿ ಸಭಿಕರು ಹಾಜರು ಇದ್ದರು. ಅಂದರೆ ಬರೀ ಅವರು ಹಾಡು ಕುಣಿತ ನೋಡಲು ಬಂದಿರಲಿಲ್ಲ. ಅವರಿಗೆ ಇನ್ನು ಏನೋ ಬೇಕಿತ್ತು. ಮೊನ್ನೆ ಮೊನ್ನೆಯಷ್ಟೇ ಬೆಂಗಳೂರಿನಲ್ಲಿ ನಡೆದ 77ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೋಟಿಗಟ್ಟಲೆ ಪುಸ್ತಕ ಖರೀದಿಸಿದ್ದ ಕನ್ನಡಿಗರು ಬೆಳಗಾವಿಯಲ್ಲಿಯೂ ಪುಸ್ತಕ ಮಳಿಗೆಗಳಿಗೆ ಮತ್ತೆ ದಾಂಗುಡಿ ಇಟ್ಟಿದ್ದರು. ಅಲ್ಲಿಯೂ ಕೋಟಿಗಟ್ಟಲೆ ಬೆಲೆಯ ಪುಸ್ತಕಗಳು ಮಾರಾಟವಾದುವು.

ಇಷ್ಟು ಪ್ರಮಾಣದಲ್ಲಿ ಬಂದ ಜನರಿಗೆ ವಸತಿ ಸೌಕರ್ಯ ಕಲ್ಪಿಸುವುದು ಸಂಘಟಕರಿಗೆ ಸಾಧ್ಯವಿರಲಿಲ್ಲ. ಅಲ್ಲಿ ಇದ್ದುದೇ 2,000 ಕೊಠಡಿಗಳು, ಊಟ ಹಾಕಲು ಸಿದ್ಧತೆ ಆಗಿದ್ದರೂ ಇಷ್ಟು ಜನ ಬರುತ್ತಾರೆ ಎಂಬ ನಿರೀಕ್ಷೆ ಇರಲಿಲ್ಲ. ಉಚಿತ ಊಟ ಕೊಡುವ ಸಂಘಟಕರು ಹೋಗಲಿ ದುಡ್ಡು ಕೊಟ್ಟರೂ ಹೋಟೆಲ್‌ಗಳಲ್ಲಿ ಅಷ್ಟು ಜನರಿಗೆ ಊಟ ಪೂರೈಸುವ ಸಾಮರ್ಥ್ಯವಿರಲಿಲ್ಲ. ಆದರೂ ಜನ ಗೊಣಗಲಿಲ್ಲ. ಎಲ್ಲಿ ತಿಂದರೋ, ಏನು ತಿಂದರೋ ಗೊತ್ತಿಲ್ಲ. ಸಮ್ಮೇಳನ ಒಂದು ಅದ್ಭುತ ಯಶಸ್ಸು ಎನ್ನುವಂತೆ ಮಾಡಿದರು. ಈ ಯಶಸ್ಸಿನಿಂದ ಬೀಗುತ್ತಿದ್ದ ಸ್ವಾಗತ ಸಮಿತಿ ಅಧ್ಯಕ್ಷ ಪ್ರಭಾಕರ ಕೋರೆ ಹೇಳುತ್ತಿದ್ದರು: 'ಬೆಳಗಾವಿಯಲ್ಲಿ ಇದೇ ಮೊದಲ ಬಾರಿಗೆ ಒಂದೇ ಒಂದು ಕಲ್ಲು ಬೀಳದೆ ನಡೆದ ಮೊದಲ ಸಭೆ ಇದು' ಎಂದು. ಅದು ಕನ್ನಡಿಗರೇ ಇರಲಿ, ಮರಾಠಿಗರೇ ಇರಲಿ ಒಂದು ದೊಡ್ಡ ಸಭೆ ಮಾಡಿದರೆ ಅಲ್ಲಿ ಒಂದೋ ಕಲ್ಲು ಬೀಳಬೇಕು, ಇಲ್ಲವೇ ಪೊಲೀಸರು ಲಾಠಿ ಬೀಸಬೇಕು. ಸೋಜಿಗ ಎಂದರೆ ವಿಶ್ವ ಕನ್ನಡ ಸಮ್ಮೇಳನಕ್ಕೆ ಸ್ಥಳೀಯ ಸಾಮಾನ್ಯ ಮರಾಠಿಗರು ಮುಕ್ತ ಸಹಕಾರ ನೀಡಿದರು. ತಾವೂ ಬಂದು ಹಾಡು ಕೇಳಿದರು, ಗೋಷ್ಠಿಗಳಿಗೆ ಹಾಜರಾದರು. ಎಸ್.ಪಿ.ಬಿ ಹಾಡು ಕೇಳಿ 'ಫಾರ್ ಚಾಂಗಲಾ ಆಕೆ' ಎಂದು ಪ್ರಶಂಸಿಸಿದರು. ಬೆಳಗಾವಿಯಲ್ಲಿ ಮರಾಠಿ ಅಸ್ಮಿತೆ 'ಕಾಪಾಡಲು' ದಶಕಗಳಿಂದ ಪ್ರಯತ್ನಿಸುತ್ತಿರುವ 'ತರುಣ ಭಾರತ' ಪತ್ರಿಕೆ

ಬಿಟ್ಟರೆ ಮಿಕ್ಕ ಮರಾಠಿ ಪತ್ರಿಕೆಗಳು ಕನ್ನಡ ಪತ್ರಿಕೆಗಳ ಹಾಗೆಯೇ ಗಂಭೀರವಾಗಿ ವಿಶ್ವ ಕನ್ನಡ ಸಮ್ಮೇಳನವನ್ನು ವರದಿ ಮಾಡಿದುವು.

ಸರಿ ಸುಮಾರು 11 ವರ್ಷಗಳ ನಂತರ ಬೆಳಗಾವಿಗೆ ಹೋಗಿದ್ದ ನನಗೆ ಅಲ್ಲಿನ ಬದಲಾವಣೆ, ಅಭಿವೃದ್ಧಿ ಕಣ್ಣಿಗೆ ರಾಚುವಂತೆ ಕಂಡಿತು. ಅದಕ್ಕಿಂತ ಮುಂಚೆ ಒಂಬತ್ತು ವರ್ಷ ನಾನು ಅಲ್ಲಿಯೇ ಕೆಲಸ ಮಾಡಿದ್ದೆ. ಆಗ, ಅಭಿವೃದ್ಧಿ ಎಂಬುದು ಒಂದು ಮರೀಚಿಕೆ ಆಗಿತ್ತು. ಅಭಿವೃದ್ಧಿ ಬಗೆಗೆ ಮಾತನಾಡದೇ ಬರೀ 'ಮರಾಠಿ ಅಸ್ಮಿತೆ' ಉಳಿಸಲು ಹೋರಾಡುವವರು ಶಾಸಕರಾಗಿ ಆಯ್ಕೆಯಾಗುತ್ತಿದ್ದರು. ಅವರು ವಿಧಾನಸಭೆಯಲ್ಲಿ ಒಂದು ಸಾರಿಯೂ ಎದ್ದು ನಿಂತು ಬೆಳಗಾವಿ ಅಭಿವೃದ್ಧಿಗೆ ಹಣ ಬೇಕು ಎಂದು ಕೇಳಿದವರಲ್ಲ. ಬೆಳಗಾವಿ ಅಭಿವೃದ್ಧಿ ಆಗುವುದು ಅವರಿಗೆ ಬೇಕೂ ಇರಲಿಲ್ಲ. ಅಭಿವೃದ್ಧಿಯಾದರೆ ತಮ್ಮ ನೆಲೆ ಕುಸಿದು ಹೋಗುತ್ತದೆ ಎಂದೂ ಅವರಿಗೆ ಗೊತ್ತಿತ್ತು. ಈಗ ಹಾಗೆಯೇ ಅಗಿದೆ. 90ರ ದಶಕದಲ್ಲಿ ನಾಲ್ಕು ಕೋಟಿ ರೂಪಾಯಿ ಸಾಲ ಮಾಡಿ ಬೆಳಗಾವಿ ರಸ್ತೆಗಳ ದುರಸ್ತಿ ಮಾಡಿದಾಗ ಅದು ದೊಡ್ಡ ಸುದ್ದಿಯಾಗಿತ್ತು. ಅಲ್ಲಿಯ ವರೆಗೆ ಬೆಳಗಾವಿ ರಸ್ತೆಗಳು ಎಂದರೆ ಅದು ನಿತ್ಯ ಭೂಕಂಪದ ಪ್ರದೇಶ ಎಂದೇ ಭಾವನೆ!

2006ರಲ್ಲಿ ಮೊದಲ ಬಾರಿಗೆ ಬೆಳಗಾವಿಯಲ್ಲಿ ವಿಧಾನ ಮಂಡಲ ಅಧಿವೇಶನ ನಡೆದ ಲಾಗಾಯ್ತಿನಿಂದ ಆ ಊರಿನ ಚಿತ್ರಣವೇ ಬದಲಾಗಿದೆ. ಆಗ ಮುಖ್ಯಮಂತ್ರಿ ಆಗಿದ್ದ ಎಚ್.ಡಿ.ಕುಮಾರಸ್ವಾಮಿ ಮಾಡಿದ ದೊಡ್ಡ ಕೆಲಸ ಅದು. ತದನಂತರ ಯಡಿಯೂರಪ್ಪ ಸರ್ಕಾರವೂ ಬೆಳಗಾವಿಯನ್ನು ಅಲಕ್ಷಿಸಿಲ್ಲ. ಇತ್ತ ಊರಿನ ಅಭಿವೃದ್ಧಿ ಆಗುತ್ತಿದ್ದಂತೆಯೇ ಅತ್ತ ಮರಾಠಿಗರು ಅಧಿಕಾರ ಕಳೆದುಕೊಂಡರು. ಬರೀ ಶಾಸನಸಭೆ ಮಾತ್ರವಲ್ಲ ಪಾಲಿಕೆಯೂ ಅವರ ಕೈಬಿಟ್ಟು ಹೋಗಿದೆ. ಅಭಿವೃದ್ಧಿ ಕಾರ್ಡ್ ಹಿಡಿದುಕೊಂಡೇ ಶಾಸಕರಾಗಿ ಆಯ್ಕೆಯಾದ ಅಭಯ ಪಾಟೀಲರಂಥ ಯುವ ಶಾಸಕರು ಮೂರು ಕಿಲೋ ಮೀಟರ್ ಉದ್ದದ ಕನ್ನಡ ಮೆರವಣಿಗೆಯನ್ನು ಯಾವ ಪೊಲೀಸ್ ಕಾವಲೂ ಇಲ್ಲದೇ ಮರಾಠಿ ಪ್ರಭಾವ ಇರುವ ಪ್ರದೇಶದಿಂದಲೇ ಆರಂಭಿಸಿ ಸಮ್ಮೇಳನ ವೇದಿಕೆ ವರೆಗೆ ತೆಗೆದುಕೊಂಡು ಹೋದರೆ ರಸ್ತೆಯ ಅಕ್ಕಪಕ್ಕ ನಿಂತ ಮರಾಠಿ ಭಾಷಿಕರು ಸಂಭ್ರಮ ಪಟ್ಟರೇ ಹೊರತು ಹೊಟ್ಟೆಕಿಚ್ಚು ಪಡಲಿಲ್ಲ. ಬೆಳಗಾವಿಯನ್ನು ಈಗಿನ ಹಾಗೆ ಅಭಿವೃದ್ಧಿ ಮಾಡಿದ್ದರೆ ಪ್ರತಿ ಸಾರಿ ವಿಧಾನಸಭೆ ಅಧಿವೇಶನ ಸೇರಿದಾಗಲೆಲ್ಲ ಮಹಾಜನ ವರದಿ ಜಾರಿಗೆ ನಿರ್ಣಯ ಅಂಗೀಕರಿಸಬೇಕಾದ ಅಗತ್ಯವಿರಲಿಲ್ಲ. ದೇವರಾಜ ಅರಸು, ರಾಮಕೃಷ್ಣ ಹೆಗಡೆ ಅವರಂಥ ಮುತ್ಸದ್ದಿಗಳಿಂದ ಆಗದ ಕೆಲಸಗಳು ಕುಮಾರಸ್ವಾಮಿ-ಯಡಿಯೂರಪ್ಪ ಅವರಂಥವರಿಂದ ಆಗಿಬಿಡುತ್ತವೆ! ಅದೂ ಒಂದು ವಿಚಿತ್ರ

ಈಗ ಬೆಳಗಾವಿ ನಮ್ಮದು ಎಂದು ಮತ್ತೆ ಮತ್ತೆ ಗೋಪುರದ ಮೇಲೆ ನಿಂತು ಕೂಗಬೇಕಾದ ಅಗತ್ಯವಿಲ್ಲ. ವಿಧಾನಸಭೆಯಲ್ಲಿ ನಿರ್ಣಯ ಮಂಡಿಸಬೇಕಾದ ಅಗತ್ಯವೂ ಇಲ್ಲ. ಬೆಳಗಾವಿಯಲ್ಲಿ ಮರಾಠಿಗರು ಪ್ರತಿಸಮ್ಮೇಳನ ಮಾಡಿದರೂ ನಾವು ಚಿಂತೆ ಪಡಬೇಕಿಲ್ಲ. ಆತಂಕಗೊಳ್ಳಬೇಕಿಲ್ಲ. ಅಂಥ ಸಮ್ಮೇಳನ ಮಾಡುತ್ತಿದ್ದ ಹಿರಿಯ

ತಲೆಮಾರಿನ ಜನವೇ ಈಗ ಇಲ್ಲ. ಹೊಸ ತಲೆಮಾರಿನ ಯುವ ಮರಾಠಿಗರಿಗೆ ವಾಸ್ತವದ ಅರಿವಾಗಿದೆ. ಬದಲಾಗಿರುವ ಬೆಳಗಾವಿ, ತಮ್ಮ ಹಿರೀಕರು ಮಾಡಿದ ತಪ್ಪು ಏನು ಎಂಬುದನ್ನು ಅವರಿಗೆ ಮನದಟ್ಟು ಮಾಡಿದೆ. ಹಾ.ಮಾ.ನಾಯಕರು ಎಷ್ಟೋ ವರ್ಷಗಳ ಹಿಂದೆ, 'ರಾಜ್ಯಗಳ ನಡುವಿನ ಈಗಿನ ರಾಜಕೀಯ ಗಡಿ ಎಂಬುದು ಒಂದು ವಾಸ್ತವ. ಕಾಸರಗೋಡು ನಮಗೆ ಬರುವುದಿಲ್ಲ' ಎಂಬ ಕಟುಸತ್ಯ ನುಡಿದಿದ್ದರು. ಅಂದರೆ ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗುವುದಿಲ್ಲ ಎಂದೂ ಅರ್ಥ. ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಪಟ್ಟಣಗಳಾಗಿರುವ, ಎಲ್ಲ ಫಲಕಗಳಲ್ಲಿ ಮರಾಠಿಯೇ ಮಿಂಚುತ್ತಿದ್ದ ನಿಪ್ಪಾಣಿ, ಖಾನಾಪುರಗಳೇ ಈಗ ಬದಲಾಗಿವೆ. ಅಂದರೆ, ಬೆಳಗಾವಿ ನಮ್ಮದು ಎಂದು ಹೇಳಲು ಅಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸುವ ಅಗತ್ಯವಿರಲಿಲ್ಲ. ಸಮ್ಮೇಳನದಲ್ಲಿ ಮರಾಠಿಗರನ್ನು ಕೆಣಕುವಂಥ ಮಾತುಗಳ ಅಗತ್ಯವೂ ಇರಲಿಲ್ಲ. ಇಂಥ ಸಮ್ಮೇಳನ ಮಾಡಬೇಕಾದುದು ಇನ್ನೂ ಬೇರೆ ಏನನ್ನೋ ಹೇಳುವುದಕ್ಕಾಗಿ, ಬಹುಶಃ ಅದನ್ನೇ ಅಷ್ಟು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದ ಕನ್ನಡಿಗರು ಬಯಸುತ್ತಿದ್ದಿರಬೇಕು.

ಯಡಿಯೂರಪ್ಪನವರು ಈ ಸಮ್ಮೇಳನದ ಮೊದಲ ದಿನ, ಬೆಳಗಾವಿಯಲ್ಲಿ 25 ಕೋಟಿ ರೂಪಾಯಿ ವೆಚ್ಚದಲ್ಲಿ ಲಾಲ್‌ಬಾಗ್ ಮಾದರಿ ಉದ್ಯಾನ ಸ್ಥಾಪನೆಯ ಪ್ರಕಟಣೆ ಮಾಡಿದರು. ಬೆಂಗಳೂರು ಸಾಹಿತ್ಯ ಸಮ್ಮೇಳನದಲ್ಲಿ ಅಷ್ಟೇ ವೆಚ್ಚದಲ್ಲಿ ಭುವನೇಶ್ವರಿ ಪ್ರತಿಮೆಯ ಸ್ಥಾಪನೆಯ ಪ್ರಕಟಣೆ ಮಾಡಿದ್ದರು. ಎರಡರಿಂದಲೂ ಕನ್ನಡ ಬೆಳೆಯುವುದಿಲ್ಲ. ಕನ್ನಡದ ಬದುಕು ಉದ್ಧಾರವಾಗುವುದಿಲ್ಲ. ಸಮ್ಮೇಳನಕ್ಕಿಂತ ಮುಂಚೆ ಕನ್ನಡ ಮಾಧ್ಯಮದ ವಿಚಾರ ದೊಡ್ಡದಾಗಿಯೇ ಪ್ರಸ್ತಾಪವಾಯಿತು. ಕಲಿಕೆ, ಮಾತೃಭಾಷೆಯ ಮಾಧ್ಯಮದಲ್ಲಿಯೇ ಇರಬೇಕು, ಇಂಗ್ಲಿಷ್‌ನ್ನು ಒಂದು ಭಾಷೆಯಾಗಿ ಸಮರ್ಥವಾಗಿ ಕಲಿಯಬೇಕು ಎಂಬುದರಲ್ಲಿ ಈಗ ಯಾರ ಭಿನ್ನಾಭಿಪ್ರಾಯವೂ ಇಲ್ಲ. ಆದರೆ, ಕನ್ನಡ ಮಾಧ್ಯಮ ಶಾಲೆಗಳ ಗುಣಮಟ್ಟದ್ದೇ ದೊಡ್ಡ ಸಮಸ್ಯೆ. ಯಡಿಯೂರಪ್ಪನವರು ಪ್ರತಿವರ್ಷ ಕೇಂದ್ರೀಯ ವಿದ್ಯಾಲಯ ಮಟ್ಟದ 25 ಕನ್ನಡ ಮಾಧ್ಯಮ ಶಾಲೆಗಳನ್ನು ತಮ್ಮ ಸರ್ಕಾರ ಸ್ಥಾಪಿಸುತ್ತದೆ ಎಂದು ಪ್ರಕಟಿಸಿದ್ದರೆ ಕನ್ನಡ ಮಾಧ್ಯಮದಲ್ಲಿಯೇ ಕಲಿಯಬೇಕು, ಕಲಿಸಬೇಕು ಎನ್ನುವ ಎಲ್ಲರಿಗೂ ದೊಡ್ಡ ಸಮಾಧಾನ ಆಗುತ್ತಿತ್ತು. ನಾರಾಯಣಮೂರ್ತಿಯವರು ಸಾವಿರಾರು ಕೋಟಿಗಳ ಒಡೆಯ. ಅವರಾದರೂ ತಮ್ಮ ಉದ್ಘಾಟನಾ ಭಾಷಣದಲ್ಲಿ ಪ್ರತಿಯೊಂದು ತಾಲ್ಲೂಕು ಕೇಂದ್ರದಲ್ಲಿ ತಮ್ಮ ಸಂಸ್ಥೆ ಒಂದೊಂದು ಕೋಟಿ ರೂಪಾಯಿ ಆರಂಭಿಕ ವೆಚ್ಚದಲ್ಲಿ ಒಂದೊಂದು ಕನ್ನಡ ಮಾಧ್ಯಮ ಶಾಲೆಯನ್ನು ತೆರೆಯುತ್ತದೆ ಎಂದು ಘೋಷಿಸಿದ್ದರೆ ಇಡೀ ಕನ್ನಡ ನಾಡು ಅವರಿಗೆ ಋಣಿಯಾಗಿರುತ್ತಿತ್ತು. ಅದು ಉಳಿಯುವ ಕೆಲಸ ಎನಿಸುತ್ತಿತ್ತು. ಇನ್‌ಫೋಸಿಸ್ ಸಂಸ್ಥೆಯ ಹೆಸರು ಕನ್ನಡ ಭಾಷೆಯ ಇತಿಹಾಸದಲ್ಲಿ ಅಜರಾಮರ ಆಗುತ್ತಿತ್ತು. 'ಕನ್ನಡಕ್ಕೆ ನಾರಾಯಣಮೂರ್ತಿ ಏನು ಮಾಡಿದ್ದಾರೆ' ಎಂಬ ಸವಾಲಿಗೆ ಅವರು ಉತ್ತರ ಕೊಟ್ಟಂತೆಯೂ ಆಗುತ್ತಿತ್ತು. ಇಬ್ಬರಿಗೂ ಅದು ಹೊಳೆಯಲಿಲ್ಲ.

ನಮ್ಮ ಮಕ್ಕಳು ನಿಜಕ್ಕೂ ಬುದ್ಧಿವಂತರಾಗಬೇಕಾದರೆ, ಸ್ವತಂತ್ರವಾಗಿ ಆಲೋಚನೆ ಮಾಡುವಂಥವರಾಗಬೇಕಾದರೆ ಮಾತೃಭಾಷೆಯಲ್ಲಿಯೇ ಕಲಿಯಬೇಕಾಗುತ್ತದೆ. ಆದರೆ, ಈಗ ಅಂಥ ಅವಕಾಶ ರಾಜಧಾನಿಯಲ್ಲಿಯೇ ಇಲ್ಲದಂತೆ ಆಗಿದೆ. ಇಂಗ್ಲಿಷ್ ಮಾಧ್ಯಮ ಶಾಲೆಗಳ ಮೋಡಿಗೆ, ಕನ್ನಡ ಮಾಧ್ಯಮದಲ್ಲಿಯೇ ಪದವಿ ವರೆಗೆ ಹಟದಿಂದ ಕಲಿತ ನನ್ನಂಥವರೂ ಮರುಳಾಗುತ್ತಿದ್ದೇವೆ. ಅತ್ಯುತ್ತಮ ಗುಣಮಟ್ಟದ ಇಂಗ್ಲಿಷ್ ಮಾಧ್ಯಮ ಶಾಲೆಗಳ ಮಾದರಿಯಲ್ಲಿಯೇ ಕನ್ನಡ ಮಾಧ್ಯಮ ಶಾಲೆಗಳನ್ನೂ ಸ್ಥಾಪಿಸಿದರೆ, ಅಲ್ಲಿ ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಸಮರ್ಥವಾಗಿ ಕಲಿಸುವ ವ್ಯವಸ್ಥೆ ಇದೆ ಎನ್ನುವುದಾದರೆ ಪಾಲಕರು ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗಳಿಗೆ ಕಳಿಸುತ್ತಾರೆ ಎಂದು ಅನಿಸುವುದಿಲ್ಲ. ಈಗಾಗಲೇ ಕರ್ನಾಟಕ ಏಕೀಕರಣವಾಗಿ 55 ವರ್ಷಗಳೇ ಕಳೆದು ಹೋಗಿವೆ. ಕನ್ನಡ ಮಾಧ್ಯಮ ಶಾಲೆ ಆರಂಭಿಸಲು ಬಹಳಷ್ಟು ತಡವಾಗಿದೆ. ಒಳ್ಳೆಯ ಕೆಲಸ ಮಾಡಲು ತಡ ಎಂಬುದು ಇರುವುದಿಲ್ಲ. ಈಗಲೂ ಅದಕ್ಕೆ ನಾವು ಮುನ್ನುಡಿ ಬರೆಯಬಹುದು. ಆಗಬೇಕಾದ ಇನ್ನೊಂದು ಕೆಲಸ ಕನ್ನಡವನ್ನು ಆಡಳಿತ ಭಾಷೆ ಮಾಡುವುದು. ಎಷ್ಟು ಕಾವಲು ಸಮಿತಿಗಳು, ಎಷ್ಟು ಅಭಿವೃದ್ಧಿ ಪ್ರಾಧಿಕಾರಗಳು ಬಂದರೂ ಈ ಕೆಲಸ ಸಮಾಧಾನಕರ ಎನ್ನುವಂತೆ ಆಗಿಲ್ಲ. ಈ ಎರಡು ಕೆಲಸಗಳಿಗೂ ಇಚ್ಛಾಶಕ್ತಿ ಪ್ರಕಟವಾಗಬೇಕಾದುದು ವಿಧಾನಸೌಧದಿಂದ, ವಿಧಾನಸೌಧದಲ್ಲಿ ಕುಳಿತವರಿಗೆ ಮೈ ಜುಂ ಎನ್ನಿಸುವಂಥ ಜನಸಾಗರದ ಮುಂದೆಯೂ ಲಾಲ್‌ಬಾಗ್‌ಗಳು, ಭುವನೇಶ್ವರಿ ಪ್ರತಿಮೆಯಂಥ ವಿಚಿತ್ರ ಸಂಕೇತಗಳು ತಲೆಯಲ್ಲಿ ಸುಳಿಯುತ್ತವೆಯೇ ಹೊರತು ಕನ್ನಡ ಭಾಷೆಯ ಪ್ರತಿಷ್ಠಾಪನೆಯಂಥ ಉಳಿಯುವ ಕೆಲಸಗಳು ಅಲ್ಲ. ಇಂಥ ಉಳಿಯುವ ಕೆಲಸಗಳು ನಾಯಕರಿಗೆ ಹೊಳೆಯದೇ ಇದ್ದರೆ, ಹೊಳೆದು ಅವುಗಳನ್ನು ಜಾರಿಗೆ ತರಲು ಅಣಿಯಾಗದೇ ಇದ್ದರೆ ಆಗ ವಿಶ್ವ ಕನ್ನಡ ಸಮ್ಮೇಳನದಂಥ ಒಂದು ಅಭೂತಪೂರ್ವ ಯಶಸ್ಸು ಕೂಡ ಇತಿಹಾಸದ ಪುಟಗಳಲ್ಲಿ ಮರೆತು ಹೋಗುತ್ತದೆ. ಮತ್ತೆ ಮತ್ತೆ ಐದು ವರ್ಷಕ್ಕೊಮ್ಮೆ ಅದನ್ನೇ ಮಾಡಿದರೆ ಏನು ಪ್ರಯೋಜನ?

20-03-2011

# ಕನ್ನಡ ಶಾಲೆಗೆ

# ಮಾದಲಿಯಿದ್ದರೂ ಮನಸ್ಸು ಇಲ್ಲ!

ಒಂದು ಕನ್ನಡ ಮಾಧ್ಯಮ ಶಾಲೆ ಆರಂಭಿಸಲು ಬಹಳ ದುಡೇನೂ ಬೇಕಾಗುವುದಿಲ್ಲ. ಜಮೀನು, ಕಟ್ಟಡ ಇತ್ಯಾದಿಗೆಲ್ಲ 25 ಲಕ್ಷ ರೂಪಾಯಿ, ವಾರ್ಷಿಕ ನಿರ್ವಹಣೆ ವೆಚ್ಚಕ್ಕೆ ಎಂದು 15 ಲಕ್ಷ ರೂಪಾಯಿ ಇದ್ದರೆ ಸಾಕು. ಒಂದು ಉತ್ತಮ ಕನ್ನಡ ಶಾಲೆ ನಡೆಸಬಹುದು.'

-ಸುಳ್ಯದ ಪ್ರೊ.ಚಂದ್ರಶೇಖರ ದಾಮ್ಲ ಹೇಳುತ್ತಿದ್ದರು. ಅವರು ವಿಶ್ವ ಕನ್ನಡ ಸಮ್ಮೇಳನದ ನಂತರ ನಾನು ಬರೆದಿದ್ದ .. ಮರೆತು ಹೋದ ಸಂಗತಿಗಳನ್ನು ನೆನಪಿಸಿಕೊಂಡು ನನ್ನ ಜತೆಗೆ ಮಾತನಾಡುತ್ತಿದ್ದರು.

ಅವರು ಕಳೆದ 11 ವರ್ಷಗಳಿಂದ ತಮ್ಮ ಊರಿನಲ್ಲಿ ಮಾದರಿ ಕನ್ನಡ ಮಾಧ್ಯಮ ಶಾಲೆ ನಡೆಸುತ್ತಿದ್ದಾರೆ. ದಾಮ್ಲ ಮತ್ತು ಗೆಳೆಯರೆಲ್ಲ ಸೇರಿ ಆರಂಭಿಸಿದ ಶಾಲೆಯದು. ಅದಕ್ಕೆ “ಸ್ನೇಹ ಸದನ' ಎಂದು ಹೆಸರು. ಆಗಾಗಲೇ ಇಂಗ್ಲಿಷ್ ಮಾಧ್ಯಮ ಶಾಲೆಗಳ ಹಾವಳಿ ಹೆಚ್ಚುತ್ತಿತ್ತು. ಅವರ ಊರಿನಲ್ಲಿಯೇ ಪ್ರತಿಷ್ಠಿತ ಇಂಗ್ಲಿಷ್ ಮಾಧ್ಯಮ ಶಾಲೆಯಿತ್ತು. ದಾಮ್ಲ ಅವರು ಆ ಶಾಲೆ ಬಿಟ್ಟು ತಮ್ಮ ಮಗನನ್ನು ಸರ್ಕಾರದ ಕನ್ನಡ ಮಾಧ್ಯಮ ಶಾಲೆಗೆ ಕಳುಹಿಸಿದ್ದರು. ಊರಿನ ಜನ,

'ದಾಮ್ಲ ಅವರಿಗೆ ಏನೋಹುಚ್ಚು' ಎಂದುಕೊಂಡರು. ಇಂಥ ಇಂಗ್ಲಿಷ್ ಶಾಲೆ ಇರುವಾಗ ಯಾರಾದರೂ ಕನ್ನಡ ಮಾಧ್ಯಮ ಶಾಲೆಗೆ ಮಕ್ಕಳನ್ನು ಕಳುಹಿಸುತ್ತಾರೆಯೇ ಎಂದು ಅವರಿಗೆ ಸೋಜಿಗ.

ದಾಮ್ಲ ಅವರು ಸುಳ್ಯದ ಎನ್.ಎಂ.ಎಸ್ ಕಾಲೇಜಿನಲ್ಲಿ ಸಮಾಜ ವಿಜ್ಞಾನ ವಿಷಯದ ಪ್ರಾಧ್ಯಾಪಕ. ಹಾಲಿ ಶಿಕ್ಷಣ ವ್ಯವಸ್ಥೆ ಸಮಾಜದಲ್ಲಿ ಸಮಾನತೆ ತರುವ ಒಂದು ಸಾಧನವಲ್ಲ ಎಂದು ಅವರಿಗೆ ಆಗಲೇ ಮನವರಿಕೆ ಆಗಿತ್ತು. ಬರೀ ಮಗನನ್ನು ಮಾತ್ರ ಕನ್ನಡ ಮಾಧ್ಯಮಕ್ಕೆ ಕಳುಹಿಸಿದರೆ ಸಾಲದು ತನ್ನ ಸುತ್ತಲಿನ ಸಮಾಜಕ್ಕೂ ಏನಾದರೂ ಮಾಡಬೇಕು ಎಂದು ಅಂದುಕೊಂಡು ಗೆಳೆಯರೆಲ್ಲ ಸೇರಿಕೊಂಡು ಯೋಚಿಸಿದಾಗ ಹೊಳೆದುದು 'ಸ್ನೇಹ ಸದನ' ಶಾಲೆ ಪರಿಕಲ್ಪನೆ.

ಚಂದ್ರಶೇಖರ ದಾಮ್ಲ, ಎಂಜಿನಿಯರ್ ಎಸ್.ಕೆ.ಆನಂದಕುಮಾರ್, ಅವರ ಪತ್ನಿ ರೇಖಾ, ತೂಗು ಸೇತುವೆಗಳ ಹರಿಕಾರ ಎಂದೇ ಹೆಸರಾದ ಗಿರೀಶ್ ಭಾರದ್ವಾಜ್, ಪ್ರಸಿದ್ಧ ವೈದ್ಯ ಡಾ.ವಿದ್ಯಾಶಾಂಭವ ಪಾರೆ ಮತ್ತು ಉದ್ಯಮಿ ಶ್ರೀಕರ ದಾಮ್ಲ ಅವರೆಲ್ಲ ಸೇರಿಕೊಂಡು ಊರ ಹೊರಗಿನ ಮೂರು ಎಕರೆ ಕಾಡು ಜಾಗ ಖರೀದಿಸಿ ಎರಡು ಕೊಠಡಿಗಳನ್ನು ನಿರ್ಮಿಸಿ ಕನ್ನಡ ಮಾಧ್ಯಮ ಶಾಲೆ ಆರಂಭಿಸಿದರು. ಯು.ಆರ್.ಅನಂತಮೂರ್ತಿ ಶಾಲೆಯನ್ನು ಉದ್ಘಾಟಿಸಿದ್ದರು. ಇದು ಪಕ್ಕಾ ಕನ್ನಡ ಮಾಧ್ಯಮ ಶಾಲೆಯಾಗಿತ್ತು. ಆದರೆ, ಒಂದನೇ ತರಗತಿಯಿಂದಲೇ ಮಕ್ಕಳಿಗೆ ಇಂಗ್ಲಿಷ್‌ಅನ್ನೂ ಒಂದು ಭಾಷೆಯಾಗಿ ಕಲಿಸಲಾಗುತ್ತಿತ್ತು. ಈ ಮಕ್ಕಳು 5ನೇ ತರಗತಿಗೆ ಬಂದಾಗ ಅವರಿಗೆ ಇಂಗ್ಲಿಷ್ ಕಲಿಕೆ ಒಂದು ಹೊರೆ ಆಗಲಿಲ್ಲ. ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ 5ನೇ ತರಗತಿಯಲ್ಲಿ ಇಂಗ್ಲಿಷ್ ಕಲಿಕೆ ಆರಂಭವಾಗುತ್ತದೆ. ಅಂದರೆ, ಕನ್ನಡ ಮಾಧ್ಯಮದಲ್ಲಿ ಕಲಿಯಬೇಕು, ಜತೆಗೆ ಇಂಗ್ಲಿಷ್ ಅನ್ನೂ ಒಂದು ಭಾಷೆಯಾಗಿ ಕಲಿಯಬೇಕು ಎಂಬುದನ್ನು ಆರಂಭದ ದಿನದಿಂದಲೇ ಈ ಶಾಲೆ ಜಾರಿಗೆ ತಂದಿತು. ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದುವ ಮಕ್ಕಳಿಗೆ 5ನೇ ತರಗತಿಗೆ ಬಂದಾಗ ಆರಂಭವಾದ ಇಂಗ್ಲಿಷ್ ಪುಸ್ತಕ 'ಹೊರೆ' ಅನಿಸಿದರೆ 'ಸ್ನೇಹ ಸದನ' ಶಾಲೆಯ ಮಕ್ಕಳಿಗೆ ಅನಿಸಲಿಲ್ಲ. ಈ ಶಾಲೆಯಲ್ಲಿ ಓದಿದ ಮಕ್ಕಳು ಈಗ ಪದವಿ ಮಟ್ಟದ ವರೆಗೆ ತಲುಪಿದ್ದಾರೆ. ಅವರಿಗೆ ಇಂಗ್ಲಿಷ್‌ನ ಭಯವಿಲ್ಲ. ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಓದಿದ ಮಕ್ಕಳಿಗಿಂತ ಚೆನ್ನಾಗಿ ಇಂಗ್ಲಿಷ್ ಮಾತನಾಡುತ್ತಾರೆ, ಭಾಷೆಯ ಮೇಲೆ ಪ್ರೌಢಿಮೆ ಸಾಧಿಸಿದ್ದಾರೆ.

ಕಳೆದ 11 ವರ್ಷಗಳಲ್ಲಿ 'ಸ್ನೇಹ ಸದನ' ದೊಡ್ಡದಾಗಿ ಬೆಳೆದಿದೆ. ಅಲ್ಲಿ ಈಗ ಒಂದರಿಂದ ಹತ್ತನೇ ತರಗತಿ ವರೆಗೆ ಶಿಕ್ಷಣ ದೊರೆಯುತ್ತದೆ. ಪ್ರತಿ ತರಗತಿಯಲ್ಲಿ 30ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇರುವುದಿಲ್ಲ. ಪ್ರತಿ ತರಗತಿಗೆ ಒಬ್ಬೊಬ್ಬರಂತೆ ಶಿಕ್ಷಕರ ನೇಮಕವಾಗಿದೆ. ಹೆಚ್ಚುವರಿಯಾಗಿ ಮೂವರು ಶಿಕ್ಷಕರು ಇದ್ದಾರೆ. 'ಯಾರಾದರೂ ಶಿಕ್ಷಕರು ರಜೆಯಿದ್ದರೆ ತರಗತಿಗೆ ಧಕ್ಕೆಯಾಗಬಾರದು. ಮಕ್ಕಳ ವೇಳೆ ಬಹುಮುಖ್ಯ ಎಂಬ ಕಾಳಜಿ' ಈ ನೇಮಕದ ಹಿಂದೆ ಇದೆ. ಏರು ತಗ್ಗುಗಳ, ಗುಡ್ಡದ ಓರೆಯಲ್ಲಿ ಇರುವ ಶಾಲೆಯ ಪರಿಸರವನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. 20 ಮೀಟರ್

ವ್ಯಾಸದ ವರ್ತುಲಾಕಾರದ ಕೊಠಡಿಗಳು ಕಲಿಕೆಗೆ ಪೂರಕವಾಗಿವೆ. ಶಾಲೆಯ ಆವರಣದಲ್ಲಿ ಔಷಧೀಯ ತೋಟವಿದೆ. ಈ ಸಸ್ಯಗಳಿಂದ ತಯಾರಿಸಿದ ಕಷಾಯವನ್ನು ಮಳೆಗಾಲದ ಆರಂಭದಲ್ಲಿ ಮಕ್ಕಳಿಗೆ ಕುಡಿಸುತ್ತಾರೆ. ಅದೊಂದು ದೊಡ್ಡ ಸಂಭ್ರಮ. ಮಕ್ಕಳು ಶಾಲೆಯ ಬಿಡುವಿನ ವೇಳೆಯಲ್ಲಿ ಕ್ರಿಕೆಟ್ ಬಿಟ್ಟು ಬೇರೆಲ್ಲ ಆಟ ಆಡಬಹುದು. ಹೇಗೂ ಅವರು ಬಿಡುವಿನ ವೇಳೆಯಲ್ಲಿ ಕ್ರಿಕೆಟ್ ಬಿಟ್ಟು ಬೇರೆ ಯಾವ ಆಟವನ್ನೂ ಆಡುವುದಿಲ್ಲವಲ್ಲ? ಮಕ್ಕಳಿಗೆ ಕನ್ನಡ ಸಾಹಿತ್ಯ, ಸಂಸ್ಕೃತಿಯನ್ನು ಪರಿಚಯಿಸುವುದು ಮಾತ್ರವಲ್ಲ, ಕಥೆ, ಕವಿತೆ, ಪ್ರಬಂಧ, ಭಾಷಣದಂಥ ಸ್ಪರ್ಧೆಗಳೂ ನಡೆಯುತ್ತವೆ. ಕಳೆದ ಎಂಟು ವರ್ಷಗಳಿಂದ ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳನ್ನು ಒಳಗೊಂಡ 'ಮಕ್ಕಳ ಸಾಹಿತ್ಯ ಸಂಗಮ' ನಡೆಸುವ ಹಸ್ತಪ್ರತಿ ಸ್ಪರ್ಧೆಯಲ್ಲಿ ಸ್ನೇಹ ಸದನ ಶಾಲೆಯ ಮಕ್ಕಳಿಗೇ ಪ್ರಥಮ ಪ್ರಶಸ್ತಿ!

ದಾಮ್ಲ ಅವರು ಹೇಳುತ್ತಿದ್ದರು: 'ನಮ್ಮ ಶಾಲೆಯಲ್ಲಿ ಇರುವಂಥ ಪರಿಸರ ಇನ್ನೆಲ್ಲೂ ಇಲ್ಲ. ಆದರೂ, ಕನ್ನಡ ಸಾಹಿತಿಗಳ, ಸಾಹಿತ್ಯ ಸಂಘಟನೆಗಳ ಪದಾಧಿಕಾರಿಗಳ ಮಕ್ಕಳು ನಮ್ಮ ಶಾಲೆಗೆ ಓದಲು ಬರುವುದಿಲ್ಲ. ಸಮಾಜದ ಕೆನೆಪದರಿಗೆ ಸೇರಿದವರ ಮಕ್ಕಳೂ ಈ ಶಾಲೆಗೆ ಬರುವುದಿಲ್ಲ. ಬರುವವರು ಏನಿದ್ದರೂ ತಮ್ಮ ಮಕ್ಕಳು ಕನ್ನಡ ಮಾಧ್ಯಮ ಶಾಲೆಯಲ್ಲಿಯೇ ಓದಬೇಕು ಎಂದು ನನ್ನ ಹಾಗೆ ಹುಚ್ಚು ಇರುವವರ ಮಕ್ಕಳು, ಇಲ್ಲವೇ ಇಂಗ್ಲಿಷ್ ಮಾಧ್ಯಮ ಶಾಲೆಯ ಖರ್ಚು ವೆಚ್ಚ ಭರಿಸಲಾಗದ ಬಡ ಮತ್ತು ಕೆಳ ಮಧ್ಯಮ ವರ್ಗದವರ ಮಕ್ಕಳು! ಇನ್ನೂ ಅಚ್ಚರಿ ಎಂದರೆ ಸಂಸ್ಕೃತಿ ರಕ್ಷಣೆ ಪ್ರತಿಪಾದಕರೂ ತಮ್ಮ ಮಕ್ಕಳನ್ನು ಈ ಶಾಲೆಗೆ ಕಳುಹಿಸುವುದಿಲ್ಲ. ಸಂಸ್ಕೃತಿ ಮತ್ತು ಭಾಷೆಗೆ ನೇರ ಸಂಬಂಧವಿದೆ ಎಂದು ಅವರಿಗೆ ಅರ್ಥವೇ ಆಗಿಲ್ಲ!'

ಈ ಶಾಲೆಯ ಪ್ರತಿ ಮಗು ವಾರ್ಷಿಕೋತ್ಸವದ ದಿನ ವೇದಿಕೆಯ ಮೇಲೆ ಹತ್ತಲೇಬೇಕು. ತನಗೆ ಗೊತ್ತಿರುವುದನ್ನು ಪ್ರದರ್ಶಿಸಬೇಕು. ಪ್ರತಿಯೊಬ್ಬ ಮಗುವಿಗೂ ಒಂದಲ್ಲ ಒಂದು ಪ್ರಶಸ್ತಿ ಸಿಕ್ಕೇ ಸಿಗುತ್ತದೆ. ಹಾಗೆ ಮಕ್ಕಳು ಪ್ರಶಸ್ತಿ ತೆಗೆದುಕೊಂಡು ಮನೆಗೆ ಹೋದಾಗ ಅವರ ತಂದೆ-ತಾಯಿ, 'ನನ್ನ ಜೀವನದಲ್ಲಿ ನಾನು ಒಂದೇ ಒಂದು ಪ್ರಶಸ್ತಿಯನ್ನು ಮನೆಗೆ ತರಲಿಲ್ಲ. ನನ್ನ ಮಗ-ಮಗಳು ಪ್ರತಿ ವರ್ಷ ಒಂದು ಪ್ರಶಸ್ತಿಯನ್ನು ತೆಗೆದುಕೊಂಡೇ ಮನೆಗೆ ಬರುತ್ತಾರೆ' ಎಂದು ಬೀಗುತ್ತಾರೆ. ಒಬ್ಬಿಬ್ಬರು ಮಕ್ಕಳಿಗೆ ಯಾವುದರಲ್ಲಿಯೂ ಪ್ರಶಸ್ತಿ ಬರಲಿಲ್ಲ. ಶಿಕ್ಷಕರಿಗೆ ಏನು ಮಾಡುವುದು ಎಂದು ಚಿಂತೆ. ದಾಮ್ಲ ಅವರು ಹೇಳಿದರು. 'ನೋಡಿ, ಈ ಮಕ್ಕಳಲ್ಲಿ ಇನ್ನೇನಾದರೂ ಪ್ರತಿಭೆ ಇರಬಹುದು' ಎಂದು. ಆ ಮಕ್ಕಳು ಮರ ಹತ್ತುವುದರಲ್ಲಿ ನಿಸ್ಸೀಮರಾಗಿದ್ದರು. ವೇಳೆ ಸಿಕ್ಕರೆ ಸಾಕು ಮರ ಹತ್ತಿ ಕುಳಿತು ಬಿಡುತ್ತಿದ್ದರು. ಶಿಕ್ಷಕರು ಮರ ಹತ್ತುವ ಸ್ಪರ್ಧೆ ಇಟ್ಟರು. ಈ ಮಕ್ಕಳಿಗೆ ಪ್ರಶಸ್ತಿ ಬಂತು!

ಸ್ನೇಹ ಸದನ ಶಾಲೆಯಲ್ಲಿ ಸೋಗೆ ಮರದ ಅಡಿಯಲ್ಲಿ 'ಬರಹದ ಮನೆ' ಎಂಬ ಒಂದು ಪ್ರತ್ಯೇಕ ಕೊಠಡಿಯೇ ಇದೆ. ಅಲ್ಲಿ ಹಾಕಿದ ಮರಳಿನ ಮೇಲೆ ಮಕ್ಕಳು ಅಕ್ಷರ ಬರೆಯುತ್ತಾರೆ. ಗುಬ್ಬಿ ಗೂಡು ಕಟ್ಟುತ್ತಾರೆ. ಮರಳಿನ ಮೇಲೆ ಏರಿ ಕುಣಿದು ಕುಪ್ಪಳಿಸುತ್ತಾರೆ. ಅಲ್ಲಿಯೂ ಅವರ ಕಲ್ಪನೆ ಅರಳುತ್ತದೆ, ಗರಿಗೆದರುತ್ತದೆ. ಮಗುವಿನ

ಸುಪ್ತ ಪ್ರತಿಭೆ ಹುಡುಕಲು ನಮ್ಮ ಸಾಂಪ್ರದಾಯಿಕ ಶಾಲೆಗಳಲ್ಲಿ, ಶಿಕ್ಷಣ ವ್ಯವಸ್ಥೆಯಲ್ಲಿ ಇಂಥ ಯಾವ ಕಲ್ಪನಾಶೀಲತೆಯೂ ಇಲ್ಲ.

'ಸಮಸ್ಯೆ ಇರುವುದು ಶಿಕ್ಷಕರ ತರಬೇತಿಯಲ್ಲಿಯೇ, ಟಿ.ಸಿ.ಎಚ್‌ನಲ್ಲಿ ಅತಿ ಹೆಚ್ಚು ಅಂಕ ಪಡೆದ ಬುದ್ಧಿವಂತರು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರಾಗಿ ನೇಮಕಗೊಳ್ಳುತ್ತಾರೆ. ಆದರೆ, ತರಬೇತಿ ಹಂತದಲ್ಲಿ ಕಲಿತುದಕ್ಕೂ ಶಾಲೆಯಲ್ಲಿ ಕಲಿಸುವುದಕ್ಕೂ ಅಂಥ ಸಂಬಂಧವಿಲ್ಲ. ಅವರಿಗೆ ನಾವು ಹೊಸದಾಗಿ 'ಕಲಿಸಿ', 'ಕಲಿಸುವಿಕೆ'ಗೆ ಹಚ್ಚಬೇಕಾಗುತ್ತದೆ. ಅದೇ ಒಂದು ದೊಡ್ಡ ಕೆಲಸ. ಕೆಲ ವರ್ಷ ಇಲ್ಲಿ ಕೆಲಸ ಮಾಡಿ ಸರ್ಕಾರಿ ನೌಕರಿಗೆ ಹೊರಟು ಹೋಗುತ್ತಾರೆ. ಇಲ್ಲಿ ಕಲಿತುದನ್ನ ಮರೆತು ಬಿಟ್ಟು ಅಲ್ಲಿ ಸರ್ಕಾರಿ ನೌಕರರಾಗುತ್ತಾರೆ! ವೃತ್ತಿಗೂ ನೌಕರಿಗೂ ದೊಡ್ಡ ವ್ಯತ್ಯಾಸ.' ದಾಮ್ಲ ಅವರು ಹೇಳಿದ್ದು ಎಲ್ಲ ವೃತ್ತಿಗೂ ಅನ್ವಯಿಸುವಂಥ ಮಾತು. ಸರ್ಕಾರವೇ ಹಾಗೆ, ಅದು ಎಲ್ಲ ಸೃಜನಶೀಲತೆಯನ್ನು ಕೊಲ್ಲುತ್ತದೆ ಇಲ್ಲವೇ ನಿರಾಕರಿಸುತ್ತದೆ. ನಾಲ್ಕನೇ ತರಗತಿ ವರೆಗೆ ಕನ್ನಡ ಮಾಧ್ಯಮ ಶಾಲೆ ನಡೆಸಲು ಸರ್ಕಾರದ ಅನುಮತಿ ಬೇಕಿಲ್ಲ. 5ನೇ ತರಗತಿಯಿಂದ ಬೇಕು. ದಾಮ್ಲೆಯವರು ಅದಕ್ಕೆ ಅನುಮತಿ ಪಡೆಯಲು ಸರ್ಕಾರಿ ಕಚೇರಿಗಳ ಕಂಬ ಕಂಬ ಸುತ್ತಿದ್ದಕ್ಕೆ ಲೆಕ್ಕವಿಲ್ಲ. ಅವರನ್ನು ನಂಬುವವರು ಸರ್ಕಾರದಲ್ಲಿ ಯಾರೂ ಇರಲಿಲ್ಲ. 'ಕನ್ನಡ ಮಾಧ್ಯಮವೆಂದು ಅನುಮತಿ ತೆಗೆದುಕೊಳ್ಳುತ್ತೀರಿ. ನಂತರ ಇಂಗ್ಲಿಷ್ ಮಾಧ್ಯಮ ನಡೆಸುತ್ತೀರಿ' ಎಂದು ಅವರನ್ನು ಸಾಗ ಹಾಕಿದವರೇ ಹೆಚ್ಚು. ಅದು ನಿಜ ಕೂಡ. ಕೊನೆಗೆ ಸುಳ್ಯದ ಶಾಸಕರು, ದಾಮ್ಲ ಅವರ ಪರವಾಗಿ ಪ್ರಮಾಣ ಮಾಡಿದ ನಂತರವೇ ಶಾಲೆಗೆ ಅನುಮತಿ ಸಿಕ್ಕುದು.

ಈಗಲೂ ಆ ಶಾಲೆಗೆ ಸರ್ಕಾರದ ಅನುದಾನ ಸಿಕ್ಕಿಲ್ಲ. ಸಿಗುವ ಸಾಧ್ಯತೆಯೂ ಇಲ್ಲ. ಈಗಿನ ನಿಯಮದ ಪ್ರಕಾರ 1994ಕ್ಕಿಂತ ಮುಂಚೆ ಆರಂಭವಾದ ಶಾಲೆಗಳಿಗೆ ಮಾತ್ರ ಅನುದಾನ, ನಂತರ ಶುರುವಾದುದಕ್ಕೆ ಇಲ್ಲ. ಸರ್ಕಾರ ಕುರುಡೂ ಆಗಿರುತ್ತದೆ. ಅದು ಯಾವಾಗಲೂ ಕಡತ ನೋಡಿ ತೀರ್ಮಾನ ತೆಗೆದುಕೊಳ್ಳುತ್ತದೆ. ಅದರ ಆಚೆ ಅದಕ್ಕೆ ಕಣ್ಣು ಕಾಣುವುದಿಲ್ಲ. ಶಾಸಕರು, ಸಚಿವರು, ಅಧಿಕಾರಿಗಳು ಈ ಶಾಲೆಗೆ ಬಂದಿದ್ದಾರೆ. “ಅದ್ಭುತ' ಎಂದು ಉದ್ಗಾರ ತೆಗೆದಿದ್ದಾರೆ. 'ಇಂಥ ಶಾಲೆಗಳು ಇಡೀ ಕರ್ನಾಟಕದಲ್ಲಿ ಐದಾರು ಮಾತ್ರ' ಎಂದು ಮೂಗಿನ ಮೇಲೆ ಬೆರಳು ಇಟ್ಟುಕೊಂಡಿದ್ದಾರೆ. ಆದರೂ 'ಸ್ನೇಹ ಸದನ' ಶಾಲೆಯನ್ನು ಅನುದಾನ ಕಕ್ಷೆಗೆ ಒಳಪಡಿಸಲು ಸಾಧ್ಯವಾಗಲಿಲ್ಲ. ಸರ್ಕಾರದ ಶಿಕ್ಷಕರಲ್ಲಿ ಮಾತ್ರವಲ್ಲ ಶಿಕ್ಷಣ ಇಲಾಖೆಯಲ್ಲಿ ಜಡತ್ವವೇನು ಕಡಿಮೆ ಇದೆಯೇ? ಹೋಗಲಿ, ಇಲ್ಲಿ ಬರುವ ಮಕ್ಕಳಿಗೆ ಮಧ್ಯಾಹ್ನದ ಊಟದ ಯೋಜನೆಯೂ ಅನ್ವಯವಾಗಲಿಲ್ಲ. ಶಾಲೆಯ ಆಡಳಿತ ಮಂಡಳಿಯವರೇ ಮಕ್ಕಳಿಗೆ ಸಹಾಯಧನದ ನೆರವಿನಿಂದ ಕಡಿಮೆ ವೆಚ್ಚದ ಊಟದ ವ್ಯವಸ್ಥೆ ಮಾಡುತ್ತಾರೆ. ಬಹುತೇಕ ಮಕ್ಕಳು ಮನೆಯಿಂದಲೇ ಊಟ ಕಟ್ಟಿಕೊಂಡು ಬರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಸಗಿಯವರು ಮಾಡಿದ ಶಿಕ್ಷಣ ಕ್ರಾಂತಿ ದೊಡ್ಡದು. ಇಡೀ ದೇಶದಲ್ಲಿ, ಮೊದಲ ಖಾಸಗಿ ವೈದ್ಯಕೀಯ ಕಾಲೇಜು ಆರಂಭವಾದುದು ಈ ಜಿಲ್ಲೆಯಲ್ಲಿಯೇ. ಈಗ ಸುಳ್ಯ, ಪುತ್ತೂರು, ಮೂಡುಬಿದರೆಯಂಥ ಪಟ್ಟಣಗಳಲ್ಲಿ ಬೇರೆ



ಬೇರೆ ಊರುಗಳಿಂದ ಬಂದ ಮಕ್ಕಳು ಓದುತ್ತಿದ್ದಾರೆ. ಅತ್ತ ಸರ್ಕಾರದ ಕನ್ನಡ ಮಾಧ್ಯಮ ಶಾಲೆಗಳು ಮಕ್ಕಳು ಇಲ್ಲದೆ ಒಂದೊಂದಾಗಿ ಮುಚ್ಚುತ್ತಿವೆ. ಶೈಕ್ಷಣಿಕ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಿದ ಈ ಜಿಲ್ಲೆ ಶಿಕ್ಷಣ ತರುವ ಅಸಮಾನತೆಗೂ ಒಂದು 'ಕೆಟ್ಟ' ಮಾದರಿ. ಅದರ ನಡುವೆ ಸುಳ್ಯದ 'ಸ್ನೇಹ ಸದನ' ಶಾಲೆ ಒಂದು ಅಪವಾದದಂತೆ, ಒಂದು ಜೀವ ಚೈತನ್ಯದಂತೆ ಕಾರ್ಯ ನಿರ್ವಹಿಸುತ್ತಿದೆ.

ಈ ಶಾಲೆಗೆ ಬಂದ ಕೂಡಲೇ ಮಕ್ಕಳು ತಮ್ಮ ಚಪ್ಪಲಿ ಅಥವಾ ಶೂ ಕಳಚಿ ಇಡಬೇಕು. ಶಾಲೆ ಮುಗಿಯುವ ವರೆಗೂ ಅವರು ಬರಿಗಾಲಿನಲ್ಲಿಯೇ ಅಡ್ಡಾಡಬೇಕು. ಮಕ್ಕಳಲ್ಲಿ ಮಣ್ಣಿನಿಂದ, ಸುತ್ತಲಿನ ಪರಿಸರದಿಂದ ಮತ್ತು ಮೇಲಿನ ಸೂರ್ಯನಿಂದ 'ಶಕ್ತಿ' ತುಂಬಿಕೊಳ್ಳುತ್ತದೆ. ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಓದುವ ಮಕ್ಕಳು ಉಸಿರುಗಟ್ಟಿಸುವ ಸಮವಸ್ತ್ರ, ಪಾದಕ್ಕೆ ಗಾಳಿಯಾಡಲು ಅವಕಾಶವೇ ಇಲ್ಲದ ಸಾಕ್ಸ್, ಶೂಗಳನ್ನು ಬಿಚ್ಚುವ ಹಾಗೆಯೇ ಇಲ್ಲ. ಇದು ಬರೀ ಸಮವಸ್ತ್ರ, ಶೂ, ಸಾಕ್ಸಿನ ಸಮಸ್ಯೆಯಲ್ಲ. ಮಾತೃಭಾಷೆಯಲ್ಲಿ ಕಲಿಕೆಯೆಂಬುದು ನೇರವಾಗಿ ಮಣ್ಣಿನ ಜತೆಗೆ ಸಂಪರ್ಕ ಇರುವ ಶಿಕ್ಷಣಕ್ರಮ. ನಮಗೆ ಯಾರಿಗೂ ಈ ನೆಲದ ಜತೆಗೆ ಸಂಪರ್ಕವೇ ಬೇಡವಾಗಿದೆ. ನಮ್ಮ ಬೇರುಗಳನ್ನು ಕಿತ್ತುಕೊಂಡು ಬಹುದೂರ ಬಂದಿದ್ದೇವೆ. 'ಸ್ನೇಹ ಸದನ'ದಂಥ ಶಾಲೆಗಳು ಒಂದು ಸಂಕೇತವಾಗಿ ಉಳಿದು ಬಿಡುವ ಅಪಾಯವಿದೆ. ಯಡಿಯೂರಪ್ಪನವರು, ತಮ್ಮ ಮಕ್ಕಳನ್ನು ತಮ್ಮ ಊರಿನ ಕನ್ನಡ ಮಾಧ್ಯಮ ಶಾಲೆಗೇ ಕಳುಹಿಸುವ ಶಿಕ್ಷಣ ಸಚಿವ ಕಾಗೇರಿಯವರು 'ಸ್ನೇಹ ಸದನ'ದ ಮಾದರಿಗಳನ್ನು ತಾಲ್ಲೂಕಿಗೆ ಒಂದರಂತೆಯಾದರೂ ಸೃಷ್ಟಿ ಮಾಡುವುದು ಬೇಡವೇ? ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಓದಿ ಎಂಜಿನಿಯರುಗಳು ಆಗಿ ಉದ್ಧಾರವಾಗುವವರು ಆಗಲಿ, ಇಂಥ ಶಾಲೆಗಳಲ್ಲಿ ಓದಿ ಕನ್ನಡವನ್ನು, ಕನ್ನಡ ಸಂಸ್ಕೃತಿಯನ್ನು ಉಳಿಸುವ ಕೆಲವು ಮಕ್ಕಳನ್ನಾದರೂ ನಾವು ತಯಾರಿಸುವುದು ಬೇಡವೇ? ಅದಕ್ಕೆಲ್ಲ ಎಷ್ಟು ಖರ್ಚಾಗುತ್ತದೆ?

03-04-2011

# ಇದು ಪ್ರಾಮಾಣಿಕನ ಸೋಲೇ?

# ಭ್ರಷ್ಟ ವ್ಯವಸ್ಥೆಯ ಗೆಲುವೇ?

ಅಣ್ಣಾ ಹಜಾರೆ ಬ್ರಹ್ಮಾಸ್ತ್ರವನ್ನೇ ಬಳಸಿದ್ದಾರೆ. ಅವರು ಇಷ್ಟು ವರ್ಷ ಕಾದಿದ್ದರು ಇನ್ನೂ ಸ್ವಲ್ಪ ಕಾಯಬಹುದಿತ್ತು' ಎನ್ನುವವರು ಇರಬಹುದು. ಆದರೆ, ಹಜಾರೆ ಅವರು ಕಾಯ್ದುದು ನಾಲ್ಕು ದಶಕಗಳಿಗೂ ಮೀರಿದ ಅವಧಿ, ದೇಶದ ಉನ್ನತ ಸ್ಥಾನದಲ್ಲಿ ಇರುವವರು ಏನು ಮಾಡಿದರೂ ನಡೆಯಬಹುದು ಎಂಬ ನಂಬಿಕೆಯ ಬುಡವನ್ನೇ ಹಜಾರೆ ಅಲ್ಲಾಡಿಸಿದ್ದಾರೆ. ಉಪವಾಸಕ್ಕೆ ಈಗಲೂ ಭಾರತ ಹೆದರುತ್ತದೆ ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ರಾಜಕೀಯ ಹೊಲಬುಗೆಟ್ಟಿದೆ. ಪ್ರಾಮಾಣಿಕರು ಯಾರಾದರೂ ಸಿಕ್ಕಾರೆಯೇ ಎಂದು ದೀಪ ಹಚ್ಚಿಕೊಂಡು ಹುಡುಕುವಂತೆ ಆಗಿದೆ. ತೀರ ಉನ್ನತ ಮಟ್ಟದ ಪ್ರಧಾನಿ ಹುದ್ದೆಯಿಂದ ಗ್ರಾಮ ಪಂಚಾಯ್ತಿ ಸದಸ್ಯನ ವರೆಗೆ ಯಾರಿಗೂ ಭ್ರಷ್ಟಾಚಾರದ ಕಳಂಕ ತಪ್ಪಿಲ್ಲ. ಪ್ರಧಾನಿ ಮನಮೋಹನ್ ವೈಯಕ್ತಿಕವಾಗಿ ನಿಷ್ಕಳಂಕರು. ಅಂಥ ಒಬ್ಬ ಪ್ರಧಾನಿ ಈ ದೇಶಕ್ಕೆ ಸಿಕ್ಕಿದ್ದಾರೆ ಎಂಬುದೇ ಒಂದು ಹೆಮ್ಮೆ. ಆದರೆ, ಅವರು ವೈಯಕ್ತಿಕವಾಗಿ ವೈಯಕ್ತಿಕವಾಗಿ ಪ್ರಾಮಾಣಿಕರು. ರಾಜಕೀಯವಾಗಿ ಅಪ್ರಾಮಾಣಿಕರು ಎಂಬುದೂ ಈಗ

ಸಾಬೀತಾಗಿದೆ. ಏನೇನೋ ಒತ್ತಡಕ್ಕೆ ಸಿಲುಕಿ ಪ್ರಧಾನಿ ಫಜೀತಿ ಆಗಿದ್ದಾರೆ. ರಾಜಿ ಮಾಡಿಕೊಂಡಿದ್ದಾರೆ. ಅದಕ್ಕೆ ರಾಜಾ ಪ್ರಕರಣವೇ ಸಾಕ್ಷ್ಯ, ಪುರಾವೆ ಒದಗಿಸಿದೆ.

ಕಾಲ ಗತಿಸಿದಂತೆ ನಾವು ಭ್ರಷ್ಟಾಚಾರವನ್ನು ಹೇಗೆ ಒಪ್ಪಿಕೊಂಡಿದ್ದೇವೆ ಎಂದರೆ ದೇಶವನ್ನು ಮೊದಲು ಬೆಚ್ಚಿ ಬೀಳಿಸಿದ್ದು ಬೊಫೋರ್ಸ್ ಹಗರಣ. 63 ಕೋಟಿ ರೂಪಾಯಿಗಳ ಈ ಪ್ರಕರಣ ಬಯಲಿಗೆ ಬಂದು 25 ವರ್ಷ ಕಳೆದು ಹೋದುವು. ಈ ಪ್ರಕರಣದ ತನಿಖೆಗೆ ಈ 25 ವರ್ಷಗಳಲ್ಲಿ ಖರ್ಚು ಮಾಡಿದ್ದು 250 ಕೋಟಿ ರೂಪಾಯಿ. ಇನ್ನೂ ಒಬ್ಬರಿಗೂ ಶಿಕ್ಷೆಯಾಗಿಲ್ಲ. ಆಗುವ ಲಕ್ಷಣಗಳೂ ಇಲ್ಲ. 63 ಕೋಟಿ ರೂಪಾಯಿಗೆ ಎಷ್ಟು ಸೊನ್ನೆಗಳು ಇರುತ್ತವೆ ಎಂದು ಲೆಕ್ಕ ಹಾಕಲು ಕಲಿಯುವ ಒಳಗಾಗಿಯೇ 1.76 ಲಕ್ಷ ಕೋಟಿ ರೂಪಾಯಿಗಳ ಹಗರಣ ನಮ್ಮ ಮುಂದೆ ಧುತ್ತೆಂದು ಬಂದು ನಿಂತಿದೆ. ಅತ್ತ ಹಸನ್ ಅಲಿ ಎಂಬ ದುಷ್ಕರ್ಮಿ 36,000 ಕೋಟಿ ರೂಪಾಯಿ ಹಣವನ್ನು ಸ್ವಿಸ್ ಬ್ಯಾಂಕಿನಲ್ಲಿ ಇಟ್ಟಿದ್ದಾನೆ, 46,000 ಕೋಟಿ ರೂಪಾಯಿ ತೆರಿಗೆ ವಂಚಿಸಿದ್ದಾನೆ. ಸೊನ್ನೆಗಳು ನಮಗೆ ರೂಢಿಯಾಗುತ್ತಿವೆಯೇ ಅಥವಾ ಅಣ್ಣಾ ಹಜಾರೆ ಅವರಂಥವರ ಉಪವಾಸದಲ್ಲಿ ಪ್ರತಿರೋಧಕ್ಕೆ ಕಾರಣವಾಗುತ್ತಿವೆಯೇ? ಎರಡನೆಯದು ಆದರೆ ಒಳ್ಳೆಯದು.

ನನಗೆ ಈ ಚರ್ವಿತ ಚರ್ವಣ ಸಂಗತಿಯ ಬಗ್ಗೆ ಬರೆಯುವ ಉದ್ದೇಶವಿಲ್ಲ. ಕೇರಳ ಮತ್ತು ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಇಬ್ಬರು ಹಾಲಿ ಮುಖ್ಯಮಂತ್ರಿಗಳು ಸ್ಪರ್ಧಿಸಿದ್ದಾರೆ. ಅವರ ಆಸ್ತಿಯ ವಿವರ ನೋಡಿ ನನಗೆ ಒಂದು ಕ್ಷಣ ಅಚ್ಚರಿ ಎನಿಸಿತು. 'ರಾಜಕೀಯ ಹಾಳಾಗಿ ಹೋಗಿದೆ. ಇಲ್ಲಿ ಪ್ರಾಮಾಣಿಕರು ಇಲ್ಲವೇ ಇಲ್ಲ' ಎಂಬ ಹತಾಶೆಯ ನಡುವೆಯೂ ದೀರ್ಘ ಅವಧಿಗೆ ರಾಜಕೀಯದಲ್ಲಿ ಇದ್ದೂ ವಿ.ಎಸ್.ಅಚ್ಯುತಾನಂದನ್ ಮತ್ತು ಬುದ್ಧದೇವ ಭಟ್ಟಾಚಾರ್ಜಿ ಅಂಥವರು ಪ್ರಾಮಾಣಿಕರಾಗಿ ನಮ್ಮ ನಡುವೆ ಇದ್ದಾರಲ್ಲ ಅನಿಸಿತು. ಅಚ್ಯುತಾನಂದನ್ 87ರ ವಯೋವೃದ್ಧ, ಈಗ ಬದುಕಿ ಉಳಿದಿರುವ ಅತ್ಯಂತ ಹಿರಿಯ ಮಾರ್ಕ್ಸ್ ವಾದಿ ಧುರೀಣ. ಅವರ ಪ್ರಾಮಾಣಿಕತೆಯನ್ನು ಪ್ರಶ್ನಿಸುವ ಧೈರ್ಯ ಅವರ ವಿರೋಧಿಗಳಿಗೂ ಇಲ್ಲ. ನಾಮಪತ್ರ ಸಲ್ಲಿಸಿದ ದಿನ ಅವರ ಕೈಯಲ್ಲಿ ಇದ್ದ ಹಣ ಕೇವಲ 3,000 ರೂಪಾಯಿ. ಅವರು ಬ್ಯಾಂಕಿನಲ್ಲಿ ಇಟ್ಟ ಠೇವಣಿ ಮೊತ್ತ 80 ಸಾವಿರ ಚಿಲ್ಲರೆ. ಬುದ್ಧದೇವ ಅವರ ಬಳಿಯೂ ಹೆಚ್ಚು ಆಸ್ತಿಯಿಲ್ಲ ಬುದ್ಧದೇವ ಬಳಿ ಇರುವ ಹಣ 5,000 ಮಾತ್ರ. ಅವರಿಗೆ ಒಂದು ಸ್ವಂತ ಮನೆಯೂ ಇಲ್ಲ. ಮುಖ್ಯಮಂತ್ರಿಯಾದ ದಿನವೇ ಅಧಿಕೃತ ನಿವಾಸಕ್ಕೆ ಹೋಗಲು ಅವರೇ ನಿರಾಕರಿಸಿದರು. ಈಗಲೂ ಕೊಲ್ಕತ್ತೆಯ ಪಾಮ್ ಅವೆನ್ಯೂ ರಸ್ತೆಯ, ಒಂದು ಮಲಗುವ ಕೋಣೆ ಮಾತ್ರ ಇರುವ ಕಡಿಮೆ ಆದಾಯ ಗುಂಪಿನ ಮನೆಯಲ್ಲಿ ಅವರು ವಾಸವಾಗಿದ್ದಾರೆ.

ಅಚ್ಯುತಾನಂದನ್ ಒಂದು ಪೂರ್ಣ ಅವಧಿಗೆ ಮುಖ್ಯಮಂತ್ರಿಯಾಗಿದ್ದವರು. ಮನಸ್ಸು ಮಾಡಿದ್ದರೆ ಮೊದಲ ದಿನದಿಂದಲೇ ದುಡ್ಡು ಮಾಡಲು ಆರಂಭಿಸಬಹುದಿತ್ತು. ಬುದ್ಧದೇವ ಎರಡು ಅವಧಿಗೆ ಮುಖ್ಯಮಂತ್ರಿಯಾಗಿದ್ದವರು. ಅವರೂ ಅದನ್ನೇ ಮಾಡಬಹುದಿತ್ತು. ಈ ಇಬ್ಬರೂ ಮುಖ್ಯಮಂತ್ರಿಗಳ ವಿರುದ್ಧ ವಿರೋಧಿಗಳು ಏನೆಲ್ಲ

ಆರೋಪ ಮಾಡಬಹುದು. ಆದರೆ, ಇವರು ಭ್ರಷ್ಟರು' ಎಂಬ ಆರೋಪ ಮಾಡಲಾರರು. ಅಚ್ಯುತಾನಂದನ್ ಅವರನ್ನು ನೇರವಾಗಿ ಹೊಡೆಯಲಾಗದ ವಿರೋಧಿಗಳು ಅವರ ಪುತ್ರ ವ್ಯಾಮೋಹವನ್ನೇ ಗುರಿಯಾಗಿ ಇಟ್ಟುಕೊಂಡು ದಾಳಿ ಮಾಡುತ್ತಿದ್ದಾರೆ. ಆದರೂ ಅಚ್ಯುತಾನಂದನ್ ಸಭೆಗೆ ಜನರು ಭಾರಿ ಸಂಖ್ಯೆಯಲ್ಲಿಯೇ ಸೇರುತ್ತಿದ್ದಾರೆ. ಕೇರಳದಲ್ಲಿ ಈಗ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಪರ ಗಾಳಿ ಬೀಸುತ್ತಿರುವಂತಿದೆ. ಅದು ಮತದಾರ ನಿರ್ಣಯಿಸುವ ವಿಷಯ. ಕೇರಳದಲ್ಲಿ ಯುಡಿಎಫ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಾಗಲೆಲ್ಲ ಹಗರಣಗಳ ಸುರುಳಿ ಬಿಚ್ಚಿಕೊಂಡಿದೆ. 20 ವರ್ಷಗಳ ಹಿಂದೆ ಆ ಸರ್ಕಾರದಲ್ಲಿ ಇಂಧನ ಸಚಿವರಾಗಿದ್ದ ಬಾಲಕೃಷ್ಣ ಪಿಳ್ಳೆ ಅವರಿಗೆ ಭ್ರಷ್ಟಾಚಾರದ ಆರೋಪದ ಮೇಲೆ ಸುಪ್ರೀಂ ಕೋರ್ಟ್ ಕಾರಾಗೃಹ ಶಿಕ್ಷೆ ವಿಧಿಸಿದೆ. ಪಿಳ್ಳೆ ಪ್ರಕರಣವನ್ನು ತಾರ್ಕಿಕ ಕೊನೆಗೆ ತೆಗೆದುಕೊಂಡು ಹೋದವರು ಅಚ್ಯುತಾನಂದನ್. ಅವರು ಪ್ರಾಮಾಣಿಕರಾಗಿರದೇ ಇದ್ದರೆ ಇಷ್ಟು ವರ್ಷ ಹಟ ಹಿಡಿದು ಒಂದು ಪ್ರಕರಣವನ್ನು ಹೀಗೆ ಇತ್ಯರ್ಥ ಮಾಡಲು ಆಗುತ್ತಿರಲಿಲ್ಲ.

ಪಶ್ಚಿಮ ಬಂಗಾಳದಲ್ಲಿ ಬುದ್ಧದೇವ ವಿರುದ್ಧವೂ ಯಾರೂ ಭ್ರಷ್ಟಾಚಾರದ ಆರೋಪ ಮಾಡುತ್ತಿಲ್ಲ. ಅವರು ಮಾಡಿರಬಹುದಾದ ಹಣವೆಲ್ಲ ಅವರ ಪತ್ನಿಯ ಬಳಿ ಇದೆ ಎಂದು ಯಾರಾದರೂ ಪಿಸುಗುಡಬಹುದು. ಅವರ ಪತ್ನಿಯ ಬಳಿ ಇರುವ ಹಣದ ಮೊತ್ತ ಕೂಡ 31 ಲಕ್ಷ ರೂಪಾಯಿ. ನಮ್ಮ ಜಿಲ್ಲಾ ಪಂಚಾಯ್ತಿ ಅಭ್ಯರ್ಥಿಯ ಬಳಿ ಇದಕ್ಕಿಂತ ಹೆಚ್ಚು ಹಣ ಇರಬಹುದು. ಏಕೆ, ಇದೆ. ಅಚ್ಯುತಾನಂದನ್ ಮತ್ತು ಬುದ್ಧದೇವ ಅವರಿಬ್ಬರೂ ದಶಕಗಳಿಂದ ರಾಜಕೀಯದಲ್ಲಿ ಇದ್ದಾರೆ. ಮುಖ್ಯಮಂತ್ರಿ ಆಗುವುದಕ್ಕಿಂತ ಮುಂಚೆ ವಿವಿಧ ಖಾತೆಗಳನ್ನು ನಿರ್ವಹಿಸಿದ್ದಾರೆ. ಆದರೂ ಅವರು ಹೀಗೆ ನಿಷ್ಕಳಂಕವಾಗಿ ಹೇಗೆ ಉಳಿದರು? ಅವರನ್ನು ಕಾಪಾಡಿದ್ದು ಯಾವುದು? ಅವರ ಅಂತಃಸತ್ವವೇ ಅಥವಾ ಪಕ್ಷದಲ್ಲಿ ಬೆಳೆದು ಬಂದ ಬಗೆಯೇ? ಪಕ್ಷದಲ್ಲಿ ಬೆಳೆದು ಬಂದ ಬಗೆ ಎಂದು ಒಪ್ಪುವುದು ಕಷ್ಟ ಅಚ್ಯುತಾನಂದನ್ ಅವರ ಜತೆಗೇ ಅವರ ಪಕ್ಷದಲ್ಲಿಯೇ ಪಿಣರಾಯಿ ವಿಜಯನ್ ಎಂಬ ಒಬ್ಬ ಭ್ರಷ್ಟಾಚಾರಿ ಇದ್ದಾರೆ. ವಿಜಯನ್ ಒಂದು ಹೆಸರು ಮಾತ್ರ ಇಂಥವರು ಬಹಳ ಮಂದಿ ಅಲ್ಲಿ ಇದ್ದಾರೆ. ಅವರ ವಿರುದ್ಧ ಅಚ್ಯುತ ಅವರದು ನಿರಂತರ ಹೋರಾಟ. ಅದು ಏಕಾಂಗಿ ಹೋರಾಟ. ಈ ವಿಚಾರದಲ್ಲಿ ಪ್ರಕಾಶ್ ಕಾರಟ್ ಅಂಥವರದೂ ದ್ವಂದ್ವ ನಿಲುವು. ಅಚ್ಯುತ ಅವರಿಗೆ ಈ ಸಾರಿ ಟಿಕೆಟ್ ಕೊಡಲೂ ಕಾರಟ್ ಮತ್ತು ಗೆಳೆಯರು ಸತಾಯಿಸಿದರು. ಕಾರಟ್ ವಿರುದ್ಧವೂ ಆರೋಪ ಮಾಡಲಾಗದು. ಆದರೆ, ಅಂಥ ಪ್ರಾಮಾಣಿಕರು ಹಲವರು ಇರುವ ಪಕ್ಷಗಳ ದ್ವಂದ್ವಗಳು ಇವು! ಬುದ್ಧದೇವ ಅವರ ಜತೆಗೆ ಇರುವವರೂ ಬಹುತೇಕ ಅಪ್ರಾಮಾಣಿಕರು. ಅವರ ಸಂಪುಟದ ಹಲವರು ಸದಸ್ಯರ ವಿರುದ್ಧ ಭ್ರಷ್ಟಾಚಾರದ ಆರೋಪಗಳು ಇವೆ. ಕೆಳಹಂತದ ಕಾರ್ಯಕರ್ತರಂತೂ ಯಾವ ಸ್ವಂತ ಉದ್ಯೋಗವೂ ಇಲ್ಲದೇ ಲಕ್ಷಾಧೀಶರಾಗಿದ್ದಾರೆ. ಬರೀ ಕರ್ನಾಟಕದಲ್ಲಿ ಮಾತ್ರ ರಿಯಲ್ ಎಸ್ಟೇಟ್ ದಂಧೆಯಿಲ್ಲ. ಪಶ್ಚಿಮ ಬಂಗಾಳದಲ್ಲಿಯೂ ಅದೇ ದಂಧೆ. ಇಲ್ಲಿ ಸಚಿವರೇ ಆ ದಂಧೆಯಲ್ಲಿ ಇದ್ದರೆ ಅಲ್ಲಿ

ಕಾರ್ಯಕರ್ತರು ಲೂಟಿ ಹೊಡೆಯುತ್ತಿದ್ದಾರೆ. ಅಲ್ಲಿನ ಇನ್ನೊಂದು ದಂಥೆ ಎಂದರೆ ಸರ್ಕಾರಿ ಯೋಜನೆಗಳ ದುಡ್ಡನ್ನೆಲ್ಲ ಸಿಪಿಎಂ ಕಾರ್ಯಕರ್ತರು ಬಾಚಿ ಕೊಳ್ಳುತ್ತಿರುವುದು! ಜನರಿಗೆ ಪಂಗನಾಮ ಹಾಕುತ್ತಿರುವುದು.

ಭ್ರಷ್ಟಾಚಾರದ ಕೊಂಡಿ ಮೇಲಿನಿಂದಲೇ ಆರಂಭವಾಗುತ್ತದೆ ಎನ್ನುತ್ತೇವೆ. ಆದರೆ, ಪಶ್ಚಿಮ ಬಂಗಾಳದಲ್ಲಿ ನಾಯಕ ನಿಷ್ಕಳಂಕ, ದುರಂತ ಎಂದರೆ ಅವನೊಬ್ಬನೇ ನಿಷ್ಕಳಂಕನಾಗಿದ್ದಾನೆ. ನಿಷ್ಕಳಂಕ ನಾಯಕನನ್ನು ಮಾತ್ರ ಮತದಾರ ನೆಚ್ಚಿಕೊಂಡು ಇರಲು ಆಗದು. ಎಲ್ಲರೂ ಊಹಿಸಿದ ಹಾಗೆ ಈ ಸಾರಿಯ ಪಶ್ಚಿಮ ಬಂಗಾಳ ಚುನಾವಣೆ ಸಿಪಿಎಂಗೆ ವಾಟರ್ಲೂ ಕದನವಾಗುವ ಎಲ್ಲ ಲಕ್ಷಣಗಳು ಇವೆ. ಕೇರಳ ಮತದಾರರ ಸುದೈವ ಎಂದರೆ ಅಲ್ಲಿ ಒಬ್ಬ ಆಂಟನಿ ಇದ್ದಾರೆ. ಕಾಂಗ್ರೆಸ್ಸಿನಲ್ಲಿ ಇದ್ದರೂ ಕೈಗಳನ್ನು ಇನ್ನೂ ಶುದ್ಧವಾಗಿ ಇಟ್ಟುಕೊಂಡ ಮನುಷ್ಯ ಆತ. ಅವರ ಪತ್ನಿ ಈಗಲೂ ತಮ್ಮ ನೌಕರಿಗೆ ಬಸ್ಸಿನಲ್ಲಿಯೇ ಹೋಗಿ ಬರುತ್ತಾರೆ. ಪಶ್ಚಿಮ ಬಂಗಾಳದಲ್ಲಿ ಒಬ್ಬ ಮಮತಾ ಇದ್ದಾರೆ. ಈಕೆಯನ್ನು ತಲೆ ತಿರುಕಿ ಎನ್ನಬಹುದು, ತಿಕ್ಕಲು ಎನ್ನಬಹುದು. ಆದರೆ, ಅಪ್ರಾಮಾಣಿಕಳು ಎನ್ನಲಾಗದು. ಅದೇ ಕಾಳಿಘಾಟ್‌ನ ಕೊಳೆಗೇರಿಯಲ್ಲಿಯೇ ಅವರ ಮನೆ ಇದೆ. ರೈಲ್ವೆ ಸಚಿವೆಯಾದರೂ ಆಕೆ ಮನೆ ಬದಲು ಮಾಡಿಲ್ಲ. ಮತ್ತೆ ದುರಂತ ಎಂದರೆ ಆಂಟನಿ ಅವರ ಜತೆಗೆ ಇರುವ ಕಾಂಗ್ರೆಸ್ಸಿಗರ ಬಗ್ಗೆ ಅದೇ ಮಾತು ಹೇಳಲು ಆಗದು. ಮಮತಾ ಅವರ ಜತೆಗೆ ಇರುವವರೂ ಪೂರ್ಣ ಪ್ರಾಮಾಣಿಕರಲ್ಲ.

ಕರ್ನಾಟಕದ ರಾಜಕೀಯ ನಾಯಕರ ಬಗ್ಗೆ ಬರೆಯಬೇಕು ಎನಿಸುತ್ತದೆ. ಅದು ಮತ್ತೆ ಚರ್ವಿತ ಚರ್ವಣ. ಇಲ್ಲಿ ಯಾರ ವಿರುದ್ಧ ಆರೋಪ ಇಲ್ಲ? ಮುಖ್ಯಮಂತ್ರಿ ವಿರುದ್ಧ ನಿತ್ಯ ನೂರು ಆರೋಪ ಮಾಡುವ ಕುಮಾರಸ್ವಾಮಿ ವಿರುದ್ಧವೂ ಅಷ್ಟೇ ಆರೋಪಗಳನ್ನು ಮಾಡಲಾಗುತ್ತಿದೆ. ಒಬ್ಬರು ಒಂದು ಜಿಲ್ಲೆಯನ್ನೇ ಕೊಳ್ಳಲು ಹೊರಟಿದ್ದರೆ ಇನ್ನೊಬ್ಬರು ಬೆಂಗಳೂರಿನಂಥ ರಾಜಧಾನಿಯಲ್ಲಿ ಒಂದು ಬಡಾವಣೆಯನ್ನೇ ಕೊಂಡಿದ್ದಾರೆ' ಎಂದು ಹೇಳುವವರು ಇದ್ದಾರೆ! ಪ್ರತಿ ಸಾರಿ ಚುನಾವಣೆಗೆ ನಿಂತಾಗಲೂ ಇವರ ಆಸ್ತಿಯಲ್ಲಿ ಕೋಟಿ ಕೋಟಿ ಹೆಚ್ಚಳ ಆಗುತ್ತದೆ. ಅದಕ್ಕೆ ದಾಖಲೆಗಳೇ ಇವೆ. ಇವರೆಲ್ಲ ಒಂದು ಅವಧಿಯನ್ನೂ ಪೂರ್ಣ ಪೂರೈಸಿದವರಲ್ಲ. ಬುದ್ಧದೇವ ಎರಡು ಅವಧಿ ಪೂರೈಸಿದರೂ ಬರೀ ಒಂದು ಲಕ್ಷದಷ್ಟು ಆಸ್ತಿಗೆ ಹೇಗೆ ತೃಪ್ತರಾದರು? ಒಂದು ಕೊಠಡಿಯ ಚಿಕ್ಕ ಮನೆ ಅವರಿಗೆ ಹೇಗೆ ಸಾಕು ಅನಿಸಿತು? ಬುದ್ಧದೇವ ತಮ್ಮ ಅಂತಃಸತ್ವಕ್ಕೆ ಸಾಕ್ಷಿಯಾಗಿ ಹೇಗೆ ನಡೆದುಕೊಂಡರು? ಅಚ್ಯುತಾನಂದನ್ ಅವರಿಗೆ ಪರರ ಹಣ ಏಕೆ ಬೇಡ ಅನಿಸಿತು? ಅಧಿಕಾರ ಭ್ರಷ್ಟರನ್ನಾಗಿ ಮಾಡುತ್ತದೆ, ಪರಮ ಅಧಿಕಾರ ಪರಮ ಭ್ರಷ್ಟರನ್ನು ಮಾಡುತ್ತದೆ ಎಂಬುದನ್ನು ಅವರು ಹೇಗೆ ಸುಳ್ಳು ಮಾಡಿದರು?... ಕರ್ನಾಟಕದಲ್ಲಿ ನಾಯಕರ ಪ್ರಾಮಾಣಿಕತೆಯ ಬಗೆಗೇ ಪ್ರಶ್ನೆಗಳು ಇವೆ. ಅವರು ತಮ್ಮ ಬೆಂಬಲಿಗರ, ಸಹೋದ್ಯೋಗಿಗಳ ಮೇಲೆ ಯಾವ ನೈತಿಕ ನಿಯಂತ್ರಣವನ್ನೂ ಹೇರಲಾರರು. ಆದರೆ, ಬುದ್ಧದೇವ, ಮಮತಾ, ಅಚ್ಯುತಾನಂದನ್, ಆಂಟನಿ ಅವರಿಗಾದರೂ ತಮ್ಮ ಬೆಂಬಲಿಗರ, ಸಹೋದ್ಯೋಗಿಗಳ ಮೇಲೆ ನೈತಿಕ ನಿಯಂತ್ರಣ ಸಾಧಿಸಲು ಏಕೆ

ಆಗಲಿಲ್ಲ? ಇದು ಅವರ ಸೋಲು ಎನ್ನೋಣವೇ ಅಥವಾ ವ್ಯವಸ್ಥೆ ಸಾಧಿಸಿದ ಮೈಲುಗೈ ಎನ್ನೋಣವೇ? ವ್ಯವಸ್ಥೆ ನಮ್ಮೆಲ್ಲರ ಮೇಲೆ ಹೀಗೆ ಸಾಧಿಸಿದ ಮೇಲುಗೈಗೆ ಹಜಾರೆ ಅವರ ಉಪವಾಸ ಉತ್ತರವಾದೀತೇ? ಉಪವಾಸಕ್ಕೆ ಸಿಕ್ಕ ಯುವಕರ ಬೆಂಬಲ ನೋಡಿದರೆ ಆದೀತು ಎನಿಸುತ್ತದೆ.

10-04-2011

# ಹೇಳಿದ್ದನ್ನೇ ಹೇಳುತ್ತ...

# ಕಲಿಸಿದ್ದನ್ನೇ ಕಲಿಸುತ್ತ...

ಅವರ ಹೆಸರು ಗುಬ್ಬಿ ರೇವಣಾರಾಧ್ಯ. 'ಪ್ರಜಾವಾಣಿ'ಯ ಹಳೆಯ ಓದುಗ, ಸಂಗತಿಗಳು ತಪ್ಪಾದರೆ ಕೆಂಡವಾಗುವ ಮನುಷ್ಯ. ಸಂಬಂಧಪಟ್ಟವರಿಗೆ ಫೋನ್ ಮಾಡಿ ದೂರು ಹೇಳದೇ ಇದ್ದರೆ ಅವರಿಗೆ ಸಮಾಧಾನವಿಲ್ಲ. ಮೂರು ಅಥವಾ ಮೂರುವರೆ ರೂಪಾಯಿಗೆ ಒಂದು ಪತ್ರಿಕೆ ಕೊಂಡು ಅದನ್ನು ಪೂರ್ತಿಯಾಗಿ ಓದಿ ಅದರಲ್ಲಿ ಏನಾದರೂ ತಪ್ಪು ಇದ್ದರೆ ಅದನ್ನು ಸಂಬಂಧಪಟ್ಟವರ ಗಮನಕ್ಕೆ ತರಲು ಕನಿಷ್ಠ ಎರಡು ರೂಪಾಯಿಗಳನ್ನು ದೂರವಾಣಿಗಾಗಿ ಖರ್ಚು ಮಾಡಬೇಕು. ಸಂಬಂಧಪಟ್ಟವರು ಒಂದು ಸಾರಿ ಸಿಗದೇ ಇದ್ದರೆ ಅವರು ಸಿಗುವ ವರೆಗೂ ಮತ್ತೆ ಮತ್ತೆ ಫೋನ್ ಮಾಡುವ ಹಟ ಅವರದು. ರೇವಣಾರಾಧ್ಯರ ಫೋನ್ ಬಂದಿತ್ತು ಅಥವಾ ಬಂತು ಎಂದರೆ ಪತ್ರಿಕೆಯಲ್ಲಿ ಏನಾದರೂ ತಪ್ಪಾಗಿರಬೇಕು ಎಂದು ಗ್ಯಾರಂಟಿ, ರೇವಣಾರಾಧ್ಯರು ಫೋನ್ ಮಾಡಿ ತಪ್ಪನ್ನು ಮಾತ್ರ ಗುರುತಿಸುವುದಿಲ್ಲ. 'ತಪ್ಪು ಮಾಡಿದವರು ಭಾರಿ ದೊಡ್ಡ ತಪ್ಪು ಮಾಡಿದ್ದಾರೆ ಅವರಿಗೆ ನೇಣು ಹಾಕಿ' ಎಂದೂ ತಾಕೀತು ಮಾಡುತ್ತಾರೆ! ತುಮಕೂರಿನ ಒಬ್ಬ ಓದುಗರೂ ಇದೇ ರೀತಿ ನಮಗೆ ಹೆಚ್ಚು ಕಡಿಮೆ ವಾರಕ್ಕೆ ಎರಡು ಕಾರ್ಡುಗಳಲ್ಲಿ

ಪತ್ರಿಕೆಯಲ್ಲಿ ಆಗಿರುವ ತಪ್ಪುಗಳನ್ನು ತೋರಿಸಿ ಪತ್ರ ಬರೆಯುತ್ತಿದ್ದರು. ಅವರಿಗೆ ನಾವು ಸುಧಾರಿಸುವುದಿಲ್ಲ ಅನಿಸಿತೋ ಏನೋ ಗೊತ್ತಿಲ್ಲ ಪತ್ರ ಬರೆಯುವುದನ್ನು ನಿಲ್ಲಿಸಿದರು.

ಓದುಗರು ಪತ್ರ ಬರೆಯಲಿ, ಬರೆಯದೇ ಇರಲಿ ಪ್ರತಿ ಪತ್ರಿಕೆಯಲ್ಲಿ ಆಂತರಿಕವಾಗಿ ಇಂಥ ತಪ್ಪುಗಳನ್ನು ಕಂಡು ಹಿಡಿದು ತಿದ್ದುವ ಕೆಲಸ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಪ್ರತಿ ಪತ್ರಿಕೆಯಲ್ಲೂ ಒಂದು ಸ್ಟೈಲ್ ಶೀಟು ಎಂದೂ ಇರುತ್ತದೆ. ಊರಿನ, ವ್ಯಕ್ತಿಗಳ ಹೆಸರುಗಳನ್ನು ಹೇಗೆ ಬರೆಯಬೇಕು ಎಂಬ ಬಗ್ಗೆ ಅದು ಒಂದು ಕೈಗನ್ನಡಿ ಇದ್ದಂತೆ. ಸಾಮಾನ್ಯವಾಗಿ ತಪ್ಪುಗಳನ್ನು ಪಟ್ಟಿ ಮಾಡಿ ಒಂದು ಒಪ್ಪೋಲೆಯನ್ನೂ ಸಿದ್ಧಪಡಿಸಲಾಗುತ್ತದೆ. ಪ್ರತಿದಿನದ ಮಧ್ಯಾಹ್ನದ ಸಂಪಾದಕೀಯ ಸಭೆಯ ನಂತರ ಅಂದಿನ ಪತ್ರಿಕೆಗಳಲ್ಲಿ ಆದ ತಪ್ಪುಗಳ ಪಟ್ಟಿ ಮಾಡಿ ಅದರ ಸರಿ ರೂಪವನ್ನೂ ಸಭೆಯ ನೋಟ್‌ನಲ್ಲಿ ಸೇರಿಸಲಾಗುತ್ತದೆ. ಆದರೂ ಪತ್ರಿಕೆಗಳಲ್ಲಿ ಪದೇ ಪದೇ ಅದೇ ತಪ್ಪುಗಳು ನುಸುಳುತ್ತವೆ. ನುಸುಳುತ್ತಲೇ ಇರುತ್ತವೆ.

ನಾವು ಪತ್ರಿಕೆ ಸೇರಿದ್ದು 30 ವರ್ಷಗಳ ಹಿಂದೆ. ಮೊದಲ ದಿನವೋ ಎರಡನೇ ದಿನವೋ ನಮ್ಮ ಜತೆ ವೃತ್ತಿಗೆ ಸೇರಿದ ಒಬ್ಬರಿಗೆ ಸುದ್ದಿ ಮತ್ತು ಶಬ್ದ ಎರಡೂ ಅಲ್ಪ ಪ್ರಾಣ, ಮಹಾಪ್ರಾಣ ಬರೆಯಬೇಕಿಲ್ಲ ಎಂದು ಹೇಳಿಕೊಟ್ಟುದು ನನಗೆ ಇಂದಿಗೂ ನೆನಪು ಇದೆ. ಆರಂಭದ ದಿನಗಳಲ್ಲಿಯೇ ಪ್ರಜಾವಾಣಿಯಲ್ಲಿ ಗೋಸ್ಕರ, ಗೋಸುಗ, ಸಲುವಾಗಿ, ಅಲ್ಪಡು ಪ್ರಯೋಗಗಳು ಇಲ್ಲ ಎಂದೂ ಹೇಳಿಕೊಟ್ಟರು. ಅದೇ ಮಾತನ್ನು ಮುಂದಿನ ತಲೆಮಾರಿನವರಿಗೂ ನಾವು ಹೇಳಿಕೊಂಡು ಬಂದಿದ್ದೇವೆ. ಸೋಜಿಗ ಎನ್ನಬೇಕೇ, ವಿಚಿತ್ರ ಎನ್ನಬೇಕೇ ಅಥವಾ ಸಂವಹನ ಸಾಮರ್ಥ್ಯದ ಸೋಲು ಎನ್ನಬೇಕೇ ಗೊತ್ತಿಲ್ಲ. ಮೊನ್ನೆ ಮೊನ್ನೆ ನಮ್ಮ ಪತ್ರಿಕೆಯ ಒಂದು ಸುದ್ದಿಯ ಹೆಡ್ಡಿಂಗ್‌ನಲ್ಲಿಯೇ ಗೋಸ್ಕರ ಪದ ಬಳಕೆಯಾಯಿತು. ಅದೇ ದಿನ ಕೊಳಗೇರಿಯೂ ಹೆಡ್ಡಿಂಗ್‌ನಲ್ಲಿಯೇ ಬಂತು. ತಪ್ಪು-ಒಪ್ಪು ಪದಗಳ ಫಲಕದಲ್ಲಿ ಒಪ್ಪು ರೂಪ ಇದ್ದಾಗಲೂ ತಪ್ಪು ರೂಪ ಬಳಕೆಯಾದ ಉದಾಹರಣೆಗೂ ಕೊರತೆಯಿಲ್ಲ.

ಹಿಂದಿನ ಕಾಲದಲ್ಲಿ ಅಂದರೆ ನಾವು ವೃತ್ತಿಗೆ ಸೇರಿದ ಹೊಸದರಲ್ಲಿ ಮುಖ್ಯಸ್ಥರ ಸಮ್ಮುಖದಲ್ಲಿ ಎರಡೂ ಬದಿಯಲ್ಲಿ ಕಿರಿಯ ಸಿಬ್ಬಂದಿ ಕುಳಿತುಕೊಳ್ಳುತ್ತಿದ್ದರು. ಕಿರಿಯರು ಬರೆದುಕೊಟ್ಟ ಕಾಪಿಗಳನ್ನು ತಿದ್ದುತ್ತಿದ್ದ ಹಿರಿಯರು ವಾಕ್ಯ ರಚನೆಯಲ್ಲಿನ ದೋಷಗಳನ್ನು, ತಪ್ಪು ಪದ ರೂಪಗಳನ್ನು ಸರಿಪಡಿಸುತ್ತಿದ್ದರು. ಸರಿಪಡಿಸಿ ಹೀಗಲ್ಲ, ಹೀಗೆ ಎಂದು ಹೇಳುತ್ತಿದ್ದರು. ಈಗ ನಾವೆಲ್ಲ ಕಂಪ್ಯೂಟರ್‌ಗಳ ಮುಂದೆ ಕುಳಿತುಕೊಳ್ಳುತ್ತಿದ್ದೇವೆ. ಅವು ಯಂತ್ರಗಳು. ಅವುಗಳ ಮುಂದೆ ಕುಳಿತ ನಾವೂ ಯಂತ್ರಗಳಾಗಿದ್ದೇವೆ. ಅಲ್ಲಿ ಜೀವಂತ ಸಂವಾದವೇ ಇಲ್ಲದಂತೆ ಆಗಿದೆ. ಆಯಾ ವಿಭಾಗದ ಮುಖ್ಯಸ್ಥರು ಮತ್ತು ಕಿರಿಯ ಸಿಬ್ಬಂದಿ ನಡುವೆ ಕಂಪ್ಯೂಟರ್‌ನಲ್ಲಿ ಬರುವ ಸುದ್ದಿಯೇ ಸೇತುವೆ. ಮನುಷ್ಯ ಸಂಬಂಧ ಹೊರಟು ಹೋಗಿದೆ. ಹಿಂದಿನ ಕಾಲದಲ್ಲಿ ಕಿರಿಯರ ಪಕ್ಕ ಬಂದು ಕುಳಿತು ನೀವು ಬರೆದುದು ತಪ್ಪು, ಇದು ಸರಿ ರೂಪ ಎಂದು ಹೇಳಿಕೊಡುತ್ತಿದ್ದರು. ಈಗ ಕಂಪ್ಯೂಟರ್‌ನಲ್ಲಿ ಬಂದ ಸುದ್ದಿಯ ಮೇಲೆಯೇ ತಪ್ಪುಗಳನ್ನು ಗುರುತಿಸಿ ಬರೆದವರಿಗೆ ವಾಪಸು ಕಳಿಸುವ ಪದ್ಧತಿ ಇದೆ. ಅಲ್ಲಿಯೂ

'ಮಾನವ ಸ್ಪರ್ಶ' ಎಂಬುದು ಇಲ್ಲ; ಕಲಿಕೆಯ ಪ್ರಕ್ರಿಯೆಯೂ ಇದ್ದಂತೆ ಕಾಣುವುದಿಲ್ಲ. ಏಕೆಂದರೆ ಇಂದು ಒಬ್ಬರಿಗೆ ಮೌಢ್ಯತೆ ತಪ್ಪು ಎಂದು ಹೇಳಿದರೆ ಮರುದಿನ ಅವರು ಭಾವೈಕ್ಯತೆ ಎಂದು ಬರೆಯುತ್ತಾರೆ. ನಾಡಿದ್ದು ಇನ್ನೊಬ್ಬರು ಸೌಹಾರ್ದತೆ ಎಂದು ಬರೆಯುತ್ತಾರೆ. ಮೂರೂ ತಪ್ಪು ಎಂದು ಹೇಳಿದರೆ ಮೊದಲ ದಿನ ತಪ್ಪು ಮಾಡಿದವರೇ ಮತ್ತೆ ಮೌಢ್ಯತೆ ಮೆರೆದಿರುತ್ತಾರೆ!

ನಾವು ಚಿಕ್ಕವರಿದ್ದಾಗ ಪತ್ರಿಕೆಗಳನ್ನು ಧರ್ಮಗ್ರಂಥಗಳಂತೆ ತುಂಬ ಗಂಭೀರವಾಗಿ ಪಠಿಸುತ್ತಿದ್ದೆವು. ಪತ್ರಿಕೆಗಳಲ್ಲಿ ಬರುವ ವ್ಯಕ್ತಿಗಳ ಚಿತ್ರಗಳನ್ನು ಮನಸ್ಸಿನಲ್ಲಿ ಗುರುತು ಇಟ್ಟುಕೊಳ್ಳುತ್ತಿದ್ದೆವು. ಆಕಾಶವಾಣಿಯಲ್ಲಿ ಸುದ್ದಿ ಕೇಳುತಿದ್ದೆವು. ಅದೇ ಆಕಾಶವಾಣಿಯಲ್ಲಿ ಬೆಳಿಗ್ಗೆ ಮತ್ತು ರಾತ್ರಿ ಬರುತ್ತಿದ್ದ ಸುದ್ದಿ ವಿಶ್ಲೇಷಣೆಯನ್ನೂ ಕೇಳುತ್ತಿದ್ದೆವು. ಪದಗಳು, ಹೆಸರುಗಳು ಕಿವಿಯ ಮೇಲೆ ಬಿದ್ದು ಮನಸ್ಸಿನಲ್ಲಿ ಅಚ್ಚು ಒತ್ತುತ್ತಿದುವು. ಈಗ ವೃತ್ತಿಗೆ ಬರುವ ಹುಡುಗರು ಪತ್ರಿಕೆಗಳನ್ನು ನಿತ್ಯ ಓದುತ್ತಾರೆಯೇ ಇಲ್ಲವೇ ಎಂಬುದೇ ಗೊತ್ತಿಲ್ಲ.. ಆಕಾಶವಾಣಿಯ ಸುದ್ದಿಯನ್ನು ಕೇಳುತ್ತಾರೆಯೇ ಇಲ್ಲವೇ ಎಂಬುದೂ ಖಚಿತವಿಲ್ಲ. ಕನ್ನಡ ವಾಹಿನಿಗಳಲ್ಲಿ ಅವರು ಸುದ್ದಿ ನೋಡುತ್ತಿರಬಹುದು. ಆದರೆ, ಅಲ್ಲಿಯೇ ಕನ್ನಡ ವಿಕಾರವಾಗಿದೆ. ಸುದ್ದಿ ಓದುವವರು ಪತ್ರಿಕೆಗಳಲ್ಲಿ ಕೆಲಸ ಮಾಡುವವರ ಮಟ್ಟದವರೇ ಆಗಿದ್ದಾರೆ. ಅವರಿಗೂ ಭಾಷೆಯ ಬಗ್ಗೆ, ಹೆಸರು ಹುದ್ದೆಗಳ ನಿಖರತೆಯ ಬಗ್ಗೆ ಕಾಳಜಿಯಿಲ್ಲ.

ನಾವು ಚಿಕ್ಕವರಾಗಿದ್ದಾಗ ಪ್ರತಿದಿನ ಪಠ್ಯ ಪುಸ್ತಕದಲ್ಲಿನ ಒಂದು ಹಾಳೆಯ ಪಾಠವನ್ನು 'ಶುದ್ಧಬರಹ' ಬರೆಯುತ್ತಿದ್ದೆವು. ಅದನ್ನು ನಾವೇ ಮೂಲದ ಜತೆ ಹೋಲಿಸಿ ಆಗಿರುವ ತಪ್ಪುಗಳನ್ನು ತಿದ್ದಿಕೊಳ್ಳುತ್ತಿದ್ದೆವು. ಶಾಲೆಯಲ್ಲಿಯೂ ಶಿಕ್ಷಕರು ನಿತ್ಯ ಶುದ್ಧ ಬರಹ'ದ 'ಮನೆಗೆಲಸ' ಕೊಡುತ್ತಿದ್ದರು. ತಪ್ಪುಗಳನ್ನು ಅವರೂ ತಿದ್ದುತ್ತಿದ್ದರು. ಮತ್ತೆ ನಾವು ಕನಿಷ್ಠ ಅದೇ ತಪ್ಪನ್ನು ಮಾಡಿದ ನೆನಪು ಇಲ್ಲ. 'ಶುದ್ಧ ಬರಹ' ಬರೆಯುವ ರೂಢಿ ಮಾಡಿಸುವುದೇ ಒಂದು ಅದ್ಭುತ ಪ್ರಯೋಗ ಎಂದು ನನಗೆ ಅನಿಸುತ್ತದೆ. ಆ ಪ್ರಯೋಗ ಈಗ ಶಾಲೆಗಳಲ್ಲಿ ಇದ್ದಂತೆ ಕಾಣುವುದಿಲ್ಲ. ಈಗ ಪತ್ರಿಕಾ ವೃತ್ತಿಗೆ ಸೇರುವ ಯುವಕರು ಅಂಥ ಪ್ರಯೋಗ ಮಾಡಿದಂತೆಯೂ ಕಾಣುವುದಿಲ್ಲ. ಏಕೆಂದರೆ ಅವರಿಗೆ ಈಗ 'ಶುದ್ಧಬರಹ' ಎಂದರೆ ಏನು ಎಂದು ಗೊತ್ತಿಲ್ಲ. ಈಗ 'ಶುದ್ಧ ಬರಹ ಬರೆಯುವುದು ಅವರಿಗೆ ಅವಮಾನ ಎಂದು ಅನಿಸತೊಡಗಿದೆ. ಅವರು ಅವಮಾನ ಎಂದುಕೊಂಡರೆ ಶುದ್ಧ ಬರಹ ಬರೆಯುವುದು ಕಷ್ಟವಾಗುತ್ತದೆ. ಮಕ್ಕಳಿಗೆ ಶುದ್ಧ ಬರಹ ರೂಢಿ ಮಾಡಬೇಕು ಎಂದು ಹೇಳಲೂ ಭಯವಾಗುತ್ತದೆ. ಏಕೆಂದರೆ ಪಠ್ಯದಲ್ಲಿ ಶುದ್ಧವಾದ ಬರವಣಿಗೆ ಇದೆಯೇ ಇಲ್ಲವೇ ಎಂದು ಗೊತ್ತಿಲ್ಲ! ಇದನ್ನು ಬರೀ ಕನ್ನಡ ಭಾಷೆಯ ಸಮಸ್ಯೆ ಎಂದು ನಾನು ತಿಳಿದಿಲ್ಲ. ಎಲ್ಲ ಭಾಷೆಗೂ ಇದು ಅನ್ವಯಿಸುತ್ತದೆ. ಇದು ಪತ್ರಿಕೋದ್ಯಮದ ಸಮಸ್ಯೆ ಎಂದೂ ನಾನು ಹೇಳುತ್ತಿಲ್ಲ. ಅವರು ಯಾವ ವೃತ್ತಿಯಲ್ಲಿ ಇದ್ದರೂ ಶುದ್ಧ ಬರವಣಿಗೆ ಅಗತ್ಯ ಮತ್ತು ಅನಿವಾರ್ಯ.

ವೃತ್ತಿಗೆ ಸೇರಿದ ಮೇಲೆಯೂ ನಾನು ಮತ್ತು ನನ್ನ ವಾರಿಗೆಯವರು ತಪ್ಪುಗಳನ್ನು

ಮಾಡಲಿಲ್ಲ ಎಂದು ಅಲ್ಲ. ಒಂದು ಸಾರಿ ಇದು ತಪ್ಪು ರೂಪ ಎಂದು ಹೇಳಿಸಿಕೊಂಡ ಮೇಲೆ ಅದೇ ತಪ್ಪನ್ನು ಮತ್ತೆ ಮಾಡಲಿಲ್ಲ. ನಾನು ವೃತ್ತಿಗೆ ಸೇರಿದ ಹೊಸದರಲ್ಲಿ ಜನಾರ್ಧನ ಎಂದು ಬರೆದಿದ್ದೆ. ನನ್ನ ಮುಖ್ಯಸ್ಥರು ಜನಾರ್ದನ ಸಾಕು ಎಂದಿದ್ದರು. ನಂಬಿಕೆಯಾಗದೇ ನಾನು ಹೋಗಿ ಶಬ್ದಕೋಶ ನೋಡಿದ್ದೆ. ಅವರು ಹೇಳಿದ್ದು ಸರಿಯಿತ್ತು. ಮತ್ತೆ ನಾನು ಎಂದೂ ಜನಾರ್ಧನ ಎಂದು ಬರೆಯಲಿಲ್ಲ. ಹಾಗೆಂದು ಜನಾರ್ಧನ ಬರೆಯುವುದು ನಿಂತಿಲ್ಲ. ನಿಲ್ಲುತ್ತದೆ ಎಂದೂ ಅನಿಸುವುದಿಲ್ಲ. ನಾವು ಮಾಡುವ ತಪ್ಪುಗಳನ್ನು ಹೀಗೆ ಪಟ್ಟಿ ಮಾಡುತ್ತಲೇ ಹೋಗಬಹುದು. ಅದಕ್ಕೆ ಕೊನೆ ಎಂಬುದು ಇಲ್ಲ. ಶಬ್ದಬ್ರಹ್ಮರೇ ಅನಿಸಿದ ಪತ್ರಕರ್ತರ ಸಾಧನೆ, ಅದರಲ್ಲಿ ಕಡಿಮೆಯೇನೂ ಇಲ್ಲ. ಬರೀ ಪದಪ್ರಯೋಗದಲ್ಲಿ ಮಾತ್ರ ತಪ್ಪುಗಳು ಇಲ್ಲ; ವಾಕ್ಯ ರಚನೆಯೂ ಘೋರವಾಗಿದೆ. 'ಕಳೆದ 15 ದಿನಗಳ ಹಿಂದೆ' ಎಂಬ ವಾಕ್ಯವನ್ನು ಹಿರಿಯ ಪತ್ರಕರ್ತರ ಲೇಖನಗಳಲ್ಲಿಯೇ ನೋಡಿದ್ದೇನೆ. ಸರಿಯಾದ ಪದಗಳು ಮನದಲ್ಲಿ ಮೂಡಿದ ಹಾಗೆ ತಪ್ಪು ಪದಪ್ರಯೋಗಗಳೂ ಮನದಲ್ಲಿ ಮೂಡಿ ನಿಂತಿರುತ್ತವೆ ಎಂದು ಅನಿಸುತ್ತದೆ. ಅದು ತಪ್ಪು ಇರಬಹುದು ಎಂಬ ಅನುಮಾನ ನಮಗೆ ಬರುವುದೇ ಇಲ್ಲವಾದ್ದರಿಂದ ಅದನ್ನು ಸರಿಪಡಿಸುವ ಪ್ರಮೇಯವೂ ಕಂಡು ಬರುವುದಿಲ್ಲ. ಎಲ್ಲ ಪತ್ರಿಕಾ ಕಚೇರಿಗಳಲ್ಲಿ ಇರುವ 'ಕಿಟೆಲ್', 'ವೆಂಕಟಸುಬ್ಬಯ್ಯ'ರನ್ನು ನೋಡುವ ಅಗತ್ಯವೇ ನಮಗೆ ಬಿದ್ದಿಲ್ಲ! ಒಂದು ಸಾರಿ ಪತ್ರಕರ್ತರಾದ ಮೇಲೆ ನಮ್ಮನ್ನು ನಾವೇ ಬ್ರಹ್ಮರು ಎಂದು ಅಂದುಕೊಂಡು ಬಿಡುವುದರಿಂದ ಹೀಗೆ ಆಗುತ್ತಿರಬಹುದು.

ನಾನು ಇದುವರೆಗೆ ಬರೀ ಶಬ್ದಗಳ ಅಪಪ್ರಯೋಗದ ಬಗ್ಗೆ ಮಾತ್ರ ಹೇಳಿದೆ. ಸಂಗತಿಗಳಲ್ಲಿ ಆಗುವ ತಪ್ಪುಗಳ ಬಗ್ಗೆ ಬರೆಯುತ್ತ ಹೋದರೆ ಅದು ಇನ್ನೂ ದೊಡ್ಡ ಸಮಸ್ಯೆ. ನಾನೇ ನನ್ನ ಕಳೆದ ಅಂಕಣದಲ್ಲಿ ಬೆಂಗಳೂರು ಸಾಹಿತ್ಯ ಸಮ್ಮೇಳನವನ್ನು 78ನೇ ಸಮ್ಮೇಳನ ಎಂದು ಬರೆದು ಬಿಟ್ಟೆ! ಪತ್ರಿಕೋದ್ಯಮ ಅವಸರದ ಸಾಹಿತ್ಯ. ತಪ್ಪು ಏಕೆ ಆಯಿತು ಎಂದರೆ ಗಡಿಬಿಡಿಯಲ್ಲಿ ಬರೆದೆ ಎಂದೇ ನಾನೂ ಸೇರಿದಂತೆ ಎಲ್ಲರೂ ಹೇಳುವುದು. ಆದರೆ, ಅದು ಕ್ಷಮಾರ್ಹವಲ್ಲ. ಪತ್ರಿಕೆಯನ್ನು ಕೊಂಡು ಓದುವ ಓದುಗ ತಪ್ಪಿಲ್ಲದ ಪತ್ರಿಕೆಯನ್ನೇ ಬಯಸುತ್ತಾನೆ. ಪತ್ರಕರ್ತರು ಮಾಡಬಹುದಾದ ಕನಿಷ್ಠ ಕರ್ತವ್ಯ ಎಂದರೆ ತಪ್ಪಿಲ್ಲದ ಪತ್ರಿಕೆಯನ್ನು ಓದುಗನ ಕೈಗೆ ಕೊಡುವುದು. ಅದು ಕನಿಷ್ಠ ಕರ್ತವ್ಯ ಏಕೆ ಎಂದರೆ ಇಂದಿನ ಪತ್ರಿಕೆ ನಾಳಿನ ಇತಿಹಾಸ, ಗುಬ್ಬಿ ರೇವಣಾರಾಧ್ಯರಂಥ ಓದುಗರು ಇಂದಿನ ಪತ್ರಿಕೆಗಳಲ್ಲಿ ಮಾಹಿತಿ ತಪ್ಪು ಇರಬಾರದು ಎಂದು ಏಕೆ ಬಯಸುತ್ತಾರೆ ಎಂದರೆ ಅದು ನಾಳಿನ ಇತಿಹಾಸ ಎಂಬ ಕಾರಣಕ್ಕಾಗಿಯೇ. ತಪ್ಪು ಬರೆದವನ/ಳನ್ನು ನೇಣು ಹಾಕಿ ಎಂದು ಅವರು ಹೇಳುವುದು ಕಠೋರ ಮಾತು ಅನಿಸಬಹುದು. ಆದರೆ, ಆ ಕಠೋರತೆಯ ಹಿಂದೆ ಇರುವ ಕಾಳಜಿ ದೊಡ್ಡದು. ಆ ನೈಜ ಕಾಳಜಿಯನ್ನು ಈಗ ವೃತ್ತಿಯಲ್ಲಿ ಇರುವ ಹುಡುಗ/ಹುಡುಗಿಯರು ಗಮನಿಸಬೇಕು. ವೃತ್ತಿಗೆ ಬರುವವರನ್ನು ತಯಾರು ಮಾಡುವ ಕಾಲೇಜು, ವಿಶ್ವವಿದ್ಯಾನಿಲಯಗಳೂ ಮನದಟ್ಟು ಮಾಡಿಕೊಳ್ಳಬೇಕು.

24-04-2011

# ನಾರಾಯಣಮೂರ್ತಿ

# ಅವರಿಗೆ ನಮಸ್ಕಾರ...

ಇದೆಲ್ಲ ಒಂದು ಆಕಸ್ಮಿಕ, ಸಿನಿಮಾ ಮೀರಿಸುವ ಒಂದು ರೋಚಕ ಕಥೆ, ಜೀವನವೇ ಹಾಗೆ, ಅದು ಎಲ್ಲ ಕಥೆಗಳಿಗಿಂತ ರೋಚಕವಾಗಿರುತ್ತದೆ. ಬರುವ ಆಗಸ್ಟ್‌ನಲ್ಲಿ ಇನ್‌ಫೋಸಿಸ್ ಅಧ್ಯಕ್ಷ ಹುದ್ದೆಯಿಂದ ಕೆಳಗೆ ಇಳಿಯಲಿರುವ ಎನ್.ಆರ್. ನಾರಾಯಣಮೂರ್ತಿ ಒಬ್ಬ ಸಾಮಾನ್ಯ ಶಿಕ್ಷಕನ ಮಗ, ಕೇವಲ ಹತ್ತು ಸಾವಿರ ರೂಪಾಯಿ ಹಾಕಿ 1981ರಲ್ಲಿ ಆರಂಭಿಸಿದ ಇನ್‌ಫೋಸಿಸ್ ಸಂಸ್ಥೆಯ ಮೌಲ್ಯ ಈಗ 28,000 ಕೋಟಿ ರೂಪಾಯಿ! ಇದನ್ನು ಕೇವಲ ಒಂದು ಆಕಸ್ಮಿಕ ಎಂದು ಹೇಳುವುದು ಕಷ್ಟ. ಆದರೆ, ಖಂಡಿತ ಒಂದು ರೋಚಕ ಕಥೆ. ಮೂರ್ತಿ ಅವರಿಗೆ ಆಕಸ್ಮಿಕ ಘಟನೆಗಳಲ್ಲಿ ಬಹಳ ನಂಬಿಕೆ. ಇಂಥ ಆಕಸ್ಮಿಕ ಘಟನೆಗಳೇ ಅವರ ಜೀವನವನ್ನು ರೂಪಿಸಿವೆ. ಆಕಸ್ಮಿಕಗಳನ್ನು ಅನುಭವವಾಗಿ, ಅವಕಾಶವಾಗಿ ಅವರು ಬಳಸಿಕೊಂಡ ರೀತಿ ನಾರಾಯಣಮೂರ್ತಿ ಅವರಿಗೆ ಮಾತ್ರ ಸಿದ್ಧಿಸುವಂಥದು. ಅದಕ್ಕಾಗಿಯೇ ಅವರು ಒಬ್ಬ ಅನ್ಯಾದೃಶ ನಾಯಕ,

ಅದು 1968ನೇ ಇಸವಿ. ಮೂರ್ತಿಯವರು ಆಗ ಕಾನಪುರದ ಐ.ಐ.ಟಿಯಲ್ಲಿ ಓದುತ್ತಿದ್ದರು. ಸಂಸ್ಥೆಯಲ್ಲಿ ಒಂದು ದಿನ ಅಮೆರಿಕೆಯಿಂದ ಬಂದಿದ್ದ ಒಬ್ಬ ಪದವಿ ವಿದ್ಯಾರ್ಥಿಯ

ಉಪನ್ಯಾಸವಿತ್ತು. ಆತ, ಕಂಪ್ಯೂಟರ್ ವಿಜ್ಞಾನದ ಭವಿಷ್ಯ ಕುರಿತು ಮಾತನಾಡಿದ. ಆಗಿನ ಕಾಲದಲ್ಲಿ ಕಂಪ್ಯೂಟರ್ ಎಂದರೆ ಏನು ಎಂದು ಎಷ್ಟು ಜನರಿಗೆ ಗೊತ್ತಿತ್ತೊ ತಿಳಿಯದು. ಮೂರ್ತಿ ಗ್ರಂಥಾಲಯಕ್ಕೆ ಬಂದು ಕಂಪ್ಯೂಟರ್ ವಿಜ್ಞಾನ ಕುರಿತ ಲೇಖನ, ಪುಸ್ತಕಗಳನ್ನು ಗಟ್ಟಿಯಾಗಿ ಕುಳಿತು ಓದಿದರು. ಬಹುಶಃ ಅಂದೇ ಇನ್‌ಫೋಸಿಸ್‌ನಂಥ ಒಂದು ದೈತ್ಯ ಸಂಸ್ಥೆಯ ಕನಸು ಅವರಿಗೆ ಬಿದ್ದಿರಬೇಕು. ಏಕೆಂದರೆ ಕಂಪ್ಯೂಟರ್ ವಿಜ್ಞಾನದಿಂದ ಭಾರತದ ಭವಿಷ್ಯವನ್ನು ಬದಲಿಸಬಹುದು ಎಂದು ಆಗಲೇ ಅವರಿಗೆ ಅನಿಸಿತು. ಅದಾಗಿ 13 ವರ್ಷಗಳ ನಂತರ ಮೂರ್ತಿ ಮತ್ತು ಆರು ಜನ ಸಮಾನ ಮನಸ್ಕ ಗೆಳೆಯರು ಕೂಡಿಕೊಂಡು ಪುಣೆಯಲ್ಲಿ ಇನ್‌ಫೋಸಿಸ್ ಸಂಸ್ಥೆಯನ್ನು ಹುಟ್ಟಿ ಹಾಕಿದರು. ಮೂರ್ತಿಯವರ ಪತ್ನಿ ಗಂಡನಿಗೆ ತಿಳಿಯದಂತೆ ಕೂಡಿಟ್ಟ 10,000 ರೂಪಾಯಿಗಳನ್ನು ಕೊಟ್ಟರು. ಅವರದು ಪ್ರೇಮ ವಿವಾಹ. ಸುಧಾ ಮೂರ್ತಿ ಉತ್ತರ ಕರ್ನಾಟಕದ ಹೆಣ್ಣು ಮಗಳು. ಔದಾರ್ಯದಲ್ಲಿ, ಸರಳತೆಯಲ್ಲಿ ಎತ್ತಿದ ಕೈ. ಹಿಂದೆ ತಿರುಗಿ ನೋಡಿದರೆ ನಾರಾಯಣಮೂರ್ತಿ ಮತ್ತು ಸುಧಾ ಮೂರ್ತಿ ಅವರಿಬ್ಬರಿಗೂ ಇದೆಲ್ಲ ಒಂದು ಕನಸು ಎನಿಸಬಹುದು. ಕನಸಿನಂತೆ ಕಂಡ ಈ ಸುದೀರ್ಘ ಜೀವನ ಮತ್ತು 'ಸಾಹಸ'ದಲ್ಲಿ ಬರೀ ಮೂರ್ತಿ ದಂಪತಿ ಮಾತ್ರವಲ್ಲ ಅವರ ಗೆಳೆಯರು ಪಟ್ಟ ಕಷ್ಟಗಳಿಗೆ ಲೆಕ್ಕವಿಲ್ಲ. ಎದುರಿಸಿದ ಸವಾಲುಗಳಿಗೂ ಎಣಿಕೆಯಿಲ್ಲ. ಮೂರ್ತಿ ಮತ್ತು ಅವರ ಆರು ಜನ ಗೆಳೆಯರು ತಿಂಗಳಿಗೆ ಕೇವಲ 250 ಡಾಲರ್ ಸಂಬಳದ ಮೇಲೆ ಕೆಲಸ ಮಾಡಿದರು. ಅವರ ಪತ್ನಿಯರು, ತಮ್ಮ ಗಂಡಂದಿರಿಗೆ ಮಾತ್ರವಲ್ಲ ಅವರ ಜತೆ ಕೆಲಸ ಮಾಡುವ ಸಿಬ್ಬಂದಿಗೂ ಅಡುಗೆ ಮಾಡಿ ಕೊಟ್ಟರು. ಅದು ಹೇಗೋ ಏನೋ ಎಲ್ಲ ಏಳು ಜನ ಸಂಸ್ಥಾಪಕರಲ್ಲಿಯೂ ಅಪರೂಪದ ತ್ಯಾಗದ ಮನೋಭಾವವಿತ್ತು. ತ್ಯಾಗ ಮಾಡದೇ ದೊಡ್ಡ ಉದ್ಯಮ ಕಟ್ಟಲಾಗದು ಎಂದೂ ಅವರಿಗೆ ಗೊತ್ತಿತ್ತು.

ಇನ್‌ಫೋಸಿಸ್ ಯಶಸ್ಸಿನ ಗಾಥೆಯ ಹಿಂದೆ ಬರೀ ಸಂಸ್ಥಾಪಕರ ತ್ಯಾಗ ಮಾತ್ರವಿಲ್ಲ. ಈಗಿನ ಕಾಲದಲ್ಲಿ ಅಪರೂಪವಾಗಿರುವ ಮೌಲ್ಯಗಳ ಭದ್ರಬುನಾದಿಯೂ ಇದೆ. ಆ ಮೌಲ್ಯಗಳು ಸಂಸ್ಥೆಯನ್ನು ಇಷ್ಟು ದೂರ ಮುನ್ನಡೆಸಿಕೊಂಡು ಬಂದಿವೆ. ಸ್ವಾತಂತ್ರ್ಯ ಬಂದ ನಂತರ 50-60ರ ದಶಕದಲ್ಲಿ ಜೆಮ್‌ಶೆಡ್‌ಜಿ ಟಾಟಾ, 1970ರ ದಶಕದಲ್ಲಿ ಧಿರೂಭಾಯಿ ಅಂಬಾನಿಯವರು ದೊಡ್ಡ ಉದ್ಯಮಗಳಿಗೆ ಬುನಾದಿ ಹಾಕಿದ ಹಾಗೆಯೇ ಉದಾರೀಕರಣದ ನಂತರದ ಅವಧಿಯ ಬಹುದೊಡ್ಡ ಉದ್ಯಮ ಹರಿಕಾರರಾಗಿ ನಾರಾಯಣಮೂರ್ತಿ ಹೊರಹೊಮ್ಮಿದ್ದಾರೆ.

ಈಗ ಐ.ಟಿ ಕ್ಷಿತಿಜದಲ್ಲಿ ಮೂರ್ತಿಯವರ ಹಾಗೆ ಅನೇಕ ತಾರೆಗಳು ಮಿನುಗುತ್ತಿವೆ. ಆದರೆ, ಮೂರ್ತಿ ಒಂದು ಧ್ರುವತಾರೆ. ಮೂರ್ತಿಯವರ ವಿಶೇಷ ಎಂದರೆ ಅವರ ಅಂಗಿಯ ಮೇಲೆ ಯಾವ ಕಪ್ಪು ಚುಕ್ಕೆಯೂ ಇಲ್ಲ. ಅವರ ಸಂಸ್ಥೆಯೂ ಅಷ್ಟೇ. ಸ್ಪಟಿಕದಂತೆ ಸ್ಪಷ್ಟ. ವಿವಾದಗಳಿಂದ, ಹಗರಣಗಳಿಂದ ಮಾರು ದೂರ ಇದ್ದ ಟಾಟಾ ಅವರ ಹೆಸರಿನ ಸುತ್ತ ಈಗ ವಿವಾದ ಸುತ್ತಿಕೊಂಡಿದೆ. ಅಂಬಾನಿಯವರು ಸದಾ ವಿವಾದದಲ್ಲಿಯೇ ಬೆಳೆದವರು. ಅವರ ಸುತ್ತಲೂ ಈಗ ವಿವಾದ ಇದೆ. ಮೂರ್ತಿಯವರು ಇಂಥ ಹಗರಣ, ವಿವಾದಗಳಲ್ಲಿ ಎಂದೂ ಸಿಲುಕಲಿಲ್ಲ ಎಂಬುದೇ

ಅವರ ಮತ್ತು ಅವರ ಸಂಸ್ಥೆಯ ಶ್ರೇಷ್ಠತೆಯ ಹೆಗ್ಗುರುತು. ಮೂರ್ತಿಯವರು ತಾವು, ಪಾಠ ಹೇಳಿದ ಒಬ್ಬ ಶಿಕ್ಷಕನ ಮಗ ಎಂಬುದನ್ನು ಎಂದೂ ಮರೆತಂತೆ ಕಾಣುವುದೇ ಇಲ್ಲ. ಈಗಲೂ ಅವರು ಜಯನಗರದ ಅದೇ ಅಷ್ಟೇನೂ ದೊಡ್ಡದಲ್ಲದ ಮನೆಯಲ್ಲಿ ಇದ್ದಾರೆ. ಅವರು ತಮ್ಮ ಕಕ್ಕಸನ್ನು ಈಗಲೂ ದಿನವೂ ತೊಳೆಯುತ್ತಾರೆ. ಹೊಟ್ಟೆಯವರೆಗೆ ಬರುವ ಅದೇ ದೊಗಳೆ ಪ್ಯಾಂಟನ್ನೇ ಕಟ್ಟಿಕೊಳ್ಳುತ್ತಾರೆ. ಮೇಲೊಂದು ಸರಳ ಅಂಗಿಯನ್ನು ಧರಿಸುತ್ತಾರೆ. ಸುಧಾ ಈಗಲೂ ಮನೆಯ ಕೆಲಸದ ಜತೆಗೆ 'ಮಾರಿ'ನ ಕೆಲಸವನ್ನೂ ಮಾಡಿಕೊಂಡಿದ್ದಾರೆ. ಮೂರ್ತಿ ದಂಪತಿ ಮನಸ್ಸು ಮಾಡಿದ್ದರೆ ಇಡೀ ಜಯನಗರವನ್ನು ಕೊಳ್ಳಬಹುದಿತ್ತು. ಮುಖೇಶ್ ಅಂಬಾನಿಯವರ ಹಾಗೆ 28 ಅಂತಸ್ತಿನ ಮನೆಯನ್ನು ಅಲ್ಲಿ ಕಟ್ಟಬಹುದಿತ್ತು. ಮೂರ್ತಿಯವರು ಪ್ರತಿದಿನ ಹೆಲಿಕಾಪ್ಟರಿನಲ್ಲಿಯೇ ತಮ್ಮ ಕಚೇರಿಗೆ ಹೋಗಿ ಮನೆಯ ಮಾಡಿನ ಮೇಲೆ ಬಂದು ಇಳಿಯಬಹುದಿತ್ತು. ಸಂಪತ್ತು ಅವರಿಗೆ ಇಂಥ ಯಾವ ಹುಸಿ ಅಂತಸ್ತಿನ ಹುಚ್ಚನ್ನೂ ಹಚ್ಚಲಿಲ್ಲ. ಬಹುಶಃ ಅವರು, ಮಧ್ಯಮ ವರ್ಗದ ದೊಡ್ಡ ಹೀರೋ ಎಂದು ಈಗಲೂ ಅನಿಸಲು ಇದೇ ಕಾರಣವಾಗಿರಬಹುದು. ಅವರು ನಮ್ಮ ನೆರೆಮನೆಯ ನಾರಾಯಣ ಅಥವಾ ಮೂರ್ತಿ ಇದ್ದಂತೆ ಇದ್ದಾರೆ.

28,000 ಕೋಟಿ ರೂಪಾಯಿ ಮೌಲ್ಯದ ಒಂದು ಕಂಪೆನಿಯ ಒಡೆಯರಿಗೆ ಎಷ್ಟೆಲ್ಲ ಅಧಿಕಾರ ಇರುತ್ತದೆ ಎಂದು ಊಹಿಸುವುದೂ ಕಷ್ಟ, ಅವರ ಒಂದು ಕರೆಗೆ ಎಂಥ ಬೆಲೆ ಎಂದು ಊಹಿಸುವುದು ಬಹಳ ಕಷ್ಟವೇನೂ ಅಲ್ಲ. ಮೂರ್ತಿ ಮನಸ್ಸು ಮಾಡಿದರೆ ಭಾರತದ ಪ್ರಧಾನಿಯನ್ನು ಕ್ಷಣದಲ್ಲಿ ಕಾಣಬಲ್ಲರು; ತಮ್ಮ ಸಂಸ್ಥೆಗೆ ಕರೆಸಬಲ್ಲರು. ಕಾಂಗ್ರೆಸ್ಸಿನ ಘಟಾನುಘಟಿ ನಾಯಕರು ಸೋನಿಯಾ ದರ್ಶನಕ್ಕೆ ಎಷ್ಟು ಗಂಟೆ, ದಿನ ಕಾಯುತ್ತಾರೆ ಎಂದು ಗೊತ್ತಿಲ್ಲ. ಬಹುಶಃ ದರ್ಶನ ಸಿಗುವುದೇ ಇಲ್ಲ. ಮೂರ್ತಿಯವರಿಗೆ ಅದು ಕಷ್ಟವೇ ಅಲ್ಲ. ಹಾಗೆಂದು ಅವರ ತಲೆಗೆ ಎಂದೂ ಆ ಅಧಿಕಾರ ಹೋದಂತೆ ಕಾಣುವುದಿಲ್ಲ. ಕಾರ್ಪೊರೇಟ್ ಜಗತ್ತೇ ಹಾಗೆ ಎಂದು ಕಾಣುತ್ತದೆ. ಅವರೆಲ್ಲ ಅನುಭವಿಸುವ ಅಧಿಕಾರ, ತ್ಯಾಗದಿಂದ ಮತ್ತು ಶಿಸ್ತಿನಿಂದ ಬಂದುದು. ಮೂರ್ತಿ ಮತ್ತು ಅವರ ಗೆಳೆಯರು ಮನಸ್ಸು ಮಾಡಿದ್ದರೆ ಅವರ ಮಕ್ಕಳು ಮರಿಗಳಿಗೆಲ್ಲ ತಮ್ಮ ಸಂಸ್ಥೆಯಲ್ಲಿ ಕೆಲಸ ಕೊಡಬಹುದಿತ್ತು. ಬೇಕಾದ ಹುದ್ದೆಗೆ ನೇಮಿಸಲೂ ಬಹುದಿತ್ತು. ಸ್ಟಾನ್‌ಫೋರ್ಡ್‌ನಲ್ಲಿ ಎಂಬಿಎ ಮಾಡಿದ ಮಗಳು ಅಕ್ಷತಾಗೆ, ಹಾರ್ವರ್ಡ್್ರನಲ್ಲಿ ಪಿಎಚ್.ಡಿ ಮಾಡಿರುವ ಮಗ ರೋಹನ್‌ಗೆ ಇನ್‌ಫೋಸಿಸ್ ಬಾಗಿಲು ಮುಚ್ಚಿತ್ತು. 'ನಮ್ಮ ಮಕ್ಕಳಿಗೆ ಇಲ್ಲಿ ಕೆಲಸ ಕೊಡಬಾರದು' ಎಂದು ಎಲ್ಲ ಏಳು ಜನ ಸಂಸ್ಥಾಪಕರು ನಿರ್ಧರಿಸಿದರು. ನೌಕರಿ ಕೊಟ್ಟರೆ ಅದು ಸ್ವಜನ ಪಕ್ಷಪಾತಕ್ಕೆ ದಾರಿ ಮಾಡಿಕೊಟ್ಟಂತೆ ಎಂದು ಅವರು ಅಂದುಕೊಂಡಿರಬಹುದು. ಅಥವಾ ಇದಕ್ಕೆ ಕೊನೆಯಿಲ್ಲ ಎಂದು ಅವರಿಗೆ ಅನಿಸಿರಬಹುದು. ಇನ್‌ಫೋಸಿಸ್‌ನಲ್ಲಿ ವಸೂಲಿ ಮೇಲೆ ನೌಕರಿ ಕೊಡಿಸಲು ಅದು ದಾರಿಯಾಗಬಹುದು ಎಂದೂ ಅವರಿಗೆ ಆಗಲೇ ಅನಿಸಿರಬಹುದು. ವಂಶಾಡಳಿತ ಒಪ್ಪಿತ 'ಆದರ್ಶ'ವಾಗಿರುವ ಈ ಕಾಲದಲ್ಲಿ ಹೀಗೂ ಇರುತ್ತದೆ, ಆಗುತ್ತದೆ. ವ್ಯತ್ಯಾಸ ಅಷ್ಟೇ.

ಮೂರ್ತಿ ಈಗ ಒಬ್ಬ ಬಂಡವಾಳಶಾಹಿ. ಆದರೆ, ಆರಂಭದ ಕಾಲದಲ್ಲಿ ಅವರು ಸಮಾಜವಾದವನ್ನು ನೆಚ್ಚಿಕೊಂಡಿದ್ದರು. 1974ರಲ್ಲಿ ಒಂದು ದಿನ ರೈಲಿನಲ್ಲಿ ಬಲ್ಗೇರಿಯಾದ ಕಮ್ಯುನಿಸ್ಟ್ ಸರ್ಕಾರದ ಬಗ್ಗೆ ಸಹ ಪ್ರಯಾಣಿಕರ ಜತೆ ಚರ್ಚಿಸಿದ್ದಕ್ಕೆ ಶಿಕ್ಷೆ ಎನ್ನುವಂತೆ ಸರಿಯಾಗಿ 108 ಗಂಟೆಗಳ ಕಾಲ ಅವರನ್ನು ಹಿಂಸಿಸಿ, ಬಂಧನದಲ್ಲಿ ಇಟ್ಟುಕೊಂಡು ಕೊನೆಗೂ ಕಳುಹಿಸಿಕೊಟ್ಟುದು ಮೂರ್ತಿಯವರ 'ನಂಬಿಕೆ'ಯನ್ನೇ ಅಲ್ಲಾಡಿಸಿ ಬಿಟ್ಟಿತು. ಕಟ್ಟಾ ಕಮ್ಯುನಿಸ್ಟ್ ಆಗಿರುವುದಕ್ಕಿಂತ ಉದಾರ ಬಂಡವಾಳಶಾಹಿ ಯಾಗಿರುವುದು ಲೇಸು ಎಂದು ಅವರು ಅಂದುಕೊಂಡರು. ಅವರ ಬದುಕನ್ನು ಬದಲಿಸಿದ ಇನ್ನೊಂದು ಆಕಸ್ಮಿಕ ಇದು. ಬಹುಶಃ ಬಲ್ಗೇರಿಯಾದ ಘಟನೆ ನಡೆದಿರದೇ ಇದ್ದರೆ ಏನಾಗುತ್ತಿತ್ತೋ ಗೊತ್ತಿಲ್ಲ. ಅದೆಲ್ಲ ಊಹೆಗೆ ಬಿಟ್ಟ ಮಾತು. ಮೂರ್ತಿಯವರ ಜೀವನದಲ್ಲಿ ಇಂಥ ಆಕಸ್ಮಿಕಗಳಿಗೆ ಲೆಕ್ಕವೇ ಇಲ್ಲ. ಪುಣೆಯಲ್ಲಿ ಆರಂಭವಾದ ಇನ್ಫೋಸಿಸ್ ಸಂಸ್ಥೆ ಬೆಂಗಳೂರಿಗೆ ಬರಲೂ ಒಂದು ಆಕಸ್ಮಿಕವೇ ಕಾರಣವಾಯಿತು. ಅವರಿಗೆ ಸಿಕ್ಕ ಮೊದಲ ಗ್ರಾಹಕ ಆಗಿನ ಮೈಕೋ (ಈಗಿನ ಬಾಷ್) ಕಾರ್ಖಾನೆ. ಬೆಂಗಳೂರಿನ ಈ ಕಾರ್ಖಾನೆ ಅವರಿಗೆ ಮೊದಲ ಗ್ರಾಹಕನಾಗಿರದೇ ಇದ್ದರೆ, ಯಾವುದೋ ಮಹಾರಾಷ್ಟ್ರದ ಅಥವಾ ಗುಜರಾತಿನ ಕಾರ್ಖಾನೆ ಇಲ್ಲವೆ ಉದ್ಯಮ ಗ್ರಾಹಕನಾಗಿದ್ದರೆ ಇನ್ಫೋಸಿಸ್ ಕಂಪೆನಿ ಬೇರೆ ರಾಜ್ಯದ ಹೆಮ್ಮೆ ಆಗಿಬಿಡಬಹುದಿತ್ತು. ಒಬ್ಬ ಕನ್ನಡಿಗ ಕನ್ನಡ ನಾಡಿನಲ್ಲೇ ಇಂಥ ಒಂದು ಉದ್ಯಮ ಸ್ಥಾಪಿಸುವುದಕ್ಕೂ ಬೇರೆ ರಾಜ್ಯದಲ್ಲಿ ಸ್ಥಾಪಿಸುವುದಕ್ಕೂ ಇರುವ ವ್ಯತ್ಯಾಸ ಅಗಾಧವಾದುದು. ಮೂರ್ತಿ ಮತ್ತೆ ಮತ್ತೆ ನೆನಪಿಸಿಕೊಳ್ಳುವ ಇನ್ನೊಂದು ಆಕಸ್ಮಿಕ 1990ರಲ್ಲಿ, 'ಇನ್ನು ಈ ಕಂಪೆನಿ ನಡೆಸಲು ಆಗದು' ಎಂದು ಅವರ ಗೆಳೆಯರೆಲ್ಲ ಹತ್ತು ಲಕ್ಷ ಡಾಲರ್‌ಗೆ ಅದನ್ನು ಮಾರಲು ಸಿದ್ಧರಾದುದು. ಎಲ್ಲ ಆರು ಜನ ಸಂಸ್ಥಾಪಕರು ಆಡಿದ ಮಾತನ್ನೆಲ್ಲ ಗಂಟೆಗಟ್ಟಲೆ ಕೇಳಿಸಿಕೊಂಡ ಮೂರ್ತಿಯವರು ನಾನೇ ನಿಮ್ಮನ್ನೆಲ್ಲ (ನಿಮ್ಮ ಷೇರನ್ನೆಲ್ಲ) ಖರೀದಿಸುತ್ತೇನೆ' ಎಂದು ಬಿಟ್ಟರು. ಆದರೆ, ಅವರ ಜೇಬಿನಲ್ಲಿ ಒಂದು ದಮಡಿಯೂ ಇರಲಿಲ್ಲ. ಮೂರ್ತಿಯವರ ದೃಢ ಮನಸ್ಸು, ನಾಯಕತ್ವದ ಗುಣ, ಕಠಿಣ ಸವಾಲುಗಳಿಗೆ ತನ್ನನ್ನೇ ತಾನು ಒಡ್ಡಿಕೊಳ್ಳಲು ಸದಾ ಸಿದ್ಧವಾಗಿರುವುದರ ಸಂಕೇತ ಅದು. ಗೆಳೆಯರ ಮಾತನ್ನು ಕೇಳಿ ಕಂಪೆನಿಯನ್ನು ಮಾರಿ ಬಿಟ್ಟಿದ್ದರೆ ಏನಾಗುತ್ತಿತ್ತು? ಮೂರ್ತಿ ಮತ್ತು ಗೆಳೆಯರು ಇತಿಹಾಸದಲ್ಲಿ ಉಳಿಯುತ್ತಿರಲಿಲ್ಲ.

ಒಂದು ಕಂಪೆನಿಯ ಯಶಸ್ಸು ಅದರ ದೀರ್ಘಾಯುಷ್ಯದಲ್ಲಿ ಇರುತ್ತದೆ. ಹತ್ತಾರು ಅಲ್ಲ ನೂರಾರು ವರ್ಷಗಳ ಕಾಲ ಒಂದು ಸಂಸ್ಥೆ ಉಳಿಯಬೇಕು. ಬಾಳಬೇಕು. ಒಂದು ಕಂಪೆನಿಯನ್ನು ಸ್ಥಾಪಿಸಿದವರು ಹೊಸ ಚಿಂತನೆಗಳಿಗೆ, ಹೊಸ ಆಲೋಚನೆಗಳಿಗೆ ದಾರಿ ಮಾಡಿಕೊಡಲು ಅಧಿಕಾರ ಬಿಟ್ಟು ಹಿಂದೆ ಸರಿಯಬೇಕು. ಅಧಿಕಾರ ವಹಿಸಿಕೊಳ್ಳಲು ಮುಂದೆ ಬರುವ ಯುವಕರಲ್ಲಿ ಕನಸುಗಳು ಇರಬೇಕು. ಕಠಿಣ ಶ್ರಮ ಪಡಲು ಮನಸ್ಸು ಇರಬೇಕು. ಮಾಡುವ ಕೆಲಸದ ಬಗ್ಗೆ ಗೌರವ ಇರಬೇಕು. ತಂಡವಾಗಿ ಕೆಲಸ ಮಾಡುವ ರೂಢಿ ಬೆಳೆಸಿಕೊಳ್ಳಬೇಕು. ಎಲ್ಲದಕ್ಕಿಂತ

ಮುಖ್ಯವಾಗಿ ಶಿಸ್ತು ಇರಬೇಕು. ಇನ್‌ಫೋಸಿಸ್ ಸಂಸ್ಥೆ ಅಂಥ ಒಂದು ಮನಃಸ್ಥಿತಿಯನ್ನು ಬೆಳೆಸಿದೆ ಎಂದು ಅನಿಸುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಒಂದು ವರ್ಷ ಮೊದಲು ಹುಟ್ಟಿದ ಮೂರ್ತಿಯವರಿಗೆ ಇನ್ನೇನು 65 ವರ್ಷ ತುಂಬಲಿವೆ. ಅವರು ಅಧ್ಯಕ್ಷ ಹುದ್ದೆಯನ್ನು ಬಿಟ್ಟು ಚೇರಮನ್ ಎಮಿರೆಟಸ್ ಎಂಬ ಗೌರವ ಹುದ್ದೆಯನ್ನು ಅಲಂಕರಿಸಲಿದ್ದಾರೆ. ಅವರ ಉತ್ತರಾಧಿಕಾರಿಯಾಗಿ ಕೆ.ವಿ.ಕಾಮತ್ ನೇಮಕಗೊಂಡಿದ್ದಾರೆ.

'ನಾವು ಹುಟ್ಟಿ ಹಾಕಿದ ಸಂಪತ್ತು ನಮಗೇ ಸಂಪೂರ್ಣವಾಗಿ ಸೇರಿದ್ದಲ್ಲ. ಅನೇಕ ಸಾರಿ ನಾವು ನೆಡದ ಗಿಡಗಳ ಹಣ್ಣುಗಳನ್ನೂ ನಾವು ತಿಂದಿರುತ್ತೇವೆ. ತಿಂದು ಬೆಳೆದಿರುತ್ತೇವೆ. ಈ ಜಗತ್ತನ್ನು ಬಿಟ್ಟು ಹೋಗುವಾಗ ಮುಂದಿನ ಜನಾಂಗಕ್ಕಾಗಿ ಒಂದು, ಎರಡು ಗಿಡಗಳಲ್ಲ ಒಂದು ತೋಟವನ್ನೇ ನೆಡಬೇಕು. ಅದರಲ್ಲಿ ಬೆಳೆಯುವ ಹಣ್ಣುಗಳನ್ನು ಕಡಿಮೆ ಅದೃಷ್ಟದ ಜನರು ತಿನ್ನುವಂತಾಗಬೇಕು' ಎಂಬುದು ಮೂರ್ತಿ ಕಂಡ ಕನಸು, ಆದರ್ಶ. ಮೂರ್ತಿಯವರು ತಾವು ಬಹುತೇಕ ನೆಟ್ಟ ಗಿಡದ ಹಣ್ಣುಗಳನ್ನೇ ತಿಂದು ಮುಂದಿನ ಜನಾಂಗಕ್ಕಾಗಿ ದೊಡ್ಡ ತೋಟವನ್ನು ನೆಟ್ಟಿದ್ದಾರೆ. ಅದರಲ್ಲಿ ಲಕ್ಷಾಂತರ ಯುವಕರು ಈಗ ಕೆಲಸ ಮಾಡುತ್ತಿದ್ದಾರೆ. ಅದರ ಫಲವನ್ನು ಅವರು ಮತ್ತು ಅವರ ಪಾಲಕರು ಅನುಭವಿಸುತ್ತಿದ್ದಾರೆ. ಒಬ್ಬ ಉದ್ಯಮಿ ತಾನು ಕಟ್ಟಿ ಬೆಳೆಸಿದ ಸಂಸ್ಥೆಗೆ ವಿದಾಯ ಹೇಳಲು ಇದಕ್ಕಿಂತ ಅಮೃತ ಕ್ಷಣ ಇನ್ನೊಂದು ಇರಲಾರದು... ನಾಗವಾರ ರಾಮರಾಯ ನಾರಾಯಣಮೂರ್ತಿ ಅವರಿಗೆ ನಮಸ್ಕಾರ.

08-05-2011

# ಆಮಿಷಗಳ ಹರಾಜಿನಲ್ಲಿ

# ಸೋತ ರಾಜಕಾರಣಿ,

# ಗೆದ್ದ ಮತದಾರ

ಹೊಸ ಸ ಹೂ ಹಾಕಿಕೊಂಡವರಿಗೆ ಅದು ಎಲ್ಲಿ ಕಚ್ಚುತ್ತದೆ. ಎಂದು ಗೊತ್ತಾಗುತ್ತದೆ. ತಮಿಳುನಾಡಿನ ಮುಂದಿನ ಮುಖ್ಯಮಂತ್ರಿ ಜಯಲಲಿತಾ ಅವರಿಗೆ ಹೂ ಎಲ್ಲಿ ಕಚ್ಚುತ್ತದೆ ಎಂದು ಈಗ ತಿಳಿಯುತ್ತಿದೆ. ಸರ್ಕಾರದ ಬೊಕ್ಕಸ ಖಾಲಿಯಾಗಿದೆ ಎಂದು ಅಧಿಕಾರ ವಹಿಸಿಕೊಳ್ಳುವುದಕ್ಕಿಂತ ಮುಂಚೆಯೇ ಅವರು ಅಲವತ್ತು ಕೊಂಡಿದ್ದಾರೆ.

ಚುನಾವಣೆಗಿಂತ ಮುಂಚೆ ಡಿ.ಎಂ.ಕೆ ಮುಖ್ಯಸ್ಥ ಕರುಣಾನಿಧಿ ಅವರ ಜತೆಗೆ ಜಿದ್ದಿಗೆ ಬಿದ್ದವರಂತೆ ಮತದಾರರಿಗೆ ಪುಕ್ಕಟೆ ಆಮಿಷಗಳನ್ನು ಪ್ರಕಟಿಸುವಾಗ ಜಯಲಲಿತಾ ಅವರಿಗೆ ತಾವು ಅಧಿಕಾರಕ್ಕೆ ಬಂದರೆ ಬೊಕ್ಕಸದಲ್ಲಿ ಹಣ ಇರುತ್ತದೆಯೇ ಇಲ್ಲವೇ ಎಂದು ಗೊತ್ತಿರಬೇಕಿತ್ತು. ಕರುಣಾನಿಧಿಯವರಾಗಲೀ, ಜಯಲಲಿತಾ ಅವರಾಗಲೀ ತಮ್ಮ ಮನೆಯ ಹಣದಿಂದಲೇನೂ ಮತದಾರರಿಗೆ ಬಣ್ಣದ ಟಿ.ವಿ, ಲ್ಯಾಪ್‌ಟಾಪ್ ಕೊಡುವುದಿಲ್ಲ. ಸರ್ಕಾರದ ಬೊಕ್ಕಸದಿಂದ ಯಾರು ಯಾರಿಗೆ ಬೇಕಾದರೂ ಏನನ್ನಾದರೂ ಕೊಡಬಹುದು ಎಂದೇ ಅಲ್ಲವೇ ಅವರಿಬ್ಬರೂ

ಪುಕ್ಕಟೆ ಆಮಿಷಗಳನ್ನು ಮತದಾರರಿಗೆ ಕೊಟ್ಟದ್ದು? ಐದು ವರ್ಷಗಳ ಹಿಂದೆ ನಡೆದ ಚುನಾವಣೆಯಲ್ಲಿ ಕರುಣಾನಿಧಿಯವರು ಬಣ್ಣದ ಟಿ.ವಿ ಭರವಸೆ ಕೊಟ್ಟೆ ಚುನಾವಣೆ ಗೆದ್ದು ಬಿಟ್ಟಿದ್ದರು. ಈ ಸಾರಿ ಬರೀ ಬಣ್ಣದ ಟಿ.ವಿ ಆಮಿಷ ಮತ ತಂದುಕೊಡಲಿಕ್ಕಿಲ್ಲ ಎಂದು ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಆಮಿಷ ಒಡ್ಡಿದರು. ಹಿಂದಿನ ಚುನಾವಣೆಯಲ್ಲಿ ಬಣ್ಣದ ಟಿ.ವಿ ಆಮಿಷವನ್ನು ವಿರೋಧಿಸಿದ್ದ ಜಯಲಲಿತಾ ಅಧಿಕಾರಕ್ಕೆ ಬರುವ ಆತುರದಲ್ಲಿ ಈ ಸಾರಿ ತಾವೂ ಲ್ಯಾಪ್‌ಟಾಪ್ ಕೊಡುವ ಭರವಸೆ ಕೊಟ್ಟರು. ಕರುಣಾನಿಧಿ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಕೊಡುತ್ತೇನೆ ಎಂದರೆ ಜಯಾ ಅದನ್ನು ಹನ್ನೊಂದನೇ ತರಗತಿ ವಿದ್ಯಾರ್ಥಿಗಳಿಗೂ ಕೊಡುತ್ತೇನೆ ಎಂದರು; ಬರೀ ಲ್ಯಾಪ್‌ಟಾಪ್ ಸಾಲದು ಎಂದು ಅನಿಸಿತೋ ಏನೋ ಮಹಿಳೆಯರಿಗೆ ಚಿನ್ನದ ಸರವನ್ನೂ ಕೊಡುತ್ತೇನೆ ಎಂದರು. ಕರುಣಾನಿಧಿ ಮತ್ತು ಜಯಲಲಿತಾ ಮತ್ತೆ ಪೈಪೋಟಿಗೆ ಇಳಿದರು. ಬಣ್ಣದ ಟಿ.ವಿ, ಲ್ಯಾಪ್‌ಟಾಪ್, ಚಿನ್ನದ ಸರದ ಜತೆಗೆ 20 ಕೆ.ಜಿ ಉಚಿತ ಅಕ್ಕಿ, ಅಕ್ಕಿ ರುಬ್ಬಲು ಉಚಿತ ಗೊಂಡ, ಚಟ್ನಿ ತಯಾರಿಸಲು ಮಿಕ್ಸಿ... ಒಂದೇ ಎರಡೇ ಮತದಾರರಿಗೆ ಏನು ಬೇಕು? ಏನು ಬೇಡ?

ಕರುಣಾ ಮತ್ತು ಜಯಾ ಹೀಗೆ ಲಜ್ಜೆಗೆಟ್ಟವರಂತೆ ಮತದಾರರ ಮರ್ಯಾದೆ ಹರಾಜು ಹಾಕುತ್ತಿದ್ದಾಗ ಆತ ಬೇರೆಯದೇ ಯೋಚನೆ ಮಾಡುತ್ತಿದ್ದ ಎಂದು ಅನಿಸುತ್ತದೆ. ಯಾರಾರು ಏನೇನು ಕೊಡುತ್ತಾರೋ ಕೊಡಲಿ, ನಾನು ಏನು ಮಾಡಬೇಕೋ ಅದನ್ನು ಮಾಡುತ್ತೇನೆ ಎಂದು ಆತ ಮುಂಚೆಯೇ ನಿರ್ಧರಿಸಿದ್ದ. ಈಗ ಫಲಿತಾಂಶ ಬಂದಿದೆ. ಜಯಾ ಅವರಿಗೆ ತಾವು ಕೊಟ್ಟ ಭರವಸೆಗಳು ಅತಿಯಾಯಿತು ಎಂದು ಅನಿಸುತ್ತಿರಬಹುದು. ಕರುಣಾ ಮತ್ತು ಜಯಾ ಇಬ್ಬರೂ ಬರೀ ಮತದಾರರ ಮರ್ಯಾದೆಯನ್ನು ಮಾತ್ರ ಹರಾಜು ಹಾಕಲಿಲ್ಲ, ಒಟ್ಟು ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಅಣಕಿಸಿದರು. ಅವರಿಬ್ಬರಿಗೂ ಪಕ್ಕದ ಕೇರಳ ರಾಜ್ಯದಲ್ಲಿ ಹೇಗೆ ಚುನಾವಣೆ ನಡೆಯುತ್ತಿದೆ ಎಂದು ಗೊತ್ತಾಗಬೇಕಿತ್ತು. ದೂರದ ಪಶ್ಚಿಮ ಬಂಗಾಳದಲ್ಲಿ ಒಂಟಿ ಹೆಣ್ಣು ಮಗಳು ಮಮತಾ ಹೇಗೆ ತನ್ನ ಹೋರಾಟ, ಛಲದಿಂದಲೇ ಚುನಾವಣೆ ಗೆಲ್ಲಲಿದ್ದಾಳೆ ಎಂದೂ ಕರುಣಾ ಹೋಗಲಿ ಜಯಾ ಅವರಿಗಾದರೂ ತಿಳಿಯಬೇಕಿತ್ತು. ಈಗ ಅತ್ತರೆ ಯಾರು ಕೇಳುತ್ತಾರೆ? ಈ ಸಾರಿಯ ಐದು ರಾಜ್ಯಗಳ ಚುನಾವಣೆ ಭಾರತದ ಮತದಾರ ಎಷ್ಟು ಜಾಣ ಎಂದು ಮತ್ತೊಮ್ಮೆ ಸಾಬೀತು ಮಾಡಿದೆ. ಅವರು ಮತಗಟ್ಟೆಗೆ ಸಿಟ್ಟಿನಿಂದ ಬಂದಂತೆ ಇತ್ತು. ಅವರ ಸಿಟ್ಟು ಅವರು ಮತಗಟ್ಟೆಗೆ ಬಂದ ಪ್ರಮಾಣದಲ್ಲಿಯೇ ಗೊತ್ತಾಗುತ್ತಿತ್ತು. ಈ ಪ್ರಮಾಣ ಬಹುತೇಕ ಎಲ್ಲ ರಾಜ್ಯಗಳಲ್ಲಿಯೂ ಹಿಂದಿನ ದಾಖಲೆ ಮುರಿಯಿತು. ತಮಿಳುನಾಡಿನಲ್ಲಿ ಆ ರಾಜ್ಯದ ಇತಿಹಾಸದಲ್ಲಿಯೇ ಅತಿಹೆಚ್ಚು ಅಂದರೆ ಶೇ 75.21ರಷ್ಟು ಮತದಾರರು ತಮ್ಮ ಹಕ್ಕು ಚಲಾಯಿಸಿದರೆ ಅಸ್ಸಾಂನಲ್ಲಿ ಇದು ಶೇ 76.03ರಷ್ಟು ಇತ್ತು. ಪಶ್ಚಿಮ ಬಂಗಾಳದಲ್ಲಿ ಕೊನೆಯ ಹಂತದಲ್ಲಿ ಮಾವೋವಾದಿಗಳ ಪ್ರಾಬಲ್ಯವಿರುವ ಪ್ರದೇಶದಲ್ಲಿಯೇ ಶೇ 85ರಷ್ಟು ಜನರು ತಮ್ಮ ಹಕ್ಕು ಚಲಾಯಿಸಿದರು.

2009ರ ಲೋಕಸಭೆ ಚುನಾವಣೆಗೆ ಹೋಲಿಸಿದರೆ ಇದು ಶೇ 20ರಷ್ಟು ಹೆಚ್ಚು. ಕೇರಳದಲ್ಲಿ ಶೇ 75ರಷ್ಟು ಮತ್ತು ಪುದುಚೇರಿಯಲ್ಲಿ ಶೇ 85ರಷ್ಟು ಮತದಾನ ಆಯಿತು. ಬಹುತೇಕ ರಾಜ್ಯಗಳಲ್ಲಿ ಮತದಾರ ಬದಲಾವಣೆಯ ತಂಗಾಳಿಗೆ ಹಾತೊರೆಯುತ್ತಿದ್ದ. ಅದಕ್ಕೆ ನಾನಾ ಕಾರಣಗಳು ಇದ್ದುವು. ಅಸ್ಸಾಂನಂಥ ರಾಜ್ಯದಲ್ಲಿ ಆತ ಹಾಲಿ ಸರ್ಕಾರವನ್ನೇ ಮುಂದುವರಿಸಬಹುದು ಎಂಬ ಇಂಗಿತವೂ ಮತದಾನಕ್ಕಿಂತ ಮುಂಚೆಯೇ ಸಿಕ್ಕಿತ್ತು.

ಮತದಾರನ ಇಂಗಿತ ಏನಿರಬಹುದು ಎಂದು ಜಯಲಲಿತಾ ಯೋಚಿಸಬೇಕಿತ್ತು. ತಮ್ಮ ಪ್ರತಿಸ್ಪರ್ಧಿ ಕರುಣಾನಿಧಿ ಅವರು ಯೋಚಿಸಿದ ಹಾಗೆಯೇ ಮತದಾರ ಒಬ್ಬ ಗ್ರಾಹಕ ಎಂದು ಅಂದುಕೊಳ್ಳಬಾರದಿತ್ತು. ಒಂದು ರಾಜ್ಯಕ್ಕೆ ಮೂಲಸೌಕರ್ಯ, ಆಹಾರ ಭದ್ರತೆ, ಆರೋಗ್ಯ, ಶಿಕ್ಷಣ ಮುಖ್ಯ ಎಂದು ಅವರು ಭಾವಿಸಬೇಕಿತ್ತು. ರಾಜಕಾರಣಿಗಳು ವ್ಯಾಪಾರಿಗಳ ಹಾಗೆ ವರ್ತಿಸತೊಡಗಿದರೆ ಮತದಾರರು ಗ್ರಾಹಕರ ಹಾಗೆ ವರ್ತಿಸತೊಡಗುತ್ತಾರೆ. ಆಸೆಯನ್ನು ಗೆಲ್ಲುವುದು ಯಾರಿಗೇ ಆಗಲಿ ಕಷ್ಟ ಪುಕ್ಕಟೆ ಬಣ್ಣದ ಟಿ.ವಿ, ಲ್ಯಾಪ್‌ಟಾಪ್, ಚಿನ್ನದ ಸರ ಮನೆಗೆ ಬಂದು ಬಿದ್ದರೆ ಯಾರು ಬೇಡ ಅನ್ನುತ್ತಾರೆ? ಇಂಥ ಪುಕ್ಕಟೆ ವಸ್ತುಗಳಿಂದ ರಾಜ್ಯ ಉದ್ಧಾರವಾಗುವುದಿಲ್ಲ ಎಂದು ಜಯಾ ಹೇಳಿದ್ದರೆ ಮತದಾರರು ಕೇಳುತ್ತಿದ್ದರೋ ಏನೋ? ಆ ಧೈರ್ಯವನ್ನು ಆಕೆ ಮಾಡಿ ಚುನಾವಣೆ ಗೆದ್ದಿದ್ದರೆ ಒಂದು ಇತಿಹಾಸ ನಿರ್ಮಾಣವಾಗುತ್ತಿತ್ತು. ಇತಿಹಾಸ ನಿರ್ಮಾಣ ಮಾಡಲು ಧೈರ್ಯ ಬೇಕು, ಅಧಿಕಾರದ ಹಂಬಲ ಇರಬಾರದು. ಕರುಣಾನಿಧಿ ಅವರಿಗೆ ತಮ್ಮ ಆಡಳಿತದ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಬಣ್ಣದ ಟಿ.ವಿಯ ಆಸರೆ ಬೇಕಿತ್ತು. ಜಯಾ ಅವರಿಗೆ ಅದರ ಅಗತ್ಯವಿರಲಿಲ್ಲ. ಅವರು ಜನರ ಮನಸ್ಸಿನಲ್ಲಿ ಒಳಿತು-ಕೆಡುಕಿನ ನಡುವೆ ವಾಗ್ವಾದ ಹುಟ್ಟಿ ಹಾಕಬಹುದಿತ್ತು. ಇಂಥ ವಾಗ್ವಾದಗಳು ಹಿಂದೆ ಸರಿದು ಆಮಿಷಗಳು ವಿಜೃಂಭಿಸುತ್ತಿರುವುದರಿಂದಲೇ ಪ್ರಜಾಪ್ರಭುತ್ವದ ಆಶಯಗಳಿಗೆ ಧಕ್ಕೆ ಬರುತ್ತಿದೆ. ದೇಶವನ್ನು ಮುತ್ತಿ ಕಾಡುತ್ತಿರುವ ಭ್ರಷ್ಟಾಚಾರಕ್ಕೆ ಚುನಾವಣೆ ವ್ಯವಸ್ಥೆಯೇ ಕಾರಣ ಎಂಬುದು ಈಗ ಗುಟ್ಟಾಗಿಯೇನೂ ಉಳಿದಿಲ್ಲ. ಮನೆಯ ದುಡ್ಡು ಹಾಕಿ ಚುನಾವಣೆ ಗೆಲ್ಲುವ ಅಭ್ಯರ್ಥಿ ಅದನ್ನು ಮರಳಿ ಗಳಿಸಲು ಭ್ರಷ್ಟಾಚಾರಕ್ಕೆ ಇಳಿಯುತ್ತಾನೆ. ಸರ್ಕಾರದ ಬೊಕ್ಕಸವನ್ನೇ ಅಡವು ಇಟ್ಟು ಚುನಾವಣೆ ಮಾಡುವ ಕರುಣಾ, ಜಯಾ ಅವರ ವಿರುದ್ಧವೂ ಇಂಥ ಆರೋಪಗಳು ಇವೆ. ಸರ್ಕಾರದ ಬೊಕ್ಕಸದ ಮೇಲೆ ಹೀಗೆ ಅನುತ್ಪಾದಕ ವೆಚ್ಚಗಳ ಹೊರೆ ಬಿದ್ದಾಗ ಅಭಿವೃದ್ಧಿಗೆ ಹೊಡೆತ ಬೀಳುತ್ತದೆ. ಸಾಲದ ಹೊರೆ ಹೆಚ್ಚುತ್ತ ಹೋಗುತ್ತದೆ. ತಮಿಳುನಾಡು ರಾಜ್ಯದ ಜನರ ಮೇಲೆ ಒಂದು ಲಕ್ಷ ಕೋಟಿ ಸಾಲದ ಹೊರೆ ಬಿದ್ದಿದೆ ಎಂದು ಜಯಾ ಅವರಿಗೆ ಈಗಾಗಲೇ ತಿಳಿದಿದೆ.

ತಮಿಳುನಾಡಿನ ಈ ವಿದ್ಯಮಾನ ನನಗೆ ಏಕೆ ಮುಖ್ಯ ಅನಿಸಿತು ಎಂದರೆ ಕರ್ನಾಟಕದಲ್ಲಿಯೂ ಇದೇ ಪರಂಪರೆ ಬೆಳೆಯುತ್ತಿದೆ. ಯಡಿಯೂರಪ್ಪನವರು ಮೊನ್ನೆ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಹೆಣ್ಣು ಮಕ್ಕಳಿಗೆ ಸೀರೆ ಹಂಚುವಾಗ ಅವರ ಮನಸ್ಸಿನಲ್ಲಿ ಮತದಾರರು ಗ್ರಾಹಕರು ಎಂಬ ಭಾವನೆಯೇ ಇತ್ತು. ಮಠಗಳಿಗೆ ಅವರು

ಬೊಕ್ಕಸದಿಂದ ಕೋಟಿಗಟ್ಟಲೆ ಹಣ ಪ್ರಕಟಿಸುವಾಗಲೂ ಇದೇ ಮನಃಸ್ಥಿತಿ ಇತ್ತು. ಸರ್ಕಾರ ಕೊಡುವ ವೃದ್ಧಾಪ್ಯ ವೇತನ ಈಗ ಮನೆ ಮನೆಯಲ್ಲಿ ವೃದ್ಧರನ್ನು ಹುಟ್ಟಿ ಹಾಕಿದೆ. 40 ವರ್ಷದವರೂ ಈ ವೇತನ ಪಡೆಯುತ್ತಿದ್ದಾರೆ! ಅದೃಷ್ಟಕ್ಕೆ ವಿಧವೆಯರನ್ನು ಹುಟ್ಟಿ ಹಾಕಿದಂತೆ ಕಾಣುತ್ತಿಲ್ಲ. ಇಂಥ ವೇತನ ಕೊಡಿಸುವ ದಲ್ಲಾಳಿಗಳು ಹಳ್ಳಿ ಹಳ್ಳಿಗಳಲ್ಲಿ ಹುಟ್ಟಿಕೊಂಡಿದ್ದಾರೆ. ಬಿ.ಪಿ.ಎಲ್ ಕಾರ್ಡ್ ಕೊಡಿಸುವ ದಲ್ಲಾಳಿಗಳಿಗೂ ಲೆಕ್ಕವಿಲ್ಲ. ಕರ್ನಾಟಕದ ಒಟ್ಟು ಕುಟುಂಬಗಳಿಗಿಂತ ಬಿ.ಪಿ.ಎಲ್ ಕಾರ್ಡುಗಳ ಸಂಖ್ಯೆ ಹೆಚ್ಚು ಇರುವುದಕ್ಕೆ ಕಾರಣ ಇಲ್ಲಿಯೇ ಇದೆ. ಸರ್ಕಾರ ಈಗಾಗಲೇ ಕಡಿಮೆ ದರದಲ್ಲಿ ಅಕ್ಕಿ ಕೊಟ್ಟು ಗ್ರಾಮೀಣ ಪ್ರದೇಶದ ಅರ್ಥ ವ್ಯವಸ್ಥೆಯನ್ನೇ ಹಾಳು ಮಾಡಿದೆ. ಯಾವ ಹಳ್ಳಿಗೆ, ಊರಿಗೆ ಹೋದರೂ ಕೆಲಸ ಮಾಡುವವರು ಸಿಗುವುದಿಲ್ಲ. ತಿಂಗಳಿಗೆ 20 ಕೆ.ಜಿ ಅಕ್ಕಿ ಸಿಕ್ಕರೆ ಮೈ ಮುರಿದು ದುಡಿಯಲು ಯಾರು ಹೋಗುತ್ತಾರೆ? ಕರ್ನಾಟಕದಲ್ಲಿ ಪ್ರತಿಯೊಂದು ಪ್ರದೇಶಕ್ಕೂ ಒಂದು ಆಹಾರ ಪದ್ಧತಿ ಇತ್ತು. ಈ ಆಹಾರ ಪದ್ಧತಿ ಅವರು ಮಾಡುವ ಕೆಲಸಕ್ಕೆ ಪೂರಕವಾಗಿತ್ತು. ಉತ್ತರ ಕರ್ನಾಟಕದಲ್ಲಿ ಜನರು ರೊಟ್ಟಿ ತಿಂದು ಹೊಲದಲ್ಲಿ ನಟ್ಟು ಕಡಿಯುತ್ತಿದ್ದರು. ದಕ್ಷಿಣ ಕರ್ನಾಟಕದಲ್ಲಿ ಮುದ್ದೆ ತಿನ್ನುತ್ತಿದ್ದರು. ಈಗ ಎಲ್ಲರೂ ಅನ್ನ ತಿನ್ನುತ್ತಿದ್ದಾರೆ. ಹುಷಾರು ಇಲ್ಲದಿದ್ದರೆ ಮಾತ್ರ ಅನ್ನ ತಿನ್ನಬೇಕು ಎಂದು ಉತ್ತರ ಕರ್ನಾಟಕದ ಜನ ಒಂದು ಕಾಲದಲ್ಲಿ ಅಂದುಕೊಳ್ಳುತ್ತಿದ್ದರು. ಈಗ ನಿತ್ಯವೂ ಅವರು ಅನ್ನ ತಿನ್ನುತ್ತಿದ್ದಾರೆ. ನಟ್ಟು ಕಡಿಯಲು ಅವರ ಮೈಯಲ್ಲಿ ಈಗ ನೆತ್ತರು ಉಳಿದಿಲ್ಲ! ಮತದಾರ ಹೀಗೆ ವೈಯಕ್ತಿಕ ಆಮಿಷಗಳಿಗೆ ಬಲಿಯಾಗುತ್ತ ಹೋದಂತೆ ಆಡಳಿತಗಾರರಿಗೆ ಒಟ್ಟು ರಾಜ್ಯದ ಅಭಿವೃದ್ಧಿಯ ಆದ್ಯತೆಗಳ ಮೇಲಿನ ಗಮನ ಕಡಿಮೆಯಾಗುತ್ತ ಹೋಗುತ್ತದೆ. ಅಥವಾ ಅದಕ್ಕೆ ಖಜಾನೆಯಲ್ಲಿ ಹಣ ಉಳಿದಿರುವುದಿಲ್ಲ. ಕರ್ನಾಟಕದಲ್ಲಿ ಈಗಲೂ 14 ಜಿಲ್ಲೆಗಳ ಪ್ರವಾಹ ಸಂತ್ರಸ್ತರಿಗೆ ಒಂದೂವರೆ ವರ್ಷವಾದರೂ ಏಕೆ ಮನೆ ಸಿಗುವುದಿಲ್ಲ ಮತ್ತು ರಾಜ್ಯದ ರಸ್ತೆಗಳು ಏಕೆ ಹಾಳು ಸುರಿಯುತ್ತಿವೆ ಎಂಬುದಕ್ಕೆ ಕಾರಣಗಳು ಸ್ಪಷ್ಟವಾಗಿಯೇ ಇವೆ.

ಮತದಾರರನ್ನು ಸಶಕ್ತರನ್ನಾಗಿ ಮಾಡುವ ರೀತಿ ಇದಲ್ಲ. ಆದರೆ, ಶಾಲಾ ಮಕ್ಕಳಿಗೆ ಸೈಕಲ್ ವಿತರಣೆ ಮತ್ತು ಹೆಣ್ಣು ಶಿಶುವಿಗೆ ಭರವಸೆಯಾದ ಭಾಗ್ಯಲಕ್ಷ್ಮಿ ಬಾಂಡ್ ಎರಡು ಅಪವಾದಗಳು. ಸೈಕಲ್, ಗ್ರಾಮೀಣ ಮಕ್ಕಳಿಗೆ ಚಲನಶೀಲತೆಯನ್ನು ತಂದುಕೊಟ್ಟಿದ್ದರೆ, ಅವರ ಶಿಕ್ಷಣ ಮುಂದುವರಿಯಲು ವರ ಎನಿಸಿದ್ದರೆ ಭಾಗ್ಯಲಕ್ಷ್ಮಿ ಬಾಂಡ್ ಹೆಣ್ಣು ಹೆತ್ತ ಪಾಲಕರ ಭವಿಷ್ಯದ ಚಿಂತೆಯನ್ನು ಕರಗಿಸಿದೆ. ಒಂದು ರಾಜ್ಯ, ಸಮಗ್ರ ಅಭಿವೃದ್ಧಿ ಪಥದಲ್ಲಿ ನಡೆದಂತೆ ಜನರೂ ಸಶಕ್ತರಾಗುತ್ತ ಹೋಗುತ್ತಾರೆ. ಹೇಗಾದರೂ ಮಾಡಿ ಅಧಿಕಾರದ ಚುಕ್ಕಾಣಿ ಹಿಡಿಯಬೇಕು ಎನ್ನುವ ಹಪಾಹಪಿಯ ರಾಜಕಾರಣಿಗಳಿಗೆ ಪ್ರಜಾಪ್ರಭುತ್ವದ ಈ ಮೂಲ ಆಶಯವೇ ಮರೆತು ಹೋಗುತ್ತಿದೆ. ವೈಯಕ್ತಿಕ ಆಮಿಷಗಳಿಗೆ ಬಲಿ ಬೀಳುತ್ತಿರುವ ಮತದಾರರೂ ಆ ದೃಷ್ಟಿ ಕಳೆದುಕೊಳ್ಳುತ್ತಿದ್ದಾರೆ. ಕರ್ನಾಟಕದಲ್ಲಿ ಇನ್ನು ಒಂದೆರಡು ವರ್ಷದಲ್ಲಿ ಚುನಾವಣೆ ಬಂದರೆ ಆಗ ಇದರ ನಗ್ನ ಪ್ರದರ್ಶನ ಆಗಲಿದೆ. ಆದರೆ, ಇಂಥ ಯಾವ ಆಮಿಷ ಒಡ್ಡದೆ, ಗರಿಕೆ ಬೇರು

(ತೃಣಮೂಲ) ಹಿಡಿದುಕೊಂಡು ಕಮ್ಯುನಿಸ್ಟರನ್ನು ಓಡಿಸಿದ ಮಮತಾ ಬ್ಯಾನರ್ಜಿ ಚುನಾವಣೆ ಗೆದ್ದ ನಂತರ ರಾಜ್ಯದ ಅಭಿವೃದ್ಧಿಯ ಬಗ್ಗೆ ಆಡಿದ ಮಾತು ನನ್ನ ಕಿವಿಯಲ್ಲಿ ಇನ್ನೂ ಗುಂಯ್‌ಗುಡುತ್ತಿದೆ. ಚುನಾವಣೆಯಲ್ಲಿ ಭರ್ಜರಿ ಜಯ ಗಳಿಸಿದ ನಂತರವೂ ಮಮತಾ ಅದೇ ಅರಳೆಯ ಬಿಳಿ ಬಣ್ಣದ ಸೀರೆಯಲ್ಲಿ ಇದ್ದರು. ಅತ್ತ ಜಯಲಲಿತಾ ಅವರು ತಮ್ಮ ಭರ್ಜರಿ ಬಂಗಲೆಯಲ್ಲಿ ಕಾಲಿಗೆ ಬಂದು ಬೀಳುತ್ತಿದ್ದ ಶಾಸಕರಿಗೆ ಆಶೀರ್ವಾದ ಮಾಡುತ್ತಿದ್ದರು! ನಮ್ಮ ಎಲ್ಲ ರಾಜಕೀಯ ಪಕ್ಷಗಳಿಗೆ ಸರಳ ಜೀವಿಯಾದ ಮಮತಾ ಮಾದರಿಯಾಗಬೇಕು. ಜಯಲಲಿತಾ ಅಲ್ಲ. ಕರುಣಾನಿಧಿ ಮೊದಲೇ ಅಲ್ಲ.

15-05-2011

# ಮಧ್ಯಪ್ರಾಚ್ಯದಲ್ಲಿ

# ಪತ್ರಕರ್ತನಾಗಿರುವುದೆಂದರೆ...

ಅವರ ಹೆಸರು ಸುಲೇಮಾನ್ ಖಾಲಿದಿ. ವಯಸ್ಸು 40ರ ಆಸುಪಾಸು. ಕಳೆದ 20 ವರ್ಷಗಳಿಂದ ಅಂತರರಾಷ್ಟ್ರೀಯ ರಾಯ್ಟರ್ಸ್ ಸುದ್ದಿ ಸಂಸ್ಥೆಯ ವರದಿಗಾರರಾಗಿ ಜೋರ್ಡಾನ್ ದೇಶದ ರಾಜಧಾನಿ ಅಮ್ಮಾನ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಮಾಡಿದ ತಪ್ಪು ಒಂದೇ, ಜೋರ್ಡಾನ್ ಉತ್ತರದಲ್ಲಿನ ಸಿರಿಯಾ ಸಂಘರ್ಷ ವರದಿ ಮಾಡಲು ಗಡಿ ದಾಟಿದರು. ಸಿರಿಯಾದ ದಕ್ಷಿಣದಲ್ಲಿನ ದರಾ ನಗರದಲ್ಲಿ ಪ್ರಭುತ್ವದ ವಿರುದ್ಧ ನಡೆಯುತ್ತಿದ್ದ ಪ್ರತಿಭಟನೆಯನ್ನು ವರದಿ ಮಾಡಿದರು. ಸಿರಿಯಾದ ಗುಪ್ತದಳದ ಅಧಿಕಾರಿಗಳು ಸುಲೇಮಾನ್ ಅವರನ್ನು ಬಂಧಿಸಿ ಒಳಗೆ ಹಾಕಿದರು. ನಾಲ್ಕು ದಿನ ಅವರಿಗೆ ಅನ್ಯ ಜಗತ್ತಿನ ಸಂಪರ್ಕ ಇರಲಿಲ್ಲ. ಆ ನಾಲ್ಕು ದಿನ ಅವರು ಅನುಭವಿಸಿದ್ದು ಜೀವಂತ ನರಕ.

ಅಧಿಕಾರಿಗಳು : ಸುಲೇಮಾನ್ ಅವರನ್ನು ರುದ್ರ ಭೀಕರವಾದ ಒಂದು ಕೊಠಡಿಯಲ್ಲಿ ತಳ್ಳಿದರು. ಎದುರಿಗೆ ಒಬ್ಬ ಯುವಕ ತಲೆ ಕೆಳಗಾಗಿ ನೇತು ಬಿದ್ದಿದ್ದ. ಅವನ ಬಾಯಿಯಿಂದ ಬಿಳಿ ನೊರೆ ಸುರಿಯುತ್ತಿತ್ತು. ಮೈಮೇಲೆಲ್ಲ

ಬಾಸುಂಡೆ ಎದ್ದಿದ್ದುವು. ಗಾಯದಿಂದ, ನೋವಿನಿಂದ ಆತ ಮನುಷ್ಯನಂತೆ ಅಲ್ಲ, ಪ್ರಾಣಿಯಂತೆ ಗೀಳಿಡುತ್ತಿದ್ದ. ಸುಲೇಮಾನ್ ತಮ್ಮ ಜೀವನದಲ್ಲಿ ಎಂದೂ ಕಂಡಿರದ ಇಂಥ ದೃಶ್ಯದಿಂದ ಚೇತರಿಸಿಕೊಳ್ಳುವುದಕ್ಕಿಂತ ಮೊದಲೇ ಜತೆಗಿದ್ದ ಜೇಲರ್, 'ಅಲ್ಲೇನು ನೋಡುತ್ತಿ, ಬೋರಲು ಮಲಗು' ಎಂದ. ಇವರು ಹೊಟ್ಟೆ ಕೆಳಗೆ ಮಾಡಿ ಮಲಗುತ್ತಿದ್ದಂತೆಯೇ ಇವರ ರಟ್ಟೆಗಳ ಮೇಲೆ ಕಾರಿನ ಟೈರುಗಳು ಚಲಿಸಿ ಹೋದುವು. 'ಅಮೆರಿಕಾದ ಏಜೆಂಟ್ ನೀನು. ಇಲ್ಲೇನು ಮಾಡುತ್ತಿದ್ದ ಮಗನೇ, ಗಲಾಟೆಯನ್ನು ವರದಿ ಮಾಡಲು ಬಂದಿದ್ದೀಯಾ? ನೀನೊಬ್ಬ ನಾಯಿ. ನಮ್ಮ ದೇಶಕ್ಕೆ ಅವಮಾನ ಮಾಡುತ್ತಿದ್ದೀಯಾ...' ಅತ್ತ ದೈಹಿಕ ಹಿಂಸೆ, ಮೇಲೆ ಬೈಗುಳದ ಸುರಿಮಳೆ...

ಕಳೆದ ಒಂದು ವಾರ ನಾನು ಜೋರ್ಡಾನ್ ಪ್ರವಾಸೋದ್ಯಮ ಮಂಡಳಿಯ ಆಮಂತ್ರಣದ ಮೇರೆ ಆ ದೇಶಕ್ಕೆ ಭೇಟಿ ನೀಡಿದ್ದೆ. ಕಳೆದ ಭಾನುವಾರದ ಪತ್ರಿಕೆಯಲ್ಲಿ ಸುಲೇಮಾನ್ ನಾಲ್ಕು ದಿನ ತಾವು ಅನುಭವಿಸಿದ್ದನ್ನು 'ದಿ ಜೋರ್ಡಾನ್‌ಟೈಮ್ಸ್' ಪತ್ರಿಕೆಯಲ್ಲಿ ಸವಿಸ್ತಾರವಾಗಿ ಬರೆದಿದ್ದರು. ಇಡೀ ಮಧ್ಯಪ್ರಾಚ್ಯದಲ್ಲಿ ಈಗ ತಳಮಳವಿದೆ. ಲಿಬಿಯಾದಲ್ಲಿ ಗಡಾಫಿ ಆಡಳಿತ ಅಂತ್ಯಕ್ಕೆ ಬಂದಿದೆ. ಈಜಿಪ್ಟ್‌ನಲ್ಲಿ ಕ್ರಾಂತಿಯೇ ಆಗಿದೆ. ಸಿರಿಯಾದಲ್ಲಿ ಪ್ರಭುತ್ವದ ವಿರುದ್ಧ ಹೋರಾಟಕ್ಕೆ ಬಲ ಬರುತ್ತಿದೆ. ಇರಾಕ್ ಧ್ವಂಸವಾಗಿದೆ. ಇಸ್ರೇಲ್ ಮತ್ತು ಪ್ಯಾಲೆಸ್ತೈನ್‌ನಲ್ಲಿ ಶಾಂತಿ ಮರೀಚಿಕೆಯಾಗಿದೆ. ಇದ್ದುದರಲ್ಲಿ ಜೋರ್ಡಾನ್ ಒಂದೇ ಉತ್ತಮ ದೇಶ.

ಸಿರಿಯಾದಲ್ಲಿ ಅಧ್ಯಕ್ಷ ಬಷಾರ್ ಅಲ್ ಅಸ್ಸಾದ್ ಅವರ ಕೈಯಲ್ಲಿ ಎಲ್ಲ ಅಧಿಕಾರ ಕೇಂದ್ರೀಕೃತವಾಗಿದೆ. ಅವರು ಬಿಟ್ಟರೆ ಅವರ ಸೋದರ ಮತ್ತು ಸಹಾಯಕರ ದಬ್ಬಾಳಿಕೆ. ವಿಚಿತ್ರ ಎಂದರೆ ಅಸ್ಸಾದ್ ಆ ದೇಶದ ಅಲ್ಪಸಂಖ್ಯಾತ ಅಲವೈಟ್ ಸಮುದಾಯಕ್ಕೆ ಸೇರಿದವರು. ಕಳೆದ 50 ವರ್ಷಗಳಿಂದ ಆ ದೇಶದಲ್ಲಿ ತುರ್ತುಸ್ಥಿತಿ ಇತ್ತು. ಈಚೆಗಷ್ಟೇ ಅದನ್ನು ಸಡಿಲಿಸಲಾಗಿದೆ. ಆದರೆ, ದಬ್ಬಾಳಿಕೆ ನಿಂತಿಲ್ಲ. ಒಂದು ಸಾವಿರಕ್ಕೂ ಹೆಚ್ಚು ಜನ ಸತ್ತಿದ್ದಾರೆ. ಅಥವಾ ಅವರನ್ನು ಸಿರಿಯಾ ಸೈನಿಕರು ಕೊಂದು ಹಾಕಿದ್ದಾರೆ. 10,000 ಜನರನ್ನು ಜೈಲಿಗೆ ತಳ್ಳಲಾಗಿದೆ. ಒಂದು ತಿಂಗಳಿಂದ ನಾಪತ್ತೆಯಾಗಿದ್ದ 13 ವರ್ಷದ ಬಾಲಕನ ಮೃತ ದೇಹವನ್ನು ಕಳೆದ ವಾರವಷ್ಟೇ ಆತನ ತಂದೆತಾಯಿಗೆ ಒಪ್ಪಿಸಲಾಯಿತು. ಏಪ್ರಿಲ್ 29ರಂದು ನಡೆದ ಪ್ರತಿಭಟನೆಯಲ್ಲಿ ಆ ಹುಡುಗ ಪಾಲುಗೊಂಡಿದ್ದ. ಅವನ ದೇಹದ ಹಲವು ಕಡೆ ಗುಂಡೇಟಿನ ಗುರುತುಗಳು ಇದ್ದುವು. ಆ ಹುಡುಗನನ್ನು ಒಂದೇ ಗುಂಡಿನಿಂದ ಸಾಯಿಸಬಹುದಿದ್ದ ಪ್ರಭುತ್ವಕ್ಕೆ ಅಷ್ಟರಿಂದಲೇ ಸಮಾಧಾನ ಆದಂತೆ ಕಂಡಿರಲಿಲ್ಲ. ಸುಲೇಮಾನ್ ಖಾಲಿದಿ ಅವರಿಗೆ ವರದಿ ಮಾಡಲು ಇದಕ್ಕಿಂತ ಹೆಚ್ಚಿನ ಸಾಮಗ್ರಿ ಇನ್ನೇನು ಬೇಕಿತ್ತು? ಅವರು ಗಡಿ ದಾಟಿದರು.

ಸಿರಿಯಾದ ರಾಜಧಾನಿ ಡಮಾಸ್ಕಸ್‌ನಲ್ಲಿ ಸುಲೇಮಾನ್ ಯಾರನ್ನೂ ಭೇಟಿ ಮಾಡಲು ಹೊರಟಿದ್ದರು. ಆ ವೇಳೆಗಾಗಲೇ ಅವರು ಆ ದೇಶ ಪ್ರವೇಶಿಸಿ ಹತ್ತು ದಿನಗಳಾಗಿತ್ತು. ನಿತ್ಯ ವರದಿ ಕಳುಹಿಸಿದ್ದರು. ಇವರು ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಗ ಮಫ್ತಿಯಲ್ಲಿ ಇದ್ದ ಇಬ್ಬರು ಬಂದು ಇವರ ಎರಡೂ ತೋಳುಗಳನ್ನು ಹಿಡಿದುಕೊಂಡರು. ಒಂದು ಕಾರಿನಲ್ಲಿ ಇವರನ್ನು ತಳ್ಳಿ ಕರೆದುಕೊಂಡು ಹೋದರು.

ನರಕ ಸದೃಶವಾದ ಕತ್ತಲೆಕೋಣೆಯಲ್ಲಿ ಕೂಡಿ ಹಾಕಿದರು. 'ಸಿರಿಯಾವನ್ನು ಮತ್ತೊಂದು ಲಿಬಿಯಾ ಮಾಡಲು ಹೊರಟಿದ್ದೀಯಾ ಸೂ..ಮಗನೆ, ನಿಜವನ್ನು ಬೊಗಳು, ನೀನು ಇಲ್ಲಿ ಏಕೆ ಬಂದಿದ್ದಿ'. ಮತ್ತೆ ಅದೇ ಹಿಂಸೆಯ ಮಾತು. ಸುಲೇಮಾನ್ ಒಬ್ಬ ಮುಸ್ಲಿಂ. ಆದರೆ, ಸಿರಿಯಾ ದೇಶಕ್ಕೆ ಆತ ಅಮೆರಿಕಾದ ಪ್ರತಿನಿಧಿಯಂತೆ ಕಾಣುತ್ತಿದ್ದ. “ಲಿಬಿಯಾದ ಅಧ್ಯಕ್ಷನನ್ನು ಓಡಿಸಲು ಅಮೆರಿಕಾ ಪ್ರಯತ್ನ ಮಾಡುವ ಹಾಗೆಯೇ ಸಿರಿಯಾ ದೇಶದ ಅಧ್ಯಕ್ಷನನ್ನು ಓಡಿಸಲೂ ಅಮೆರಿಕಾ ಪ್ರಯತ್ನ ಮಾಡುತ್ತಿದೆ. ಸುಲೇಮಾನ್ ಅದರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾನೆ” ಎಂದೇ ತನಿಖಾಧಿಕಾರಿಗಳ ಭಾವನೆ.

ಸುಲೇಮಾನ್ ಅವರನ್ನು ಎಂಟು ಗಂಟೆಗಳ ಕಾಲ ವಿಚಾರಣೆ ಮಾಡಿದರು. ಬಹುತೇಕ ಅವಧಿಗೆ ಅವರ ಕಣ್ಣು ಕಟ್ಟಿ ಹಾಕಿದ್ದರು. ಕಟ್ಟಿ ಹಾಕಿದ ಕಣ್ಣುಗಳ ಹಿಂದೆ ಸುಲೇಮಾನ್ ಅವರಿಗೆ ತಮ್ಮ ಪತ್ನಿ, ಮಹಾ ಮತ್ತು ಖಾಲೆದ್ ಎಂಬ ಅವಳಿ ಮಕ್ಕಳ ಚಿತ್ರ ಸುಳಿದು ಹೋಗುತ್ತಿತ್ತು. ಅವರಿಗೆ ಸುಲೇಮಾನ್ ಎಲ್ಲಿ ಇದ್ದಾರೆ ಎಂಬ ಸುಳಿವೇ ಇರಲಿಲ್ಲ. ಇದ್ದಕ್ಕಿದ್ದಂತೆ ಸಂಪರ್ಕ ಕಡಿದು ಹೋಗಿತ್ತು. ರಾಯ್ಸರ್ಸ್ ಸಂಸ್ಥೆಗೆ ಮಾತ್ರ ಸುಲೇಮಾನ್ ಸೂಕ್ತ ದಾಖಲೆ ಇಲ್ಲದೆ ಸಿರಿಯಾ ಪ್ರವೇಶ ಮಾಡಿದ್ದಾರೆ ಎಂಬ ಮಾಹಿತಿ ಹೋಗಿತ್ತು. ಸುಲೇಮಾನ್ ಹಿಂಸೆಯನ್ನು ತಡೆದುಕೊಳ್ಳಲು ತಮ್ಮ ಬಾಲ್ಯದ ನೆನಪುಗಳ ಕಡೆಗೆ ಜಾರಿ ಹೋದರು. ಅದು ತಮ್ಮ ಸ್ಥೈರ್ಯವನ್ನು ಉಳಿಸಿಕೊಳ್ಳಲು ಅವರಿಗೆ ಒಂದೇ ದಾರಿಯಾಗಿತ್ತು. ಆದರೆ, ವಿಚಾರಣೆ ಮಾಡುವವರಿಗೆ ಸುಲೇಮಾನ್ ಕೊಟ್ಟ ಯಾವ ಉತ್ತರವೂ ಸಮಾಧಾನ ತಂದಿರಲಿಲ್ಲ.

'ಮಗನೇ, ನೀನು ಯಾರು ಎಂಬುದೇ ನಿನಗೆ ಮರೆತು ಹೋಗುವಂತೆ ಮಾಡುತ್ತೇವೆ. ನಿಜ ಹೇಳು. ಇಲ್ಲಿಗೆ ಏಕೆ ಬಂದೆ. ತಪ್ಪು ಒಪ್ಪಿಕೊ'. ಸುಲೇಮಾನ್ ಮತ್ತೆ ಮೌನ. ಸಿಟ್ಟಿಗೆದ್ದ ಅಧಿಕಾರಿಯಿಂದ ಸುಲೇಮಾನ್ ಕೆನ್ನೆಗೆ ರಪ್ ಎಂದು ಏಟು, ಅದು ಎಷ್ಟನೇ ಸಾರಿ ಬಿದ್ದ ಏಟೋ. ಸುಲೇಮಾನ್‌ಗೆ ಮರೆತೇ ಹೋಗಿತ್ತು. ಇವರು ಇದ್ದ ಕೊಠಡಿಯಲ್ಲಿಯೇ ಇನ್ನೊಬ್ಬ ವ್ಯಕ್ತಿ ಇದ್ದರು. ಅವರ ಮುಖ ಮುಚ್ಚಿದ್ದರು. ಆತ ಹೇಳುತ್ತಿದ್ದ. 'ನಾನು ಏನೂ ತಪ್ಪು ಮಾಡಿಲ್ಲ. ನಾನು ವಿದ್ರೋಹಿ ಅಲ್ಲ. ಚಳವಳಿಗಾರನೂ ಅಲ್ಲ. ನಾನು ಒಬ್ಬ ವ್ಯಾಪಾರಿಯಷ್ಟೇ.' ಅವರ ಉತ್ತರವೂ ಅಧಿಕಾರಿಗಳಿಗೆ ಮನವರಿಕೆ ಆಗಲಿಲ್ಲ. ಮುಖ ಮುಚ್ಚಿಕೊಂಡಿದ್ದ ಒಬ್ಬ ಧಡಿಯ ಗೋಡೆಯ ಮೇಲಿನ ಎರಡು ವೈರ್‌ಗಳನ್ನು ತೆಗೆದುಕೊಂಡ. ಅದರಲ್ಲಿ ವಿದ್ಯುತ್ ಹರಿಯುತ್ತಿತ್ತು. ಆ ಎರಡೂ ವೈರ್‌ಗಳನ್ನು ತೆಗೆದುಕೊಂಡು ಆ 'ವರ್ತಕ'ನ ತಲೆಗೆ ಇಟ್ಟ. ಕೌರಕ್ಕೆ ಕೊನೆ ಇರುತ್ತದೆಯೇ? ಸುಲೇಮಾನ್ ಅವರನ್ನು ಮಣಿಸಲು ಅವರು ಇಂಥ ಕೌರ ಬಳಸುತ್ತಿದ್ದರು. ಗಂಟೆಗಟ್ಟಲೇ ಕೈಗಳನ್ನು ಮೇಲೆ ಎತ್ತಿಕೊಂಡು ಗೋಡೆಗೆ ಬೆನ್ನು ಹಚ್ಚಿ ನಿಲ್ಲುವ ಶಿಕ್ಷೆಯನ್ನು ಸಲೇಮಾನ್ ಅನುಭವಿಸಿದರು. ಹತ್ತಾರು ಜನ ಅಧಿಕಾರಿಗಳು ಅವರ ಎದುರು ನಿಂತು. “ನೀನೊಬ್ಬ ನಾಯಿ' ಎಂದು ಬೈಗುಳಗಳ ಸುರಿಮಳೆ ಸುರಿಸುತ್ತಿದ್ದರು. ಅರಬರಿಗೆ 'ನಾಯಿ' ಅತ್ಯಂತ ಅವಮಾನಕರ ಬೈಗುಳ. ಗಾಳಿ ಬೆಳಕು ಇಲ್ಲದ ಪುಟ್ಟ ನಿಯಾನ್ ದೀಪದ ಮಿಣುಕು ಬೆಳಗಿನ ಒಂದು

ಕೊಠಡಿಯ ಚಾಪೆ ಮೇಲೆ ಸುಲೇಮಾನ್ ದಿನ ಕಳೆದರು. ನಾಯಿಗೆ ಹಾಕಿದಂತೆ ಒಂದು ತುಣುಕು ಬ್ರೆಡ್, ಒಂದು ಟೊಮೆಟೊ ಅಥವಾ ಆಲೂಗೆಡ್ಡೆಯನ್ನು ಕೊಠಡಿಯಲ್ಲಿ ಬಿಸಾಕುತ್ತಿದ್ದರು. 'ಬೇಕಾದರೆ ತಿನ್ನು ಇಲ್ಲವಾದರೆ ಸಾಯಿ' ಎನ್ನುವಂತೆ. ಪಕ್ಕದ ಕೊಠಡಿಗಳಲ್ಲಿ ಅದೇ ಹಿಂಸ್ರ ವಿಚಾರಣೆ. ಆಕ್ರಂದನ. ಕೂಗಾಟ, ಅರಚಾಟ. ಶೌಚಕ್ಕೆ ಹೋಗಬೇಕು ಎಂದರೆ ಗೋಡೆಯೋ, ಬಾಗಿಲೋ ತಿಳಿಯದೇ ಸುಲೇಮಾನ್ ಅದನ್ನು ಜೋರಾಗಿ ತಟ್ಟುತ್ತಿದ್ದರು. ಜೈಲರ್ ಬರುತ್ತಿದ್ದ. ಏನು ಎಂದು ಕೇಳುತ್ತಿದ್ದ. ಇವರು ಶೌಚಕ್ಕೆ ಹೋಗಬೇಕು ಎಂದರೆ ಬಿಡುತ್ತಿದ್ದ. ಆದರೆ, ಅದಕ್ಕೂ ಮುಂಚೆ ಒಂದು ಗಂಟೆ ಕಾಯಿಸುತ್ತಿದ್ದ. 'ನಿಸರ್ಗ ಕರೆ'ಯ ಒತ್ತಡವನ್ನು ಅನುಭವಿಸಲಿ ಎನ್ನುವಂತೆ.

ಕಷ್ಟಗಳು, ಅವಮಾನಗಳು ಹೆಚ್ಚಿದಂತೆ ಸುಲೇಮಾನ್‌ಗೆ ಸಿರಿಯಾದ ಕಠೋರ ವಿದ್ಯಮಾನಗಳು ಮನಃಪಟಲದ ಮುಂದೆ ಸುಳಿಯತೊಡಗಿದುವು. ದರಾ ನಗರದ ರಸ್ತೆ ರಸ್ತೆಗಳಲ್ಲಿ ತೆರೆದ ಎದೆಗಳ ಯುವಕರು ಪ್ರಭುತ್ವದ ವಿರುದ್ಧ ಘೋಷಣೆ ಕೂಗುತ್ತ ತಮಗೆ ಸ್ವಾತಂತ್ರ್ಯ ಬೇಕು ಎಂದು ಕೂಗುತ್ತಿದ್ದರು. ಅವರನ್ನು ನೋಡಲು ಹೆಂಗಸರು, ಮಕ್ಕಳು, ಮುದುಕರು ಬಂದು ರಸ್ತೆಯ ಅಂಚಿನಲ್ಲಿ ನಿಲ್ಲುತ್ತಿದ್ದರು. ಪ್ರತಿಭಟನಾಕಾರರನ್ನು ಭದ್ರತಾ ಪಡೆಯವರು ನಿರ್ದಯವಾಗಿ ಥಳಿಸುತ್ತಿದ್ದರು. ಪ್ರತಿಭಟನೆ ತೀವ್ರವಾದರೆ ಗುಂಡಿಟ್ಟು ಕೊಲ್ಲುತ್ತಿದ್ದರು. ಮಾಳಿಗೆಗಳ ಮೇಲೆ ಮರೆಯಲ್ಲಿ ನಿಂತು ಗುಂಡು ಹಾರಿಸುವವರೂ ಇದ್ದರು. ಗುಂಡೇಟು ತಪ್ಪಿಸಿಕೊಳ್ಳಲು ಯುವಕರು ತಮ್ಮ ಚಪ್ಪಲಿ, ಹೂಗಳನ್ನು ರಸ್ತೆಯಲ್ಲಿಯೇ ಬಿಟ್ಟು ಜೀವ ಭಯದಿಂದ ಪರಾರಿಯಾಗುತ್ತಿದ್ದರು. ದಶಕಗಳ ದಬ್ಬಾಳಿಕೆ ನಿಲ್ಲಿಸುವುದು, ನಿವಾರಿಸುವುದು ತಮಾಷೆಯಲ್ಲ. ಹಲವರ ಬಲಿದಾನವನ್ನು ಅದು ಕೇಳುತ್ತದೆ. ಬಂಧನವನ್ನು ಬಯಸುತ್ತದೆ. ಸುಲೇಮಾನ್ ಒಬ್ಬ ಹೋರಾಟಗಾರರೇನೂ ಅಲ್ಲ. ಅವರು ಒಬ್ಬ ವರದಿಗಾರ, ಆದರೆ, ಸರ್ವಾಧಿಕಾರ ಪ್ರತಿಭಟನೆಯ ಹಾಗೆ ಸ್ವತಂತ್ರ ವರದಿಗಳನ್ನೂ ಸಹಿಸುವುದಿಲ್ಲ. ಪ್ರಭುತ್ವಕ್ಕೆ ಹಿತವಾದುದನ್ನೇ ಬರೆಯಬೇಕು ಎಂದು ಇಚ್ಛಿಸುತ್ತದೆ. ಬಹುಶಃ ಹೀಗೆ ಬಂಧಿತರಾದ ಮೊದಲ ವರದಿಗಾರನೂ ಸುಲೇಮಾನ್ ಆಗಿರಲಿಕ್ಕಿಲ್ಲ. ಸುಲೇಮಾನ್ ಇದ್ದ ಕೊಠಡಿಯ ಗೋಡೆಯ ಮೇಲೆ ಯಾರೋ ತಮ್ಮ ಉಗುರಿನಿಂದ ಬರೆದಿದ್ದರು: 'ದೇವರು ಸದಾ ದಬ್ಬಾಳಿಕೆಯ ವಿರುದ್ಧ' ಎಂದು. ಗೋಡೆಯ ಮೇಲಿನ ಬರವಣಿಗೆ ಸರ್ವಾಧಿಕಾರಿಗಳಿಗೆ ಅರ್ಥವಾಗುವುದಿಲ್ಲ.

ನಾಲ್ಕು ದಿನಗಳನ್ನು ಜೈಲಿನಲ್ಲಿ ಕಳೆದ ಸುಲೇಮಾನ್ ಅವರನ್ನು ಡಮಾಸ್ಕಸ್‌ನ ಗುಪ್ತದಳದ ದೊಡ್ಡ ಕಟ್ಟಡಕ್ಕೆ ಕರೆದುಕೊಂಡು ಹೋದರು. ಅವನ ಇಡೀ ಮೈಯನ್ನು ಶೋಧಿಸಿ' ಎಂದು ಒಬ್ಬ ಅಧಿಕಾರಿ ಆದೇಶ ಮಾಡಿದ. ತಕ್ಷಣ ಇಬ್ಬರು ಸುಲೇಮಾನ್ ಅವರನ್ನು ತಳಮಹಡಿಗೆ ಹೆಚ್ಚು ಕಡಿಮೆ ಎಳೆದುಕೊಂಡು ಹೋದರು. ಬಂಧನದ ಉಳಿದ ಅವಧಿಯನ್ನು ಹೇಗೆ ಕಳೆಯಬೇಕು ಎಂದು ಸುಲೇಮಾನ್ ಯೋಚಿಸುತ್ತಿದ್ದರು. ಇದ್ದುದರಲ್ಲಿಯೇ 'ನಾಗರಿಕನಂತೆ' ಕಾಣುತ್ತಿದ್ದ ಒಬ್ಬ ವ್ಯಕ್ತಿ 'ನಿನ್ನನ್ನು ವಾಪಸು ಕಳುಹಿಸುತ್ತಿದ್ದೇವೆ' ಎಂದ. ಸುಲೇಮಾನ್ ಅವರಿಗೆ ನಂಬಿಕೆಯೇ ಆಗಲಿಲ್ಲ.

ಏಕೆಂದರೆ ಹಾಗೆ ಹೇಳಲೂ ಆತ ಎರಡು ಗಂಟೆ ತೆಗೆದುಕೊಂಡಿದ್ದ. ಎಂಥದೋ ಒಂದು ಕೆಟ್ಟ ಕೊಠಡಿಯಲ್ಲಿ ಅವರನ್ನು ಕೂಡಿ ಹಾಕಿದ್ದರು. ಕೊನೆಗೆ ಸಿರಿಯಾ ದೇಶದ ಭದ್ರತಾ ಪಡೆಯ ನಿರ್ದೇಶಕ ಮೇಜರ್ ಜನರಲ್ ಅಲಿ ಮಮ್ಲುಕ್ ಅವರೇ ಸುಲೇಮಾನ್ ಅವರನ್ನು ಭೇಟಿ ಮಾಡಿ ಹೇಳಿದರು: “ನಿಮ್ಮ ವರದಿ ಸಮರ್ಪಕವಾಗಿರಲಿಲ್ಲ. ಅದರಿಂದ ದೇಶದ ವರ್ಚಸ್ಸಿಗೆ ಧಕ್ಕೆಯಾಗಿದೆ (!) ಆದರೂ ನಿಮ್ಮನ್ನು ಬಿಡುಗಡೆ ಮಾಡಲಾಗುತ್ತಿದೆ.'

ಜೋರ್ಡಾನ್‌ಗೆ ಬಂದ ಮೇಲೆ ಸುಲೇಮಾನ್ ಅವರಿಗೆ ಗೊತ್ತಾಯಿತು ತಮ್ಮ ದೇಶದ ದೊರೆ ಇವರ ಬಿಡುಗಡೆಗಾಗಿ ತಮ್ಮ ಎಲ್ಲ ಪ್ರಭಾವ ಬಳಸಿದ್ದರು ಎಂದು. ಈಗ ಸಿರಿಯಾ ದೇಶದಲ್ಲಿ ವಿದೇಶದ ಯಾವ ಪತ್ರಕರ್ತನಿಗೂ ಪ್ರವೇಶವಿಲ್ಲ. ಸುಲೇಮಾನ್ ತಮ್ಮ ಅನುಭವವನ್ನು ಓದುಗರ ಜತೆಗೆ ಹಂಚಿಕೊಂಡಿದ್ದಾರೆ. ಹಂಚಿಕೊಳ್ಳಲಾಗದ ಸಾವಿರಾರು ಸ್ವಾತಂತ್ರ್ಯ ಹೋರಾಟಗಾರರ ಎಲ್ಲ ನೋವುಗಳು ಈಗ ಆ ದೇಶದ ನಾಲ್ಕು ಗೋಡೆಗಳ ನಡುವೆಯೇ ಉಳಿಯುತ್ತಿವೆ.

05-06-2011

# ಪ್ರೇಮ ಎಂದರೆ

# ಸಾಮಾನ್ಯವೇ?

ನಡುವೆ ಎಷ್ಟೊಂದು ಸಮುದ್ರ, ಎಷ್ಟೊಂದು ಭೂಮಿ? ಎಲ್ಲಿಯ ನ್ಯೂಜಿಲೆಂಡ್ ಎಲ್ಲಿಯ ಜೋರ್ಡಾನ್? ಪ್ರೇಮವೇ ಹಾಗೆ. ನ್ಯೂಜಿಲೆಂಡಿನ ಒಬ್ಬ ಚೆಲುವೆ ಜೋರ್ಡಾನಿನ ಬೊದುವಿಯಾನ್ ಬುಡಕಟ್ಟು ಯುವಕನಿಗೆ ಮರುಳಾದ ಕಥೆ ಇದು. ಅದು 1975ನೇ ಇಸವಿ. ಮಾರ್ಗರೆಟ್ ಎಂಬ 22ರ ಹರಯದ ಬೆರಗುಗಣ್ಣಿನ ಯುವತಿ ಗ್ರೀಸ್, ಈಜಿಪ್ಟ್ ಮತ್ತು ಜೋರ್ಡಾನಿನ ಪ್ರವಾಸಕ್ಕೆಂದು ಮನೆಯವರ ಜತೆಗೆ ಹೊರಟಳು. ತಿಂಗಳುಗಟ್ಟಲೆ ಅವಧಿಯ ಸುದೀರ್ಘ ಪಯಣವದು. ತವರು ದೇಶ ನ್ಯೂಜಿಲೆಂಡಿನಿಂದ ಅದು ತನ್ನ ಕೊನೆಯ ಪಯಣ ಎಂದು ಆಕೆಗೆ ಗೊತ್ತಿರಲಿಲ್ಲ. ಗ್ರೀಸ್, ಈಜಿಪ್ಟ್ ಮುಗಿಸಿಕೊಂಡು ಜೋರ್ಡಾನಿಗೆ ಬಂದರು. ಅದು ಅವರ ಪ್ರವಾಸದ ಕೊನೆ. ಜಗತ್ತಿನ ಅದ್ಭುತ ಶಿಲ್ಪ ಪೆಟ್ರಾ ನೋಡಿದರು. ಅಲ್ಲಿ ಅವರಿಗೆ ಮೊಹ್ಮದ್ ಎಂಬ ಯುವಕ ಎದುರಾದ. ಪೆಟ್ರಾದ ಸುತ್ತಮುತ್ತಲಿನ ಗುಹೆಗಳಲ್ಲಿ, ಬೆಟ್ಟದ ಪಕ್ಕದ ಟೆಂಟ್‌ಗಳಲ್ಲಿ ಜೋರ್ಡಾನಿನ ಬೊದುವಿಯಾನ್ ಬುಡಕಟ್ಟು ಜನ ವಾಸವಾಗಿದ್ದಾರೆ. ಮೊಹ್ಮದ್ ಕೂಡ ಅವರಲ್ಲಿ ಒಬ್ಬ.

ಮಾರ್ಗರೆಟ್ ಮತ್ತು ಆಕೆಯ ಸಂಬಂಧಿಕರಿಗೆ ಆತ ತನ್ನ ಜತೆಗೆ ಇರಲು ಆಹ್ವಾನ ನೀಡಿದ. ಮನೆ ಮಠ ಎಂದರೆ ಏನೂ ಗೊತ್ತಿಲ್ಲದ

ಬೊದುವಿಯಾನ್ ಜನರು ತಮ್ಮ ಬೆಚ್ಚನೆಯ ಪ್ರೀತಿಗೆ ಹೆಸರಾದವರು. ಆತನ ಆಹ್ವಾನ ಒಪ್ಪಿಕೊಂಡ ಮಾರ್ಗರೆಟ್ ಮತ್ತು ಸಂಬಂಧಿಕರು ಆ ದಿನ ಅಲ್ಲಿಯೇ ಉಳಿದರು. ಆಗಲೂ ಮಾರ್ಗರೆಟ್‌ಗೆ ಆ ಗುಹೆಯೇ ತನ್ನ ಕಾಯಂ ಮನೆ ಆಗಬಹುದು ಎಂದು ಅನಿಸಿರಲಿಲ್ಲ. ವಿಚಿತ್ರ ಎಂದರೆ ಮೊಹ್ಮದ್ ಪಶ್ಚಿಮದ ಒಬ್ಬ ಹೆಣ್ಣುಮಗಳ ಜತೆಗೆ ಮದುವೆಯಾಗಬೇಕು ಎಂದು ಹುಡುಕುತ್ತಿದ. ಮಾರ್ಗರೆಟ್ ನೋಡಿ ಆತನ ಕಣ್ಣಿನಲ್ಲಿ ಸಣ್ಣ ಮಿಂಚು, ಸೆಳಕು. ಮಾರ್ಗರೆಟ್ ಮನಸ್ಸಿನಲ್ಲಿಯೂ ಆತ ನೆಲೆ ನಿಂತ. ಹೊರಡುವ ದಿನ ಬಂದಾಗ ಮಾರ್ಗರೆಟ್ ತನ್ನ ತಾಯಿಗೆ ಹೇಳಿದಳು, 'ನಾನು ಮೋಹ್ಮದ್‌ನನ್ನು ಮದುವೆಯಾಗುತ್ತೇನೆ' ಎಂದು. 'ಹೋಗಿ, ಹೋಗಿ ಬುಡಕಟ್ಟಿನ ಯುವಕನನ್ನು ಮದುವೆಯಾಗುವುದೇ? ನಮ್ಮ ದೇಶದಲ್ಲಿ ಬೇಕಾದಂಥ ವರ ಸಿಗುತ್ತಿದ್ದ' ಎಂದು ತಾಯಿ ಅಂದಕೊಂಡಿದ್ದರೆ ಅಚ್ಚರಿಯೇನೂ ಇರಲಿಲ್ಲ. ಆದರೆ, ಮಗಳು ಇಂಥ ಒಂದು ಯಡವಟ್ಟಿನ ಅಚ್ಚರಿ ಮಾಡಬಹುದು ಎಂಬ ಅನುಮಾನ ಆಕೆಗೆ ಇತ್ತು. 'ಆಗಲಿ' ಎಂದರು.

ಮಾರ್ಗರೆಟ್ ಮತ್ತು ಮೊಹ್ಮದ್ ಒಂದು ಕೊಠಡಿ (!)ಯ ಗುಹೆಯಲ್ಲಿ ಸಂಸಾರ ಆರಂಭಿಸಿದರು. ಕುಸುಮದಷ್ಟು ಕೋಮಲೆಯಾದ ಹೆಣ್ಣಿನ ದಾಂಪತ್ಯ ತಣ್ಣಗೆ ಕೊರೆಯುವ ನೆಲದ ಮೇಲೆ ಹಾಸಿದ ಚಾಪೆಯ ಮೇಲೆಯೇ ಸಾಗಿತು. ನ್ಯೂಜಿಲೆಂಡಿನ ತನ್ನ ಮನೆಯಲ್ಲಿ ಕೊಳಾಯಿಯಲ್ಲಿ ನೀರು ಬರುತ್ತಿತ್ತು. ಶೌಚಾಲಯ ಇತ್ತು. ಫ್ರಿಡ್ಜ್ ಇತ್ತು. ಏನಿರಲಿಲ್ಲ? ಇಲ್ಲಿ ಏನೆಂದರೆ ಏನೂ ಇರಲಿಲ್ಲ! ಹೊತ್ತು ಕಳೆಯಲು ಶಾಪ್, ಮಾಲ್, ರೆಸ್ಟಾರೆಂಟ್, ಬಾರ್ ಎಂದೆಲ್ಲ ತನ್ನ ದೇಶದಲ್ಲಿ ಎಲ್ಲಿ ಬೇಕೆಂದರೆ ಅಲ್ಲಿಗೆ ಹೋಗುತ್ತಿದ್ದಾಕೆಗೆ ಇಲ್ಲಿ ಏನೂ ಇರಲಿಲ್ಲ. ಸುತ್ತಲೂ ದಿಗಿಲು ಹುಟ್ಟಿಸುವ ಎತ್ತರದ ಕಲ್ಲು ಬೆಟ್ಟಗಳು, ನೀರವ ಮೌನ. ಆಗೀಗ ಬರುವ ಪ್ರವಾಸಿಗರು ಬಿಟ್ಟರೆ ಬೇರೆ ಬದುಕೇ ಇಲ್ಲ. ಮಾರ್ಗರೆಟ್‌ಗೆ ಗಂಡನ ಭಾಷೆಯೂ ಬರುತ್ತಿರಲಿಲ್ಲ!

ಗಂಡನ ಜೀವನದ ವೇಗ ಬೇರೆಯೇ ಇತ್ತು. ಪೆಟ್ರಾ ನೋಡಲು ಬರುವ ಪ್ರವಾಸಿಗರಿಗೆ ಸ್ಮರಣಿಕೆ ಮಾರುವ ಅಂಗಡಿ ಇಟ್ಟುಕೊಂಡಿದ್ದ, ಈಕೆಯೂ ಆತನ ಜತೆಗೆ ಅಂಗಡಿಯಲ್ಲಿ ಹೋಗಿ ಕುಳಿತುಕೊಂಡಳು. ನೀರು ತಂದಳು. ತನಗೆ ಬಂದ ಅಡುಗೆ ಮಾಡಿದಳು. ಗಂಡನ ಜತೆಗೆ ಕುಳಿತುಕೊಂಡು ಊಟ ಮಾಡಿದಳು. ಆದರೂ ಹೊತ್ತು ಹೋಗಲಿಲ್ಲ. ಹಿಂದೆ ಯಾವಾಗಲೋ ನ್ಯೂಜಿಲೆಂಡಿನ ಒಂದು ಕ್ಲಿನಿಕ್‌ನಲ್ಲಿ ಕೆಲಸ ಮಾಡಿದ ನೆನಪಾಯಿತು. 'ಇಲ್ಲಿ ಏಕೆ ತಾನು ನರ್ಸ್ ಆಗಿ ಕೆಲಸ ಮಾಡಬಾರದು' ಅನಿಸಿತು. ಅಲ್ಲಿಯೇ ತರಬೇತಿ ಪಡೆದಳು. ನಂತರ ಅನೇಕ ವರ್ಷ ನರ್ಸ್ ಆಗಿ ಕೆಲಸ ಮಾಡಿದಳು. ಕ್ಲಿನಿಕ್‌ಗೆ ಬರುವ ಜನರ ಜತೆಗೆ ಮಾತನಾಡುತ್ತ ಬೋದುವಿಯಾನ್ ಭಾಷೆ ಕಲಿತಳು. ಮಧ್ಯದಲ್ಲಿ ಮೂರು ಮಕ್ಕಳಾದುವು. ಮೊಹ್ಮದ್ ಮೂತ್ರಪಿಂಡ ವೈಫಲ್ಯದಿಂದ ಸತ್ತು ಹೋದ. ಮಾರ್ಗರೆಟ್ ಈಗಲೂ ಪೆಟ್ರಾ ಪಕ್ಕದಲ್ಲಿ ಒಂದು ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾಳೆ. ಮೂವರು ಮಕ್ಕಳಲ್ಲಿ ಇಬ್ಬರು ಜೋರ್ಡಾನಿನ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಒಬ್ಬ ತಂದೆಯ ವ್ಯಾಪಾರ ಮುಂದುವರಿಸಿದ್ದಾನೆ.

ಮೊನ್ನೆ ನಾನು ಜೋರ್ಡಾನಿಗೆ ಹೋದಾಗ ಆಕೆಯ ಅಂಗಡಿಗೆ ಹೋಗಿದ್ದೆ. ಪೆಟ್ರಾ ಸುತ್ತಲಿನ ಪರಿಸರದಲ್ಲಿ ಬರೀ ಬೊದುವಿಯಾನ್ ಸಮುದಾಯದ ಜನರಿಗೆ ಮಾತ್ರ ಮಳಿಗೆ ಹಾಕಿಕೊಂಡು ವ್ಯಾಪಾರ ಮಾಡಲು ಸರ್ಕಾರ ಅನುಮತಿ ನೀಡಿದೆ. ಆದರೆ, ಅಲ್ಲಿ ಒಬ್ಬ ಬಿಳಿ ಹೆಣ್ಣುಮಗಳನ್ನು ನೋಡಿ ನನಗೆ ಅಚ್ಚರಿಯಾಯಿತು. ಈಗಲೂ ಅಷ್ಟೇ ಕುಸುಮ ಕೋಮಲೆ ಅನಿಸುವಂಥ ಕೋಲುಮುಖದ, ತಲೆಯ ಮೇಲೆ ಕ್ಯಾಪು ಧರಿಸಿದ ಮಾರ್ಗರೆಟ್ ಈಗ ಬೆಳ್ಳಿಯ ಕುಸುರಿ ಕೆಲಸದ ವಸ್ತುಗಳನ್ನು ಮಾರುತ್ತಿದ್ದಾಳೆ. ಒಂದೆರಡು ವಸ್ತುವಿನ ಬೆಲೆ ಕೇಳಿದೆ. ದುಬಾರಿ ಅನಿಸಿತು. ಅಲ್ಲಿಯ ವರೆಗೆ ನಾನು ಆಕೆಯನ್ನು ಗಮನಿಸಿರಲೇ ಇಲ್ಲ. ಅವಳ ಅಂಗಡಿಯಲ್ಲಿ ಕೆಲವು ಪುಸ್ತಕಗಳೂ ಇದ್ದುವು. ಅದು ಆಕೆ ಬರೆದ 'ಮ್ಯಾರೀಡ್ ಟು ಬೊದುವಿಯಾನ್' ಪುಸ್ತಕದ ಪ್ರತಿಗಳು. ಹಲವು ಮುದ್ರಣಗಳನ್ನು ಕಂಡಿರುವ ಈ ಪುಸ್ತಕ ಬರೀ ಮಾರ್ಗರೆಟ್ ಮತ್ತು ಮೊಹ್ಮದ್ ಕಥೆ ಮಾತ್ರವಲ್ಲ. ಒಟ್ಟು ಬೊದುವಿಯಾನ್ ಸಮುದಾಯದ ಕಥೆ.

ಗಂಡ ಸತ್ತ ಮೇಲೆ ಮಾರ್ಗರೆಟ್ ಬೊದುವಿಯಾನ್ ಬುಡಕಟ್ಟು ಜನರ ಉದ್ಧಾರಕ್ಕೆ ಕಂಕಣ ತೊಟ್ಟಿದ್ದಾರೆ. ಈ ಬುಡಕಟ್ಟಿನ ಹೆಣ್ಣು ಮಕ್ಕಳಿಗೆ ಬೆಳ್ಳಿಯ ಕುಸುರಿ ಕೆಲಸದ ವಸ್ತುಗಳನ್ನು ತಯಾರಿಸಲು ಹೇಳಿದ್ದಾರೆ. ಆ ವಸ್ತುಗಳನ್ನು ಮಾರ್ಗರೆಟ್ ಪ್ರವಾಸಿಗರಿಗೆ ಮಾರುತ್ತಿದ್ದಾರೆ. ಲಾಭದಲ್ಲಿ ಕೆಲವು ಪಾಲು ಆ ಹೆಣ್ಣು ಮಕ್ಕಳಿಗೆ ಹೋಗುತ್ತಿದೆ. 'ಹಾಗಾಗಿ ನಿಮಗೆ ವಸ್ತುಗಳು ಕೊಂಚ ದುಬಾರಿ ಎನಿಸುತ್ತವೆ' ಎಂದು ಮಾರ್ಗರೆಟ್ ಮೃದುವಾದ ದನಿಯಲ್ಲಿ ಹೇಳಿದರು. ಆಕೆ ಹಾಗೆ ಹೇಳಿದ ಮೇಲೆ ಒಂದೆರಡು ವಸ್ತು ತೆಗೆದುಕೊಳ್ಳಬೇಕು ಅನಿಸಿತು. ಆದರೆ, ಕಿಸೆಗೆ ಅಷ್ಟು ಶಕ್ತಿ ಇರಲಿಲ್ಲ. ಮನಸ್ಸು ನೊಂದಿತು. ಮುಂದೆ ಇನ್ನೊಂದು ಅಂಗಡಿಗೆ ಹೋದೆ. ಆದರೆ, ಮಾರ್ಗರೆಟ್ ಸುತ್ತಲೇ ಅದು ಸುತ್ತುತ್ತಿತ್ತು. ಏಕೋ ಏನೋ ವಾಷಿಂಗ್ಟನ್‌ನ ಶ್ವೇತಭವನದ ಎದುರು ಮೂವತ್ತು ವರ್ಷಗಳಿಂದ ಪ್ರತಿಭಟನೆ ಮಾಡುತ್ತಿರುವ ಕಾನ್ನಿ ನೆನಪಾದಳು... ಮುಂದಿನ ಅಂಗಡಿಯಲ್ಲಿ ಅಬ್ದುಲ್ಲಾ ಎಂಬ 60ರ ಆಸುಪಾಸಿನ ವ್ಯಕ್ತಿ ಕುಳಿತಿದ್ದ. ಆತನೂ ಬುಡಕಟ್ಟಿನ ಮನುಷ್ಯನೇ. ಅದ್ಭುತವಾಗಿ ಇಂಗ್ಲಿಷ್ ಮಾತನಾಡುತ್ತಿದ್ದ. 'ಇಷ್ಟೊಂದು ಒಳ್ಳೆಯ ಇಂಗ್ಲಿಷ್ ಎಲ್ಲಿ ಕಲಿತೆ ಮಾರಾಯಾ' ಎಂದೆ. 'ಬರುತ್ತಾರಲ್ಲ, ನಿತ್ಯ ಪ್ರವಾಸಿಗರು. ಅವರ ಜತೆ ಮಾತನಾಡುತ್ತ ಕಲಿತೆ' ಎಂದ.

ನನ್ನ ಬೋಳುತಲೆ ನೋಡಿ, 'ನಿನಗೆ ಎಷ್ಟು ಮಂದಿ ಹೆಂಡಂದಿರು' ಎಂದ. ಬೋಳುತಲೆಯವರಿಗೆ ಹೆಂಡಂದಿರು ಹೆಚ್ಚು ಎಂಬುದು ಅವನ ನಂಬಿಕೆ! 'ನನಗೆ ಆ ಅದೃಷ್ಟವಿಲ್ಲ. ಒಬ್ಬಳೇ ಹೆಂಡತಿ, ನಿನಗೆ?' ಎಂದೆ. 'ನನಗೆ ನಾಲ್ಕು ಮಂದಿ ಹೆಂಡಂದಿರು. ಒಬ್ಬರಿಗಿಂತ ಒಬ್ಬರು ನನ್ನನ್ನು ಹೆಚ್ಚು ಪ್ರೀತಿ ಮಾಡಿದರು. ನಾಲ್ಕನೆಯವಳನ್ನು ಕಟ್ಟಿಕೊಳ್ಳುವಾಗ ಮೂರನೆಯವಳು ನನ್ನ ಗಂಟಲಿಗೆ ಗುರಿಯಿಟ್ಟು ಗುಂಡು ಹಾರಿಸಿದಳು. ನೋಡು ಇಲ್ಲಿ' ಎಂದು ತೋರಿಸಿದ. ಅವನ ಗಂಟಲಿಗೆ ಹಲವು ಹೊಲಿಗೆ ಬಿದ್ದಿದ್ದವು. ದವಡೆ ಸ್ವಲ್ಪ ಸೊಟ್ಟಗಾಗಿತ್ತು. 'ಮೂರು ತಿಂಗಳು ಆಸ್ಪತ್ರೆಯಲ್ಲಿ ಇದ್ದೆ' ಎಂದ. ನನಗೆ ಒಬ್ಬಳೇ ಹೆಂಡತಿ ಎಂದರೆ ಆತನಿಗೆ ನಂಬಿಕೆಯೇ ಬರಲಿಲ್ಲ. 'ಹಾಗಾದರೆ, ನಿನಗೆ ಎಷ್ಟು ಮಂದಿ ಗೆಳತಿಯರು' ಎಂದ. ನೀನು ಹೇಳುವ

ಅರ್ಥದಲ್ಲಿ ಯಾರೂ ಇಲ್ಲ' ಎಂದೆ. 'ಅಂದರೆ ನೀನು ನಿನ್ನ ಹೆಂಡತಿಯನ್ನು ತುಂಬ ಪ್ರೀತಿ ಮಾಡುತ್ತಿರಬಹುದು' ಎಂದು ಮತ್ತೆ ಕೆಣಕಿದ. 'ಅದು ಅವಳಿಗೆ ಅರ್ಥವಾದರೆ ತಾನೇ?' ಎಂದೆ. ಜೋರಾಗಿ ನಕ್ಕ. 'ಹೌದು ಹೆಣ್ಣು ಮಕ್ಕಳೇ ಹಾಗೆ' ಎಂದ. ತಾನು ಒಂಟೆಯ ಹಾಲು ಕುಡಿದು ಪ್ರೀತಿ ಮಾಡಿದ ಪೋಲಿ ಕಥೆಗಳನ್ನೆಲ್ಲ ಹೇಳತೊಡಗಿದ. 60ರ ಹರಯದ ಅಬ್ದುಲ್ಲಾನ ಜೀವನ ಪ್ರೀತಿ ಕಂಡು ದಂಗಾದೆ. ಮಾರ್ಗರೆಟ್ ಕೂಡ ಇಂಥದೇ ಪ್ರೀತಿಗೆ ಸೋತಿರಬೇಕು ಅನಿಸಿತು. ಪ್ರೇಮ ಎಂದರೆ ಸಾಮಾನ್ಯವೇ?

19-06-2011

# ಹೊಸ ಹುಡುಗ-ಹುಡುಗಿಯರಿಗೆ

# ಮನೋಭಾವದ ಸಮಸ್ಯೆಯೇ?

ನನ್ನ ಸ್ನೇಹಿತರೊಬ್ಬರು ಆ ಯುವತಿಯನ್ನು ನನ್ನ ಬಳಿ ಕಳುಹಿದ್ದರು. ಆಕೆ, ಬೆಂಗಳೂರಿನ ಒಂದು ಸುದ್ದಿ ವಾಹಿನಿಯಲ್ಲಿ ಈಗ ಕೆಲಸ ಮಾಡುತ್ತಿದ್ದಾರೆ. ಆಕೆಗೆ ಮುದ್ರಣ ಮಾಧ್ಯಮಕ್ಕೆ ಬರಬೇಕು ಎಂದು ಆಸೆ. 'ನನ್ನ ಬಳಿ ಬಂದು ಅವಕಾಶ ಇದೆಯಾ?' ಎಂದು ಕೇಳಿದಳು. 'ಅರ್ಜಿ ಇದ್ದರೆ ಕೊಡಿ' ಎಂದೆ. ತನ್ನ ವ್ಯಾನಿಟಿ ಚೀಲದಲ್ಲಿ ತುರುಕಿದಂತೆ ಇಟ್ಟಿದ್ದ ಒಂದು ಪುಟದ ಅರ್ಜಿಯನ್ನು ತೆಗೆದು ಕೊಟ್ಟಳು. ಅರ್ಜಿ ಅಲ್ಲಲ್ಲಿ ಮುದುಡಿದಂತೆ ಇತ್ತು. ಒಂದು ಕಡೆ ಅಂಚಿನಲ್ಲಿ ಹೊಲಸು ಅಂಟಿತ್ತು. ಅರ್ಜಿ ಇಂಗ್ಲಿಷ್‌ನಲ್ಲಿ ಇತ್ತು. ಆ ಯುವತಿ ಸ್ನಾತಕೋತ್ತರ ಪದವೀಧರೆ, ತಾನು ಯಾವ ದರ್ಜೆಯಲ್ಲಿ ಪಾಸಾಗಿದ್ದೇನೆ ಎಂದು ಬರೆದುಕೊಳ್ಳಲೂ ಆಕೆಗೆ ಬಿಡುವು ಇದ್ದಂತೆ ಕಾಣಲಿಲ್ಲ. ನಾನೇ ಕೇಳಿದೆ. 'ಪ್ರಥಮ ದರ್ಜೆ' ಎಂದಳು. 'ಏಕೆ ಬರೆಯಲಿಲ್ಲ' ಎಂದೆ. ಆಕೆಗೆ ಅದರ ಮಹತ್ವವೇ ಗೊತ್ತಿದ್ದಂತೆ ಕಾಣಲಿಲ್ಲ. ಕೆಲವು ತಿಂಗಳ ಹಿಂದೆ 'ಭಾವೀ ಪತ್ರಕರ್ತರಿಗೆ ಪ್ರೀತಿಯಿಂದ...' ಎಂದು ಅಂಕಣ ಬರೆದು ಒಂದು ನೌಕರಿಗೆ ಹೇಗೆ ಅರ್ಜಿ ಸಲ್ಲಿಸಬೇಕು ಎಂದೆಲ್ಲ ಬರೆದಿದ್ದೆ. ಅದನ್ನು ಕರ್ನಾಟಕದ ಪತ್ರಿಕೋದ್ಯಮದ

ವಿದ್ಯಾರ್ಥಿಗಳೆಲ್ಲ ಓದಬೇಕು ಎಂಬ ಅಹಂಕಾರವೇನೂ ನನಗೆ ಇಲ್ಲ. ಆದರೆ, ಪರಿಸ್ಥಿತಿ ಸುಧಾರಿಸುವಂತೆಯೂ ಕಾಣುತ್ತಿಲ್ಲ. 'ನೀವು ಕನ್ನಡ ಪತ್ರಿಕೆಗೆ ಕನ್ನಡದಲ್ಲಿಯೇ ಅಲ್ಲವೇ ಅರ್ಜಿ ಸಲ್ಲಿಸಬೇಕಿರುವುದು' ಎಂದು ಕೇಳಿದಾಗಲೂ ಆಕೆಗೆ ಅಚ್ಚರಿ.

ಹೊಸ ಪೀಳಿಗೆಯ ಪತ್ರಕರ್ತರನ್ನು, ಪತ್ರಕರ್ತರಾಗಬೇಕು ಎಂದು ಬಯಸುವವರನ್ನು ಹೀಗೆ ಮತ್ತೆ ಮತ್ತೆ ಝುಂಕಿಸಿ ನಮ್ಮಂಥ 'ಹಿರಿಯರು' ಸಾಧಿಸಬೇಕಾದುದು ಏನೂ ಇಲ್ಲ. ಹೊಸ ಪೀಳಿಗೆಯ ಹುಡುಗ-ಹುಡುಗಿಯರನ್ನು ಹುರಿದುಂಬಿಸಿ ಭವಿಷ್ಯದ ಪತ್ರಕರ್ತರನ್ನಾಗಿ ರೂಪಿಸುವುದೇ ನಮ್ಮ ಕನಸು. ಆದರೆ, ಆ ಕನಸು ಮತ್ತೆ ಮತ್ತೆ ಭಂಗವಾಗುತ್ತಿದೆ. ಕೆಲವು ದಿನಗಳ ಹಿಂದೆ ನನ್ನ ಸ್ನೇಹಿತರೊಬ್ಬರು ತಮ್ಮ ಪತ್ರಿಕೆಗೆ ಪತ್ರಕರ್ತರನ್ನು ಭರ್ತಿ ಮಾಡಿಕೊಳ್ಳಲು ಪಕ್ಕದ ಚೆನ್ನೈಗೆ ಹೋಗಿದ್ದರು. ಅವರು ಆಯ್ದುಕೊಂಡುದು ಪ್ರತಿಷ್ಠಿತ ಪತ್ರಿಕೋದ್ಯಮ ಶಾಲೆ. ಅಲ್ಲಿ ಒಂದು ವರ್ಷದ ಕೋರ್ಸಿಗೆ ಧಂಡಿಯಾಗಿ ಶುಲ್ಕವನ್ನೂ ಕೊಡಬೇಕು. ನನ್ನ ಸ್ನೇಹಿತರು ಏರ್ಪಡಿಸಿದ ಲಿಖಿತ ಪರೀಕ್ಷೆ ಬರೆಯಲು ಬಂದಿದ್ದ ಹುಡುಗಿಯರು ಹಾಕಿಕೊಂಡಿದ್ದ ಡ್ರೆಸ್ ದಿಗಿಲು ಹುಟ್ಟಿಸುವಂತೆ ಇತ್ತು. ಅದಕ್ಕೆ ಆಕ್ಷೇಪವೇನೂ ಇಲ್ಲ. ಬಟ್ಟೆ ತೊಡುವುದು ಅವರವರ ಇಚ್ಛೆ. ಆದರೆ, ಪರೀಕ್ಷೆಗೆ ಕುಳಿತಿದ್ದ ಹಲವರು ಹುಡುಗಿಯರು ಉತ್ತರಗಳನ್ನು ನಕಲು ಮಾಡಿದ್ದರು! ಪರೀಕ್ಷೆಯಲ್ಲಿ ನಕಲು ಮಾಡುವುದು ಗೊತ್ತು. ನೌಕರಿಗೂ ನಕಲು ಮಾಡುವಂಥ ಕಾಲ ಬಂತೇ? ಅದೂ ಇಂಥ ಭಾರಿ ಶುಲ್ಕದ ಪ್ರತಿಷ್ಠಿತ ಪತ್ರಿಕೋದ್ಯಮ ಶಾಲೆಯಲ್ಲಿ? ಭಾರಿ ಶುಲ್ಕ ಎಂಬುದನ್ನು ಏಕೆ ಒತ್ತಿ ಒತ್ತಿ ಹೇಳುತ್ತಿದ್ದೇನೆ ಎಂದರೆ ಪಾಲಕರು ತಮ್ಮ ಮಕ್ಕಳು ಚೆನ್ನಾಗಿ ಓದಿ, ಬುದ್ಧಿವಂತರಾಗಿ ತಮ್ಮ ಕಾಲ ಮೇಲೆ ತಾವು ನಿಲ್ಲಲಿ ಎಂದು ಅಲ್ಲವೇ ಮಕ್ಕಳನ್ನು ಇಂಥ ದುಬಾರಿ ಶಾಲೆ-ಕಾಲೇಜುಗಳಿಗೆ ಕಳಿಸುವುದು? ಮಕ್ಕಳಿಗೆ ಅದು ಅರ್ಥ ಆಗುತ್ತಿಲ್ಲವೇ?

ಕೆಲವು ತಿಂಗಳ ಹಿಂದೆ ನಾನು ಪತ್ರಿಕೋದ್ಯಮ ಕಲಿಸುವ ಒಂದು ಕಾಲೇಜು ಮತ್ತು ಒಂದು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗಕ್ಕೆ ಹೋಗಿದ್ದೆ. ಅವರನ್ನು ಉದ್ದೇಶಿಸಿ ಮಾತನಾಡುತ್ತ ಮೂರು ಗಂಟೆ ಕಾಲ ಗಂಟಲು ಹರಿದುಕೊಂಡೆ. 'ನಾನು ಮಾತನಾಡುವುದು ನಿಮಗೆ ಬೇಸರ ಆಗುತ್ತಿದೆಯೇ' ಎಂದು ಕೇಳಿದೆ. ಅವರಿಗೆ ಹಾಗೇನು ಅನಿಸಿರಲಿಲ್ಲ. ಭಾಷಣದ ಏಕತಾನತೆಯನ್ನು ಮುರಿಯಲು ನಡು ನಡುವೆ ಒಂದೆರಡು ಪ್ರಶ್ನೆ ಕೇಳಿದೆ. ಅವೇನೂ ಅಂಥ ಕಠಿಣ ಪ್ರಶ್ನೆಗಳಲ್ಲ. ಕರ್ನಾಟಕದ ಪೊಲೀಸ್ ಮಹಾನಿರ್ದೇಶಕರು ಯಾರು' ಎಂಬುದು ಮೊದಲ ಪ್ರಶ್ನೆ. 'ಈ ದೇಶದ ಮುಖ್ಯ ಚುನಾವಣಾ ಆಯುಕ್ತರ ಹೆಸರು ಏನು' ಎಂಬುದು ಎರಡನೇ ಪ್ರಶ್ನೆ. ಕಾಲೇಜು ಮತ್ತು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಒಬ್ಬ ವಿದ್ಯಾರ್ಥಿಗೂ ಅವರ ಹೆಸರು ಗೊತ್ತಿರಲಿಲ್ಲ. ತಮ್ಮ ಸುತ್ತಲಿನ ವಿದ್ಯಮಾನಗಳ ಬಗ್ಗೆ ಅವರಿಗೆ ಅಷ್ಟು ತಾತ್ಸಾರ, ನಿರಾಸಕ್ತಿ ಏಕೆ ಎಂಬುದಕ್ಕೆ ಉತ್ತರ ಸಿಗಲಿಲ್ಲ. ಅವರಿಗೇ ಕೇಳಿದೆ : ನಿಮ್ಮ ವೃತ್ತಿಗೆ ವ್ಯಕ್ತಿಗಳು, ಸಂಗತಿಗಳು ಮುಖ್ಯ ಅಲ್ಲವೇ? ನೀವು ಅದನ್ನೆಲ್ಲ ತಿಳಿದಿರಬೇಕಲ್ಲ?? ಅಚ್ಚರಿ ಎಂದರೆ ಇದು ಮುಖ್ಯ ಎಂದೇ ಅವರಿಗೆ ಅನಿಸಿರಲಿಲ್ಲ. ಈ ಮಕ್ಕಳು ಏಕೆ

ಹೀಗೆ ಎಂಬುದಕ್ಕೆ ಮೊನ್ನೆ ಕಂದಾಯ ಸಚಿವ ಕರುಣಾಕರ ರೆಡ್ಡಿಯವರು ಹರಪನಹಳ್ಳಿಯ ಶಾಲೆಗೆ ಭೇಟಿ ನೀಡಿದಾಗ ನನಗೆ ಉತ್ತರವೂ ಸಿಕ್ಕಿತು. ಆ ಶಾಲೆಯ ಮಕ್ಕಳಿಗೆ ಈ ರಾಜ್ಯದ ಶಿಕ್ಷಣ ಸಚಿವರ ಹೆಸರೇ ಗೊತ್ತಿರಲಿಲ್ಲ. ಮಗ್ಗಿ ಹೇಳುವಾಗಲೂ ಅವರು ಮುಗ್ಗರಿಸಿದರು. ಸಾಮಾನ್ಯ ಜ್ಞಾನ ಎಂಬುದು ಯಾವುದಾದರೂ ಪರೀಕ್ಷೆ ಬಂದಾಗ ಉರು ಹೊಡೆದು ತಿಳಿದುಕೊಳ್ಳುವ ಸಂಗತಿ ಅಲ್ಲ. ನಿತ್ಯ ಓದುವ ಮೂಲಕ ಮನನ ಆಗಬೇಕಾದ ಸಂಗತಿ ಅದು.

ನಾವು ಇನ್ನೂ ಹೈಸ್ಕೂಲು ವಿದ್ಯಾರ್ಥಿಗಳು ಇದ್ದಾಗ ನಮ್ಮ ಊರಿನ ಲೈಬ್ರರಿಗೆ ಹೋಗಿ ಅಲ್ಲಿ ಹರಡಿದಂತೆ ಇರುತ್ತಿದ್ದ ಪತ್ರಿಕೆಗಳನ್ನು, ನಿಯತಕಾಲಿಕಗಳನ್ನು ಓದಲು ಪಡುತ್ತಿದ್ದ ಕಷ್ಟವನ್ನು ಕಾಲೇಜು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಹೇಳಿದೆ. ಮದುವೆ ಮನೆಯಲ್ಲಿ ಊಟಕ್ಕೆ ಹೋದವರು ತಡವಾಗುತ್ತದೆ ಎಂದು ಊಟಕ್ಕೆ ಕುಳಿತವರ ಕುರ್ಚಿ ಹಿಡಿದುಕೊಂಡು ಹಿಂದೆ ನಿಲ್ಲುವ ಹಾಗೆ ನಾವು ಈಗಾಗಲೇ ಓದಲು ಕುಳಿತವರ ಹಿಂದೆ ನಿಂತುಕೊಳ್ಳುತ್ತಿದ್ದೆವು. ಅವರು ಓದಿ ಎದ್ದ ಕೂಡಲೇ ಗಬಕ್ ಎಂದು ಆ ನಿಯತಕಾಲಿಕವನ್ನು ಓದಲು ತೊಡಗುತ್ತಿದ್ದೆವು. ನಮ್ಮ ಹಿಂದೆ ಅದೇ ರೀತಿ ಇನ್ನೊಬ್ಬರು ಬಂದು ನಿಲ್ಲುತ್ತಿದ್ದರು. ಈಗ ವಿದ್ಯಾರ್ಥಿಗಳಿಗೆ ಅಂಥ ಕಷ್ಟವೇನೂ ಇಲ್ಲ. ಅವರ ಪಾಲಕರು ಮನೆಗೆ ಬೇಕಾದ ನಿಯತಕಾಲಿಕಗಳನ್ನು ತರಿಸಿ ಕೊಡುತ್ತಾರೆ. ಆದರೆ, ಅವರಿಗೆ ಓದಬೇಕು ಎಂದು ಏಕೆ ಅನಿಸುತ್ತಿಲ್ಲ? ಹಾಗಾದರೆ, ಅವರು ಪತ್ರಿಕೋದ್ಯಮವನ್ನು ಏಕೆ ಆರಿಸಿಕೊಳ್ಳುತ್ತಾರೆ? ಈ ವೃತ್ತಿಗೆ ಬರುವವರಿಗೆ ಕನಿಷ್ಠ ಸಿದ್ಧತೆ ಎಂದರೆ ಪತ್ರಿಕೆ ಓದುವುದು ಎಂದು ಏಕೆ ತಿಳಿಯುತ್ತಿಲ್ಲ?

ನನ್ನ ಭಾಷಣ ಮುಗಿಸುವ ಮುನ್ನ, 'ಇನ್ನೊಮ್ಮೆ ನಿಮ್ಮ ಅಧ್ಯಾಪಕರು ನನ್ನನ್ನು ಭಾಷಣ ಮಾಡಲು ಕರೆಸಲಿಕ್ಕಿಲ್ಲ' ಎಂದೆ. ತಮ್ಮ ವಿದ್ಯಾರ್ಥಿಗಳನ್ನು ತಕ್ಕ ರೀತಿಯಲ್ಲಿ ಸಿದ್ಧಪಡಿಸದೇ ಇದ್ದುದಕ್ಕೆ ನಾನು ಅಧ್ಯಾಪಕರನ್ನೇನೂ ದೂರುವುದಿಲ್ಲ. ಅವರು ತಮ್ಮ ಪಠ್ಯ ಸಾಮಗ್ರಿಯನ್ನು ಪೂರೈಸಿ ಎದ್ದು ಹೋಗುತ್ತಾರೆ. ಆದರೆ, ವಿದ್ಯಾರ್ಥಿಗಳು ತಮ್ಮನ್ನು ತಾವು ಹೇಗೆ ಸಿದ್ಧಪಡಿಸಿಕೊಳ್ಳುತ್ತಾರೆ ಎಂಬುದು ಅವರ ವೃತ್ತಿ ಜೀವನದ ಉನ್ನತಿ ದೃಷ್ಟಿಯಿಂದಲೇ ಮುಖ್ಯ ಅಲ್ಲವೇ? ನಮ್ಮ ಪತ್ರಿಕೆ ಸೇರಲು ಬಂದ ಹುಡುಗನೊಬ್ಬ, 'ನಮಗೆ ಅಧ್ಯಾಪಕರು ಬೇರೆ ಪುಸ್ತಕ ಓದು ಎಂದು ಹೇಳಲೇ ಇಲ್ಲ' ಎಂದು ದೂರಿದ. 'ಹೌದಯ್ಯ, ಅವರೇಕೆ ಹೇಳಬೇಕು? ಅದು ನಿನ್ನ ಬೆಳವಣಿಗೆಗೆ ಅಗತ್ಯ ಅಲ್ಲವೇ? ನೀನು ಪುಸ್ತಕ ತಂದು ಮನೆಯಲ್ಲಿ ಓದಿದ್ದರೆ ಬೇಡ ಎನ್ನುತ್ತಿದ್ದರೇ? ಎಂದು ಕೇಳಿದರೆ ಆತನ ಬಳಿ ಉತ್ತರ ಇರಲಿಲ್ಲ.

ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ಮಾಡಿ ಹೊರಗೆ ಬಂದೆ. ಒಬ್ಬ ವಿದ್ಯಾರ್ಥಿನಿ ಬಂದು, 'ಅಂಕಣ ಬರಹಗಳ ಬಗ್ಗೆ ಡೆಸರ್ಟೇಷನ್ ಮಾಡುತ್ತಿದ್ದೇನೆ. ನಿಮ್ಮ ಜತೆಗೆ ಮಾತನಾಡಬೇಕು' ಎಂದಳು. ನನ್ನ ಯಾವುದಾದರೂ ಅಂಕಣ ಓದಿದ್ದೀಯೇನಮ್ಮ ಎಂದು ಕೇಳಿದೆ. ಅವಳಿಗೆ ಹೆಸರು ನೆನಪು ಇರಲಿಲ್ಲ. ಏನನ್ನೋ ಹೇಳಿದಳು. 'ನೀನು ಏನೂ ಓದದೇ ಇದ್ದರೆ ನಾನು ನಿನಗೆ ಏನು ಹೇಳಲಿ? ನಿನ್ನ ಸಮಯವೂ ವ್ಯರ್ಥ. ನನ್ನದೂ ವ್ಯರ್ಥ. ಹೋಗಿ ಬಾ, ನಿನಗೆ ಒಳ್ಳೆಯದಾಗಲಿ' ಎಂದೆ. ಆ ಹುಡುಗಿಗೆ

ಮತ್ತೆ ಅದೇ ತಾತ್ಸಾರ. ಏನಾದರೂ ನಾಲ್ಕು ಸಾಲು ಕೇಳಿ, ಅದನ್ನೇ ಬರೆದುಬಿಟ್ಟರಾಯಿತು ಎಂದು ಆಕೆ ಹೇಗೆ ಅಂದುಕೊಳ್ಳುತ್ತಾಳೆ? ಎಲ್ಲದಕ್ಕೂ ಶ್ರಮಪಡಬೇಕು, ಶ್ರದ್ಧೆ ಇರಬೇಕು. ಕನಿಷ್ಠ ಸೌಜನ್ಯವಾದರೂ ಇರಬೇಕು ಎಂದು ಆಕೆಗೆ ಏಕೆ ಅನಿಸಲಿಲ್ಲ? ಮತ್ತೊಬ್ಬ ಹುಡುಗ ನೌಕರಿ ಕೇಳಿಕೊಂಡು ಬಂದ. 'ನೀನು ಯಾವ ಪತ್ರಿಕೆ ಓದುತ್ತಿ' ಎಂದು ಕೇಳಿದೆ. ನನ್ನನ್ನು ಸಂಪ್ರೀತಗೊಳಿಸಲು 'ಪ್ರಜಾವಾಣಿ' ಎಂದೇ ಹೇಳಿದ. ಬೇಕೆಂತಲೇ, 'ಸಂಪಾದಕೀಯ ಪುಟದಲ್ಲಿ ಯಾರು ಅಂಕಣ ಬರೆಯುತ್ತಾರೆ? ಯಾರದಾದರೂ ಓದಿದ್ದೀಯಾ' ಎಂದು ಕೇಳಿದೆ. ಇನ್ನೊಂದು ಪತ್ರಿಕೆಯ ಅಂಕಣದ ಹೆಸರು ಹೇಳಿದ. ಅದನ್ನು ಯಾರು ಬರೆಯುತ್ತಾರೆ' ಎಂದು ಕೇಳಿದೆ. ನನ್ನ ಹೆಸರು ಹೇಳಿದ! ಈಗ ಅವರು ಬರೆಯುತ್ತಾರೆಯೇ' ಎಂದೆ. 'ಇಲ್ಲ ನಾಲ್ಕು ತಿಂಗಳಾಯಿತು ಆ ಅಂಕಣ ಬರುತ್ತಿಲ್ಲ' ಎಂದ! 'ಭಪ್ಪರೆ' ಎಂದು ಹಣೆ ಹಣೆ ಚಚ್ಚಿಕೊಂಡೆ!

ಎರಡು ತಿಂಗಳ ಮಟ್ಟಿಗೆ ನಮ್ಮ ಪತ್ರಿಕೆಯಲ್ಲಿ ಇಂಟರ್ನ್‌ಷಿಪ್ ಪೂರೈಸಿದ ಮೂವರು ಹುಡುಗಿಯರು ತರಬೇತಿ ಮುಗಿಸಿ ಹೋಗುವಾಗ ನನ್ನ ಬಳಿ ಬಂದರು. 'ನೌಕರಿಗೆ ಅವಕಾಶ ಇದ್ದರೆ ಕರೆಯಿರಿ' ಎಂದರು. ಅವರಿಗೂ ಸುಮ್ಮನೇ 'ಈ ರಾಜ್ಯದ ಪೊಲೀಸ್ ಮಹಾನಿರ್ದೇಶಕರು ಯಾರು' ಎಂದೆ. ಮೂವರಿಗೆ ಗೊತ್ತಿರಲಿಲ್ಲ. ಮತ್ತೊಂದು ಹಳೆಯ ಪ್ರಶ್ನೆಯನ್ನೇ ಕೇಳಿದೆ. ಅದಕ್ಕೂ ಅವರ ಬಳಿ ಉತ್ತರ ಇರಲಿಲ್ಲ. “ಮತ್ತೆ ನಿಮ್ಮನ್ನು ಹೇಗೆ ತೆಗೆದುಕೊಳ್ಳುವುದು' ಎಂದೆ. ಅದಕ್ಕೂ ಅವರ ಬಳಿ ಉತ್ತರ ಇರಲಿಲ್ಲ! ನನ್ನ ಸ್ನೇಹಿತರು ಕಳಿಸಿದ್ದ ಹುಡುಗಿಗೆ “ನೀವು ಏಕೆ ವಾಹಿನಿ ಬಿಡುತ್ತಿರುವಿರಿ' ಎಂದು ಕೇಳಿದೆ. 'ನನ್ನ ಮದುವೆ ಆಗ್ತಿದೆ. ರಾತ್ರಿ ಪಾಳಿ ಕಷ್ಟ. ಅದಕ್ಕೆ ನಿಮ್ಮ ಪತ್ರಿಕೆ ಸೇರಬೇಕು' ಎಂದುಕೊಂಡಿರುವೆ ಎಂದಳು. 'ನಮ್ಮ ಪತ್ರಿಕೆಯಲ್ಲಿಯೂ ರಾತ್ರಿ ಪಾಳಿ ಅಂದುಕೊಂಡಿರಿ' ಎಂದೆ. ನನಗೆ ಇರುತ್ತದಲ್ಲ? ಇರುವುದಿಲ್ಲ ಅಂತ ನೀವು ಏಕೆ

ಕೊಡಲು ತಂದಿದ್ದ ಅರ್ಜಿ ತೆಗೆದುಕೊಂಡು ಹುಡುಗಿ ಹೊರಟು ಹೋದಳು... ಈ ಹೊಸ ಹುಡುಗ ಹುಡುಗಿಯರಿಗೆ ಮನೋಭಾವದಲ್ಲಿಯೇ ಸಮಸ್ಯೆ ಇದೆಯೇ? ಅಥವಾ ಕಷ್ಟಪಟ್ಟು ಬೆಳೆದಿರುವ ನಮಗೆ ಅವರಿಂದ ಅಪೇಕ್ಷೆಗಳು ಜಾಸ್ತಿ ಇವೆಯೇ?

17-07-2011

# ಮನೋಭಾವ ಎಂಬ

# ಮನೆ ಮನೆಯ ಕಥೆ

ಆ ಹೆಣ್ಣು ಮಗಳ ಹೆಸರು ಬರೆಯುವುದು ನನಗೆ ಇಷ್ಟವಿಲ್ಲ. ಅವರು ಕೊಡಗು ಜಿಲ್ಲೆಯ ಯಾವುದೋ ಒಂದು ದೂರದ ಹಳ್ಳಿಯಲ್ಲಿ ವಾಸವಾಗಿದ್ದಾರೆ. ಅಲ್ಲಿ ಟಿ.ವಿ, ಮೊಬೈಲ್, ದೂರವಾಣಿ ಇತ್ಯಾದಿ ಯಾವ ಆಧುನಿಕ ಸಂಪರ್ಕವೂ ಇಲ್ಲ. ಊರಿನಲ್ಲಿ ಇರುವ ವರೆಗೆ ಮಗ ಪತ್ರಿಕೆ, ನಿಯತಕಾಲಿಕ ಎಲ್ಲ ಓದುತ್ತಿದ್ದ. ಸಾಮಾನ್ಯ ಜ್ಞಾನ ಚೆನ್ನಾಗಿ ಎನ್ನುವಂತೆಯೇ ಇತ್ತು. ಬೆಂಗಳೂರಿಗೆ ಎಂಜಿನಿಯರಿಂಗ್ ಓದಲು ಕಳಿಸಿದರು. ಮಗ ಈಗ ಆಗಾಗ ಮನೆಗೆ ಬರುತ್ತಾನೆ. ಕೊಠಡಿಯ ಮೂಲೆಯೊಂದರಲ್ಲಿ ಕುಳಿತು ಲ್ಯಾಪ್‌ಟಾಪ್ ಹಿಡಿದುಕೊಂಡು ಏನನ್ನೂ ನೋಡುತ್ತ ಇರುತ್ತಾನೆ. ಪತ್ರಿಕೆಗಳನ್ನು ಕಣ್ಣೆತ್ತಿಯೂ ನೋಡುವುದಿಲ್ಲ. ಕೇಳಿದರೆ, ಅಮ್ಮ ಈಗ ಯಾರೂ ಪತ್ರಿಕೆ ಓದುವುದಿಲ್ಲ ಎನ್ನುತ್ತಾನೆ. ಹೀಗಾದರೆ ಮುಂದೆ ಪತ್ರಿಕೆ ಓದುವವರು ಯಾರೂ ಇರುವುದೇ ಇಲ್ಲವೇ? ಆ ಹೆಣ್ಣು ಮಗಳು ಕೇಳುತ್ತಿದ್ದಳು.

ಅವರು ಬೆಂಗಳೂರಿನ ಒಬ್ಬ ಹಿರಿಯ ರಾಜಕಾರಣಿ. ಸಜ್ಜನರು, ಅಧಿಕಾರದಲ್ಲಿ ಇದ್ದಾಗ ದುಡ್ಡು ಕಾಸು ಮಾಡದವರು. ಮಗನನ್ನು ಓದಿಸಿ, ಬೆಳೆಸಿ ದೊಡ್ಡವನನ್ನಾಗಿ

ಮಾಡಿದ್ದಾರೆ. ಆತನ ಜೀವನೋಪಾಯಕ್ಕೂ ವ್ಯವಸ್ಥೆ ಮಾಡಿದ್ದಾರೆ. ಅವರು ಪತ್ರಿಕೆಗಳನ್ನು ಓದಿ ನೀಟಾಗಿ ಅದು ಬಂದಾಗ ಹೇಗೆ ಇತ್ತೋ ಹಾಗೆಯೇ ಮಡಿಚಿ ಇಡುತ್ತಾರೆ. ಮಗ ಶೌಚಕ್ಕೆ ಹೋಗುವಾಗ ಅದನ್ನು ತೆಗೆದುಕೊಂಡು ಹೋಗುತ್ತಾನೆ. ವಾಪಸು ಬಂದು ಬೇಕಾಬಿಟ್ಟಿ ಮಡಿಚಿ ಸೋಫಾದ ಮೇಲೆ ಎಸೆಯುತ್ತಾನೆ. ಅವರು ಮತ್ತೆ ಅದನ್ನು ನೀಟಾಗಿ ಮಡಿಚಿ ಇಡುತ್ತಾರೆ. ಅದು ಮಗನಿಗೆ ಗೊತ್ತಾಗುವುದಿಲ್ಲ. ಮರುದಿನ ಅದೇ ಹಾಡು. ಈ ಮಗನಿಗೆ ಬುದ್ಧಿ ಹೇಳುವುದು ಹೇಗೆ? ಹಿರಿಯ ರಾಜಕಾರಣಿ ಕೇಳುತ್ತಿದ್ದರು.

ಆಕೆ ಬೆಂಗಳೂರಿನ ಗೃಹಿಣಿ. ಮಗ ಎಂ.ಬಿ.ಬಿ.ಎಸ್ ಓದುತ್ತಿದ್ದಾನೆ. ಈಗ ಕೊನೆಯ ವರ್ಷ. ಇದುವರೆಗೆ ಸರಿ ಇದ್ದ. ಈಗ ರಜೆಗೆ ಮನೆಗೆ ಬಂದಿದ್ದಾನೆ. ಸದಾ ಕಿವಿಯಲ್ಲಿ ಮೊಬೈಲ್ ಇಟ್ಟುಕೊಂಡಿರುತ್ತಾನೆ. ನಮಗೆ ಯಾರಿಗೂ ಕೇಳದಂತೆ ಮಾತನಾಡುತ್ತಾನೆ. ಇಲ್ಲವಾದರೆ ಓಡಿ ಮಾಳಿಗೆ ಮೇಲೆ ಹೋಗಿ ಗಂಟೆಗಟ್ಟಲೆ ಮಾತನಾಡುತ್ತಾನೆ. ಹೊರಗೆ ಹೋಗಿ ಮಾತನಾಡುವಂಥದು ಏನು? ಯಾರನ್ನಾದರೂ ಪ್ರೀತಿ ಮಾಡಿದ್ದಾನೆಯೇ? ಹಾಗೆ ಆತ ಏನಾದರೂ ಮಾಡಿಕೊಂಡರೆ ನಾನು ಬದುಕಿ ಉಳಿಯಲಾರೆ. ತಾಯಿ ಗೋಳಿಡುತ್ತಿದ್ದಳು.

ಕಳೆದ ವಾರ ಈ ಅಂಕಣದಲ್ಲಿ, 'ಹೊಸ ಹುಡುಗ-ಹುಡುಗಿಯರಿಗೆ ಮನೋಭಾವದ ಸಮಸ್ಯೆಯೇ' ಎಂದು ಏಕಾದರೂ ನಾನು ಬರೆದೆನೋ ಅನಿಸಿಬಿಟ್ಟಿತು. ಮನೋಭಾವದ ಸಮಸ್ಯೆ ಎಂಬುದು ಮನೆ ಮನೆಯ ಕಥೆ ಅನಿಸಿತು. ನಮ್ಮ ಹುಡುಗರು ಹೀಗೇಕೆ ಆಗಿದ್ದಾರೆ? ಎಲ್ಲರಿಗೂ ಅದೇ ಚಿಂತೆ. ಇದು ಬರೀ ತಲೆಮಾರಿನ ಅಂತರದ ಸಮಸ್ಯೆ ಇರಲಾರದು ಅನಿಸಿತು. ಯಾವ ಸಮಸ್ಯೆಯನ್ನೂ ಸರಳೀಕರಿಸಿ ನೋಡಬಾರದು ಎಂದುಕೊಂಡವನು ನಾನು. ಅಂಕಣ ಓದಿ ಸುಳ್ಯದ 'ಸ್ನೇಹ ಸದನ' ಶಾಲೆಯ ಸ್ಥಾಪಕ ಮತ್ತು ನಿವೃತ್ತ ಪ್ರಾಧ್ಯಾಪಕ ಪ್ರೊ.ಚಂದ್ರಶೇಖರ ದಾಮ್ಲ ಅವರು ಬರೆದ ಪತ್ರದಲ್ಲಿ ಇದಕ್ಕೆ ಉತ್ತರ ಇದ್ದಂತೆ ಇತ್ತು. ಅವರು ಬರೀ ಪ್ರಾಧ್ಯಾಪಕರು ಮಾತ್ರವಲ್ಲ. ಒಬ್ಬ ಪ್ರಯೋಗಶೀಲ ಶಿಕ್ಷಣ ತಜ್ಞರೂ ಹೌದು. ಅವರು ಬರೆದಿದ್ದರು: “ನಿಮ್ಮ ಅಂಕಣ ಓದಲು ತಡವಾಯಿತು... ಈಗಷ್ಟೇ ಲೇಖನ ಓದಿ ಮುಗಿಸಿದ ಬಳಿಕ ನನ್ನ ಅನಿಸಿಕೆಯನ್ನು ದಾಖಲಿಸದೆ ಇರಲು ಸಾಧ್ಯವಾಗಲಿಲ್ಲವಾದ್ದರಿಂದ ಈಗಲೇ ಟೈಪಿಸಲು ಕುಳಿತೆ. ನೀವು ಕಂಡಿರುವ ಸಮಸ್ಯೆಯು ವಾಸ್ತವದಲ್ಲಿ ನಾವು ಶಿಕ್ಷಕರು ನಿತ್ಯವೂ ಕಾಣುವಂಥದ್ದಾಗಿದೆ. ಇಂದಿನ ಪಾಠ, ಕಲಿಕೆ, ಪರೀಕ್ಷೆ, ಮೌಲ್ಯಮಾಪನ, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗುವುದು ಮತ್ತು ಉದ್ಯೋಗ ಸಿಕ್ಕುವುದು ನೋಡಿದರೆ ನಿಮ್ಮ ಕೊನೆಯ ಪ್ರಶ್ನೆಗೆ ಮೊದಲು ಉತ್ತರಿಸಬೇಕು. ಬಹುಶಃ ಕಷ್ಟಪಟ್ಟು ಬೆಳೆದಿರುವ ನಮಗೆ ಸೌಲಭ್ಯಗಳು ಇಲ್ಲದಿದ್ದುದೇ ಸವಾಲಾಗಿತ್ತು. ಹಾಗಾಗಿ ಸಮಸ್ಯೆಗಳಿಗೆ ನಮ್ಮ ಸ್ಪಂದನವೇ ಬೇರೆ ರೀತಿ ಇತ್ತು. ಈಗ ನಾವೇ, ಅಂದರೆ ನಮ್ಮ ತಲೆಮಾರಿನವರೇ, ನಮ್ಮ ಮಕ್ಕಳಿಗೆ ನೀಡುತ್ತಿರುವ ಸೌಲಭ್ಯಗಳು ಅವರಲ್ಲಿ ಸಮಸ್ಯೆಗಳಿಗೆ ಸ್ಪಂದನವೇ ಇಲ್ಲದಂತೆ ಮಾಡಿವೆ. ಪ್ರಾಥಮಿಕ ಹಂತದಿಂದಲೇ ಜ್ಞಾನ ಎಂಬುದು ನಿತ್ಯ ಓದುವ ಮೂಲಕ ಮನನ ಆಗಬೇಕಾದ

ಸಂಗತಿ ಎಂದು ಈಗಿನ ಮಕ್ಕಳಿಗೆ ಗೊತ್ತಿಲ್ಲ. ದುರದೃಷ್ಟವೆಂದರೆ ಇದು ಅನೇಕ ಶಿಕ್ಷಕರಿಗೂ ಗೊತ್ತಿಲ್ಲ. ಏಕೆಂದರೆ ಅವರು ಉರು ಹೊಡೆದೇ ಪಾಸಾದವರು. ಇಂದಿನ ತರಗತಿಗಳ ಮುಖ್ಯ ಸಮಸ್ಯೆಯೆಂದರೆ ವಿದ್ಯಾರ್ಥಿಗಳಲ್ಲಿ ಗ್ರಹಣದ ಏಕಾಗ್ರತೆಯೇ ಇಲ್ಲದಿರುವುದು. ಪಾಠ ಮಾಡುತ್ತಿದ್ದಂತೆಯೇ ನಾನು ಈಗ ಏನು ಹೇಳುತ್ತಿದ್ದೆ ಎಂದು ಶಿಕ್ಷಕ ಕೇಳಿದರೆ ಯಾರಿಂದಲೂ ಉತ್ತರ ಬರುವುದಿಲ್ಲ... ಇದೇ ದೂರನ್ನು ನಾನು ವೈದ್ಯಕೀಯ, ದಂತ ವೈದ್ಯಕೀಯ, ತಾಂತ್ರಿಕ ಮತ್ತು ಕಾನೂನು ಶಿಕ್ಷಣದ ಶಿಕ್ಷಕರ ಜತೆಗೆ ಮಾತನಾಡುವಾಗಲೂ ಕೇಳಿದ್ದೇನೆ. ಒಟ್ಟಾರೆಯಾಗಿ ಕಲಿಕಾ ಸಾಮರ್ಥ್ಯವೇ ಶಿಥಿಲವಾಗಿದೆ. ಆದರೂ ಪದವಿ ಮುಗಿಸಿದವರಿಗೆ ಏನಾದರೊಂದು ಕೆಲಸ ಸಿಗುತ್ತದೆ. ಆಗ ನಮಗೆ ಅನಿಸುವುದು ನಮ್ಮ ನಿರೀಕ್ಷೆಗಳೇ ತಪ್ಪಾಗಿವೆಯೇ ಎಂದು. ಮತ್ತೂ ಉಳಿಯುವ ಒಂದು ಪ್ರಶ್ನೆಯೆಂದರೆ ಇದು ಎಷ್ಟು ಕಾಲ ಹಿಗೆಯೇ ಸಾಗೀತು? ಅಂತೂ ಪ್ರಾಥಮಿಕ ಶಿಕ್ಷಣದಲ್ಲಿ ಸೃಜನಶೀಲ ಕಲಿಕೆಯ ಪುನರುತ್ಥಾನ ಆಗಬೇಕಿದೆ...”

ಅವರ ಕೊನೆಯ ಸಾಲಿನಲ್ಲಿ ಸಮಸ್ಯೆಗೆ ಉತ್ತರವಿದೆ ಅನಿಸುತ್ತಿದೆ. ಪ್ರಾಥಮಿಕ, ಪ್ರೌಢ, ಕಾಲೇಜು ಮತ್ತು ಸ್ನಾತಕೋತ್ತರ ಹಂತದಲ್ಲಿ ನನಗೆ ಕಲಿಸಿದ ಶಿಕ್ಷಕರು ಪಾಠ ಮಾಡಿದ ರೀತಿ, ಅವರು ವಿಷಯ ಹೇಳಿಕೊಟ್ಟ ಬಗೆ, ಅವರ ಅಗಾಧ ಜ್ಞಾನ, ಅವರ ಕಂಠ, ಎಲ್ಲವೂ ಈಗಲೂ ಕಿವಿಯಲ್ಲಿ ನಿನದಿಸುತ್ತಿದೆ. ಹೈಸ್ಕೂಲಿನಲ್ಲಿ ನಾವು ಓದುವಾಗ ಸಿ.ಎಸ್.ಹಿರೇಮಠ ಎಂಬ ಗುರುಗಳು ಇದ್ದರು. ಅವರು ನಮಗೆ ಸಂಸ್ಕೃತ, ಕನ್ನಡ ಪಾಠ ಮಾಡುತ್ತಿದ್ದರು. ನಾವು ಮಾಡಿದ ಹೋಮ್‌ವರ್ಕ್ ಮೇಲೆ ಅವರು ಫೇರ್, ಗುಡ್, ವೆರಿ ಗುಡ್, ಸ್ಯಾಟಿಸ್‌ಫ್ಯಾಕ್ಟರಿ, ಎಕ್ಸ್‌ಲೆಂಟ್ ಎಂದು ರಿಮಾರ್ಕ್ಸ್ ಬರೆಯುತ್ತಿದ್ದರು. ಎಕ್ಸ್‌ಲೆಂಟ್ ನಮ್ಮ ಗುರಿಯಾಗಿರುತ್ತಿತ್ತು. ಭಾಷೆಯ ಮೇಲೆ ನಮಗೆ ಆಗಲೇ ಹಿಡಿತ ಸಿಕ್ಕಿತು ಅನಿಸುತ್ತದೆ. ಅವರು ಈಗಲೂ ಬದುಕಿದ್ದಾರೆ. ಮೂರು ವರ್ಷಗಳ ಹಿಂದೆ ಅವರನ್ನು ಸಭೆಯೊಂದರಲ್ಲಿ ಕಂಡಿದ್ದೆ. ತಕ್ಷಣ ಕಾಲಿಗೆ ಎರಗಿದೆ. ಎಲ್ಲರಿಗೂ ಅಚ್ಚರಿ. ಇಂಥ ಶಿಷ್ಯರು ಇನ್ನೂ ಇದ್ದಾರೆಯೇ ಎಂದು! ಕಾಲೇಜಿನಲ್ಲಿಯೂ ಸಿ.ಎಸ್.ಹಿರೇಮಠ ಹೆಸರಿನ ಅಧ್ಯಾಪಕರು ನಮಗೆ ಕನ್ನಡ ಹೇಳಿಕೊಡುತ್ತಿದ್ದರು. ಅವರದು ಮೂಗಿನ ಮೇಲೆಯೇ ಸಿಟ್ಟು, ಅವರಿಗೆ “ವಿಶ್ವಾಮಿತ್ರ' ಎಂಬ ಅಡ್ಡಹೆಸರನ್ನೂ ಕೆಲವರು ತುಂಟರು ಇಟ್ಟಿದ್ದರು. ಅವರು ಪಾಠ ಮಾಡುತ್ತಿದ್ದ ರೀತಿಯೂ ಅನನ್ಯ. ಜಾಣ ಶಿಷ್ಯರ ಮೇಲೆ ಅವರು ತೋರುತ್ತಿದ್ದ ಪ್ರೀತಿ ಅನ್ಯಾದೃಶವಾದುದು. 32 ವರ್ಷಗಳ ಹಿಂದೆ ಎಂ.ಎ ಓದುತ್ತಿದ್ದಾಗ ಎಂ.ಎಂ.ಕಲಬುರ್ಗಿ ಎರಡೂ ವರ್ಷ ನಮಗೆ ಪಾಠ ಮಾಡಿದರು. ಹಳೆಗನ್ನಡ, ಶಾಸನ, ಜಾನಪದ ಹೀಗೆ ಯಾವ ವಿಷಯವಿದ್ದರೂ ಅದನ್ನು ಅವರು ಪಾಠ ಮಾಡುತ್ತಿದ್ದ ರೀತಿ ವಿದ್ವತ್‌ಪೂರ್ಣವಾಗಿರುತ್ತಿತ್ತು. ಆಂಧ್ರದ ವೆಂಗಿಪಳುವಿನ ಜಿನವಲ್ಲಭನ ಗಂಗಾಧರಂ ಶಾಸನವನ್ನು ಅವರು ಕಂಠೋದ್ಧತವಾಗಿ ಹೇಳುತ್ತಿದ್ದುದು ಈಗಲೂ ಕಿವಿಯಲ್ಲಿ ಹಾಗೆಯೇ ಉಳಿದುಕೊಂಡಿದೆ. ಅಂದು ನಮಗೆ ಅವರ ಕೊನೆಯ ಪಾಠ. ಮುಂದಿನ ಸೀಟಿನಲ್ಲಿಯೇ ಕುಳಿತಿದ್ದೆ. ಅವರು ಪಾಠ ಮಾಡುವ ಉದ್ದಕ್ಕೂ ಗೊಳೋ ಎಂದು ಹುಡುಗಿಯರ ಹಾಗೆ ಅಳುತ್ತಿದ್ದೆ. ಕಲಬುರ್ಗಿಯವರು,

ಉಳಿದಾವ ನಮ್ಮ ಹಾಡ..ಮುಗಿದಾವ ನಿಮ್ಮ ಜ್ವಾಳ...' (ನಾನು ಹೇಳುವುದು ಇನ್ನೂ ಇತ್ತು. ನಿಮ್ಮ ಕಲಿಕೆಯ ಅವಧಿ ಮುಗಿಯಿತು) ಎಂದು ಪಾಠ ಮುಗಿಸಿದರು. ಇಂಥ ಎಲ್ಲ ಗುರುಗಳನ್ನು ಈಗ ಎಲ್ಲಿ ಹುಡುಕೋಣ? ಎಲ್ಲ ಹಂತಗಳಲ್ಲಿಯೂ ಅವರು ನಮ್ಮನ್ನು ರೂಪಿಸಿದರು. ಸಂದರ್ಭ ಬಂದರೆ ಶಿಕ್ಷೆ ಕೊಡಲೂ ಹಿಂದೇಟು ಹಾಕುತ್ತಿರಲಿಲ್ಲ. ಈಗಿನ ಮಕ್ಕಳಿಗೆ ಶಿಕ್ಷೆ ಕೊಡಲು ಸಾಧ್ಯವೇ ಇಲ್ಲ. ಕೊಟ್ಟರೆ? ಆ ಹುಡುಗ ಏನಾದರೂ ಮಾಡಿಕೊಂಡರೆ? ಟಿ.ವಿ ಚಾನೆಲ್‌ಗಳು 'ಹೋ' ಎಂದು ಗದ್ದಲ ಮಾಡುತ್ತವೆ. ನಾವೂ, 'ದೈಹಿಕ ದಂಡನೆ ಸಲ್ಲದು' ಎಂದು ಸಂಪಾದಕೀಯ ಬರೆಯುತ್ತೇವೆ! ಈಗ ಏನಿದ್ದರೂ ಶಿಷ್ಯನಿಗೆ ಶರಣಾಗಿಯೇ ಗುರು ಪಾಠ ಮಾಡಬೇಕು! ನಮಗೆ ಪಾಠ ಮಾಡುವಾಗ ಪಠ್ಯ ಸಾಮಗ್ರಿಯೂ ಹಾಗೆಯೇ ಇರುತ್ತಿತ್ತು. ನಮಗಿಂತ ಹಿಂದಿನವರಿಗೆ ಇನ್ನೂ ಶ್ರೇಷ್ಠ ಪಠ್ಯ ಸಾಮಗ್ರಿ ಇರುತ್ತಿತ್ತು. ಈಗ ಅದು ಜಾಳು ಜಾಳಾಗಿದೆ. ಹೇಳುವವರಿಗೂ ಆಸಕ್ತಿಯಿಲ್ಲ. ಕೇಳುವವರಿಗೆ ಮೊದಲೇ ಇಲ್ಲ. ಉತ್ತರ ಕರ್ನಾಟಕದ ವಿಶ್ವವಿದ್ಯಾಲಯವೊಂದರಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಈಗ ಒಂದು ಕನ್ನಡ ಪಠ್ಯಪುಸ್ತಕ ಸಿದ್ಧವಾಗಿದೆ. ನನ್ನ ಬೆನ್ನು ನೀನು ತಟ್ಟು, ನಿನ್ನ ಬೆನ್ನು ನಾನು ತಟ್ಟುತ್ತೇನೆ ಎಂದು ಕಾಲೇಜು ಅಧ್ಯಾಪಕರೆಲ್ಲ ಸೇರಿಕೊಂಡು ತಾವು ತಾವು ಬರೆದುದನ್ನೇ ಅದರಲ್ಲಿ ತುಂಬಿಸಿದ್ದಾರೆ. ಜತೆಗೆ ಆ ಭಾಗದ ಒಬ್ಬ ಕವಿಯ 36 ಪದ್ಯಗಳನ್ನು ಅದರಲ್ಲಿ ಸೇರಿಸಿದ್ದಾರಂತೆ. ವಿದ್ಯಾರ್ಥಿಗಳು ಈ ಪುಸ್ತಕವನ್ನು ಏಕೆ ಓದಬೇಕು?...

ಎನ್.ಆರ್.ನಾರಾಯಣಮೂರ್ತಿಯವರು ಮೊನ್ನೆ ಗುಜರಾತಿನ ಗಾಂಧಿನಗರದ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ)ಯಲ್ಲಿ ಉಪನ್ಯಾಸ ಕೊಡುತ್ತ ಆಡಿದ ಮಾತುಗಳು ಕುಸಿಯುತ್ತಿರುವ ಶಿಕ್ಷಣದ ಮಟ್ಟದ ಸುತ್ತಲೇ ಇವೆ. 1960-70ರ ದಶಕದಲ್ಲಿ ಇದ್ದ ಈ ಸಂಸ್ಥೆಗಳ ಶ್ರೇಷ್ಠತೆ ಈಗ ಮಾಯವಾಗಿದೆ ಎಂದು ಅವರು ಮರುಗಿದ್ದಾರೆ. 1967ರಲ್ಲಿ ಕಾನ್‌ಪುರದಲ್ಲಿ ಅವರು ಐಐಟಿಯಲ್ಲಿ ಓದುತ್ತಿದ್ದಾಗ ಪ್ರತಿವರ್ಷ ಎಪ್ಪತ್ತು ಎಪ್ಪತ್ತೈದು ವಿದ್ಯಾರ್ಥಿಗಳು ಸಂಶೋಧನೆಗೆ ನೋಂದಾವಣೆ ಮಾಡಿಕೊಳ್ಳುತ್ತಿದ್ದರು. ಈಗ ಐದಾರು ಮಂದಿ ನೋಂದಾವಣೆ ಮಾಡಿಕೊಂಡರೆ ಅದು ಒಂದು ವಿಸ್ಮಯ ಎಂದು ಮೂರ್ತಿ ಅಚ್ಚರಿ ವ್ಯಕ್ತಪಡಿಸಿದ್ದಾರೆ. ಚೀನಾ ದೇಶದಲ್ಲಿ 2004ರಲ್ಲಿ ಕಂಪ್ಯೂಟರ್ ವಿಜ್ಞಾನದಲ್ಲಿ 2,652 ಮಂದಿ ಪಿಎಚ್.ಡಿ ಮಾಡಿದರೆ ಭಾರತದಲ್ಲಿ ಕೇವಲ 24 ಮಂದಿ ಪಿಎಚ್.ಡಿ ಮಾಡಿದ್ದರು ಎಂಬ ಅಂಕಿ ಅಂಶವನ್ನೂ ಅವರು ಕೊಟ್ಟಿದ್ದಾರೆ. ಐಐಟಿಗಳಲ್ಲಿ ಶಿಕ್ಷಣ ಮಟ್ಟ ಕುಸಿದಿರುವುದಕ್ಕೆ ಮೂರ್ತಿಯವರು ಕೊಟ್ಟ ಕಾರಣ ಕುತೂಹಲಕರವಾಗಿದೆ. 'ಐಐಟಿ-ಜೀ ಪರೀಕ್ಷೆಗಳಿಗೆ ತರಬೇತಿ ಕೊಡುವ ಕ್ರಮದಲ್ಲಿಯೇ ದೋಷವಿದೆ. ವಿದ್ಯಾರ್ಥಿಗಳು ಒಂದು ವರ್ಷ ಗಟ್ಟಿಯಾಗಿ ಕುಳಿತುಕೊಂಡು ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುತ್ತಾರೆ. ಯಾವುದಾದರೂ ಒಂದು ಪ್ರಶ್ನೆ ಪತ್ರಿಕೆ ಇವರಿಗೂ ಪರೀಕ್ಷೆಯಲ್ಲಿ ಬಂದೇ ಬರುತ್ತದೆ. ಅವರು ಸುಲಭವಾಗಿ ಪಾಸಾಗುತ್ತಾರೆ. ವಿದ್ಯಾರ್ಥಿಗಳು ಸ್ವತಂತ್ರವಾಗಿ ಯೋಚಿಸುವುದನ್ನು ಕಲಿಯಬೇಕು. ತರಗತಿಯಲ್ಲಿ ಕಲಿತುದನ್ನು ಹೊರಜಗತ್ತಿನ ವಿದ್ಯಮಾನದ ಜತೆಗೆ

ಕೊಂಡಿ ಹಾಕುವುದನ್ನೂ ರೂಢಿಸಿಕೊಳ್ಳಬೇಕು" ಎಂದು ಮೂರ್ತಿ ಮಾತು ಮುಗಿಸಿದ್ದಾರೆ. ನಮ್ಮ ಹುಡುಗ-ಹುಡುಗಿಯರ ಪ್ರಸಕ್ತ ಶಿಕ್ಷಣ, ಮನೋಭಾವ, ಬೆಳೆಯುವ ರೀತಿಗೆಲ್ಲ ಅವರ ಕೊನೆಯ ಮಾತಿನಲ್ಲಿ ಉತ್ತರ ಇದೆ ಅನಿಸುತ್ತದೆ. ಹೌದೇ?

24-07-2011

# ನ್ಯಾಯದ ಹೆಜ್ಜೆ

# ನಿಧಾನ ಆದರೆ...

ಇದು ಕಾಕತಾಳೀಯ ಇರಲಾರದು. ಲೋಕಾಯುಕ್ತರು ಗಣಿ ಅಕ್ರಮ ಕುರಿತ ತಮ್ಮ ವರದಿಯನ್ನು ಸಲ್ಲಿಸಿದ ಬೆನ್ನ ಹಿಂದೆಯೇ ಸುಪ್ರೀಂ ಕೋರ್ಟು ಬಳ್ಳಾರಿಯಲ್ಲಿ ಗಣಿಗಾರಿಕೆಯನ್ನು ತನ್ನ ಮುಂದಿನ ಆದೇಶದ ವರೆಗೆ ಅಮಾನತು ಮಾಡಿ ತೀರ್ಪು ನೀಡಿದೆ. ನ್ಯಾಯದೇವತೆ ನಿಧಾನವಾಗಿ ಹೆಜ್ಜೆ ಹಾಕುತ್ತಾಳೆ ಎಂಬ ಮಾತಿದೆ. ಕಾನೂನಿನ ಕೈಗಳು ತುಂಬ ಉದ್ದವಾಗಿರುತ್ತವೆ ಎಂಬ ಮಾತೂ ಇದೆ. ಕಾಯ್ದೆ ಭಂಗ ಮಾಡಿದವರು ಅದರ ಕುಣಿಕೆಯಿಂದ ತಪ್ಪಿಸಿಕೊಳ್ಳುವುದು ಕಷ್ಟ ಎಂಬುದನ್ನು ಲೋಕಾಯುಕ್ತರ ವರದಿ ಮತ್ತು ಸುಪ್ರೀಂ ಕೋರ್ಟಿನ ಆದೇಶ ಸಾಬೀತು ಮಾಡುತ್ತಿರುವಂತೆ ಕಾಣುತ್ತದೆ. ಈಗಲೇ ತಪ್ಪಿತಸ್ಥರು ಜೈಲಿಗೆ ಹೋಗಿ ಬಿಡುತ್ತಾರೆ, ವಧಾ ಸ್ಥಾನದಲ್ಲಿ ನಿಂತು ಬಿಡುತ್ತಾರೆ ಎಂದು ಭಾವಿಸುವುದು ದುಡುಕಿನ ಮಾತು ಆಗಬಹುದು. ಆದರೆ, ಲೋಕಾಯುಕ್ತರ ವರದಿ ಈಗಾಗಲೇ ರಾಜಕೀಯ ಹಂಗಾಮವನ್ನೇ ಸೃಷ್ಟಿ ಮಾಡಿದೆ. ಸುಪ್ರೀಂ ಕೋರ್ಟಿನ ವರದಿಯ ಪರಿಣಾಮಗಳೂ ಇನ್ನೇನು ಗೊತ್ತಾಗುತ್ತವೆ. ಸುಪ್ರೀಂ ಕೋರ್ಟಿನ ಮುಖ್ಯ

ನಾಯ್ಯಮೂರ್ತಿ

ಎಸ್.ಎಚ್.ಕಪಾಡಿಯಾ ನೇತೃತ್ವದ ಅರಣ್ಯ ಪೀಠ ಬಳ್ಳಾರಿ ಜಿಲ್ಲೆಯ 10,868 ಹೆಕ್ಟೇ ಪ್ರದೇಶದಲ್ಲಿ ಬರೀ ಗಣಿಗಾರಿಕೆಯನ್ನು ಮಾತ್ರ ನಿಷೇಧ ಮಾಡಿಲ್ಲ. ಅದರ ಜತೆಗೆ ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಏನಾಗುತ್ತಿದೆ ನೋಡಿಕೊಂಡು ವರದಿ ಕೊಡಿ ಎಂದು ಕೇಂದ್ರ ಉನ್ನತಾಧಿಕಾರ ಸಮಿತಿಗೆ ಆದೇಶ ಮಾಡಿದೆ. ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆಯಿಂದ ನಿಸರ್ಗಕ್ಕೆ ಆಗಿರುವ ಧಕ್ಕೆಯನ್ನು ಸರಿಪಡಿಸಲು ಏನು ಕ್ರಮ ಕೈಗೊಳ್ಳುತ್ತೀರಿ ತಿಳಿಸಿ ಎಂದೂ ರಾಜ್ಯ ಸರ್ಕಾರಕ್ಕೆ ಆದೇಶ ಮಾಡಿದೆ. ವಿಶೇಷ ಎಂದರೆ ಸುಪ್ರೀಂ ಕೋರ್ಟ್ ಈ ಆದೇಶವನ್ನು ಮಾಡಿರುವುದು ಸಂವಿಧಾನದಲ್ಲಿ ಪ್ರಜೆಗಳಿಗೆ ದತ್ತವಾಗಿರುವ 'ಬದುಕುವ ಮತ್ತು ಸ್ವಾತಂತ್ರ್ಯದ ಹಕ್ಕಿನ 21ನೇ ಪರಿಚ್ಛೇದದ ಅಡಿ!

ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆಯಿಂದ ಜನರ ಬದುಕುವ ಹಕ್ಕಿಗೆ ಧಕ್ಕೆಯಾಗಿದೆ ಎಂದು ಸುಪ್ರೀಂ ಕೋರ್ಟಿನ ಮೆಟ್ಟಿಲು ಹತ್ತಿದವರು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಬೆಳವಣಕಿ ಗ್ರಾಮದ ಎಸ್.ಆರ್.ಹಿರೇಮಠ, ಹಿರೇಮಠರಿಗೆ ಈಗ 66 ವರ್ಷ. ಇನ್ನೂ ಹುಡುಗ ಇದ್ದಂತೆ ಇದ್ದಾರೆ. ಈ ಮನುಷ್ಯನಿಗೆ ದಣಿವೇ ಇಲ್ಲ. ಸುಪ್ರೀಂ ಕೋರ್ಟಿನ ತೀರ್ಪು ಬಂದ ಶುಕ್ರವಾರ ಅವರು ಇಡೀ ದಿನ ವಕೀಲರ ಜತೆಗೆ ಅದರ ಪರಿಣಾಮಗಳನ್ನು ಕುರಿತು ಚರ್ಚೆ ಮಾಡುತ್ತಿದ್ದರು. ರಾತ್ರಿ ಒಂದು ಜೀಪು ಹಿಡಿದುಕೊಂಡು ಹೊಸಪೇಟೆಗೆ ಹೊರಟರು. ಹೊಸಪೇಟೆ ಮುಟ್ಟಿದಾಗ ಮಧ್ಯರಾತ್ರಿ ದಾಟಿ 1 ಗಂಟೆಯಾಗುತ್ತ ಬಂದಿತ್ತು. ಬೆಳಿಗ್ಗೆ ಫೋನ್ ಮಾಡುತ್ತೇನೆ ಎಂದಿದ್ದೆ. ಹೊಸಪೇಟೆಯಿಂದ ಬಳ್ಳಾರಿಗೆ ಮತ್ತೆ ವಾಹನದಲ್ಲಿ ಹೋಗುತ್ತ ಅವರು ನನ್ನ ಜತೆಗೆ ಒಂದು ಗಂಟೆ ಮಾತನಾಡಿದರು. ಅವರ ಗಂಟಲು ಬಿದ್ದು ಹೋಗಿತ್ತು. ಶುಕ್ರವಾರದಿಂದ ಅವರು ಮಾತನಾಡುತ್ತಲೇ ಇದ್ದಾರೆ.

ಹಿರೇಮಠರು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ್ದು ತಾಯಿಯ ತವರು ಊರು ವಿಜಾಪುರದಲ್ಲಿ. ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಪಡೆದುದು ಹುಬ್ಬಳ್ಳಿಯ ಬಿ.ವಿ.ಬಿ ಎಂಜಿನಿಯರಿಂಗ್ ಕಾಲೇಜಿನಲ್ಲಿ, ಉನ್ನತ ಶಿಕ್ಷಣಕ್ಕಾಗಿ 1968ರಲ್ಲಿ ಅಮೆರಿಕಕ್ಕೆ ತೆರಳಿ ಅಲ್ಲಿಯೇ ಎಂ.ಎಸ್ ಮತ್ತು ಎಂ.ಬಿ.ಎ ಪದವಿ ಗಳಿಸಿದರು. ಮುಂದೆ ಹತ್ತು ವರ್ಷಗಳ ಕಾಲ ಷಿಕಾಗೊದಲ್ಲಿ ಕೆಲಸ ಮಾಡಿದರು. ಇಲ್ಲಿ ಕೆಲಸ ಮಾಡುವುದು ಬಹಳ ಇದೆ ಎಂದು ದೇಶಕ್ಕೆ ವಾಪಸಾದರು. ಬರುವುದಕ್ಕಿಂತ ಮುಂಚೆ ಅಮೆರಿಕದಲ್ಲಿ ಭಾರತ ಅಭಿವೃದ್ಧಿ ಸಂಸ್ಥೆಯನ್ನು ಕಟ್ಟಿದರು. ಭಾರತಕ್ಕೆ ಬಂದು ರಾಣೆಬೆನ್ನೂರು ಬಳಿಯ ಮೆಢೇರಿಯಲ್ಲಿ ಸಮಾನ ಮನಸ್ಕ ಗೆಳೆಯರೆಲ್ಲ ಸೇರಿಕೊಂಡು ಸಮಾಜ ಪರಿವರ್ತನ ಸಮುದಾಯ ಕಟ್ಟಿದರು. ಈ ಸಮುದಾಯದ ವತಿಯಿಂದಲೇ ಬಳ್ಳಾರಿಯ ಗಣಿಗಾರಿಕೆ ವಿರುದ್ಧ ಸುಪ್ರೀಂ ಕೋರ್ಟಿನಲ್ಲಿ ಹಿರೇಮಠರು ಅರ್ಜಿ ಸಲ್ಲಿಸಿದ್ದರು.

ಗಣಿಗಾರಿಕೆ ಮಾಡಿರುವ ಅನಾಹುತಗಳ ಬಗ್ಗೆ ಅವರ ಕಣ್ಣು ತೆರೆಯುವಂತೆ ಮಾಡಿದವರು ಒಬ್ಬ ಮುಸ್ಲಿಂ ಉಪನ್ಯಾಸಕ, ಗಣಿಗಾರಿಕೆಯಿಂದ ಇಡೀ ಜಿಲ್ಲೆ ಹೇಗೆ ಒಂದು ರಣಾಂಗಣದಂತೆ ಕಾಣುತ್ತಿದೆ ಎಂಬುದನ್ನು ಹಿರೇಮಠರು ಮತ್ತು ಅವರ ಗೆಳೆಯರೂ ಕಣ್ಣಾರೆ ಕಂಡರು. ಬಿಳಿ ಅಂಗಿ ಹಾಕಿಕೊಂಡು ಒಂದು ಸಾರಿ ಆ

ರಸ್ತೆಯಲ್ಲಿ ನಡೆದು ಬಿಟ್ಟರೆ ಅದು ತನ್ನಿಂದ ತಾನೇ ಕಂದು ಬಣ್ಣಕ್ಕೆ ತಿರುಗಿ ಬಿಡುತ್ತಿತ್ತು. ಗಣಿಗಾರಿಕೆ ಬರೀ ಬಿಳಿ ಅಂಗಿಯನ್ನು ಕಂದು ಮಾಡಿರಲಿಲ್ಲ. ಅಲ್ಲಿನ ಜನರ ಕೃಷಿ ಹಾಳಾಯಿತು. ಬೆಳೆಗಳ ಮೇಲೆಲ್ಲ ಕೆಂಪು ದೂಳು ಕುಳಿತು ಅದು ಹಾಳಾಗಿ ಹೋಯಿತು. ತೊರೆಗಳು, ಝರಿಗಳು ಮಣ್ಣುಮಯವಾದುವು. ಜನರ ಆರೋಗ್ಯ ಹಾಳಾಯಿತು. ಆದರೆ, ಗಣಿಧಣಿಗಳ ಆರ್ಭಟ, ಅಬ್ಬರ ಎಷ್ಟು ಜೋರಾಗಿತ್ತು ಎಂದರೆ ಆ ಜಿಲ್ಲೆಯಲ್ಲಿ ಕಾನೂನಿನ ಆಡಳಿತ ಇಲ್ಲ ಎಂಬುದು ಹಿರೇಮಠ ಮತ್ತು ಗೆಳೆಯರಿಗೆ ಮನದಟ್ಟಾಯಿತು.

ಗಣಿ ಮಾಲೀಕರ ಶಕ್ತಿಯ ಮುಂದೆ ಹಿರೇಮಠರ ಶಕ್ತಿ ಏನೇನೂ ಅಲ್ಲ. ಅವರ ತೋಳಲ, ಹಣ ಬಲ ಯಾವುದೂ ಹಿರೇಮಠರಿಗೆ ಆಗಲೀ, ಹಿರೇಮಠರು ನಡೆಸುವ ಸಂಸ್ಥೆಗೇ ಆಗಲಿ ಇಲ್ಲ. ಇಂಥ ಆಂದೋಲನಗಳನ್ನು ಹಿತಾಸಕ್ತಿಗಳು ಕೊಡುವ ಹಣದಿಂದ ನಡೆಸಿಕೊಂಡು ಹೋಗುವ ಜಾಯಮಾನವೂ ಹಿರೇಮಠರದು ಅಲ್ಲ. ಏನಿದ್ದರೂ ಎಂಥ ದುಷ್ಟ ಶಕ್ತಿಯ ವಿರುದ್ಧವೂ ಒಂದು ಸಾತ್ವಿಕ ಶಕ್ತಿ, ಸೆಡ್ಡು ಹೊಡೆದು ನಿಲ್ಲಬಹುದು ಎಂದು ನಂಬಿದವರು ಅವರು. ಅವರು ಬಳ್ಳಾರಿ, ಹೊಸಪೇಟೆ, ಸಂಡೂರುಗಳಲ್ಲಿ ನಡೆಸಿದ ಭಾರಿ ದೊಡ್ಡ ಹೋರಾಟದಲ್ಲಿ ಅಬ್ಬಬ್ಬ ಎಂದರೆ 500 ಜನರು ಭಾಗವಹಿಸಿದ್ದರು! ಅದೇ ಅವರ ದೊಡ್ಡ ಹೋರಾಟ! ಆದರೆ, ಇಂಥ ಹೋರಾಟಗಳಿಂದ ಗಣಿ ಮಾಲೀಕರನ್ನು ಮಣಿಸಲು ಕಷ್ಟ ಎಂದು ಅವರಿಗೆ ಗೊತ್ತಿತ್ತು. ಅಂತಲೇ ಪ್ರಶಾಂತ ಭೂಷಣ್ ಅವರನ್ನು ವಕೀಲರನ್ನಾಗಿ ನೇಮಿಸಿಕೊಂಡು ಸುಪ್ರೀಂ ಕೋರ್ಟಿನ ಮೆಟ್ಟಿಲು ಏರಿದರು. ಅವರ ಈ ಹೋರಾಟಕ್ಕೆ ಅವರದೇ ಕೆಲವು ಹಿಂದಿನ ಹೋರಾಟಗಳ ಜತೆಗೆ ಛತ್ತೀಸಗಡದ ಬಸ್ತಾರ್‌ನಲ್ಲಿ ಆದಿವಾಸಿಗಳ ಬಸ್ತಿಗಳ ನಾಶ ಕುರಿತು ರಾಜಗೋಪಾಲ ನಾಯ್ಡು ಎಂಬ ಕಲೆಕ್ಟರ್‌ವೊಬ್ಬರು ಈಚೆಗೆ ನಡೆಸಿದ ಹೋರಾಟ ಮತ್ತು ಅದರಲ್ಲಿ ಅವರಿಗೆ ಸಿಕ್ಕ ಜಯ ಬೆನ್ನ ಹಿಂದೆ ಇತ್ತು.

ಷಿಕಾಗೊದಲ್ಲಿ ಎಂ.ಎಸ್ ಮಾಡುವಾಗ ಹಿರೇಮಠರು ಆಪರೇಷನಲ್ ರೀಸರ್ಚ್ ವಿಷಯ ತೆಗೆದುಕೊಂಡಿದ್ದರು. ಅದು ಒಂದು ವ್ಯವಸ್ಥೆ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಅವರಿಗೆ ಕಲಿಸಿಕೊಟ್ಟಿತ್ತು. ಈಗ ಅದೇ ಅವರ ನೆರವಿಗೆ ಬಂತು. ಒಂದು ಸಾರಿ ಹಿರೇಮಠರು ಗಣಿ ಮಾಲೀಕರ ವಿರುದ್ಧ ಸೆಡ್ಡು ಹೊಡೆದು ನಿಂತರು ಎಂದು ತಿಳಿಯುತ್ತಿದ್ದಂತೆಯೇ ಅವರಿಗೆ ಮಾಹಿತಿ ಹರಿದು ಬರತೊಡಗಿತು. ಅದನ್ನು ಅವರು ಆಳವಾಗಿ ಅಧ್ಯಯನ ಮಾಡಬೇಕಿತ್ತು. ಎಲ್ಲಿ ಅಕ್ರಮ ಆಗಿದೆ. ಎಲ್ಲಿ ಕಾನೂನಿನ ಉಲ್ಲಂಘನೆ ಆಗಿದೆ. ಎಲ್ಲಿ ಅಧಿಕಾರದ ದುರ್ಬಳಕೆ ಆಗಿದೆ ಎಂದೆಲ್ಲ ಕಂಡು ಹಿಡಿದರು. ಅವರು ನ್ಯಾಯಾಲಯದ ಮೆಟ್ಟಿಲು ಏರಿದ ಒಂದು ವರ್ಷದ ನಂತರ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂತು. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೂ ಬಳ್ಳಾರಿಯಲ್ಲಿ ಗಣಿ ಮಾಲೀಕರು ಪ್ರಬಲರಾಗುವುದಕ್ಕೂ ನೇರ ಸಂಬಂಧವಿತ್ತು. ಬಳ್ಳಾರಿಯಲ್ಲಿ ಮತ್ತು ಬಳ್ಳಾರಿಗೆ ಹೊಂದಿಕೊಂಡ ಆಂಧ್ರಪ್ರದೇಶದಲ್ಲಿ ಒಂದು ರೀತಿ ಹಿಟ್ಲರ್ ಮಾದರಿ ಆಡಳಿತ ನಡೆಯುತ್ತಿದ್ದ ಕಾಲ ಅದು' ಎಂದು ಹಿರೇಮಠರು ನೆನಪಿಸಿಕೊಳ್ಳುತ್ತಾರೆ. ರಾಮಗಡ ಗಣಿ ಪ್ರದೇಶದಲ್ಲಿ ಕಾಲು ಇಟ್ಟರೆ ಜೀವಂತ ವಾಪಸು

ಬರುವುದು ಕಷ್ಟ ಎಂಬ ಭಯದ ವಾತಾವರಣದ ನಡುವೆಯೂ ಹಿರೇಮಠ ಮತ್ತು ಅವರ ಗೆಳೆಯರು ಯಾವ ಪೊಲೀಸ್ ಬೆಂಗಾವಲು ಇಲ್ಲದೇ ಹೋಗಿ ಅಲ್ಲಿ ಆಗುತ್ತಿರುವ ಅನಾಹುತ ನೋಡಿಕೊಂಡು ಬಂದರು. ಹಿರೇಮಠರ ಅರ್ಜಿ ಮೇಲೆ ಸುಪ್ರೀಂ ಕೋರ್ಟಿನ ಅರಣ್ಯ ಪೀಠ ಕೇಂದ್ರ ಉನ್ನತಾಧಿಕಾರ ಸಮಿತಿ ರಚಿಸಿದ್ದು, ಗಡಿ ರೇಖೆಗಳನ್ನು ಗುರುತಿಸಿದ್ದು ನಂತರ 22 ಗಣಿ ಪ್ರದೇಶಗಳಲ್ಲಿ ಗಣಿಗಾರಿಕೆ ನಿಷೇಧಿಸಿದ್ದು ಈಗ ಬಳ್ಳಾರಿ ಜಿಲ್ಲೆಯಲ್ಲಿ ಅದೇ ಗಣಿಗಾರಿಕೆಯನ್ನು ಅಮಾನತು ಮಾಡಿರುವುದು ಕಳೆದ ಮೂರು ನಾಲ್ಕು ವರ್ಷಗಳ ಇತಿಹಾಸದ ಹೆಜ್ಜೆ ಗುರುತುಗಳು. ಆದರೆ, ಈ ದಾರಿ ಗಣಿ ಪ್ರದೇಶದಲ್ಲಿ ನಡೆದಾಡುವಷ್ಟೇ ದುರ್ಗಮವಾಗಿತ್ತು. ಇತ್ತ ಬಳ್ಳಾರಿಯಲ್ಲಿ ಅತ್ತ ಪಕ್ಕದ ಆಂಧ್ರದಲ್ಲಿ ಅಧಿಕಾರಿಗಳು ಭ್ರಷ್ಟರಾಗಿದ್ದರು. ಯಾವ ದಾಖಲೆಗಳನ್ನೂ ಸುಲಭವಾಗಿ ಕೊಡಲು ಸಿದ್ಧರಿರಲಿಲ್ಲ. ಅಥವಾ ಅವರು ಕೊಡಲು ವ್ಯವಸ್ಥೆ ಬಿಡುತ್ತಿರಲಿಲ್ಲ. ಆದರೆ, ನ್ಯಾಯದ ಕಬಂಧಬಾಹುಗಳು ಎಷ್ಟು ಬಲಿಷ್ಠವಾಗಿರುತ್ತವೆ ಎಂದರೆ, ಅಧಿಕಾರಿಗಳಿಗೆ ತಾವು ಮಾಡುತ್ತಿರುವುದು 'ನ್ಯಾಯ ಪ್ರಕ್ರಿಯೆಗೆ ಅಡ್ಡಿ ಪಡಿಸುವ ಕೆಲಸ' ಎಂದು ಯಾವಾಗ ತಿಳಿಯಿತೋ ಆಗ ಭಾನುವಾರವೂ ಕುಳಿತು ಎಲ್ಲ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದರು! ಅವರು ಹಾಗೆ ಮಾಡುವಂತೆ ಅಧಿಕಾರದಲ್ಲಿ ಇದ್ದವರು ತಾಕೀತು ಮಾಡಿದರು!

ಹಿರೇಮಠರು ಮತ್ತು ಅವರ ಗೆಳೆಯರು ನಡೆಸಿದ ಹೋರಾಟ ಈಗ ಒಂದು ಹಂತಕ್ಕೆ ಬಂದು ನಿಂತಿದೆ. ಲೋಕಾಯುಕ್ತರ ವರದಿಯ ಪರಿಣಾಮವಾಗಿ ಯಾರು ಯಾರು ಅಧಿಕಾರ ಕಳೆದುಕೊಳ್ಳುತ್ತಾರೆ ಎಂದು ನಮಗೆ ಗೊತ್ತಿದೆ. ಅವರು ಅಧಿಕಾರದಲ್ಲಿ ಉಳಿಯುವುದು ಏನೇ ಕಸರತ್ತು ಮಾಡಿದರೂ ಕಷ್ಟವಾಗುತ್ತದೆ. ಅದು ರಾಜಕೀಯ ಪರಿಣಾಮ ಆದರೆ, ಕಳೆದ ಏಳೆಂಟು ವರ್ಷಗಳಲ್ಲಿ ಗಣಿಗಾರಿಕೆ ನಡೆದ ಪ್ರದೇಶದ ಪರಿಸರಕ್ಕೆ ಆಗಿರುವ ಭಾರಿ ಹಾನಿಯನ್ನು ಸರಿಪಡಿಸುವುದು ಹೇಗೆ ಎಂಬುದಕ್ಕೆ ಈಗ ಉತ್ತರ ಸಿಗಬೇಕಿದೆ. ಯಾರು ಭೂಮಿಯನ್ನು ಬಗೆದು ತಮ್ಮ ಬೊಕ್ಕಸ ತುಂಬಿಕೊಂಡಿದ್ದಾರೋ ಅವರೇ ಪರಿಸರಕ್ಕೆ ಆಗಿರುವ ಹಾನಿಯನ್ನು ಸರಿಪಡಿಸುವ ಹೊಣೆಯನ್ನೂ ಹೊರಬೇಕಾಗುತ್ತದೆ. ಅದು ಅವರು ಮಾಡಬೇಕಾದ ಕನಿಷ್ಠ ಕೆಲಸ. ನಿಸರ್ಗಕ್ಕೆ ಸಿಗಬೇಕಾದ ಕನಿಷ್ಠ ನ್ಯಾಯ ಕೂಡ ಅದೇ. ಅದನ್ನು ಸುಪ್ರೀಂ ಕೋರ್ಟಿನ ಅರಣ್ಯ ಪೀಠ ನೋಡಿಕೊಳ್ಳುತ್ತದೆ ಎಂದು ಕಾಣುತ್ತದೆ. ಲೋಕಾಯುಕ್ತ ವರದಿಯ ಕಾನೂನು ಪರಿಣಾಮಗಳು ಏನಾಗುತ್ತವೆ ಎಂಬ ಪ್ರಶ್ನೆಯೂ ಇದೆ. ಏಕೆಂದರೆ ರಾಜಕೀಯ ನಾಯಕರು ಏನು ಮಾಡಿದರೂ ನಡೆಯುತ್ತದೆ ಎಂದು ನಮ್ಮ ಜನರು ಸಿನಿಕತನ ಬೆಳೆಸಿಕೊಂಡಿದ್ದಾರೆ. ಆದರೆ, ಈಗ ತಿಹಾರ ಜೈಲಿನಲ್ಲಿ ಯಾರಾರು ಇದ್ದಾರೆ ಎಂದು ಒಂದು ಸಾರಿ ಅವರು ನೋಡಿದರೆ ಅದಕ್ಕೂ ಉತ್ತರ ಸಿಗುತ್ತದೆ.

ಹಿರೇಮಠ ಮತ್ತು ಅವರ ಗೆಳೆಯರು ಈಗ ಲೋಕಾಯುಕ್ತರು ಸುಪ್ರೀಂ ಕೋರ್ಟಿಗೆ ಸಲ್ಲಿಸಿರುವ ವರದಿಯನ್ನು ಆಧಾರವಾಗಿ ಇಟ್ಟುಕೊಂಡು ನ್ಯಾಯ ಕೇಳಲಿದ್ದಾರೆ. ಲೋಕಾಯುಕ್ತರ ವರದಿಯನ್ನು ತಾರ್ಕಿಕ ಕೊನೆಗೆ ತೆಗೆದುಕೊಂಡು ಹೋಗಲು, ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಿಸಲು ವರದಿಯನ್ನು ಸಿಬಿಐಗೆ ಅಥವಾ ವಿಶೇಷ ತನಿಖಾ

ದಳಕ್ಕೆ ವಹಿಸಬೇಕು; ಈ ತನಿಖೆ ವಹಿಸಿಕೊಳ್ಳುವ ಸಂಸ್ಥೆ ನೇರವಾಗಿ ಸುಪ್ರೀಂ ಕೋರ್ಟಿಗೆ ಪ್ರಗತಿಯ ವರದಿಯನ್ನು ಸಲ್ಲಿಸುತ್ತ ಇರಬೇಕು ಎಂದೂ ಅವರು ಕೋರಲಿದ್ದಾರೆ. ಕಾನೂನನ್ನು ಕೈಗೆ ತೆಗೆದುಕೊಳ್ಳುವ ಅಧಿಕಾರಿಗಳಿಗೆ ಮತ್ತು ಜನಪ್ರತಿನಿಧಿಗಳಿಗೆ ಬಿಸಿ ಮುಟ್ಟಿಸದೇ ಇದ್ದರೆ ಮತ್ತೆ ದೇಶದಲ್ಲಿ ಕಾನೂನಿನ ಆಡಳಿತ ತರುವುದು ಕಷ್ಟ ಎಂದು ಈಗ ನಡೆಯುತ್ತಿರುವ ಅನೇಕ ವಿದ್ಯಮಾನಗಳು ಮನದಟ್ಟು ಮಾಡಿಕೊಟ್ಟಿವೆ. ಹಿರೇಮಠರು ಈಗ ಮಾಡಲು ಹೊರಟಿರುವುದೂ ಅದೇ ಕೆಲಸವನ್ನು.

ಷಿಕಾಗೊದಲ್ಲಿ ಓದುವಾಗಲೇ ಮೇವಿಸ್ (ಮದುವೆಯಾದ ಮೇಲೆ ಅವರ ಹೆಸರು ಶ್ಯಾಮಲಾ) ಎಂಬ ತರುಣಿಯನ್ನು ಪ್ರೀತಿ ಮಾಡಿ ಮದುವೆಯಾಗಿರುವ ಹಿರೇಮಠರಿಗೆ ಒಬ್ಬ ಮಗ ಮತ್ತು ಒಬ್ಬ ಮಗಳು ಇದ್ದಾಳೆ. ಅವರಿಬ್ಬರೂ ಅಮೆರಿಕೆಯಲ್ಲಿ ಉನ್ನತಾಭ್ಯಾಸ ಮಾಡಿ ಅಲ್ಲಿಯೇ ವಾಸವಾಗಿದ್ದಾರೆ. ಹೀಗೆ ಊರು ಊರು ಅಲೆಯುವ, ಹೊತ್ತು ಗೊತ್ತು ಒಂದೂ ತಿಳಿಯದ ಗಂಡನ ಜತೆಗೆ ಇರುವುದಕ್ಕಿಂತ ಮಕ್ಕಳ ಜತೆಗೇ ಇರುವುದು ಲೇಸು ಎಂದು ಶ್ಯಾಮಲಾ ಮಕ್ಕಳ ಜತೆಗೇ ಇದ್ದಾರೆ! ಹಿರೇಮಠರು ವರ್ಷಕ್ಕೆ ಒಂದು ಸಾರಿ ಬಿಡುವು ಮಾಡಿಕೊಂಡು ಅಮೆರಿಕೆಗೆ ಹೋಗಿ ಹೆಂಡತಿ, ಮಕ್ಕಳು ಮತ್ತು ಮೂವರು ಮೊಮ್ಮಕ್ಕಳ ಜತೆಗೆ ಇದ್ದು ಬರುತ್ತಾರೆ. ಬರುವಾಗ ಇಲ್ಲಿ ಹೋರಾಟ ಮಾಡಲು ಮತ್ತಷ್ಟು ಇನ್ನಷ್ಟು ಶಕ್ತಿ ಪಡೆದುಕೊಂಡಿರುತ್ತಾರೆ. ಹಿರೇಮಠ ಅತ್ಯಂತ ಸಂಭಾವಿತ ಸಜ್ಜನ ವ್ಯಕ್ತಿ. ಉತ್ತರ ಕರ್ನಾಟಕದ ಭಾಷೆಯಲ್ಲಿಯೇ ಎಲ್ಲರಿಗೂ ಹಾಂಗ್ರೀ, ಹೀಂಗೀ ಎಂದು 'ರೀ' ಹಚ್ಚಿಯೇ ಮಾತನಾಡುತ್ತಾರೆ. ಆಶ್ಚರ್ಯ ಎಂದರೆ ಅಕ್ರಮ ಗಣಿಗಾರಿಕೆ ವಿರುದ್ಧ ಹಿರೇಮಠರು ಇಷ್ಟು ದೀರ್ಘ ಅವಧಿಗೆ ಹೋರಾಟ ನಡೆಸಿದರೂ ಅವರಿಗೆ ಒಂದೇ ಒಂದು ಬೆದರಿಕೆ ಕರೆ ಬಂದಿಲ್ಲ. ಅವರಿಗೆ ಯಾವ ಬೆಂಗಾವಲೂ ಇಲ್ಲ. ಸಜ್ಜನ, ಸಾತ್ವಿಕ ಶಕ್ತಿಯ ಬಲ ಅದು. ಎಲ್ಲ ಸಜ್ಜನರಿಗೆ, ಸಾತ್ವಿಕರಿಗೆ ಹಿರೇಮಠರ ಹೋರಾಟ ತುಂಬುವ ನೈತಿಕ ಸ್ಥೈರ್ಯ ಅಗಾಧವಾದುದು.

31-07-2011

# ಅಧಿಕಾರದ ಅಮಲು

# ಅವರಿಗೇಕಿಲ್ಲ?... ನಮಗೇಕಿದೆ?...

ಅದು ಇಟಲಿ ದೇಶದ ಟಸ್ಕಾನ್ ಪಟ್ಟಣ. ಅಲ್ಲಿನ ಹೋಟೆಲ್‌ಗೆ ಒಬ್ಬ ವ್ಯಕ್ತಿ ಹೋಗಿ ಎರಡು ಕಪ್ ಕಾಫಿ ಕೇಳಿದರು. ಹೋಟೆಲ್ ವೇಟ್ರೆಸ್ ಕಾಫಿ ಮಾಡಿ ತನ್ನ ಮುಂದಿನ ಕಟ್ಟೆಯ ಮೇಲೆ ಇಟ್ಟು ಆ ವ್ಯಕ್ತಿಯನ್ನು ಕರೆದು, ನೀನೇ ನಿನ್ನ ಟೇಬಲ್‌ಗೆ ತೆಗೆದುಕೊಂಡು ಹೋಗು. ನನಗೆ ನಿನ್ನ ಟೇಬಲ್ ವರೆಗೆ ತಂದು ಕೊಡಲು ಆಗದು. ಇಲ್ಲಿ ಕೆಲಸ ಜಾಸ್ತಿ' ಎಂದಳು. ಆ ವ್ಯಕ್ತಿ ಕಾಫಿ ತೆಗೆದುಕೊಂಡು ಹೋಗಿ ಪತ್ನಿಯ ಜತೆಗೆ ಕುಡಿದ. ಕಾಫಿಯ ಬಿಲ್ ಮಾತ್ರ ಕೊಟ್ಟು ಹೋದ. ವಿದೇಶದಲ್ಲಿ ಬಿಲ್‌ನ ಶೇಕಡ 15ರಷ್ಟು ಹಣವನ್ನು ಟಿಪ್ಸ್ ರೂಪದಲ್ಲಿ ಕೊಡುವುದು ಕಡ್ಡಾಯ. ಆದರೆ, ಆತ ಟಿಪ್ಸ್ ಇಟ್ಟಿರಲಿಲ್ಲ. ಆತ ಹೊರಟು ಹೋದ ಮೇಲೆ ವೇಟೆಸ್ ಫ್ರಾನ್ಸೆಕಾ ಆರಿಯಾನಿ ಈತನನ್ನು ಎಲ್ಲಿಯೋ ನೋಡಿದಂತಿದೆಯಲ್ಲ ಎಂದು ತಲೆ ಕೆರೆದುಕೊಂಡಳು. ತಕ್ಷಣ ಆಕೆಗೆ ನೆನಪಾಯಿತು ಆತ, ಪಕ್ಕದ ದೇಶ ಬ್ರಿಟನ್‌ನ ಪ್ರಧಾನಿ ಡೇವಿಡ್ ಕ್ಯಾಮರಾನ್ ಎಂದು! ಇದು ಹೇಗೋ ಸುದ್ದಿಯಾಯಿತು. ಒಂದು ವಾರ ಕಾಲ ಟಸ್ಕಾನ್ ಪಟ್ಟಣದ ಸುತ್ತಮುತ್ತ ಪತ್ನಿ, ಮಗಳು ಮತ್ತು ಗೆಳೆಯರ ಜತೆಗೆ ರಜೆ

ಕಳೆಯಲು ಬಂದಿದ್ದ ಕ್ಯಾಮರಾನ್ ಮೊನ್ನೆ ಮತ್ತೆ ಅದೇ ಹೋಟೆಲ್‌ಗೆ ಬಂದರು. ಫ್ರಾನ್ಸೆಕಾಳನ್ನು ಭೇಟಿ ಮಾಡಿದರು. ತಮ್ಮನ್ನು ಗುರುತಿಸದೇ ಇದ್ದುದಕ್ಕೆ ಬೇಸರ ಮಾಡಿಕೊಳ್ಳಬೇಕಾದ ಅಗತ್ಯವೇನೂ ಇಲ್ಲ ಎಂದು ಆಕೆಗೆ ಸಮಾಧಾನ ಹೇಳಿದರು. ಹೋಗುವಾಗ ಮತ್ತೆ ಕಾಫಿ ಕುಡಿದು ಸಾಕಷ್ಟು ಟಿಪ್ಸ್ ಇಟ್ಟು ಹೊರಟು ಹೋದರು. ಇಂಗ್ಲೆಂಡ್ ಪ್ರಧಾನಿ ಮತ್ತೆ ಬಂದು ತನ್ನನ್ನು ಭೇಟಿ ಮಾಡಿ ಮಾತನಾಡಬಹುದು ಎಂದು ಫ್ರಾನ್ಸೆಕಾ ಕನಸು ಮನಸಿನಲ್ಲಿಯೂ ಯೋಚಿಸರಲಿಲ್ಲ. 'ಆತ ಎಷ್ಟು ಒಳ್ಳೆಯ ಮನುಷ್ಯ' ಎಂದು ಆಕೆ ಸಂಭ್ರಮಪಟ್ಟಳು. ಅದೂ ಸುದ್ದಿಯಾಯಿತು.

ಡೇವಿಡ್ ಕ್ಯಾಮರಾನ್ ಒಂದು ಕಾಲದಲ್ಲಿ ಸೂರ್ಯ ಮುಳುಗದ ಸಾಮ್ರಾಜ್ಯ ಎನಿಸಿದ ಇಂಗ್ಲೆಂಡ್ ದೇಶದ ಪ್ರಧಾನಿ, ಈಗಲೂ ಅದು ಒಂದು ಪ್ರಬಲ ಪಾಶ್ಚಾತ್ಯ ದೇಶವೇ. ನಮ್ಮ ಲೆಕ್ಕದಲ್ಲಿ ಅವರ ಹಿಂದೆ ಮುಂದೆ ಹತ್ತಾರು ವಾಹನಗಳು ಇರಬೇಕಿತ್ತು. ಸೈರನ್ ಕೂಗುತ್ತ ಮುಂದೆ ಹೋಗುವ ಬೆಂಗಾವಲು ವಾಹನವೂ ಇರಬೇಕಿತ್ತು. ನಮ್ಮ ದೇಶದಲ್ಲಿ ನಮಗೆ ಇದೇ ರೂಢಿ. ಕ್ಯಾಮರಾನ್ ಪ್ರವಾಸ ಮಾಡುವಾಗ ಅಂಥ ಯಾವ ವಾಹನವೂ ಅವರ ಹಿಂದೆ ಮುಂದೆ ಇದ್ದಂತೆ ಇರಲಿಲ್ಲ. ಇದ್ದರೆ ವೇಟ್ರೆಸ್ ಆರಿಯಾನಿಗೆ ಅದು ಗೊತ್ತಾಗಬೇಕಿತ್ತು. ಗೊತ್ತಾಗಿದ್ದರೆ ಅವಳ ವರ್ತನೆ ಬೇರೆಯದೇ ಆಗಿರುತ್ತಿತ್ತು. ಕ್ಯಾಮರಾನ್ ತಮ್ಮ ಹೆಂಡತಿ, ಮಗಳ ಜತೆಗೆ ಆ ಹೋಟೆಲ್‌ಗೆ ಒಬ್ಬ ಸಾಮಾನ್ಯ ಮನುಷ್ಯನ ಹಾಗೆ ಬಂದರು. ಕಾಫಿ ಕೇಳಿದರು. ವೇಟ್ರೆಸ್ ಕಾಫಿಯನ್ನು ಟೇಬಲ್‌ಗೆ ತಂದು ಕೊಡುವುದಿಲ್ಲ ಎಂದರೂ ಸಿಟ್ಟಾಗಲಿಲ್ಲ. ಸುಮ್ಮನೇ ಟೇಬಲ್ ವರೆಗೆ ತಾವೇ ಕಾಫಿ ತೆಗೆದುಕೊಂಡು ಹೋಗಿ ಕುಡಿದು ಹೊರಟು ಹೋದರು.

ಇಂಥ ಸರಳತೆ ಎಲ್ಲಿಂದ ಬರುತ್ತದೆ? ನಮ್ಮ ಸಚಿವರು, ಅಧಿಕಾರಿಗಳು ಒಂದು ಊರಿಗೆ, ರಸ್ತೆಗೆ ಬರುತ್ತಾರೆ ಎಂದರೆ ಅವರ ಹಿಂದೆ ಮುಂದೆ ಕೆಂಪು ದೀಪದ ವಾಹನಗಳ ಸಾಲು ಸಾಲು. ಬೆಂಗಳೂರಿನಲ್ಲಿ ಪೊಲೀಸ್ ಕಮಿಷನರ್ ತಮ್ಮ ಕಚೇರಿಗೆ ಹೊರಟರೆ ಸಾಕು ಅವರು ಸಾಗುವ ರಸ್ತೆಯುದ್ದಕ್ಕೂ ಪೊಲೀಸರು ಸಂಚಾರವನ್ನು ನಿಲುಗಡೆ ಮಾಡಿ ಸಾಹೇಬರ ಸಮಯ ಹಾಳಾಗದಂತೆ ನಿಗಾ ವಹಿಸುತ್ತಾರೆ. ಗೃಹ ಸಚಿವರು ಹೊರಟರಂತೂ ಇಡೀ ಊರಿನಲ್ಲಿಯೇ ಸಂಚಾರ ಸ್ತಬ್ಧವಾಗುತ್ತದೆ. ಮುಖ್ಯಮಂತ್ರಿ ಹೊರಟರೆ ಏನಾಗುತ್ತದೆ ಎಂದು ಕೇಳುವುದೇ ಬೇಡ. ಇಲ್ಲಿ ಈ ದರ್ಪ ಹೇಗೆ ಹುಟ್ಟಿಕೊಳ್ಳುತ್ತದೆ?

ನಮ್ಮ ಶ್ರೇಣೀಕೃತ, ಪಾಳೆಗಾರಿಕೆ ಭೂಮಿಕೆಯ ವ್ಯವಸ್ಥೆಯಲ್ಲಿಯೇ ಈ ದೌರ್ಬಲ್ಯ ಇದ್ದಂತೆ ಕಾಣುತ್ತದೆ. ನಾನು ಚಿಕ್ಕವ ಇದ್ದಾಗಿನ ನೆನಪು ಇದು. ಮನಸ್ಸಿನಲ್ಲಿ ಇನ್ನೂ ಹಸಿರಾಗಿದೆ. ನಮ್ಮ ಊರಿನ ಕಿಲ್ಲೆಯಲ್ಲಿ ತಹಶಿಲ್ದಾರ್ ನಿವಾಸವಿತ್ತು. ಅವರು ಬೆಳಿಗ್ಗೆ ಹತ್ತು ಗಂಟೆಗೆ ತಮ್ಮ ಕಚೇರಿಗೆ ಹೊರಟರು ಎಂದರೆ ಅವರ ಮುಂದೆ ಒಬ್ಬ ಪಟ್ಟೇವಾಲಾ ಇರುತ್ತಿದ್ದ, ಸಾಹೇಬರಿಗೆ ಬಿಸಿಲು ತಾಗಬಾರದು ಎಂದು ಕೆಲವು ಸಾರಿ ಆತ ಅವರಿಗೆ ಕೊಡೆ ಹಿಡಿದಿರುತ್ತಿದ್ದ. ತಹಶಿಲ್ದಾರ್ ಸಾಗುವ ದಾರಿಯುದ್ದಕ್ಕೂ ಜನರು ಅಡ್ಡ ಬರಬಾರದು ಎಂದು 'ಹುಷ್' 'ಹುಷ್' ಎಂದು ಎದುರು ಬರುತ್ತಿದ್ದ

ಸಾರ್ವಜನಿಕರನ್ನು ಕ್ರಿಮಿಗಳ ಹಾಗೆ ಆಚೆ ಈಚೆ ಹೋಗುವಂತೆ ಹೇಳುತ್ತಿದ್ದ. ಅದೇ ಪ್ರದೇಶದಿಂದ ಬರುತ್ತಿದ್ದ ನ್ಯಾಯಾಧೀಶರ ಪಟ್ಟೇವಾಲನೂ ಹೀಗೆಯೇ ನಡೆದುಕೊಳ್ಳುತ್ತಿದ್ದ. ಆಗ ತಹಶಿಲ್ದಾರ್ ಮತ್ತು ನ್ಯಾಯಾಧೀಶರಿಗೆ ವಾಹನಗಳು ಇರುತ್ತಿರಲಿಲ್ಲ. ಈಗ ಆಗಿರುವ ವ್ಯತ್ಯಾಸ ಎಂದರೆ ಅಧಿಕಾರಿಗಳಿಗೆ ಕೆಂಪು ದೀಪದ ವಾಹನಗಳು ಬಂದಿವೆ. ಅವು ಸಾಗುವ ದಾರಿಯಲ್ಲಿಯೂ ಸಾರ್ವಜನಿಕರ ಸಂಚಾರಕ್ಕೆ ಅವಕಾಶ ಇರುವುದೇ ಇಲ್ಲ. ಕೆಂಪು ದೀಪಗಳ ವಾಹನಗಳಿಗೆ ಜನಪ್ರತಿನಿಧಿಗಳು ಏಕೆ ಆಸೆ ಪಡುತ್ತಾರೆ ಎಂಬುದಕ್ಕೆ ಹೆಚ್ಚು ವಿವರಣೆ ಬೇಕಿಲ್ಲ ಅನಿಸುತ್ತದೆ. ಕೆಂಪು ದೀಪದ ವಾಹನ ಎಂಬುದು ಒಂದು ಸಂಕೇತ ಮಾತ್ರ. ಅದು ತರುವ ಅಧಿಕಾರ, ಹಣ ಇತ್ಯಾದಿಯೆಲ್ಲ ಪೂರಕ ಸಂಗತಿಗಳು.

ಒಬ್ಬ ವ್ಯಕ್ತಿ ಶಾಸಕನಾಗುತ್ತಿದ್ದಂತೆಯೇ ಆತನಲ್ಲಿ ಸಚಿವನಾಗಬೇಕು ಎಂಬ ಆಸೆ ಮೊಳೆಯುತ್ತದೆ. ಅಥವಾ ಹಾಗೆ ಮೊಳೆಯುವಂತೆ ಅವನ ಹಿಂಬಾಲಕರು ಮಾಡುತ್ತಾರೆ. ಅವನ ಸುತ್ತಮುತ್ತ ವಂದಿಮಾಗಧರು ಹುಟ್ಟಿಕೊಳ್ಳುತ್ತಾರೆ. ಇಲ್ಲವಾದರೆ, ಯಾವನೋ ಶಾಸಕ ಯಾವುದೋ ಕಾರಣಕ್ಕೆ ಮಂತ್ರಿಯಾದರೆ ರಾಜಭವನದ ಮುಂದೆ ಪಟಾಕಿ ಹಚ್ಚಿ ಜನರು ಏಕೆ ಕುಣಿಯುತ್ತಾರೆ? ಈತ ಮಂತ್ರಿಯಾದರೆ ಅವರಿಗೆ ಏನು ಲಾಭ? ಅಧಿಕಾರದ ಮೋಹ ಒಂದು ಸಾಂಸರ್ಗಿಕ 'ರೋಗ'ವೇ? ಈಗ ಶಾಸಕರಾಗುವುದು ಮತ್ತು ಮಂತ್ರಿಯಾಗುವುದು ಅಧಿಕಾರ ಮತ್ತು ಅದು ತರಬಹುದಾದ ಹಣಕ್ಕಾಗಿ ಮಾತ್ರವೇ? 1983ರಲ್ಲಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾದರು. ಅವರಿಗಿಂತ ಮುಂಚೆ ಮುಖ್ಯಮಂತ್ರಿಯಾಗಿದ್ದ ಆರ್.ಗುಂಡುರಾಯರ ದರ್ಬಾರಿನಿಂದ ಜನರು ರೋಸಿ ಹೋಗಿದ್ದರು. ಗುಂಡುರಾಯರು ಸಂಚರಿಸುವ ರಸ್ತೆಯಲ್ಲಿ ಎಲ್ಲ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿರುತ್ತಿತ್ತು. ಹೆಗಡೆಯವರು ಮುಖ್ಯಮಂತ್ರಿಯಾದ ತಕ್ಷಣ ತಾವು ಮತ್ತು ತಮ್ಮ ಸಂಪುಟ ಸಹೋದ್ಯೋಗಿಗಳು ಸಾಮಾನ್ಯ ಜನರ ಹಾಗೆಯೇ ಸಂಚರಿಸುವುದಾಗಿ ಪ್ರಕಟಿಸಿದರು. ತಮಗೆ ಕೂಡ ಸಂಚಾರ ಸಿಗ್ನಲ್‌ಗಳು ಅನ್ವಯಿಸುತ್ತವೆ ಎಂದರು. ಕೆಲ ಕಾಲ ಅವರು ಹಾಗೆಯೇ ನಡೆದುಕೊಂಡರು ಕೂಡ. ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ ವಿಧಾನಸೌಧದಲ್ಲಿ ಮೊದಲ ಪತ್ರಿಕಾಗೋಷ್ಠಿ ನಡೆಸಿದರು. ಜನರ ಸಂಕಷ್ಟ ಅರಿಯಲು ತಾವು ಕಾರಿನಲ್ಲಿಯೇ ಸಂಚಾರ ಮಾಡುವುದಾಗಿ ಪ್ರಕಟಿಸಿದರು. ಆದರೆ, ಅವರು ತಮ್ಮ ಮಾತು ಉಳಿಸಿಕೊಳ್ಳಲಿಲ್ಲ. ಈಗ ಮುಖ್ಯಮಂತ್ರಿಗಳು ಬೆಂಗಳೂರಿನಿಂದ 30 ಕಿಲೊ ಮೀಟರ್ ದೂರದ ನೆಲಮಂಗಲಕ್ಕೂ ಹೆಲಿಕಾಪ್ಟರ್‌ನಲ್ಲಿಯೇ ಹೋಗಬೇಕು!

ಅಧಿಕಾರ ತರುವ ಆಡಂಬರಕ್ಕೆ ಇದೆಲ್ಲ ಒಂದು ನಿದರ್ಶನ ಎನಿಸುತ್ತದೆ. ಒಬ್ಬ ಶಾಸಕ ಸಚಿವನಾಗುತ್ತಿದ್ದಂತೆಯೇ ಆತನಿಗೆ ಒಂದು ಕಾರು ಸಿದ್ಧವಾಗುತ್ತದೆ. ಹಿಂಗಾವಲು, ಬೆಂಗಾವಲು ಹುಟ್ಟಿಕೊಳ್ಳುತ್ತದೆ. ಅದು ಆತನ ದರ್ಬಾರಿಗೆ ಕಾರಣವಾಗುತ್ತದೆ. ಇದೆಲ್ಲ ಇಲ್ಲ ಎನಿಸಿದಾಗ ಆತ ಚಡಪಡಿಸತೊಡಗುತ್ತಾನೆ. ಹೆಚ್ಚು ಕಾಲ ಅಧಿಕಾರದಲ್ಲಿ ಇಲ್ಲದೆ ಇರಲು ಸಾಧ್ಯವಾಗುವುದಿಲ್ಲ. ಜಗದೀಶ ಶೆಟ್ಟರ್ ಮತ್ತು

ಅವರ ಸ್ನೇಹಿತರು ಒಂದು ವಾರ ಕೂಡ ಅಧಿಕಾರ ಇಲ್ಲದೇ ಇರಲು ಆಗಲಿಲ್ಲ. ಏನೆಲ್ಲ ಗಡಿಬಿಡಿ ಮಾಡಿ ಮಂತ್ರಿ ಆಗಿಯೇ ಬಿಟ್ಟರು. ಆ ಹುದ್ದೆಗೆ ಹಟ, ಈ ಖಾತೆಗೆ ಹಟ ಎಂದೆಲ್ಲ ಪತ್ರಿಕೆಗಳನ್ನು ಬಳಸಿಕೊಂಡು ಒತ್ತಡ ತಂತ್ರಗಳನ್ನು ಹೇರಿದರು. ಮಂತ್ರಿ ಆಗದವರು ದೇವರ ಮುಂದೆ ಉರುಳು ಸೇವೆ, ನಾಯಕರಿಗೆ ಘರಾವೊ ತಂತ್ರ ಅನುಸರಿಸುತ್ತಿದ್ದಾರೆ. ಸಮಾಜವಾದದ ಹಿನ್ನೆಲೆಯಿದ್ದ ದಿ.ಬಂದಗದ್ದೆ ರಮೇಶ್ ಅವರನ್ನು ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಯಾವುದೋ ಒಂದು ಚಿಕ್ಕ ನಿಗಮದ ಅಧ್ಯಕ್ಷರಾಗಿ ನೇಮಕ ಮಾಡಿದ್ದರು. ಹೆಗಡೆ ಅವರು ರಾಜೀನಾಮೆ ಕೊಟ್ಟ ನಂತರ ರಮೇಶ್ ಆ ಹುದ್ದೆಯನ್ನು ಬಿಟ್ಟುಕೊಡಬೇಕಾಯಿತು. ಅದಾದ ನಂತರ ನನಗೆ ಅವರು ಸಿಕ್ಕಿದ್ದರು. ಅಧಿಕಾರ ಇಲ್ಲದೇ ಬದುಕುವುದು ಕಷ್ಟ ಎಂದು ಬೇಸರಿಸಿದ್ದರು. ತುಂಬ ಸರಳ ವ್ಯಕ್ತಿಯಾಗಿದ್ದ, ಸಮಾಜವಾದದ ಭದ್ರ ಹಿನ್ನೆಲೆಯಿಂದ ಬಂದಿದ್ದ ಬಂದಗದ್ದೆಯವರಿಗೇ ಅಂಥ ಒಂದು ಪುಟ್ಟ ಅಧಿಕಾರದ ರುಚಿ ಹತ್ತಿತ್ತು. ಅಧಿಕಾರ ಅನುಭವಿಸಿಯೂ ಸರಳ ಜೀವನಕ್ಕೆ ಮೊರೆ ಹೋದವರು ಇಲ್ಲ ಎಂದು ಅಲ್ಲ. ಅವರ ಸಂಖ್ಯೆ ಕಡಿಮೆ. ನನಗೆ ತಕ್ಷಣಕ್ಕೆ ನೆನಪು ಆಗುತ್ತಿರುವುದು ಪಟೇಲರ ಸರ್ಕಾರದಲ್ಲಿ ಶಿಕ್ಷಣ ಸಚಿವರಾಗಿದ್ದ ಎಚ್.ಜಿ.ಗೋವಿಂದೇಗೌಡರು. ಇನ್ನೊಬ್ಬರು ದೇವರಾಜ ಅರಸು ಸಂಪುಟದಲ್ಲಿ ಸಾರಿಗೆ, ಕಾರ್ಮಿಕ ಮುಂತಾದ ಖಾತೆ ಹೊಂದಿದ್ದ ಆರ್.ಎಸ್.ಪಾಟೀಲರು. ಪಾಟೀಲರು ಅಧಿಕಾರದಲ್ಲಿ ಇದ್ದಾಗ ಸಾಕಷ್ಟು ದುಡ್ಡು ಮಾಡಿದರು ಎಂದು ವಿದ್ಯಾರ್ಥಿಗಳಾಗಿದ್ದ ನಾವು ಅಂದುಕೊಂಡಿದ್ದೆವು. ಆದರೆ, ಆ ಮನುಷ್ಯ ಈಗ ಮುಧೋಳ ಬಸ್ ನಿಲ್ದಾಣದಲ್ಲಿ ಬೆಂಚಿನ ಮೇಲೆ ಕುಳಿತುಕೊಂಡು ತಮ್ಮ ಹಳ್ಳಿಯ ಬಸ್ಸು ಹತ್ತಿ ಹೊರಟು ಹೋಗುತ್ತಾರೆ. ಬೆಂಚಿನ ಮೇಲೆ ಎಡ ತೋಳಿಗೆ ಆಸರೆಯಾಗಿ ಪುಟ್ಟ ಬ್ಯಾಗ್ ಇಟ್ಟುಕೊಂಡು ಅವರ ಕುಳಿತ ದೃಶ್ಯವೂ ಕಣ್ಣ ಮುಂದೆಯೇ ಇದೆ.

ಕ್ಯಾಮರಾನ್ ಅವರ ಸರಳ ನಡತೆಯ ಸುದ್ದಿ ಅತ್ತ ಓದುತ್ತಿದ್ದಂತೆಯೇ ಇತ್ತ ಮುಖ್ಯಮಂತ್ರಿ ಸದಾನಂದಗೌಡರನ್ನು ಅವರ ಅಧಿಕೃತ ನಿವಾಸ 'ಅನುಗ್ರಹ'ದಲ್ಲಿ ಭೇಟಿ ಮಾಡಿ ಗೆಳೆಯನ ಬೈಕ್ ಮೇಲೆ ಒಬ್ಬ ಸಾಮಾನ್ಯ ಕಾರ್ಯಕರ್ತನ ಹಾಗೆ ಹತ್ತಿ ಹೊರಟು ಹೋದ ಈಗ ಸಚಿವರಾಗಿರುವ ಆಗ ಮಾಜಿಯಾಗಿದ್ದ ಸುರೇಶಕುಮಾರ್ ನೆನಪಾದರು. ಮುಖ್ಯಮಂತ್ರಿ ಹುದ್ದೆ ಕಳೆದುಕೊಂಡರೂ ಶಿವಮೊಗ್ಗೆಗೆ ಹೆಲಿಕಾಪ್ಟರ್‌ನಲ್ಲಿಯೇ ಹಾರಿ ಹೋಗಿ ಮುಖ್ಯಮಂತ್ರಿಯಂತೆಯೇ ನಡೆದುಕೊಂಡ ಯಡಿಯೂರಪ್ಪ ಅವರೂ ನೆನಪಾದರು!

14-08-2011

# ಇವರಿಗೆ ಆತ್ಮಹತ್ಯೆ ಬಿಟ್ಟು ಬೇರೆ ಏನು ದಾಲಿ ಇದೆ?..

ಆ ಯುವಕನಿಗೆ 24-25ರ ಹರಯ. ನನ್ನ ಮುಂದೆ ಬಂದು ಕುಳಿತುಕೊಂಡಿದ್ದ. ಬಿಕ್ಕಿ ಬಿಕ್ಕಿ ಅಳುವುದೊಂದು ಬಾಕಿ. ಆತ ಒಂದು ಗ್ರಾಮ ಪಂಚಾಯ್ತಿಯಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ (ಪಿಡಿಓ) ಎಂದು ಕಳೆದ ಒಂದೂವರೆ ವರ್ಷದಿಂದ ಕೆಲಸ ಮಾಡುತ್ತಿದ್ದಾನೆ. ಮೊದಲು ಶಿಕ್ಷಕನಾಗಿದ್ದ. ಅಲ್ಲಿ 10,000 ಸಂಬಳ ಬರುತ್ತಿತ್ತು. ಇಲ್ಲಿ 18,000 ಸಂಬಳ ಎಂದು ಆಸೆಪಟ್ಟ. ಆದರೆ, ಈಗ ಯಾಕಾದರೂ ಶಿಕ್ಷಕ ವೃತ್ತಿ ಬಿಟ್ಟೆ ಎನಿಸತೊಡಗಿದೆ. ಪಂಚಾಯ್ತಿ ಸದಸ್ಯರ ಭ್ರಷ್ಟತನ ನೋಡಿ, ಅನುಭವಿಸಿ ರೋಸಿ ಹೋಗಿದ್ದಾನೆ. ದಿನ ಬೆಳಗಾದರೆ ಯಾವನಾದರೂ ಒಬ್ಬ ಸದಸ್ಯ ಫೋನ್ ಮಾಡುತ್ತಾನೆ. 'ಏನು? ಬಿಲ್ ಹಾಕಿಯೇ ಇಲ್ಲ' ಎನ್ನುತ್ತಾನೆ. ಬಿಲ್ ಹಾಕಲು ತಡ ಮಾಡಿದರೆ ಧಮಕಿ ಹಾಕುತ್ತಾನೆ. ಫೋನ್ ತೆಗೆದುಕೊಂಡರೂ ಭಯ. ತೆಗೆದುಕೊಳ್ಳದಿದ್ದರೂ ಭಯ, ಮನಸ್ಸಿಗೆ ನೆಮ್ಮದಿ ಇಲ್ಲ. ಕಣ್ಣಿಗೆ ನಿದ್ದೆಯೂ ಇಲ್ಲ. 'ಪ್ರತಿ ದಿನ ಎಷ್ಟೆಂದು ಖೊಟ್ಟಿ ಬಿಲ್ ಹಾಕುವುದು? ನಾನು ಇನ್ನೂ ಪ್ರೊಬೇಷನರ್, ನನ್ನ  ನೌಕರಿ ಹೋದರೆ ನನ್ನನ್ನು ನಂಬಿಕೊಂಡವರ ಗತಿ ಏನು?' ಆತ ಕೇಳುತ್ತಿದ್ದ.

ಆತನೇ ತನ್ನ ಕಥೆ ಹೇಳತೊಡಗಿದ: “ಪ್ರತಿ ಪಂಚಾಯ್ತಿಗೆ ಅವುಗಳ ಜನಸಂಖ್ಯೆ, ವ್ಯಾಪ್ತಿ ಆಧರಿಸಿ 50 ಲಕ್ಷದಿಂದ ಒಂದು ಕೋಟಿ ರೂಪಾಯಿ ವರೆಗೆ ಅನುದಾನ ಬರುತ್ತದೆ. ಕುಡಿಯುವ ನೀರು, ರಸ್ತೆ, ಚರಂಡಿ, ಬೀದಿ ದೀಪ, ಸಸಿ ನೆಡುವುದು, ಮನೆ ನಿರ್ಮಾಣ ಹೀಗೆ ಹತ್ತೆಂಟು ಕೆಲಸಗಳಿಗೆ ಹಣ ಖರ್ಚು ಮಾಡಬೇಕು. ಆದರೆ, ಸದಸ್ಯರಿಗೆ ಕೆಲಸ ಬೇಡ, ಬಿಲ್ ಹಾಕಬೇಕು. ಹಣ ಕೊಡಬೇಕು. ಕೆಲಸ ಆಗದೆ ಹೇಗೆ ಹಣ ಕೊಡುವುದು? ಆದರೆ, ಅವರು ಒತ್ತಾಯ ಮಾಡುತ್ತಾರೆ. ಪ್ರತಿ ವರ್ಷ ಸಸಿ ನೆಡುವುದು ಒಂದು ದೊಡ್ಡ ಮೋಸ, ಸಸಿ ನೆಟ್ಟೆವು ಎಂದು ಬಿಲ್ ಹಾಕುತ್ತೇವೆ. ಮರು ವರ್ಷ ಮತ್ತೆ ಸಸಿ ನೆಡುತ್ತೇವೆ. ಹಾಗೆ ನಾವು ನಿಜವಾಗಿಯೂ ಸಸಿ ನೆಟ್ಟಿದ್ದೇ ಆದರೆ, ಕರ್ನಾಟಕದ ತುಂಬ ಗಿಡಗಳೇ ಇರಬೇಕಿತ್ತು! ಸಸಿ ನೆಡುವುದಕ್ಕಿಂತ ಅವುಗಳ ಉಸ್ತುವಾರಿಗೆ ಪ್ರತಿವರ್ಷ ಹೆಚ್ಚು ಹಣ ಖರ್ಚು ಮಾಡುತ್ತೇವೆ. ಅವುಗಳ ಸುತ್ತ ಗುಂಡಿ ತೋಡುವುದು, ನೀರು ಹಾಕುವುದು, ಗೊಬ್ಬರ ಹಾಕುವುದು ಎಂದು 200 ಗಿಡಗಳಿಗೆ ಎರಡು ಲಕ್ಷ ರೂಪಾಯಿಯಂತೆ ಪ್ರತಿ ವರ್ಷ ಖರ್ಚು ಹಾಕುತ್ತೇವೆ. ಗುಡಿಸಲು ನಿವಾಸಿಗಳಿಗೆ ಮನೆ ಎಂಬ ಒಂದು ಯೋಜನೆ ಇದೆ. ಶಾಸಕರು ತಮಗೆ ಬೇಕಾದ ಕಾರ್ಯಕರ್ತರಿಗೆ ಮನೆ ಹಂಚಿ ಎನ್ನುತ್ತಾರೆ. ಪಂಚಾಯ್ತಿ ಸದಸ್ಯರು ಅದೆಲ್ಲ ಬೇಡ. 60,000 ರೂಪಾಯಿಗಳನ್ನು ತೊಟ್ಟಿ ಬಿಲ್ ಹಾಕಿ ನಮಗೇ ಕೊಡಿ ಎನ್ನುತ್ತಾರೆ. ಯಾರೋ ಕಟ್ಟಿದ ಮನೆಯ ಚಿತ್ರವನ್ನು ಇನ್ನಾರೋ ತೆಗೆಸಿ ಮನೆ ಕಟ್ಟಿದ್ದಾಗಿ ತೋರಿಸುತ್ತಾರೆ. ನಾವು ಅದಕ್ಕೆ ಬಿಲ್ ಕೊಡುತ್ತೇವೆ. ಹತ್ತು ಹಲವು ಯೋಜನೆಗಳ ಅಡಿಯಲ್ಲಿ ನಾವು ಹೀಗೆ ಎಷ್ಟು ಮನೆಗಳನ್ನು ಪ್ರತಿ ವರ್ಷ ಕಟ್ಟಿದ್ದೇವೆ ಎಂದರೆ ಕರ್ನಾಟಕದಲ್ಲಿ ಮನೆ ಇಲ್ಲದವರು ಯಾರೂ ಇರಬಾರದಿತ್ತು. ಮತ್ತೆ ಮುಂದಿನ ವರ್ಷವೂ ಹೀಗೆ ನಾವು ಮನೆಗಳಿಗೆ ಹಣ ಕೊಟ್ಟೇ ಕೊಡುತ್ತೇವೆ.

“ರಸ್ತೆ ಬದಿ ಬೆಳೆದ ಗಿಡಗಂಟೆಗಳನ್ನು ಕತ್ತರಿಸಲು ಹಣ ಬಿಡುಗಡೆ ಮಾಡುತ್ತೇವೆ. ಹೀಗೆ ಎಷ್ಟು ಸಾರಿ ಗಿಡಗಂಟಿ ಕತ್ತರಿಸಿದ್ದೇವೆ ಗೊತ್ತಿಲ್ಲ. ಮತ್ತೆ ಮತ್ತೆ ಅದಕ್ಕೆ ಬಿಲ್ ಹಾಕುತ್ತೇವೆ. ಚಿಕ್ಕ ಹಿಡುವಳಿದಾರರ ಹೊಲಗಳಲ್ಲಿ ಕೃಷಿ ಹೊಂಡ ನಿರ್ಮಿಸಿಕೊಡಬೇಕು. ಅಂಥ ಹೊಂಡಗಳನ್ನು ನಾವು ಶಾಸಕರ, ಅವರ ಬೆಂಬಲಿಗರ, ಪಂಚಾಯ್ತಿ ಸದಸ್ಯರ ಹೊಲಗಳಲ್ಲಿ ನಿರ್ಮಿಸುತ್ತೇವೆ. ಯಾರೋ ಚಿಕ್ಕ ಹಿಡುವಳಿದಾರನ ಹೆಸರಿಗೆ ಹೊಂಡವನ್ನು ಬರೆಯುತ್ತೇವೆ. ಯಾರೋ ತಮ್ಮ ಹೊಲದಲ್ಲಿ ಒಡ್ಡು ಕಟ್ಟಿಸಿಕೊಂಡಿರುತ್ತಾರೆ. ನಾವು ಅದೇ ಕೆಲಸಕ್ಕೆ ಗ್ರಾಮೀಣ ಉದ್ಯೋಗ ಯೋಜನೆಯಡಿ ಬಿಲ್ ಹಾಕಿ ಹಣ ತೆಗೆದುಕೊಳ್ಳುತ್ತೇವೆ. ಬೀದಿ ದೀಪ, ಚರಂಡಿ ನಿರ್ಮಾಣ, ರಸ್ತೆ ದುರಸ್ತಿಗೆ ಎಷ್ಟು ಸಾರಿ ಬಿಲ್ ಹಾಕಿದ್ದೇವೆ ಗೊತ್ತಿಲ್ಲ. ನಮ್ಮ ಹಳ್ಳಿಗೆ ನೀವು ಬನ್ನಿ, ರಸ್ತೆ ಹೇಗಿವೆ, ಚರಂಡಿ ಹೇಗಿವೆ ಎಂದು ನೀವೇ ನೋಡುವಿರಂತೆ. ಜನರೂ ವಿಚಿತ್ರ. ನಾವು ಮತ್ತು ಸದಸ್ಯರು ಸೇರಿಕೊಂಡು ಇಷ್ಟೆಲ್ಲ ಹಣ ಲೂಟಿ ಮಾಡುತ್ತಿದ್ದರೂ ಅವರು ಸುಮ್ಮನೇ ಇರುತ್ತಾರೆ. ಹಲವು ಸಾರಿ ಅವರೂ ಸದಸ್ಯರ ಜತೆ ಸೇರಿಕೊಂಡು ನಮಗೇ ಜಬರಿಸುತ್ತಾರೆ. ವರ್ಷದಲ್ಲಿ ಎರಡು ಸಾರಿ ಗ್ರಾಮಸಭೆ ನಡೆಯಬೇಕು. ಅವು ಅಣಕದಂತೆ ನಡೆಯುತ್ತವೆ. ಅಲ್ಲಿ ಬರೀ ಕುಂದು ಕೊರತೆ ಚರ್ಚೆ ನಡೆಯುತ್ತದೆ.

ಸಭೆಯಲ್ಲಿ ಅಭಿವೃದ್ಧಿ ಕೆಲಸ ಕುರಿತು ಯಾವುದೇ ಠರಾವು ಮಾಡುವುದಿಲ್ಲ. ಮುಂದೆ ಕಾಲಾಂತರದಲ್ಲಿ ಕೆಲಸವಾಗುತ್ತ ಹೋದಂತೆ ಅಥವಾ ಬಿಲ್ ಹಾಕುತ್ತ ಹೋದಂತೆ (!) ಆ ಠರಾವು ಪುಸ್ತಕದಲ್ಲಿ ಅವುಗಳನ್ನು ಬರೆಯುತ್ತೇವೆ. ದಾರಿಯಲ್ಲಿ ಹೋಗುವವರನ್ನು ಕರೆದು ಅದಕ್ಕೆ ರುಜು ಮಾಡಿಸಿಕೊಳ್ಳುತ್ತೇವೆ!

“ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ನಮ್ಮ ಜಿಲ್ಲೆಯ ಬ್ಯಾಂಕುಗಳೂ ಶಾಮೀಲಾಗಿವೆ. ತೊಟ್ಟಿ ಜಾಬ್ ಕಾರ್ಡ್ ತಯಾರಿಸಿ ಅವರ ಖಾತೆಗೆ ಹಣ ಜಮಾ ಮಾಡುತ್ತಾರೆ. ಅದರಲ್ಲಿ ಸದಸ್ಯರು ರಾಜಾರೋಷವಾಗಿ ಪಾಲು ಪಡೆಯುತ್ತಾರೆ. ಕೆಲಸಗಳ್ಳರಾಗಿರುವ ಹಳ್ಳಿ ಜನ ಬಂದಷ್ಟು ಬಂತು ಎಂದು ಮನೆಯಲ್ಲಿ ಕುಳಿತೇ 'ಕಮಿಷನ್' ಹಣವನ್ನು ಜೇಬಿಗೆ ಇಳಿಸುತ್ತಾರೆ. ನಮ್ಮ ಪಂಚಾಯ್ತಿಗೆ ಕಂಪ್ಯೂಟರ್ ಬೇಕಾಗಿಲ್ಲ. ಆದರೆ, ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕಂಪ್ಯೂಟರ್ ಕೊಳ್ಳಬೇಕು ಎಂದು ಸೂಚನೆ ಕೊಟ್ಟಿದ್ದಾರೆ. ನಮಗೆ ಅದು ಅಗತ್ಯವಿಲ್ಲದಿದ್ದರೂ, 'ಕಂಪ್ಯೂಟರ್ ಖರೀದಿ ಅಗತ್ಯವಿದೆ. ಅದಕ್ಕಾಗಿ ಅನುಮತಿ ಕೊಡಿ' ಎಂದು ಅವರೇ ಹೇಳಿ ಪತ್ರ ಬರೆಸಿದ್ದಾರೆ. ಮಾರುಕಟ್ಟೆಯಲ್ಲಿ ಕೇವಲ 30,000 ರೂಪಾಯಿಗೆ ಸಿಗುವ ಕಂಪ್ಯೂಟರಿಗೆ 1.05 ಲಕ್ಷ ರೂಪಾಯಿ ಪಾವತಿ ಆಗಿದೆ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಷ್ಟು ಜಾಣರು ಎಂದರೆ ದಾಖಲೆಗಳಲ್ಲಿ ಅವರು ಎಲ್ಲಿಯೂ ಸಿಕ್ಕಿ ಬೀಳುವುದಿಲ್ಲ. ಕಂಪ್ಯೂಟರ್ ಅಗತ್ಯವಿದೆ ಎಂದು ನಾವೇ ಪತ್ರ ಬರೆದಿದ್ದೇವೆ. ಕಂಪ್ಯೂಟರ್‌ಗೆ ನಾವೇ ಹಣ ಪಾವತಿ ಮಾಡಿದ್ದೇವೆ. ಕಮೀಷನ್ ಅವರಿಗೆ ಹೋಗಿದೆ. ನಾಳೆ ಲೆಕ್ಕ ಪತ್ರ ಅಧಿಕಾರಿಗಳು ಬಂದು ತಪಾಸಣೆ ಮಾಡಿದರೆ ನಾವು ಸಿಕ್ಕಿ ಬೀಳುತ್ತೇವೆ. ಅವರು ನಮ್ಮ ಮೇಲೆ ಹಾಕಿ ಬೆಚ್ಚಗೆ ಇರುತ್ತಾರೆ.

“ನಮ್ಮ ಮೇಲಿನ ಅಧಿಕಾರಿಗಳು ತಾಲ್ಲೂಕು ಪಂಚಾಯ್ತಿಗಳಲ್ಲಿ ಕೆಲಸ ಮಾಡುವ ಕಾರ್ಯ ನಿರ್ವಾಹಕ ಅಧಿಕಾರಿಗಳು. ಅವರಿಗೂ ಗ್ರಾಮೀಣ ಅಭಿವೃದ್ಧಿ ಇಲಾಖೆಗೂ ಸಂಬಂಧವಿಲ್ಲ. ಇಲಾಖೆಯ ವೃಂದ ನೇಮಕಾತಿ ನಿಯಮದ ಪ್ರಕಾರ ಅವರು ನೇಮಕ ಆಗಿಲ್ಲ. ಕ್ಲಾಸ್ ಟೂ ದರ್ಜೆ ಉಪನ್ಯಾಸಕರನ್ನು, ಪಶು ವೈದ್ಯಾಧಿಕಾರಿಗಳನ್ನು ಅಥವಾ ಆ ದರ್ಜೆಯವರನ್ನು ಕಾರ್ಯ ನಿರ್ವಾಹಕ ಅಧಿಕಾರಿಗಳಾಗಿ ನೇಮಿಸಲಾಗಿದೆ. ಒಂದು ವರ್ಷದ ಅವಧಿಗೆ ಮಾತ್ರ ಅವರು ಅಲ್ಲಿ ಇರುತ್ತಾರೆ. ಪ್ರತಿ ಸಾರಿ ನೇಮಕ ಆಗುವಾಗ 30 ಲಕ್ಷ ರೂಪಾಯಿಗಳನ್ನು ಆಯಾ ತಾಲ್ಲೂಕಿನ ಶಾಸಕರಿಗೆ ಕೊಡುತ್ತಾರೆ. ಮುಂದಿನ ವರ್ಷ ಮತ್ತೆ 30 ಲಕ್ಷ ಕೊಟ್ಟರೆ ಅಲ್ಲಿ ಇರುತ್ತಾರೆ. ಇಲ್ಲವಾದರೆ ಮಾತೃ ಇಲಾಖೆಗೆ ಹೋಗುತ್ತಾರೆ. ಅವರಿಗೆ ಆ ವರ್ಷದಲ್ಲಿ 30 ಲಕ್ಷ ರೂಪಾಯಿ ವ್ಯವಸ್ಥೆ ಆಗಬೇಕು. ಇಲಾಖೆಯ ನೀತಿ ನಿಯಮ ಏನೇನೂ ಗೊತ್ತಿಲ್ಲ. ಕೆ.ಎ.ಎಸ್ ಅಧಿಕಾರಿಗಳನ್ನು ಈ ಹುದ್ದೆಗಳಿಗೆ ನೇಮಿಸಿದರೆ ಅವರು ಒಂದಿಷ್ಟು ಕಟ್ಟು ನಿಟ್ಟಾಗಿ ಕೆಲಸ ಮಾಡುತ್ತಾರೆ. ಮಾಡಿಯಾರು ಎಂದು ಭರವಸೆ. ಆದರೆ, ಇದು ನಮ್ಮ ಇಲಾಖೆಗೆ ಬೇಡವಾಗಿದೆ. ನಮ್ಮ ಹಾಗೆ ಇಲಾಖೆಗೇ ಪ್ರತ್ಯೇಕ ಸಿಬ್ಬಂದಿ ವೃಂದ ನಿರ್ಮಿಸಿ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ನೇಮಿಸಿದರೂ ತಕ್ಕಮಟ್ಟಿಗೆ ವ್ಯವಸ್ಥೆ ಸರಿ ಹೋಗಬಹುದು. ಅದೂ ಸರ್ಕಾರಕ್ಕೆ ಬೇಡವಾದಂತಿದೆ. ಅಥವಾ ಶಾಸಕರಿಗೆ

ಬೇಡವಾಗಿದೆ. ತಾಲ್ಲೂಕು ಪಂಚಾಯ್ತಿಯಲ್ಲಿ ಒಬ್ಬ ಎಂಜಿನಿಯರ್್ರ ಇರುತ್ತಾರೆ. ಅವರು ಕೆಲಸದ ಸ್ಥಳ ತಪಾಸಣೆ ಮಾಡಿ ಕಾಮಗಾರಿಗೆ ಮಂಜೂರಾತಿ ಕೊಡಬೇಕು. ಕೆಲಸ ಆದ ನಂತರ ತಪಾಸಣೆ ಮಾಡಿ ಹಣ ಬಿಡುಗಡೆಗೆ ಸಹಿ ಹಾಕಬೇಕು. ಅವರು ಒಂದು ಸಾರಿಯೂ ಬರುವುದಿಲ್ಲ. ಅವರ ಬಳಿಗೇ ನಾವು ದಾಖಲೆ ತೆಗೆದುಕೊಂಡು ಹೋಗಬೇಕು. ಕಣ್ಣು ಮುಚ್ಚಿಕೊಂಡು ಸಹಿ ಹಾಕುತ್ತಾರೆ. ತನ್ನ ಪರ್ಸೆಂಟೇಜ್ ತೆಗೆದುಕೊಳ್ಳುತ್ತಾರೆ. ಅವರೇ ಕಣ್ಣು ಮುಚ್ಚಿ ಸಹಿ ಹಾಕುವಾಗ ನಿಮ್ಮದೇನು ಎಂದು ಸದಸ್ಯರು ಮತ್ತೆ ನಮಗೆ ಬೆದರಿಕೆ ಹಾಕುತ್ತಾರೆ.

"ಯಾವ ಪಂಚಾಯ್ತಿಯಲ್ಲಿಯೂ ಶೇ 5ರಷ್ಟು ಅಭಿವೃದ್ಧಿ ಕೆಲಸಗಳು ಆಗಿಲ್ಲ. ಆಗಲು ಸದಸ್ಯರು ಬಿಡುವುದೂ ಇಲ್ಲ. ಭ್ರಷ್ಟಾಚಾರದ ಕೊಂಡಿ ನಮಗೆ ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ವರೆಗೆ ಕಾಣುತ್ತದೆ. ಅದು ಮುಂದೆ ಎಲ್ಲಿಯ ವರೆಗೆ ವಿಸ್ತರಿಸಿದೆ ಎಂದು ಗೊತ್ತಾಗುವುದಿಲ್ಲ. ನಮ್ಮಲ್ಲಿ ಕೆಲವರು ಸದಸ್ಯರು ಹೇಳಿದಂತೆ ಹೊಂದಾಣಿಕೆ ಮಾಡಿಕೊಂಡು ಸುಖವಾಗಿ ಇದ್ದಾರೆ. ಮುಂದೆ ಅವರಿಗೆ ಏನು ಕಾದಿದೆಯೋ ಗೊತ್ತಿಲ್ಲ. ಸರ್ಕಾರ, ಪಂಚಾಯ್ತಿಗಳಲ್ಲಿ ಭ್ರಷ್ಟಾಚಾರ ತಡೆಯಲು ಓಂಬುಡ್ಸ್ಮನ್ ವ್ಯವಸ್ಥೆಯನ್ನೇನೋ ಮಾಡಿದೆ. ಅದೂ ಪರಿಣಾಮಕಾರಿಯಾಗಿದೆ ಎಂದು ಅನಿಸುತ್ತಿಲ್ಲ. ನಮ್ಮ ಕೈಕೆಳಗೆ ಕಾರ್ಯದರ್ಶಿಗಳು ಕೆಲಸ ಮಾಡುತ್ತಾರೆ. ಅವರಿಗೆ ಯಾವ ವೃತ್ತಿಪರತೆಯೂ ಇಲ್ಲ ಎಂಬ ಕಾರಣಕ್ಕಾಗಿಯೇ ನಮ್ಮನ್ನು ನೇಮಕ ಮಾಡಿದರು. ಪರಿಸ್ಥಿತಿಯೇನೂ ಸುಧಾರಿಸಿಲ್ಲ. ಕಾರ್ಯದರ್ಶಿಗಳು ಮತ್ತು ಸದಸ್ಯರು ಸೇರಿಕೊಂಡು ದುಡ್ಡು ಹೊಡೆಯುವ ಹೊಸ ಹೊಸ ಐಡಿಯಾಗಳನ್ನು ನಮಗೆ ಹೇಳಿ ಕೊಡುತ್ತಾರೆ. ತಪ್ಪು ಮಾಡಿ ಸಿಕ್ಕಿ ಬಿದ್ದ ಕಾರ್ಯದರ್ಶಿ ಸಸ್ಪೆಂಡ್ ಆಗಲು ಹೆದರುವುದಿಲ್ಲ. ಎರಡು ಮೂರು ತಿಂಗಳಲ್ಲಿ ಆತ ಮತ್ತೊಂದು ಪಂಚಾಯ್ತಿಗೆ ನೇಮಕ ಆಗುತ್ತಾನೆ. ಮತ್ತೆ ತನ್ನ ಕಾಯಕ ಮುಂದುವರಿಸುತ್ತಾನೆ.

"ನಾವು ಪತ್ರಕರ್ತರಿಗೂ ಹಣ ಕೊಡಬೇಕು. ಪಂಚಾಯ್ತಿ ಮಟ್ಟದಲ್ಲಿ ಪ್ರತಿ ತಿಂಗಳು ಒಬ್ಬ ಪತ್ರಕರ್ತನಿಗೆ 500 ರೂಪಾಯಿ ಕೊಡಲೇಬೇಕು. ಇಲ್ಲವಾದರೆ ಆತ ಮಾಹಿತಿ ಹಕ್ಕು ಕಾಯ್ದೆ ಬಳಸುವ ಬೆದರಿಕೆ ಹಾಕುತ್ತಾನೆ. ನಾವು ಮತ್ತು ಸದಸ್ಯರು ಸೇರಿಕೊಂಡು ಪತ್ರಕರ್ತರನ್ನು ಸಮಾಧಾನ ಮಾಡಿ ಇಡಲೇಬೇಕಾಗುತ್ತದೆ. ಇನ್ನೂ ಸೋಜಿಗ ಗೊತ್ತೇ? ಪ್ರತಿ ತಾಲ್ಲೂಕು ಪಂಚಾಯ್ತಿಯಲ್ಲಿ ಪತ್ರಕರ್ತರಿಗೆ ಹಣ ಕೊಡುವುದಕ್ಕಾಗಿಯೇ ಕೆಲವು ಯೋಜನೆಗಳನ್ನು ರೂಪಿಸುತ್ತಾರೆ. ಪ್ರತಿಯೊಬ್ಬ ಪತ್ರಕರ್ತನಿಗೆ ವರ್ಷಕ್ಕೆ 25,000 ರೂಪಾಯಿ ಸಂದಾಯವಾಗುತ್ತದೆ. ಆ ಯೋಜನೆಗೆ 'ಪತ್ರಕರ್ತರ ಯೋಜನೆ' ಎಂದೇ ಹೆಸರು!

"ನಾವು ಯಾರಿಗೆ ದೂರೋಣ? ನಮ್ಮ ಗೋಳು ಕೇಳುವವರು ಯಾರು? ಇಲ್ಲಿ ಬೇಲಿಯೇ ಎದ್ದು ಹೊಲ ಮೇಯುತ್ತಿದೆ. ಊರಿನ ಅಭಿವೃದ್ಧಿ ಕೆಲಸ ಮಾಡಿಸಬೇಕಾದ ಸದಸ್ಯರಿಗೇ ಆ ಕಾಳಜಿಯಿಲ್ಲ. ಊರಿನ ಜನರಿಗೂ ನಮ್ಮ ಊರು ಅಭಿವೃದ್ಧಿಯಾಗಿಲ್ಲ ಎಂಬ ಚಿಂತೆಯಿಲ್ಲ. ತಾಲ್ಲೂಕಿನ ಕಾರ್ಯ ನಿರ್ವಾಹಕ ಅಧಿಕಾರಿಗಳೋ

ಲಂಚಬಡುಕರು. ಒಂದು ವರ್ಷದಲ್ಲಿ ತಾನು ಶಾಸಕನಿಗೆ ಕೊಟ್ಟ ಲಂಚದ ಹಣ ಕೂಡಿಸಿಕೊಳ್ಳುವುದೇ ಅವನ ಆದ್ಯತೆ. ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಐ.ಎ.ಎಸ್ ಅಧಿಕಾರಿ. ಆತನೂ ಭ್ರಷ್ಟ, ಆದರೆ ಜಾಣ, ತಾನು ಸಿಕ್ಕಿ ಹಾಕಿಕೊಳ್ಳುವುದಿಲ್ಲ. ನಮ್ಮನ್ನು ಸಿಕ್ಕಿಸಿ ಹಾಕಿಸುತ್ತಾನೆ. ಅವನು ಇನ್ನೂ ಅಪಾಯಕಾರಿ, ಪತ್ರಕರ್ತರಿಗೆ ದೂರೋಣ ಎಂದರೆ ಅವರೂ ಪಾಲುದಾರರು. ಆತ್ಮಹತ್ಯೆ ಮಾಡಿಕೊಳ್ಳೋಣ ಅನಿಸುತ್ತದೆ. ಪುಟ್ಟ ಹೆಂಡತಿಯಿದ್ದಾಳೆ. ನನ್ನನ್ನೇ ನಂಬಿ ಬಂದಿದ್ದಾಳೆ. ಮೊನ್ನೆಯಷ್ಟೇ ಮಗಳು ಹುಟ್ಟಿದ್ದಾಳೆ. ಏನು ಮಾಡಲಿ ಸರ್?..."

ಪಂಚಾಯತ್ ರಾಜ್ ವ್ಯವಸ್ಥೆಯನ್ನು 'ದೇಶದಲ್ಲಿಯೇ ಅತ್ಯುತ್ತಮ ಎನ್ನುವಂತೆ ಜಾರಿಗೊಳಿಸಿ' ಪ್ರಧಾನಿಯವರಿಂದ ಬಹುಮಾನ ಪಡೆದಿರುವ ಜಗದೀಶ ಶೆಟ್ಟರ್ ಅವರೇ ಆ ಯುವಕನಿಗೆ ಏನು ಹೇಳಲಿ?

21-08-2011

# ಚೂರು ಚೂರಾದ ಊರಿಗೆ

# ಯಾರು ದೊರೆ?

ಅದು ಒಂದು 'ಯುದ್ಧಭೂಮಿ', ವೈರಿ ಸೈನಿಕರು ಬಂದು ಮನಬಂದಂತೆ ದಾಳಿ ಮಾಡಿದ್ದಾರೆ. ಊರಿನ ಬಹುತೇಕ ಕಟ್ಟಡಗಳ ಮುಂದಿನ ಭಾಗ ಕತ್ತರಿಸಿಕೊಂಡು ಬಿದ್ದಂತೆ ಕಾಣುತ್ತದೆ. ದೊಡ್ಡ ದೊಡ್ಡ ಇಮಾರತುಗಳ ಗತಿಯೂ ಹಾಗೆಯೇ ಆಗಿದೆ. 'ಸಮರ ಟ್ಯಾಂಕ'ಗಳು ಸಂಚರಿಸಿದ್ದರಿಂದ ರಸ್ತೆಯಲ್ಲಿ ಎಲ್ಲೆಂದರಲ್ಲಿ ಭಾರಿ ಗಾತ್ರದ ಹೊಂಡಗಳು ಬಿದ್ದಿವೆ. ಅದರಲ್ಲಿ ನೀರು ತುಂಬಿಕೊಂಡಿದೆ. ಕಸ-ಕೊಚ್ಚೆ ಅದಕ್ಕೆ ಮುತ್ತಿಕೊಂಡ ಹಂದಿಗಳು ಕಂಡ ಕಂಡಲ್ಲಿ ಕಾಣುತ್ತವೆ. ಮುಂದಿನ ಭಾಗ ಕತ್ತರಿಸಿ ಹೋಗಿರುವ ಕಟ್ಟಡಗಳ ಒಳಗೆ ಜನರು ತಡಕಿ ಕಟ್ಟಿಕೊಂಡು ಜೀವನ ಮಾಡುತ್ತಿದ್ದಾರೆ. ಕೆಲವು ಕಟ್ಟಡಗಳಿಗೆ ಬಾಗಿಲು ಇವೆ. ಕೆಲವಕ್ಕೆ ಇಲ್ಲ. ಅವರ ಮನೆಯ ಮುಂದೆಯೇ ದೊಡ್ಡ ರಾಜಕಾಲುವೆ ಇದೆ. ಅದಕ್ಕೆ ಮೇಲೆ ಮುಚ್ಚುಗೆ ಹಾಕಿಲ್ಲ. ಮನೆಯವರು ರಾಜಕಾಲುವೆಯ ಮೇಲೆ ಬಿದಿರ ತಡಿಕೆ ಇಟ್ಟು ಕೈಯಲ್ಲಿ ಜೀವ ಹಿಡಿದುಕೊಂಡು ಈಚೆ ರಸ್ತೆಗೆ ಬರುತ್ತಾರೆ. ಇದು ಒಂದು ರಸ್ತೆಯ ಕಥೆಯಲ್ಲ, ಇಡೀ ಊರಿನಲ್ಲಿ ಇದೇ ದೃಶ್ಯವಿದೆ. ಅದು ಒಂದು ಜಿಲ್ಲಾ ಕೇಂದ್ರ, ಅದರ ಹೆಸರು ರಾಯಚೂರು!

'ನಮ್ಮ ಊರ್ ನೋಡಬರಿ ಸರ' ಎಂದು ರಾಯಚೂರಿನ ಕೆಲವರು ಗೆಳೆಯರು ನನ್ನನ್ನು ಆ ಊರಿನ ಬೀದಿ ಬೀದಿ ಸುತ್ತಿಸಿದರು. ಎರಡು ವರ್ಷಗಳ ಹಿಂದೆ ಇಡೀ ಊರಿನಲ್ಲಿ ಜಿಲ್ಲಾಡಳಿತ ಜೆ.ಸಿ.ಬಿ ಯಂತ್ರಗಳು ಎಂಬ 'ಸಮರ ಟ್ಯಾಂಕರ್'ಗಳನ್ನು ಬಳಸಿ ಅತಿಕ್ರಮಣ ಕಟ್ಟಡಗಳನ್ನು ಒಡೆದು ಹಾಕಿದೆ. ಈಗಲೂ ಊರು ಅಕ್ಷರಶಃ ಯುದ್ಧಭೂಮಿಯ ಹಾಗೆಯೇ ಕಾಣುತ್ತದೆ. ಯಾವ ರಸ್ತೆಯಲ್ಲಿಯೂ ಸುರಕ್ಷಿತವಾಗಿ ಅಡ್ಡಾಡುವ ಸ್ಥಿತಿಯಿಲ್ಲ. ಹೊಂಡಗಳು, ಕೆಸರುಗುಂಡಿಗಳು, ಕಸದ ತೊಟ್ಟಿಗಳು, ತೆರೆದುಕೊಂಡ ಮ್ಯಾನ್‌ಹೋಲ್‌ಗಳು, ಅಲ್ಲಲ್ಲಿ ಗುಪ್ಪೆಯಂತೆ ಬಿದ್ದಿರುವ ಜಲ್ಲಿಕಲ್ಲುಗಳು, ಮರಳು, ಅದು, ಇದು... ಮೋಟಾರ್ ಸೈಕಲ್‌ನ ಹಿಂದಿನ ಸೀಟಿನ ಮೇಲೆ ಕುಳಿತು ಊರಿನಲ್ಲಿ ಒಂದು ಗಂಟೆ ಸುತ್ತಾಡಿದೆ. ಹೊಂಡಗಳನ್ನು ತಪ್ಪಿಸಿ, ದಿನ್ನೆಗಳನ್ನು ಏರಿ ಇಳಿಸಿ, ರಾಜಕಾಲುವೆಯಲ್ಲಿ ಬೀಳದಂತೆ, ಮ್ಯಾನ್ ಹೋಲ್‌ಗಳನ್ನು ಬಳಸಿಕೊಂಡು, ಮಳೆಯ ರಾಡಿ ನೀರು ಮುಖಕ್ಕೆ ರಾಚದಂತೆ ವಾಹನ ಓಡಿಸಿದ ಹುಡುಗನ ಚಾಕಚಕ್ಯತೆ ನೋಡಿ ಬೆಚ್ಚಿ ಬಿದ್ದೆ. ಪ್ರಾಣ ಬಾಯಿಗೆ ಬಂದಿತ್ತು. ಇದೂ ಒಂದು ಊರೇ?... ನಮ್ಮ ಜನರಿಗೆ ಎಷ್ಟೊಂದು ಸಹನೆ ಎಂದುಕೊಂಡೆ.

ನಿಜ, ಎಲ್ಲ ಊರುಗಳಲ್ಲಿ ಆದ ಹಾಗೆ ರಾಯಚೂರಿನಲ್ಲಿಯೂ ನಗರದ ಹೃದಯ ಭಾಗದಲ್ಲಿ ಅತಿಕ್ರಮಣ ಆಗಿತ್ತು. ರಾಜಕಾಲುವೆಯ ಮೇಲೆಯೇ ಜನರು ಮನೆ ಕಟ್ಟಿಕೊಂಡಿದ್ದರು. ಊರಿನಲ್ಲಿ ದ್ವಿಚಕ್ರ ವಾಹನಗಳಲ್ಲಿಯೂ ಅಡ್ಡಾಡಲು ಆಗದಷ್ಟು ರಸ್ತೆಗಳು ಇಕ್ಕಟ್ಟಾಗಿದ್ದುವು. ಪಕ್ಕದ ಬೀದರ್, ಗುಲ್ಬರ್ಗಗಳಲ್ಲಿ ರಸ್ತೆ ಅತಿಕ್ರಮಣದ ತೆರವು ಸುದ್ದಿ ಇಲ್ಲಿನ ಜನರ ಕಿವಿಗೂ ಬಿದ್ದಿತ್ತು. ಅಲ್ಲಿಯ ಹಾಗೆ ಇಲ್ಲಿಯೂ ಅತಿಕ್ರಮಣ ತೆರವು ಮಾಡಬೇಕು ಎಂದು ಒತ್ತಾಯವೂ ಇತ್ತು. ಅಷ್ಟೇ ಸಾಕಾಗಿತ್ತು. ಜಿಲ್ಲಾಡಳಿತ ಜೆ.ಸಿ.ಬಿ ಯಂತ್ರಗಳ ಮೂಲಕ ಮಾತನಾಡಿತು. ಮೊದಲು ಬಡವರ ಮನೆಗಳು ಅರ್ಧಕರ್ಧ ನೆಲಸಮ ಆದುವು. ಕೆಲವು ದೊಡ್ಡ ಇಮಾರತುಗಳನ್ನೂ ಒಡೆದು ಹಾಕಿದರು. ಒಡೆದು ಹಾಕುವುದರ ಜತೆಗೆ ರಸ್ತೆ ವಿಸ್ತರಣೆ ಹಾಗೂ ದುರಸ್ತಿ ಕೆಲಸವೂ ಏಕಕಾಲದಲ್ಲಿಯೇ ನಡೆಯಬೇಕಿತ್ತು. ಆದರೆ ಹಾಗೆ ಆಗಲಿಲ್ಲ. ಜಿಲ್ಲಾಡಳಿತಕ್ಕೆ ಎಂಥ ವಿಧ್ವಂಸಕ ಮನಸ್ಸು ಇತ್ತು ಎಂದರೆ ಜೆ.ಸಿ.ಬಿ ಯಂತ್ರಗಳನ್ನು ಓಡಿಸಿಕೊಂಡು ಹೋಗುವಾಗ ತಮ್ಮಿಂದ ಎಷ್ಟರ ಮಟ್ಟಿನ ದುರಸ್ತಿ ಕೆಲಸ ಆಗಬಹುದು ಎಂದು ಅಂದಾಜು ಕೂಡ ಮಾಡಿಕೊಂಡಂತೆ ಕಾಣಲಿಲ್ಲ. ಗದ್ವಾಲ್ ಮತ್ತು ಬಂಗಿಕುಂಟ ರಸ್ತೆಗಳಿಗೆ ಹೋಗಿ ನೋಡಿದರೆ ಅಧಿಕಾರಿಗಳ ಮನಃಸಿತಿ ಎಂಥದು ಎಂದು ಗೊತ್ತಾಗುತ್ತದೆ.

ಬಡವರ ಪುಟ್ಟ ಪುಟ್ಟ ಮನೆಗಳ ಮುಂದೆ ದೊಡ್ಡ ರಾಜಕಾಲುವೆ ಬಾಯಿ ತೆರೆದುಕೊಂಡು ನಿಂತಿದೆ. ಆಚೆ ಮನೆ ಇದೆ. ಈಚೆ ರಸ್ತೆ ಇದೆ. ತೆರೆದ ರಾಜಕಾಲುವೆಗಳಲ್ಲಿ ನೀರು, ಕೊಳಚೆ, ಕಕ್ಕಸು ಎಲ್ಲ ಹರಿದು ಹೋಗುತ್ತದೆ. ಅದರ ಅಂಚಿನಲ್ಲಿಯೇ ಜನರು ಜೀವನ ಮಾಡಬೇಕು. ಅವರು ಮನೆಗಳಲ್ಲಿ ಹೇಗೆ ಊಟ ಮಾಡುತ್ತಾರೋ, ತೆರೆದ ಚರಂಡಿಗಳಲ್ಲಿ ಹುಟ್ಟಿಕೊಂಡು ರಾತ್ರಿಯೆಲ್ಲ ಆಕ್ರಮಿಸುವ ಸೊಳ್ಳೆಗಳ ಕಾಟದ ನಡುವೆ ಹೇಗೆ ಮಲಗುತ್ತಾರೋ ಗೊತ್ತಿಲ್ಲ. ಕಾಲುವೆಗಳಲ್ಲಿ

ಬೀಳದಂತೆ ಮಕ್ಕಳು ಮರಿಗಳನ್ನು ಸಂಭಾಳಿಸುವುದು ಇನ್ನೂ ಕಷ್ಟ. ನಗರದಲ್ಲಿ ರಾಜಕಾಲುವೆ ಕೆಲಸದ ಜತೆಗೆ ಒಳಚರಂಡಿ ನಿರ್ಮಾಣ ಕಾಮಗಾರಿಯೂ ನಡೆದಿದೆ. ಕಟ್ಟಡಗಳನ್ನು ಕೆಡವಿ, ದುರಸ್ತಿಗಾಗಿ ರಸ್ತೆಗಳನ್ನು ಬೇಕಾಬಿಟ್ಟಿ ಅಗೆದು ಹಾಕಿರುವುದರಿಂದ ಒಳಚರಂಡಿ ಮತ್ತು ಕುಡಿಯುವ ನೀರಿನ ಕೊಳವೆಗಳು ಒಡೆದು ಆ ರಾಡಿ ನೀರು ಈ ಕುಡಿಯುವ ನೀರಿಗೆ ಹಲವು ಸಾರಿ ಸೇರಿಕೊಂಡಿದೆ. ಕುಡಿಯುವ ನೀರಿನ ಜತೆಗೆ ಹರಿದು ಬಂದ ಕೊಳಕು ನೀರನ್ನು ಜನರು ಬಾಟಲಿಗಳಲ್ಲಿ ತುಂಬಿಕೊಂಡು ಹೋಗಿ ನಗರಸಭೆಗೆ ಕೊಟ್ಟಿದ್ದಾರೆ. ಅವರು ನಕ್ಕು ಸುಮ್ಮನಾಗಿದ್ದಾರೆ! ಒಳಚರಂಡಿ ವ್ಯವಸ್ಥೆ ಇನ್ನೂ ನೆನೆಗುದಿಗೆ ಬಿದ್ದಿರುವುದರಿಂದ ನಗರದಲ್ಲಿ ಇನ್ನೂ ಹಳೆಯ ಗುಂಡಿ ಮಾದರಿಯ ಕಕ್ಕಸುಗಳೇ ಇವೆ. ಆ ಕಕ್ಕಸುಗಳಲ್ಲಿ ತುಂಬಿದ ಮಲವನ್ನು ಸಾಗಿಸಲು ಭಂಗಿ ಪದ್ಧತಿಯೂ ಜೀವಂತವಾಗಿದೆ. ಮೊದಲೇ ಆ ಊರಿನಲ್ಲಿ ಸಾರ್ವಜನಿಕ ಶೌಚಾಲಯಗಳು ಇರಲಿಲ್ಲವೋ ಅಥವಾ ಇದ್ದುವನ್ನು ಒಡೆದು ಹಾಕಿದರೋ ಮೂರು ಲಕ್ಷ ಜನಸಂಖ್ಯೆಗೆ ಈಗ ಒಂದೇ ಒಂದು ಶೌಚಾಲಯ ಇದೆ. ಅದಕ್ಕಾಗಿಯೇ ಊರಿನಲ್ಲಿ ಎಲ್ಲೆಂದರಲ್ಲಿ ಜನ ಗೋಡೆ ಕಡೆ ಮುಖ ಮಾಡಿ ನಿಂತಿರುತ್ತಾರೆ. ಗಂಡಸರೇನೋ ಮೂರೂ ಬಿಟ್ಟವರ ಹಾಗೆ ಎಲ್ಲಿ ಬೇಕಾದರೂ ಹಗುರ ಆಗಬಹುದು. ಹೆಣ್ಣು ಮಕ್ಕಳಿಗೂ ನಿಸರ್ಗ ಬಾಧೆ ಇರುತ್ತದೆ ಎಂದು ನಾವು ಎಲ್ಲಿ ಯೋಚಿಸಿದ್ದೇವೆ? ಅವರು ಏನು ಮಾಡಬೇಕು?

ರಾಜ್ಯ ಸರ್ಕಾರ ರಾಯಚೂರು ನಗರದಲ್ಲಿ ಚತುಷ್ಪಥ ರಸ್ತೆ ನಿರ್ಮಾಣವೂ ಸೇರಿದಂತೆ ಅತಿಕ್ರಮಣ ತೆರವು, ರಾಜಕಾಲುವೆ ನಿರ್ಮಾಣ ಇತ್ಯಾದಿ ಕೆಲಸಕ್ಕೆ 56.5 ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿದೆ. ಅದರಲ್ಲಿ 30 ಕೋಟಿ ರೂಪಾಯಿ ಹಣ ಜಿಲ್ಲಾಧಿಕಾರಿಗಳ ಬಳಿ ಇದೆ. ಆದರೆ, ಅವರು ಇಂಥ ಬೃಹತ್ ಕಾಮಗಾರಿಯನ್ನು ನಿರ್ವಹಿಸಲು ಸಮರ್ಥ ಮೂಲಸೌಕರ್ಯ ಇಲ್ಲದ ನಿರ್ಮಿತಿ ಕೇಂದ್ರಕ್ಕೆ ಕೆಲಸ ವಹಿಸಿಕೊಟ್ಟಿದ್ದಾರೆ. ಅಲ್ಲಿ ಆ ಕೆಲಸ ಹೇಗೆ ಸಾಗಿದೆ ಎಂದು ನೋಡಬೇಕಾದರೆ ಅಲ್ಲಿಗೇ ಹೋಗಬೇಕು. ಜಿಲ್ಲಾಧಿಕಾರಿಗಳನ್ನು ಕೇಳಿದರೆ, 'ಏನು ಮಾಡುವುದು, ರಸ್ತೆ ಕೆಲಸ ಮಾಡುವಾಗಲೇ ಜಿಲ್ಲೆಯಲ್ಲಿ ಮಳೆ ಬಿತ್ತು, ಪ್ರವಾಹ ಬಂತು. ಆ ಕಡೆ ಗಮನ ಕೊಡಬೇಕಾಯಿತು. ನಿರ್ಮಿತಿ ಕೇಂದ್ರದವರಿಗೆ ಹೇಳಿದ್ದೇವೆ. ಮಾಡುತ್ತಾರೆ' ಎಂದು ತೀನಿ ಚಾರಿ ಹೇಳುತ್ತಾರೆ. ಇಡೀ ಊರು ಹೀಗೆ ಹಾಳು ಸುರಿಯುತ್ತಿರುವಾಗಲೂ ಊರಿನ ಕೆರೆಯ ದಂಡೆಯಲ್ಲಿ ಒಂದು ಉದ್ಯಾನ ಮಾಡಿದ್ದಾರೆ. ಅಲ್ಲಿ ಬೋಟಿಂಗ್‌ಗೆ ವ್ಯವಸ್ಥೆಯಾಗಿದೆ. ಕೋಟೆ ಕೊಳ್ಳೆಯಾದ ಮೇಲೆ ದಿಡ್ಡಿ ಬಾಗಿಲು ಹಾಕಿದರು ಎನ್ನುವಂತೆ ರಾಯಚೂರಿನ ಕೋಟೆ ಪ್ರದೇಶ ಅಭಿವೃದ್ಧಿಗೆ ಸರ್ಕಾರ ಒಂದು ಕೋಟಿ ಬಿಡುಗಡೆ ಮಾಡಿದೆ. ಇವೆಲ್ಲ ಒಂದಕ್ಕೊಂದು ಸಂಬಂಧವಿಲ್ಲದ ವಿದ್ಯಮಾನಗಳು, ಅಥವಾ ರಾಜ್ಯದ ಅಭಿವೃದ್ಧಿಯ ಗತಿಯ ವಿಪರ್ಯಾಸದ ಚಿತ್ರವೂ ಇದಾಗಿರಬಹುದು!

ರಾಯಚೂರಿನಲ್ಲಿ ಅತಿಕ್ರಮಣ ತೆರವು ಮಾಡುವುದಕ್ಕಿಂತ ಮುಂಚೆ ಇಲ್ಲಿನ ನಗರಸಭೆಯ ಅಧಿಕಾರಿಗಳು ಗುಲ್ಬರ್ಗ, ಬೀದರ್‌ಗೆ ಹೋಗಿದ್ದರು. ಅಲ್ಲಿ

ತರಬೇತಿಯನ್ನೂ ಪಡೆದು ಬಂದಿದ್ದರು! ಬೀದರ್‌ನಲ್ಲಿ ಹರ್ಷ ಗುಪ್ತ ಜಿಲ್ಲಾಧಿಕಾರಿ ಆಗಿದ್ದಾಗ ಅಲ್ಲಿ ಇದೇ ರೀತಿ ಅತಿಕ್ರಮಣ ತೆರವು ಕಾರ್ಯಾಚರಣೆ ಮಾಡಿದ್ದರು. ಎರಡು ವರ್ಷಗಳಲ್ಲಿ ಅವರು ತೆರವು ಕಾರ್ಯಾಚರಣೆ ಜತೆಗೆ ಅಭಿವೃದ್ಧಿ ಕಾರ್ಯವನ್ನೂ ಮುಗಿಸಿದರು. ಈಗ ಬೀದರ್ ನಗರ ಮಾತ್ರವಲ್ಲ ಇಡೀ ಬೀದರ್ ಜಿಲ್ಲೆಯ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ತೆರವು ಕಾರ್ಯಾಚರಣೆ ಜತೆಗೆ ರಸ್ತೆ ಅಭಿವೃದ್ಧಿ ಕೆಲಸವೂ ಸಂಪೂರ್ಣ ಆಗಿದೆ. ಬರೀ ತೆರವು ಕೆಲಸ ಮಾತ್ರ ಮಾಡಿದರೆ ಊರಿನ ಅಂದಗೆಡುತ್ತದೆ, ಊರು ರಣಾಂಗಣದಂತೆ ಹಾಳು ಸುರಿಯುತ್ತದೆ ಎಂಬುದು ಹರ್ಷ ಗುಪ್ತ ಅವರಿಗೆ ಗೊತ್ತಿತ್ತು. ತಮ್ಮ ಬಳಿ ಎಷ್ಟು ಹಣ ಇದೆ ಎಂಬುದರ ಜತೆಗೆ ನಾಳೆ ಎಷ್ಟು ಹಣ ಬರಬಹುದು ಎಂದೂ ಅವರಿಗೆ ಅಂದಾಜು ಇತ್ತು. ನಾಳೆ ಬರುವ ಹಣವನ್ನು ನಂತರ ಕೊಡುತ್ತೇನೆ ಎಂದು ಗುತ್ತಿಗೆದಾರರಿಗೆ ಹೇಳಿ ಕೆಲಸ ಮಾಡಿಸಿದರು; ಹಣವನ್ನೂ ಪಾವತಿ ಮಾಡಿದರು. ಪ್ರಭಾವಿಯೊಬ್ಬರು ನ್ಯಾಯಾಲಯದಿಂದ ತಂದಿದ್ದ ತಡೆಯಾಜ್ಞೆ ತೆರವಾಗುತ್ತಿದ್ದಂತೆಯೇ ಒಂದೇ ರಾತ್ರಿಯಲ್ಲಿ ಇಡೀ ರಸ್ತೆ ಸಿದ್ಧವಾಗಿ ಬಿಟ್ಟಿತ್ತು. ಅದು ಬೀದರ್‌ನ ಇತಿಹಾಸದಲ್ಲಿ ಒಂದು ದಾಖಲೆ, ರಾಯಚೂರಿನ ಜಿಲ್ಲಾಧಿಕಾರಿಗಳು ನಾಳೆ ಬರುವ ಹಣ ಹೋಗಲಿ ಇಂದು ತಮ್ಮ ಬಳಿ ಇರುವ ಹಣವನ್ನು ಹೇಗೆ ಖರ್ಚು ಮಾಡಬೇಕು ಎಂದೂ ಒಂದು ಲೆಕ್ಕ ಹಾಕಿಕೊಂಡಿಲ್ಲ; ಯೋಜನೆ ರೂಪಿಸಿಕೊಂಡಿಲ್ಲ. ನಗರಸಭೆ ಅಧಿಕಾರಿಗಳು ಬೀದರ್‌ಗೆ ಹೋಗಿ ಏನು ತರಬೇತಿ ಪಡೆದುಕೊಂಡು ಬಂದರೋ ದೇವರೇ ಬಲ್ಲ!

ರಾಯಚೂರು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. “ಏನು ಮಾಡಲಿ? ನಾನೂ ಅಣ್ಣಾ ಹಜಾರೆ ಹಾಗೆ ಉಪವಾಸ ಕೂಡಲು ಸಾಧ್ಯವೇ? ಎಂದು ಅವರು ಜನರಿಗೇ ಪ್ರಶ್ನೆ ಹಾಕುತ್ತಾರೆ. ಕಳೆದ ಮೂರು ವರ್ಷಗಳಲ್ಲಿ ರಾಯಚೂರು ಜಿಲ್ಲೆಗೆ ಮೂವರು ಉಸ್ತುವಾರಿ ಮಂತ್ರಿಗಳು ನೇಮಕ ಆಗಿದ್ದರು. ಸಿ.ಎಂ.ಉದಾಸಿ, ಆನಂದ್ ಆಸ್ನೋಟಿಕರ್ ಮತ್ತು ಬಿ.ಶ್ರೀರಾಮುಲು ತಮ್ಮ ಅವಧಿಯಲ್ಲಿ ಒಂದು ಗಂಟೆಯೋ, ಅರ್ಧ ಗಂಟೆಯೋ ರಾಯಚೂರಿಗೆ ಬಂದು ಅಭಿವೃದ್ಧಿ ಕೆಲಸ ಪರಿಶೀಲಿಸಿ ಹೊರಟು ಹೋದರು. ರಾಜಕೀಯ ಏರಿಳಿತ ಆಗಿ ಉಸ್ತುವಾರಿ ಸಚಿವರೇ ಇಲ್ಲದ ಒಂದು ಸಂದರ್ಭದಲ್ಲಿ ನಗರಾಭಿವೃದ್ಧಿ ಸಚಿವ ಸುರೇಶಕುಮಾರ್ ಒಂದು ದಿನ ಬಂದು ಝುಂಡಾ ಹಾರಿಸಿ ಹೊರಟು ಹೋದರು. ಹೀಗೆ ಬಂದು ಹಾಗೆ ಹೋಗುವ ಸಚಿವರಿಗೆ ದೂರಿದರೆ ಅದು ಅವರ ಕಿವಿ ಮೇಲೆ ಎಲ್ಲಿ ಬೀಳುತ್ತದೆ?

ಜನರು, ಕೆಲಸ ಮಾಡಿದವರನ್ನು ನೆನಪು ಇಡುತ್ತಾರೆ. ಮಾಡದವರಿಗೆ ಶಾಪ ಹಾಕುತ್ತಾರೆ. ಹರ್ಷ ಗುಪ್ತ ಎರಡು ವಾರಗಳ ಹಿಂದೆ ಬೀದರಿಗೆ ಮತ್ತೆ ಬಂದಿದ್ದರು. ಅವರನ್ನು ಸ್ವಾಗತಿಸಲು ಊರಿನ ಜನರು ಗಡಿಯ ವರೆಗೆ ಹೋಗಿದ್ದರು. ರಸ್ತೆಯಲ್ಲಿ ಹೂವು ಚೆಲ್ಲಿದರು. ಬ್ಯಾಂಡು ಬಾಜಾ ಊದಿಸಿದರು. ಬೀದರ್‌ನಲ್ಲಿ ಎರಡು ದಿನ ಇದ್ದ ಹರ್ಷ ಗುಪ್ತ ಅವರಿಗೆ ಕತ್ತು ಬಾಗುವ ವರೆಗೆ ಹಾರ ಹಾಕಿದರು. ಶಾಲು ಹೊದಿಸಿದರು. ಅವರು ಸಂಚರಿಸುವ ರಸ್ತೆಯಲ್ಲಿ ಅವರ ಕಟೌಟ್ ನಿಲ್ಲಿಸಿದ್ದರು.

ರಾಯಚೂರಿನ ಈಗಿನ ಜಿಲ್ಲಾಧಿಕಾರಿ ವರ್ಗವಾಗಿ ಹೋದರೆ ಸಾಕು ಎಂದು ಜನರು ಬಯಸುತ್ತಿರಬಹುದು. ಆದರೆ, ಅದನ್ನಾದರೂ ಯಾರಿಗೆ ಹೇಳುವುದು? ಒಂದು ಕಾಲದಲ್ಲಿ ವಿಜಯನಗರ, ಬಹಮನಿ ಮತ್ತು ಆದಿಲ್‌ಶಾಹಿ ಅರಸರು ಚಿನ್ನದ ನಾಡು ರಾಯಚೂರಿನ ಮೇಲೆ ಪ್ರಭುತ್ವ ಸಾಧಿಸಲು ಕಾದಾಡಿದ್ದರು. ಈಗ ಅದೇ ರಾಯಚೂರು ಯಾರಿಗೂ ಬೇಡವಾದಂತಿದೆ. ಏನು ಮಾಡುವುದು?

28-08-2011

# ಈ ಜೀವನ ಮತ್ತೆ

# ಸಿಗುವುದಿಲ್ಲ...

ಹುಡುಗಿ ಹುಡುಗ ಜತೆಯಾಗಿ ನಡೆದು ಹೊರಟಿದ್ದಾರೆ. ಇಬ್ಬರ ನಡುವೆ ಒಂದು ಬಗೆಯ ಬೆಚ್ಚನೆಯ ಗಾಳಿ ಬೀಸುತ್ತಿದೆ. ಮುಂದೆ ಏನು ಮಾಡುತ್ತೀ' ಹುಡುಗಿ ಉಲಿದಳು. *40 ವರ್ಷ ಆಗುವ ವರೆಗೆ ಕೆಲಸ ಮಾಡುತ್ತೇನೆ. ಹಣ ಗಳಿಸುತ್ತೇನೆ. ನಂತರ ಸುಖವಾಗಿ ಅಡುಗೆ ಮಾಡಿಕೊಂಡು ಇರುತ್ತೇನೆ' ಎಂದ ಹುಡುಗ. 'ನೀನು 40 ವರ್ಷ ಬದುಕದೇ ಇದ್ದರೆ? ಇವೊತ್ತಿಗಾಗಿ ಏನು ಯೋಚನೆ ಮಾಡಿದ್ದೀ' ಮತ್ತೆ ಅದೇ ಮೃದುವಾದ ಧ್ವನಿಯಲ್ಲಿ ಹುಡುಗಿಯ ಪ್ರಶ್ನೆ ತೇಲಿ ಬಂತು. ಹುಡುಗ ಒಂದು ಕ್ಷಣ ಬೆಚ್ಚಿ ಬಿದ್ದ. ಆ ಪ್ರಶ್ನೆಯನ್ನು ಆತ ಎಂದೂ ಎದುರಿಸಿರಲಿಲ್ಲ. ತಾನೂ ಆ ಪ್ರಶ್ನೆಯನ್ನು ಹಾಕಿಕೊಂಡಿರಲಿಲ್ಲ. ಸದ್ಯದ ಜೀವನವನ್ನು ಹೇಗೆ ಬಾಳುವುದು? ಅದಕ್ಕೆ ಅರ್ಥ ಹೇಗೆ ತುಂಬುವುದು? 'ಜಿಂದಗಿ ನಹಿ ಮಿಲೇಗಿ ದೊಬಾರಾ' ಚಿತ್ರದ ವಸ್ತು ಸದ್ಯದ ಬದುಕು. ನಾಳೆಯ ಜೀವನ ಇದೆಯೋ ಇಲ್ಲವೋ ಗೊತ್ತಿಲ್ಲ. ಇನ್ನೊಂದು ಜೀವನ ಇದೆ ಎಂದು ನಂಬಲೂ ಸಾಧ್ಯವಿಲ್ಲ. ಈ ಜೀವನ ಮತ್ತೆ ಬರಲಾರದು ಎಂದೇ ನಾವು ಇಂದು ಬದುಕಬೇಕು. ಇದು ಚಿತ್ರದ ಆಶಯ.

ಸಿನಿಮಾ ನೋಡದೆ ಎಷ್ಟೋ ದಿನಗಳಾಗಿತ್ತು. ಗೆಳೆಯರು ಹೇಳಿದರು ಎಂದು 'ಜಿಂದಗಿ ನಹಿ ಮಿಲೇಗಿ...' ನೋಡಲು ಹೋದೆ. ಚಿತ್ರ ಆಳವಾಗಿ ಮನಸ್ಸನ್ನು ಕಲಕಿತು. ಹಿಂದಿಯ ಪ್ರಖ್ಯಾತ ಗೀತ ರಚನಕಾರ ಜಾವೇದ್ ಅಖರ್ ಅವರ ಮಗಳು ರೋಯಾ ಅಖರ್ ನಿರ್ದೇಶನದ ಚಿತ್ರವಿದು. ಆಕೆಯ ಮೊದಲ ಚಿತ್ರ ಕೂಡ ಹೌದು. ಚಿತ್ರದಲ್ಲಿ ಅವಳ ಸೋದರ ಫರಾನ್ ಅಖರ್, ಹೃತಿಕ್ ರೋಷನ್, ಅಭಯ್ ಡಿಯೊಲ್ ಮತ್ತು ಬೆಡಗಿ ಕತ್ರಿನಾ ಕೈಫ್ ಮುಖ್ಯ ಪಾತ್ರಗಳಲ್ಲಿ ನಟಿಸಿದ್ದಾರೆ.

ಫರ್ಹಾನ್, ಹೃತಿಕ್, ಅಭಯ್ ಬಾಲ್ಯ ಸ್ನೇಹಿತರು. ದೊಡ್ಡವರಾದ ಮೇಲೆ ಮೂವರೂ ಎಲ್ಲೆಲ್ಲಿ ನೆಲೆಸಿದ್ದಾರೆ. ಶ್ರೀಮಂತನಾದ ಅಭಯ್‌ಗೆ ಇನ್ನೇನು ಮದುವೆಯಾಗಬೇಕು. ಫರ್ಹಾನ್ ಜಾಹೀರಾತು ಲೇಖಕ. ಸ್ಟಾಕ್ ಬ್ರೋಕರ್ ಆಗಿ ಲಂಡನ್‌ನಲ್ಲಿ ನೆಲೆಸಿರುವ ಹೃತಿಕ್‌ಗೆ ಒಂದು ಕ್ಷಣವೂ ಬಿಡುವಿಲ್ಲ. ಆ ಕಿವಿಯಲ್ಲಿ ಒಂದು ಈ ಕಿವಿಯಲ್ಲಿ ಇನ್ನೊಂದು ಮೊಬೈಲ್ ಇಟ್ಟುಕೊಂಡು ಯಾವ ಷೇರಿನಲ್ಲಿ ಎಷ್ಟು ಹಣ ತೊಡಗಿಸಬೇಕು ಎಂದು ಸಲಹೆ ಕೊಡುವುದರಲ್ಲಿಯೇ ಆತನ ದಿನ ಕಳೆದು ಹೋಗುತ್ತದೆ. ಇಂದಿನ ಕಾರ್ಪೊರೇಟ್ ಜಗತ್ತಿನ ಪ್ರತೀಕ ಆತ. ದುಡ್ಡಿನ ಮೋಹದ ಹೃತಿಕ್‌ನನ್ನು 'ಬ್ರಹ್ಮಚಾರಿ ಪಾರ್ಟಿ'ಗೆ ಒಪ್ಪಿಸಲು ಅಭಯ್, ಫರ್ಹಾನ್ ಗೆ ಸಾಕು ಸಾಕಾಗಿ ಹೋಗುತ್ತದೆ. ಮೂವರೂ ಗೆಳೆಯರು ಸೇರಿಕೊಂಡು ಪಾರ್ಟಿ ಮಾಡಲು ಸ್ಪೇನ್ ರಾಜಧಾನಿ ಬಾರ್ಸಿಲೋನಾಕ್ಕೆ ಪ್ರಯಣ ಬೆಳೆಸುತ್ತಾರೆ. ಮೂವರಿಗೂ ಒಂದೊಂದು ಅಭದ್ರತೆ. ಭಯ. ಭಾವನಾತ್ಮಕ ಬಿಕ್ಕಟ್ಟುಗಳು. ತಮ್ಮನ್ನು ಕಾಡುವ 'ಭೂತ'ವನ್ನು ಮೀರಿ ಹೊಸ ಉಮೇದಿನೊಡನೆ ಜೀವಿಸುವುದನ್ನು ಈ ಪ್ರವಾಸ ಅವರಿಗೆ ಕಲಿಸುತ್ತದೆ.

ಸಮುದ್ರದ ಆಳದಲ್ಲಿ, ಆಕಾಶದ ಎತ್ತರದಲ್ಲಿ, ಸಾವಿನ ಹಾಗೆ ಬೆನ್ನಟ್ಟಿ ಬರುವ ಗೂಳಿಯ ಓಟದಲ್ಲಿ ಮೂವರೂ ಗೆಳೆಯರು ಹೊಸ ಮನುಷ್ಯರಾಗುತ್ತಾರೆ. ಮೂವರೂ ಗೆಳೆಯರಿಗೆ ಒಂದೊಂದು ಆಸೆ. ಒಬ್ಬೊಬ್ಬ ಗೆಳೆಯನ ಆಸೆಯ ಜತೆಗೆ ಉಳಿದ ಇಬ್ಬರು ಇಷ್ಟವಿರಲಿ ಇಲ್ಲದಿರಲಿ ಸಹಕರಿಸಬೇಕು. ಅಭಯ್‌ಗೆ ಆಳದ ಸಮುದ್ರದ ಜೀವ ಸಂಪತ್ತನ್ನು ಕಣ್ಣಾರೆ ಕಾಣಬೇಕು ಎಂದು ಬಯಕೆ. ಹೃತಿಕ್‌ಗೆ ನೀರು ಎಂದರೆ ಪ್ರಾಣ ಭಯ. ಜೀವವಾಯು ಇಲ್ಲದೆ ಸಮುದ್ರದ ಆಳದಲ್ಲಿ ಇಳಿಯುವುದು ಹೇಗೆ? ಈಜಾಡುವುದು ಹೇಗೆ ಎಂದು ಚಿಂತೆ. ಅವನ ಕೈ ಹಿಡಿದು ಆಳದ ಸಮುದ್ರದಲ್ಲಿ ಈಜಾಡಲು ನೆರವಾಗುತ್ತಾಳೆ ಕತ್ರೀನಾ. ಆಕೆ ಡೈವಿಂಗ್ ಶಿಕ್ಷಕಿ. ಅಂಥ ಚೆಲುವೆಯ ಅಭಯ ಇರುವುದಾದರೆ ಯಾರು ಏನು ಬೇಕಾದರೂ ಮಾಡಬಹುದೇನೋ?! ಬೆನ್ನಿಗೆ ಕಟ್ಟಿಕೊಂಡ ಪ್ರಾಣವಾಯುವಿನ ಸಿಲಿಂಡರ್‌ನಿಂದ ಆಮ್ಲಜನಕವನ್ನು ಹೇಗೆ ಒಳಗೆ ಎಳೆದುಕೊಳ್ಳಬೇಕು ಎಂದು ಕತ್ರೀನಾ ತನ್ನ ಬಾಯಿಯಲ್ಲಿ ಕೊಳವೆ ಇಟ್ಟುಕೊಂಡು ಅದೇ ಕೊಳವೆಯನ್ನು ಹೃತಿಕ್ ಬಾಯಿಯಲ್ಲಿ ಇಟ್ಟು ಕಲಿಸುತ್ತಾಳೆ! ಸಮುದ್ರದ ಆಳದಲ್ಲಿ ಹೃತಿಕ್‌ಗೆ ದಿವ್ಯದರ್ಶನವಾಗುತ್ತದೆ. ಹೊರಗೆ ಬಂದು ಆತ ದೀರ್ಘವಾಗಿ ಉಸಿರು ಎಳೆದುಕೊಳ್ಳುತ್ತ ಮತ್ತೆ ಮತ್ತೆ ಸಮುದ್ರದ ಆಳದಲ್ಲಿ ಕಂಡ ಚಿತ್ರಗಳನ್ನು ನೆನಪಿಸಿಕೊಳ್ಳುತ್ತಾನೆ. ಆತನ ಜೀವ ಭಯ ಹೊರಟು ಹೋಗಿರುತ್ತದೆ.

ಹೃದಯದಲ್ಲಿ ಸಣ್ಣನೆಯ ಚಲನೆ ಶುರುವಾಗಿರುತ್ತದೆ! ಕೆಲವು ದಿನಗಳ ಹಿಂದೆ ಜೋರ್ಡಾನ್‌ಗೆ ಹೋದಾಗ ನಮಗೂ ಇಂಥದೇ ಅನುಭವವನ್ನು ಅಲ್ಲಿನ ಸಂಘಟಕರು ವ್ಯವಸ್ಥೆ ಮಾಡಿದ್ದರು. ಆದರೆ, ನಾವು ಯಾರೂ ಆಳ ಸಮುದ್ರಕ್ಕೆ ಇಳಿದಿರಲಿಲ್ಲ. ಸಮುದ್ರದ ಮೇಲು ಮಟ್ಟದಿಂದಲೇ ವಿಶೇಷ ಕನ್ನಡಕ ಧರಿಸಿ ನೀರಿನ ಆಳವನ್ನು ನೋಡಿದ್ದೆವು. ನಮ್ಮ ಜತೆಗೆ ಇದ್ದ ಒಬ್ಬ ಯುವಕ ನೀರಿನ ಭಯದಿಂದ ಮೈ ಸೆಟೆಸಿ ಅರಚಾಡಿ ಇನ್ನೇನು ತನ್ನ ಪ್ರಾಣ ಹೋಗಿಯೇ ಬಿಟ್ಟಿತು ಎನ್ನುವಂತೆ ಮೇಲೆ ಏರಿ ಬಂದಿದ್ದ. ಉಸಿರು ತೆಗೆದುಕೊಳ್ಳುವಾಗ ನನಗೂ ಬಾಯಿಯಲ್ಲಿ ನೀರು ಹೋಗಿ ಗಾಬರಿಯಾಗಿ ನಾನೂ ತಕ್ಷಣ ದೋಣಿಗೆ ಹತ್ತಿ ಬಂದಿದ್ದೆ. ಪ್ರಾಣ ಎಂದರೆ ಎಲ್ಲರಿಗೂ ಎಷ್ಟು ಪ್ರೀತಿ? ಸಾವು ಎಂದರೆ ಎಷ್ಟು ಭೀತಿ? ನಮ್ಮಿಬ್ಬರ ಜತೆಗೂ ಕೈ ಹಿಡಿದು ನೀರಿನ ಆಳ, ಸಮುದ್ರದ ಸಂಪತ್ತು ತೋರಿಸುವ ಹುಡುಗಿ ಇರಲಿಲ್ಲ! ಅದಕ್ಕೇ ಹಾಗಾಯಿತೋ ಏನೋ?

ಹೃತಿಕ್‌ಗೆ ಆಕಾಶದಲ್ಲಿ 15,000 ಅಡಿ ಎತ್ತರದಿಂದ ಕೆಳಗೆ ಜಿಗಿಯುವ ಆಸೆ. ಫಾನ್‌ಗೆ ಅಲ್ಲಿ ಜೀವಭಯ. ಮೊದಲು ಇಬ್ಬರೂ ಗೆಳೆಯರು ವಿಮಾನದಿಂದ ಹೊರಗೆ ಜಿಗಿಯುತ್ತಾರೆ. ಫರ್ಹಾನ್ ನಮ್ಮ ನಿಮ್ಮ ಹಾಗೆ, 'ಹೊರಗೆ ಜಿಗಿದು ಸತ್ತು ಹೋದರೆ ಏನು ಮಾಡಲಿ' ಎಂಬ ಭಯದಲ್ಲಿ ನರಳುತ್ತಾನೆ. ಕೊನೆಗೆ ವಿಮಾನದಲ್ಲಿ ಇದ್ದ ಒಬ್ಬ ಈತನನ್ನು ಆಚೆಗೆ ತಳ್ಳುತ್ತಾನೆ. 'ಸತ್ತೇ ಹೋದೆ, ಅಯ್ಯೋ' ಎಂದು ಅರಚುತ್ತ ಫಾನ್ ವಿಮಾನದಿಂದ ಹೊರಗೆ ಬೀಳುತ್ತಾನೆ. ಗಾಳಿಯಲ್ಲಿ ತೇಲುತ್ತಾನೆ. ಉಳಿದ ಇಬ್ಬರು ಗೆಳೆಯರಿಗಿಂತ ಆತನೇ ಹೆಚ್ಚು ಸಂಭ್ರಮ ಪಡುತ್ತಾನೆ. ಆನಂದಿಸುತ್ತಾನೆ. ಮೂರನೆಯ ಸಾಹಸ. ಗೂಳಿ ಓಟ. ಆಕಾಶದಿಂದ ಜಿಗಿದರೆ ಸತ್ತು ಹೋದೇನು ಎಂದು ಗಡ ಗಡ ನಡುಗಿದ್ದ ಫರಾನ್ ಉಳಿದ ಇಬ್ಬರು ಗೆಳೆಯರನ್ನು ಗೂಳಿ ಓಟದಲ್ಲಿ ಭಾಗವಹಿಸಲು ಆಹ್ವಾನಿಸುತ್ತಾನೆ. ಸಣ್ಣ ಸಂದಿಯೊಂದರಲ್ಲಿ ಅಬ್ಬರಿಸುತ್ತ ಬರುವ ಧಾಂಡಿಗ ಗೂಳಿಗಳ ದಾಳಿಯಿಂದ ತಪ್ಪಿಸಿಕೊಂಡು ಎಲ್ಲರೂ ಓಡಿ ಹೋಗಬೇಕು. ಗೂಳಿಯ ತಿವಿತಕ್ಕೆ ಸಿಕ್ಕಿ ಅದರ ಕಾಲಿನಡಿ ಬಿದ್ದು ಸತ್ತು ಹೋದರೂ ಹೋಗಬಹುದು. ಗೂಳಿಗಿಂತ ಜೋರಾಗಿ, ಪ್ರಾಣಭಯದಿಂದ ಓಡಿ ಬದುಕಿಯೂ ಉಳಿಯಬಹುದು. ಮೂವರೂ ಗೆಳೆಯರು ಗೂಳಿಗಳ ಮುಂದೆ ಮುಂದೆ ಓಡಿ ಬದುಕಿ ಉಳಿಯುತ್ತಾರೆ. ಸಿನಿಮಾದ ಮೊದಲ ಹೆಸರು 'ರನ್ನಿಂಗ್ ವಿದ್ ದ ಬುಲ್' ಎಂದೇ ಇತ್ತಂತೆ. ನಂತರ ಅದನ್ನು 'ಜಿಂದಗಿ...' ಎಂದು ಬದಲಿಸಲಾಯಿತು. ಎರಡೂ ಒಂದೇ ಅರ್ಥ. ಮೂವರೂ ಗೆಳೆಯರಿಗೆ ಸಾವು, ಸಾವಿನಂಥ ಭೀತಿ ಒಂದೊಂದು ರೀತಿಯಲ್ಲಿ ಕಾಡುತ್ತ ಇರುತ್ತದೆ. ಅದನ್ನು ಜಯಿಸಿ ಇಂದಿನ ಬದುಕನ್ನು ಪ್ರೀತಿಸಲು ಕಲಿಯುತ್ತಾರೆ.

ಫರ್ಹಾನ್ ಗೆ ತನ್ನನ್ನು ಹುಟ್ಟಿಸಿ ಬಿಟ್ಟು ಹೋದ ತಂದೆಯನ್ನು ಹುಡುಕಿ ಮತ್ತೆ ಕುಟುಂಬವನ್ನು ಒಂದು ಮಾಡುವ ಬಯಕೆಯೂ ಆಳದಲ್ಲಿ ಇರುತ್ತದೆ. ತಾಯಿಯನ್ನು ಒಂಟಿಯಾಗಿ ಬಿಟ್ಟು ಹೋದ ವ್ಯಕ್ತಿ ಫರ್ಹಾನ್ ನ ಅಸ್ವಸ್ಥತೆಗೆ ಮುಖ್ಯ ಕಾರಣ. ಸ್ಪೇನ್‌ನಲ್ಲಿ ಆತ ತನ್ನ ತಂದೆಯನ್ನು ವಿಚಿತ್ರ ಸನ್ನಿವೇಶದಲ್ಲಿ ಭೇಟಿ ಮಾಡುತ್ತಾನೆ. ಆದರೆ,

ಕಲಾವಿದನಾದ ತಂದೆ ಯಾವ ಜವಾಬ್ದಾರಿಯನ್ನೂ ಹೊತ್ತುಕೊಳ್ಳಲು ಸಿದ್ಧನಿರುವುದಿಲ್ಲ. 'ನನ್ನ ಯೌವನದ ದುಡುಕಿನಲ್ಲಿ ನೀನು 'ಮೂಡಿ'ಬಿಟ್ಟೆ' ಎಂಬರ್ಥದ ಮಾತುಗಳನ್ನು ಆಡಿ ಮಗನನ್ನು ಬೀಳ್ಕೊಡುತ್ತಾನೆ. ತಂದೆ 'ಸದ್ಯ'ವನ್ನು ಬದುಕಲು ಕಲಿತ ಹಾಗೆಯೇ ಮಗನೂ 'ಸದ್ಯ'ದ ವಾಸ್ತವವನ್ನು ಒಪ್ಪಿಕೊಳ್ಳಲು ಕಲಿಯುತ್ತಾನೆ. ಝೋಯಾ ಅಖ್ತರ್ ಒಬ್ಬ ಮಹಿಳೆಯಾದರೂ ಪುರುಷ ಬಾಂಧವ್ಯದ ಈ ಚಿತ್ರವನ್ನು ಸೊಗಸಾಗಿ ನಿರ್ದೇಶಿಸಿದ್ದಾರೆ. ಈ ಸಿನಿಮಾದಲ್ಲಿ ಒಂದೇ ಒಂದು ಹಾಡು ಇದೆ. ಉಳಿದ ನಾಲ್ಕು ಪದ್ಯಗಳು, ಆ ಪದ್ಯಗಳನ್ನು ಜಾವೇದ್ ಅಖರ್ ಅವರೇ ಸನ್ನಿವೇಶಕ್ಕೆ ತಕ್ಕಂತೆ ಓದಿದ್ದಾರೆ. ಹಿನ್ನೆಲೆ ಗಾಯನದ ಬದಲಿಗೆ ಕವಿತೆಗಳ ಓದನ್ನು ಇದೇ ಮೊದಲ ಬಾರಿಗೆ ಬಳಸಿಕೊಂಡುದು ಈ ಚಿತ್ರದಲ್ಲಿಯೇ ಅನಿಸುತ್ತದೆ. ಅದು ಇಡೀ ಚಿತ್ರಕ್ಕೆ ಕಾವ್ಯದ ಒಂದು ಸುಂದರ ಚೌಕಟ್ಟನ್ನು ಹಾಕಿದೆ. ಚಿತ್ರದ ಯಶಸ್ಸಿನ ಶಿಖರದಲ್ಲಿ ಈ ಕವಿತೆಗಳೇ ಎತ್ತರವಾಗಿ ಕುಳಿತುಕೊಂಡಿವೆ.

ಒಬ್ಬ ಅದ್ಭುತ ಕವಿಯಾದ ಜಾವೇದ್ ಅಷ್ಟೇ ಅದ್ಭುತವಾಗಿ ಕವಿತೆಗಳನ್ನು ವಾಚಿಸಿದ್ದಾರೆ. ಹಿಂದಿ ಭಾಷೆಯ ಮಾಧುರ್ಯವೂ ಜತೆಗೆ ಸೇರಿದೆ. ಹರ್ ಪಲ್ ಏಕ್ ನಯಾ ಮೌಸಂ ಹೈ (ಪ್ರತಿ ಕ್ಷಣವೂ ಒಂದು ಹೊಸ ಹಂಗಾಮು), ಕ್ಯೋಂ ತು ಐಸೆ ಪಲ್ ಖೋತಾ ಹೈ (ಅಂಥ ಕ್ಷಣವನ್ನು ಏಕೆ ಸುಮ್ಮನೆ ಕಳೆದುಕೊಳ್ಳುತ್ತೀ), ದಿಲ್ ಆಖಿರ್ ತು ಕ್ಯೋಂ ರೋತಾ ಹೈ (ಹೃದಯವೇ ಏಕೆ ಕೊನೆಗೂ ನೀನು ಅಳುತ್ತ ಇರುತ್ತೀ)ನಂಥ ಸಾಲುಗಳು ಎದೆಯೊಳಗೆ ಹೊಕ್ಕು ಬಾಣದಂತೆ ತಾಕಿ ಅಲ್ಲೇ ಮುರಿದುಕೊಂಡು ಬಿದ್ದು ಬಿಡುತ್ತವೆ. ಕಾವ್ಯವೇ ಹಾಗೆ, ಅದು ಖುಷಿ ಕೊಡುತ್ತದೆ. ಅದಕ್ಕಿಂತ ಹೆಚ್ಚಿಗೆ ನೋಯಿಸುತ್ತದೆ. ನಿಜ ಅಲ್ಲವೇ? ನಮ್ಮ ಎಲ್ಲರ ಹೃದಯ ಎಲ್ಲೋ ಆಳದಲ್ಲಿ ಅಳುತ್ತ ಇರುತ್ತದೆ. ಅದರ ಸ್ವಭಾವವೇ ಹಾಗೆ.

04-09-2011

# ಮಣ್ಣು ಎಂಬ

# ಮಾಯೆಯ ಬೆನ್ನ

ಇದು ಅಂತ್ಯದ ಆರಂಭವೇ? ಅಂತ್ಯ ಯಾವಾಗ ಆರಂಭವಾಗುತ್ತದೆ ಎಂದು ಹೇಳುವುದು ಕಷ್ಟ. ಆದರೆ ಅದರ ಸೂಚನೆಗಳು ಮುಂಚೆಯೇ ಸಿಗಲು ತೊಡಗುತ್ತವೆ ಎಂದು ಅನಿಸುತ್ತದೆ. ಆಂಧ್ರ ಪ್ರದೇಶದ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿಯವರು ಹೆಲಿಕಾಪ್ಟರ್ ದುರಂತದಲ್ಲಿ ಸಾವು ಅಪ್ಪಿದಾಗಲೇ ಕರ್ನಾಟಕದ ಗಣಿಧಣಿಗಳ ಅಂತ್ಯದ ಆರಂಭವಾಯಿತು. ನಮ್ಮ 'ಅದೃಷ್ಟ' ಕೈ ಕೊಡುವಾಗ ಇನ್ನಾರಿಗೋ ಏನೋ ಆಗುತ್ತದೆ. ಅದರ ಪರಿಣಾಮ ನಮ್ಮ ಮೇಲೆ ಆಗುತ್ತದೆ. ಜೀವನವೇ ಹಾಗೆ, ಗಣಿಧಣಿಗಳ ವಿಚಾರದಲ್ಲಿಯೂ ಇದು ನಿಜ. ಯಾವಾಗ ಸುಪ್ರೀಂ ಕೋರ್ಟ್‌ನಲ್ಲಿ ಗಣಿ ಅಕ್ರಮಗಳ ವಿಚಾರ ಪ್ರಬಲವಾಗಿ ಪ್ರಸ್ತಾಪವಾಗಿ ನ್ಯಾಯಾಲಯ ಚಾಟಿ ಬೀಸಲು ಆರಂಭಿಸಿತೋ ರೆಡ್ಡಿ ಸೋದರರ 'ಅಮ್ಮ'ನಂತೆಯೇ ಇದ್ದ ಸುಷ್ಮಾ ಸ್ವರಾಜ್ ಅಂತರ ಕಾಯ್ದುಕೊಳ್ಳಲು ಆರಂಭಿಸಿದರು. ರೆಡ್ಡಿ ಸೋದರರ ಜತೆಗೆ ಸಂಬಂಧ ಇಟ್ಟುಕೊಳ್ಳುವುದು ತಮ್ಮ ಮಹತ್ವಾಕಾಂಕ್ಷೆಗೆ ತೊಡಕು ಎಂದು ಅವರಿಗೆ ಅನಿಸಿರಬಹುದು. ಅವರಿಗೆ ಪ್ರಧಾನ ಮಂತ್ರಿ ಹುದ್ದೆಯ ಕನಸು ಬಿದ್ದಿದೆ. ಅಂಥ ಕನಸು

ಬೀಳುವಾಗ ವರ್ಚಸ್ಸಿಗೆ ಎಲ್ಲಿಯೂ ಧಕ್ಕೆಯಾಗಿರಬಾರದು ಎಂಬ ಎಚ್ಚರ ಅವರಿಗೆ ಬಂದಂತಿದೆ. ಸುಷ್ಮಾ ಹೀಗೆ ದೂರ ಕಾಯ್ದುಕೊಂಡುದು ರೆಡ್ಡಿ ಸೋದರರ ಜಂಘಾಬಲವನ್ನೇ ಉಡುಗಿಸಿತು. 'ಆಸರೆ' ಕೈ ತಪ್ಪಿ ಹೋದಂತೆ ಆಯಿತು. ಅದರ ಹಿಂದೆಯೇ ಸುಪ್ರೀಂ ಕೋರ್ಟು ರೆಡ್ಡಿ ಸೋದರರ ಗಣಿ ಲೈಸೆನ್ಸ್ ಅನ್ನೂ ರದ್ದು ಮಾಡಿತು. ಈ ಆಘಾತದಿಂದ ಇನ್ನೂ ಉಸಿರು ತೆಗೆದುಕೊಳ್ಳುವ ಮುಂಚೆಯೇ ಕರ್ನಾಟಕ ಲೋಕಾಯುಕ್ತರ ವರದಿಯೂ ಸಲ್ಲಿಕೆಯಾಯಿತು. ಪೆಟ್ಟುಗಳ ಮೇಲೆ ಪೆಟ್ಟುಗಳು. ಈಗ ಜನಾರ್ದನ ರೆಡ್ಡಿಯವರು ಹೈದರಾಬಾದ್‌ನ ಚಂಚಲಗುಡ ಕೇಂದ್ರ ಕಾರಾಗೃಹದಲ್ಲಿ ಒಬ್ಬ ಸಾಮಾನ್ಯ ಕೈದಿ.

ಎಂಥ ಪತನ? ಕೇವಲ ಎಂಟು ಹತ್ತು ವರ್ಷಗಳಲ್ಲಿ ಒಂದು ಕುಟುಂಬ ಹೀಗೆ ರಾಜಕೀಯವಾಗಿ, ಆರ್ಥಿಕವಾಗಿ ಪ್ರಬಲವಾದುದು ಕರ್ನಾಟಕದ ಇತಿಹಾಸದಲ್ಲಿ ಕಂಡು ಕೇಳದ ಘಟನೆ. 1999ರಲ್ಲಿ ಸುಷ್ಮಾ ಸ್ವರಾಜ್ ಅವರು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ವಿರುದ್ಧ ಬಳ್ಳಾರಿ ಲೋಕಸಭೆ ಕ್ಷೇತ್ರಕ್ಕೆ ಸ್ಪರ್ಧಿಸಿದ್ದಾಗ ರೆಡ್ಡಿ ಸೋದರರು ರಂಗದ ಮೇಲೆ ಮೊದಲ ಬಾರಿಗೆ ಕಾಣಿಸಿಕೊಂಡರು. ಮುಂದೆ 2008ರಲ್ಲಿ ದಕ್ಷಿಣ ಭಾರತದಲ್ಲಿ ಮೊದಲ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ರೆಡ್ಡಿ ಸೋದರರೇ ಕಾರಣರಾದರು. ಅವರು ಕೇವಲ ಬಳ್ಳಾರಿ ಜಿಲ್ಲೆಯಲ್ಲಿ ಮಾತ್ರವಲ್ಲ ಸುತ್ತಮುತ್ತಲಿನ ಜಿಲ್ಲೆಗಳಲ್ಲಿಯೂ ತಮ್ಮ ಆಧಿಪತ್ಯ ಸ್ಥಾಪಿಸಿದರು. ದುಡ್ಡು ಹೇಗೆ ಮಾತನಾಡುತ್ತದೆ ಎಂದು ತೋರಿಸಿಕೊಟ್ಟರು. ವಿಧಾನಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಸಂಪೂರ್ಣ ಬಹುಮತ ಬಾರದೇ ಇದ್ದಾಗ ಇಡೀ ಭಾರತಕ್ಕೆ ಗೊತ್ತಿರದ 'ಆಪರೇಷನ್ ಕಮಲ'ದಂಥ ಹೊಸ 'ಪರಂಪರೆ'ಗೂ ಕೈ ಹಾಕಿದರು. ನಂತರ ಆಗಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಅವರನ್ನು ಬೆರಳ ತುದಿಯಲ್ಲಿ ಆಡಿಸತೊಡಗಿದರು. ಶಾಸಕರು ಮಾರಾಟಕ್ಕೆ ಇದ್ದಾರೆ, ಹಣ ಎಂದರೆ ಬಾಯಿ ಬಾಯಿ ಬಿಡುತ್ತಾರೆ ಎಂದು ಗೊತ್ತಾಗುತ್ತಿದ್ದಂತೆಯೇ ಹಿಂಡು ಶಾಸಕರನ್ನು ಕರೆದುಕೊಂಡು 2009ರ ಅಕ್ಟೋಬರ್‌ನಲ್ಲಿ ಹೈದರಾಬಾದಿಗೆ ಹೋಗಿ ಭಿನ್ನಮತದ ಆಟ ಶುರು ಮಾಡಿದರು. ತಮ್ಮ ಜಿಲ್ಲೆಗೆ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠ, ಅರಣ್ಯ ಅಧಿಕಾರಿ ಯಾರು ಇರಬೇಕು ಎಂಬುದನ್ನೂ ಹೇಳಿ ಯಡಿಯೂರಪ್ಪ ಅವರ ಕೈ ತಿರುವಿ ಮಾಡಿಸಿಕೊಂಡರು. ಕೇವಲ 24 ಗಂಟೆಗಳಲ್ಲಿ ಯಡಿಯೂರಪ್ಪ ತಮ್ಮ ಆದೇಶವನ್ನು ತಾವೇ ಬದಲಿಸಿ ರೆಡ್ಡಿ ಸೋದರರು ಹೇಳಿದವರನ್ನೇ ಬಳ್ಳಾರಿ ಜಿಲ್ಲೆಗೆ ನೇಮಕ ಮಾಡಿದರು. ಸುಷ್ಮಾ ಸ್ವರಾಜ್, ರೆಡ್ಡಿ ಸೋದರರು ಕೇಳಿದ್ದನ್ನು ಮಾಡಿಕೊಡುವಂತೆ ಯಡಿಯೂರಪ್ಪ ಅವರ ಮೇಲೆ ಒತ್ತಡ ತಂದರು.

ಯಡಿಯೂರಪ್ಪ ಸಂಪುಟದಲ್ಲಿ ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ ಸಚಿವರಾಗಿದ್ದರು. ಅವರ ನೆಚ್ಚಿನ ಗೆಳೆಯ ಶ್ರೀರಾಮುಲು ಕೂಡ ಸಚಿವರಾಗಿದ್ದರು. ಸೋದರ ಸೋಮಶೇಖರ ರೆಡ್ಡಿ ಕೆ.ಎಂ.ಎಫ್ ಅಧ್ಯಕ್ಷರಾಗಿದ್ದಾರೆ. ಶ್ರೀರಾಮುಲು ತಂಗಿ ಬಳ್ಳಾರಿಯ ಸಂಸದೆಯಾಗಿದ್ದಾರೆ. ಶ್ರೀರಾಮುಲು ಸಂಬಂಧಿಗಳಾದ ಸಣ್ಣಫಕೀರಪ್ಪ ರಾಯಚೂರು ಸಂಸದ. ಶ್ರೀರಾಮುಲು ಅವರ ನಿಕಟವರ್ತಿಗಳು

ಮೂವರು ಬಳ್ಳಾರಿ ಜಿಲ್ಲೆಯ ಶಾಸಕರು. ಎರಡು ಕುಟುಂಬಗಳ ಕೈಲಿ ಹೀಗೆ ಅಧಿಕಾರ ಕೇಂದ್ರೀಕೃತವಾದುದು ಕೂಡ ಈಚಿನ ಇತಿಹಾಸದಲ್ಲಿ ಇದೇ ಮೊದಲು. 1989ರಲ್ಲಿ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ, 'ನಾನು ಲಿಂಗಾಯತರವನು. ನಾನೇ ಸಮುದಾಯದ ಪ್ರತಿನಿಧಿ ಆಗಿರುವಾಗ ಮತ್ತೆ ಆ ಸಮುದಾಯಕ್ಕೆ ಹೆಚ್ಚಿನ ಪ್ರಾತಿನಿಧ್ಯ ಏಕೆ' ಎಂದು ಕೇಳಿದ್ದರು. ಆದರೆ, ರೆಡ್ಡಿ ಸೋದರರಿಗೆ ಇಷ್ಟೆಲ್ಲ ಅಧಿಕಾರ ಕೈಯಲ್ಲಿ ತಮ್ಮ ಮತ್ತು ತಮ್ಮ ನೆಚ್ಚಿನ ಗೆಳೆಯನ ಕುಟುಂಬದಲ್ಲಿಯೇ ಇದ್ದರೂ ಸಮಾಧಾನ ಇರಲಿಲ್ಲ. ಅವರಿಗೆ ಸಚಿವ ಸ್ಥಾನ ಒಂದು ಅಧಿಕಾರ ಎಂಬ ಕಾರಣಕ್ಕಾಗಿ ಬೇಕಾಗಿತ್ತೇ ಹೊರತು ಅದರಿಂದ ಬಿಜೆಪಿ ಸರ್ಕಾರಕ್ಕಾಗಲೀ ಜನರಿಗಾಗಲೀ ಏನಾದರೂ ಪ್ರಯೋಜನವಾಯಿತು ಎಂದು ಯಾರಿಗೂ ಭಾಸವಾಗಲಿಲ್ಲ. ದುರಂತ ಎಂದರೆ ಭಿನ್ನ ಪಕ್ಷ ಎಂದು ಹೇಳಿಕೊಳ್ಳುವ ಬಿಜೆಪಿಯಲ್ಲಿಯೇ ರೆಡ್ಡಿ ಸೋದರರು ಇದ್ದರು, ಅವರೇ ಈ ಸರ್ಕಾರ ಅಧಿಕಾರಕ್ಕೆ ಬರಲು ಕಾರಣರಾದರು. ಅದರ ಪರಿಣಾಮ ಏನಾಯಿತು ಎಂದರೆ ಈಗಿನ ಸರ್ಕಾರದಲ್ಲಿ ಸಚಿವರಾಗಿರುವ ಬಹುತೇಕರಿಗೂ ಬಿಜೆಪಿಗೂ ಏನೇನೂ ಸಂಬಂಧವೇ ಉಳಿಯಲಿಲ್ಲ. ಇದೊಂದು ರೀತಿಯ ಕಲಸು ಮೇಲೋಗರದಂಥ ಸರ್ಕಾರ, ತತ್ವವೂ ಇಲ್ಲ; ಸಿದ್ಧಾಂತವೂ ಇಲ್ಲ.

ರೆಡ್ಡಿ ಸೋದರರ ಉಚ್ಛಾಯಕ್ಕೆ ಕಾರಣ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಬ್ಬಿಣದ ಅದಿರಿನ ಬೆಲೆ ಗಗನಕ್ಕೆ ಏರಿದ್ದು, ಚೀನಾ ಮಾರುಕಟ್ಟೆಯಲ್ಲಿ ಇದ್ದಕ್ಕಿದ್ದಂತೆ ಅದಿರಿಗೆ ಬೇಡಿಕೆ ಕುದುರಿದ್ದು. ಅದಿರು ಚಿನ್ನದಂತೆ ಮಾರಾಟವಾದ ಹಾಗೆ ರೆಡ್ಡಿ ಸೋದರರ ಬೊಕ್ಕಸಕ್ಕೆ ಹಣ ಹರಿದು ಬರತೊಡಗಿತು. ಅತ್ತ ಬೆಟ್ಟ ಗುಡ್ಡಗಳು ಬೆತ್ತಲಾಗತೊಡಗಿದುವು. ಇಡೀ ರಾಜ್ಯದಲ್ಲಿ ಗಣಿಧಣಿಗಳ ಕಾನೂನು ಮಾತ್ರ ನಡೆಯತೊಡಗಿತು. ಎಲ್ಲಿಯೂ ಯಾರೂ ಅವರನ್ನು ಹಿಡಿದು ಕೇಳುವವರೇ ಇಲ್ಲ ಎನ್ನುವಂತೆ ಆಯಿತು. ಕರ್ನಾಟಕದ ಬೆಟ್ಟ ಗುಡ್ಡಗಳು ಮಾತ್ರ ಬೆತ್ತಲಾಗಲಿಲ್ಲ. ರಾಜ್ಯದ ಉದ್ದಗಲಕ್ಕೂ ರಸ್ತೆಗಳು ಹಾಳಾಗಿ ಹೋದುವು. ಮಹಾಭಾರತದಲ್ಲಿ ದ್ರೌಪದಿಯ ವಸ್ತ್ರಾಪಹರಣ ಆಗುತ್ತಿದ್ದಾಗ ಆಕೆಯ ಗಂಡಂದಿರಾದ ಪಾಂಡವರು ಮಾತ್ರವಲ್ಲ ರಾಜಾಂಗಣದಲ್ಲಿ ಇದ್ದ ಭೀಷ್ಮ, ದ್ರೋಣಾದಿ ಅತಿರಥ ಮಹಾರಥರೂ ಸುಮ್ಮನಿದ್ದರು. ವಿದುರ ಒಬ್ಬನೇ ಎದ್ದು ನಿಂತು, 'ದ್ರೌಪದಿಯ ವಸ್ತ್ರಾಪಹರಣ ಮಾಡಿದ ಕೌರವರು ಎಷ್ಟು ಪಾಪಿಗಳೋ ಅದನ್ನು ಕಣ್ಣಾರೆ ಕಂಡೂ ತೆಪ್ಪಗಿರುವ ಭೀಷ್ಮ, ದ್ರೋಣರೂ ತಪ್ಪಿತಸ್ಥರು' ಎಂದಿದ್ದ. ಗಣಿ ಸಂಪತ್ತು ಲೂಟಿಯಾಗುತ್ತಿದ್ದಾಗ ಇಡೀ ಕರ್ನಾಟಕ ಸರ್ಕಾರ ತೆಪ್ಪಗಿತ್ತು. ಯಾವ ಅಧಿಕಾರಿಯೂ ತುಟಿ ಪಿಟಕ್ಕೆನ್ನಲಿಲ್ಲ. ಅದಿರು ಸಾಗುವ ದಾರಿಯುದ್ದಕ್ಕೂ ಗಣಿ ಧಣಿಗಳ ಕಪ್ಪ ಪಡೆದ ಅಧಿಕಾರಿಗಳು, ಅದಿರು ಲಾರಿಗಳು ಸುಗಮವಾಗಿ ಸಂಚರಿಸಲು ಅನುವು ಮಾಡಿಕೊಟ್ಟರು. ನಿಸರ್ಗದ ಲೂಟಿಗೂ ತಮಗೂ ಸಂಬಂಧವೇ ಇಲ್ಲ ಎನ್ನುವಂತೆ ಸಾರ್ವಜನಿಕರೂ ಸುಮ್ಮನಿದ್ದರು. ಸಮಾಜ ಪರಿವರ್ತನ ಸಮುದಾಯದ ಎಸ್.ಆರ್.ಹಿರೇಮಠ್ ಅವರಂಥವರು ಸುಪ್ರೀಂ ಕೋರ್ಟಿಗೆ ಪ್ರಕರಣ ತೆಗೆದುಕೊಂಡು ಹೋಗದೇ ಇದ್ದರೆ ಏನಾಗುತ್ತಿತ್ತೋ ಗೊತ್ತಿಲ್ಲ. ಗಣಿಧಣಿಗಳು ಅತ್ತ ಅದಿರನ್ನು ಬಾಚಿಕೊಳ್ಳುತ್ತಿದ್ದಂತೆಯೇ ಇತ್ತ ಕರ್ನಾಟಕದಲ್ಲಿ

'ಬಾಚಿಕೊಳ್ಳುವ' ಒಂದು ಸಂಸ್ಕೃತಿಯೂ ತಲೆ ಎತ್ತಿತು. ಅದಕ್ಕೆ ಯಾರು ಯಾರು ಬಲಿ ಬಿದ್ದರು ಎಂಬುದಕ್ಕೆ ಲೋಕಾಯುಕ್ತದ ಅಧಿಕಾರಿ ಯು.ವಿ.ಸಿಂಗ್ ಕೊಟ್ಟ ವರದಿ ಸಾಕ್ಷ್ಯ ನುಡಿಯುತ್ತಿದೆ. 'ದುರಾಸೆ'ಯ ಹಸ್ತಗಳು ಉದ್ದವಾಗತೊಡಗಿದುವು. ಹಿರೇಮಠ ಅವರು ಪ್ರತಿನಿಧಿಸುವ ಸಮಾಜ ಪರಿವರ್ತನ ಸಮುದಾಯದ ಅರ್ಜಿಯ ಮೇಲೆ ಸುಪ್ರೀಂ ಕೋರ್ಟ್ ಕೊಟ್ಟ ಒಂದು ಆದೇಶದ ಪ್ರತಿಯನ್ನು ನೋಡುವುದಕ್ಕೂ ವಿಧಾನಸೌಧದ ಉನ್ನತ ಅಧಿಕಾರಿಗಳಿಗೆ ಮನಸ್ಸು ಇರಲಿಲ್ಲ. ಅದನ್ನೆಲ್ಲ ಯಾರು ಓದುತ್ತಾರೆ?' ಎಂದು ಕೇಳುವ ತಾತ್ಸಾರ ಅವರಲ್ಲಿ ಮನೆ ಮಾಡಿತ್ತು. 'ನಮಗೇಕೆ ಬೇಕು' ಎಂಬ ನಿರ್ಲಕ್ಷ್ಯವೂ ತಲೆ ಎತ್ತತೊಡಗಿತ್ತು. ರೆಡ್ಡಿ ಸೋದರರು ವಿಧಾನಸೌಧಕ್ಕೆ ಬರುವುದಿಲ್ಲ ಎಂದ ಮೇಲೆ ನಾವೇಕೆ ಬರಬೇಕು ಎಂದು ಇತರ ಸಚಿವರೂ ಬರುವುದನ್ನು ಬಿಟ್ಟರು. ಇಡೀ ಆಡಳಿತ ವ್ಯವಸ್ಥೆ ಕುಸಿದು ಹೋಯಿತು. ಇದೆಲ್ಲ ಬಿಜೆಪಿ ಸರ್ಕಾರದಲ್ಲಿ ಆಯಿತು. ಅವರಿಗೆ ಮೊದಲ ಬಾರಿಗೆ ಆಡಳಿತ ಮಾಡಲು ಕರ್ನಾಟಕದಲ್ಲಿ ಅವಕಾಶ ಸಿಕ್ಕಿತ್ತು!

ಬಳ್ಳಾರಿ ಜಿಲ್ಲೆಯಲ್ಲಿ ನಿಸರ್ಗಕ್ಕೆ ಆಳವಾದ ಗಾಯವಾಗಿದೆ. ಕರ್ನಾಟಕದ ರಾಜಕೀಯಕ್ಕೆ ಇನ್ನೂ ಆಳವಾದ ಗಾಯವಾಗಿದೆ. ಗಣಿಗಳ ದೂಳು ಬರೀ ರೆಡ್ಡಿ ಸೋದರರನ್ನು ಮಾತ್ರ ಮೆತ್ತಿಕೊಂಡಿಲ್ಲ. ಇಬ್ಬರು ಮಾಜಿ ಮುಖ್ಯಮಂತ್ರಿಗಳಿಗೂ ಮೆತ್ತಿಕೊಂಡಿದೆ. ಅದು ಮೆತ್ತಿಕೊಂಡ ಕಾರಣಕ್ಕಾಗಿಯೇ ರೆಡ್ಡಿ ಸೋದರರು ಅಧಿಕಾರ ಕಳೆದುಕೊಂಡಿದ್ದಾರೆ. ಅಧಿಕಾರದ ಮಹತ್ವ ಎಷ್ಟು ಎಂದು ಅವರಿಗಿಂತ ಚೆನ್ನಾಗಿ ಯಾರಿಗೂ ಗೊತ್ತಿರಲಿಲ್ಲ. ಅವರು ಯಾವಾಗಲೂ ವಾಲ್ಮೀಕಿ ಸಮುದಾಯದ ಶ್ರೀರಾಮುಲು ಅವರನ್ನು ಮುಂದೆ ಇಟ್ಟುಕೊಂಡೇ ರಾಜಕಾರಣ ಮಾಡಿದ್ದರು. ಬಳ್ಳಾರಿ ಜಿಲ್ಲೆಯ ಒಂಬತ್ತು ವಿಧಾನಸಭಾ ಕ್ಷೇತ್ರಗಳ ಪೈಕಿ ನಾಲ್ಕು ಈ ಸಮುದಾಯಕ್ಕೇ ಮೀಸಲಾಗಿವೆ. ಬಳ್ಳಾರಿ ಲೋಕಸಭಾ ಕ್ಷೇತ್ರ ಕೂಡ ಇದೇ ಸಮುದಾಯಕ್ಕೆ ಮೀಸಲಾಗಿದೆ. ಕ್ಷೇತ್ರ ಪುನರ್ ವಿಂಗಡಣೆ ಆಗುವುದಕ್ಕಿಂತ ಮುಂಚೆ ಕರ್ನಾಟಕದಲ್ಲಿ ಕೇವಲ ಗೋಕಾಕ ಮತ್ತು ಸೋಮವಾರಪೇಟೆ ವಿಧಾನಸಭಾ ಕ್ಷೇತ್ರಗಳು ಮಾತ್ರ ಈ ಸಮುದಾಯಕ್ಕೆ ಮೀಸಲಾಗಿದ್ದುವು. ಈಗ ಅವುಗಳ ಸಂಖ್ಯೆ 15. ಕ್ಷೇತ್ರ ಪುನರ್ ವಿಂಗಡಣೆಗಿಂತ ಮುಂಚೆ ಒಂದೂ ಲೋಕಸಭಾ ಕ್ಷೇತ್ರ ವಾಲ್ಮೀಕಿ ಸಮುದಾಯಕ್ಕೆ ಮೀಸಲಾಗಿರಲಿಲ್ಲ. ಈಗ ಅವುಗಳ ಸಂಖ್ಯೆ ಎರಡು. ಒಂದು ಬಳ್ಳಾರಿ ಇನ್ನೊಂದು ರಾಯಚೂರು. ರೆಡ್ಡಿ ಸೋದರರ ರಾಜಕೀಯ ಬಂಡವಾಳವಿದು. ಅದೇ ಬಂಡವಾಳವನ್ನೇ ಮುಂದೆ ಮಾಡಿಕೊಂಡು ಶ್ರೀರಾಮುಲು ಅವರಿಂದ ರಾಜೀನಾಮೆ ಕೊಡಿಸಿ ರಾಜಕೀಯ ತಂತ್ರ ಹೆಣೆಯುವಾಗಲೇ ಸಿ.ಬಿ.ಐ ಬೋನಿಗೆ ಜನಾರ್ದನ ರೆಡ್ಡಿ ಬಿದ್ದಿದ್ದಾರೆ.

ಬಂಗಾರದ ಕುರ್ಚಿಯ ಮೇಲೆ ಕುಳಿತಿದ್ದ. ನಿತ್ಯ ಹಂಸತೂಲಿಕಾತಲ್ಪದ ಮೇಲೆ ಮಲಗುತ್ತಿದ್ದ ರೆಡ್ಡಿ ಈಗ ಒಬ್ಬ ಸಾಮಾನ್ಯ ಕೈದಿಯ ಹಾಗೆ ಜೈಲಿನಲ್ಲಿ ನೆಲದ ಮೇಲೆ ಮಲಗುತ್ತಿದ್ದಾರೆ. ಬಂಗಾರದ ತಟ್ಟೆಯಲ್ಲಿ ಊಟ ಮಾಡುತ್ತಿದ್ದ ವ್ಯಕ್ತಿ ಅಲ್ಯುಮಿನಿಯಂ ತಟ್ಟೆಯನ್ನು ಹಿಡಿದುಕೊಂಡು ಸರದಿಯಲ್ಲಿ ನಿಂತು ಊಟ ಮಾಡಬೇಕಿದೆ. ಆದರೆ,

ಇದು ಅಂತ್ಯವಲ್ಲ. ಅಂತ್ಯದ ಆರಂಭ ಮಾತ್ರ. ಅಂತ್ಯ ಏನಾಗಿರುತ್ತದೆ, ಅದು ಇನ್ನೂ ಯಾರು ಯಾರಿಗೆ ಸುತ್ತಿಕೊಳ್ಳುತ್ತದೆ ಎಂದು ಈಗಲೇ ಹೇಳುವುದು ಕಷ್ಟ. ಅದು ಕಾನೂನಿನ ಕ್ಷೇತ್ರ ಕಾನೂನು ತನ್ನದೇ ರೀತಿಯಲ್ಲಿ ಕ್ರಮ ಜರುಗಿಸುತ್ತದೆ. ಆದರೆ, ಕರ್ನಾಟಕ ಮತ್ತು ಆಂಧ್ರದ ಗಡಿಯಲ್ಲಿ ನಿಸರ್ಗಕ್ಕೆ ಆಗಿರುವ ಆಘಾತವನ್ನು ಸರಿಪಡಿಸುವುದು ಹೇಗೆ? ಗಣಿ ಗುತ್ತಿಗೆದಾರರು ಬಳ್ಳಾರಿ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ನಿಸರ್ಗಕ್ಕೆ ಮಾಡಿರುವ ಧಕ್ಕೆಯನ್ನು ತಾವೇ ತಮ್ಮ ವೆಚ್ಚದಲ್ಲಿ ಸರಿಪಡಿಸಬೇಕು ಎಂದು ಸುಪ್ರೀಂ ಕೋರ್ಟು ತಾಕೀತು ಮಾಡಿದೆ. ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಇದೇ ರೀತಿ ಗಣಿಗಾರಿಕೆಯಿಂದ ನಿಸರ್ಗಕ್ಕೆ ಧಕ್ಕೆಯಾಗಿತ್ತು. ಕೆಲವು ವರ್ಷಗಳ ಹಿಂದೆ ಅಲ್ಲಿ ಗಣಿಗಾರಿಕೆ ನಿಂತ ಮೇಲೆ ಗಿಡ ಮರಗಳಲ್ಲಿ ಮತ್ತೆ ಹಸಿರು ಚಿಮ್ಮತೊಡಗಿದೆ. ಗಣಿ ಸ್ಫೋಟದ ಸದ್ದು ಕೇಳಿ ಮಾಯವಾಗಿ ಹೋಗಿದ್ದ ನವಿಲು ಮತ್ತೆ ನರ್ತಿಸತೊಡಗಿವೆ. ಹೊಲ ಗದ್ದೆಗಳಲ್ಲಿನ ಬತ್ತ ನಳನಳಿಸತೊಡಗಿದೆ. ಬಳ್ಳಾರಿ ಗಣಿಗಾರಿಕೆಗೆ ಹೋಲಿಸಿದರೆ ಸಂಡೂರು ಗಣಿಗಾರಿಕೆ ಮಾಡಿರುವ ಹಾನಿ ಏನೇನೂ ಅಲ್ಲ. ಬಳ್ಳಾರಿ ಗಣಿಗಾರಿಕೆಯಿಂದ ಕಲಘಟಗಿಯ ಬತ್ತದ ಗದ್ದೆಗಳು ಹಾಳಾಗಿ ಹೋಗಿವೆ. ಕಾರವಾರದ ಬಳಿ ರಸ್ತೆಗಳಲ್ಲಿ ಹಳ್ಳಗಳಾಗಿವೆ. ಗಣಿಧಣಿಗಳಿಂದ ಆಗಿರುವ ಹಾನಿಯನ್ನು ಅವರ ಹಣದಲ್ಲಿಯೇ ನೇರ್ಪುಗೊಳಿಸಬೇಕು ಎಂಬ ಸುಪ್ರೀಂ ಕೋರ್ಟ್ ಆದೇಶ ಬರೀ ಗಣಿ ಗುಡ್ಡಗಳಿಗೆ ಮಾತ್ರವಲ್ಲ ಗಣಿ ಲಾರಿಗಳು ಸಂಚರಿಸಿದ ದಾರಿಯುದ್ದದ ಪ್ರದೇಶಕ್ಕೂ ಅನ್ವಯಿಸಬೇಕು. ಅದು ಆಗುವಂತೆ ಯಾರು ನೋಡಿಕೊಳ್ಳಬೇಕು? ರಾಜ್ಯ ಸರ್ಕಾರದ ಅಧಿಕಾರಿಗಳೇ ಅಲ್ಲವೇ? ಅವರು ಅದನ್ನು ಮಾಡಿಯಾರೇ? ಅವರು ಅದನ್ನು ಮಾಡುವ ಹಾಗೆ ಕರ್ನಾಟಕದ ಜನ ಒತ್ತಡ ತರುತ್ತಾರೆಯೇ? ಆಡಳಿತದ ನೇತಾರರು ಆ ಜವಾಬ್ದಾರಿ ವಹಿಸಿಕೊಳ್ಳುತ್ತಾರೆಯೇ? ಇಲ್ಲವೇ ದ್ರೌಪದಿ ವಸ್ತ್ರಾಪಹರಣ ನಡೆದಾಗ ತೆಪ್ಪಗಿದ್ದ ಭೀಷ್ಮ, ದ್ರೋಣರ ಹಾಗೆ ಸುಮ್ಮನಿರುತ್ತಾರೆಯೇ? ವಿದುರನ ಮಾತು ನೆನಪಿದೆಯಲ್ಲ?

11-09-2011

# ತವಕ್ಕುಲ್: ಹೋರಾಟಕ್ಕೆ

# ಒಂದು ನಂಜಗೆ

ಆಕೆಯಿನ್ನೂ ತನ್ನ ತಾಯಿಯ ಗರ್ಭದಲ್ಲಿ ಮೂರು ತಿಂಗಳ ಶಿಶು, ಆಗಲೇ ಆಕೆಯ ದೇಶದ ಅಧ್ಯಕ್ಷ ಪದವಿಯಲ್ಲಿ ಕುಳಿತ ಒಬ್ಬ ವ್ಯಕ್ತಿ ಈಗ ಆಕೆಗೆ 33 ವರ್ಷಗಳಾದರೂ ತನ್ನ ಕುರ್ಚಿಯನ್ನು ಬಿಟ್ಟುಕೊಟ್ಟಿಲ್ಲ. ನಿರಂಕುಶವಾದ ನಿರಂತರ ಅಧಿಕಾರ ಸರ್ವಾಧಿಕಾರವಾಗಿ ಬದಲಾಗಿದೆ. ಅಧ್ಯಕ್ಷನನ್ನು ಕೇಳುವವರೂ ಇಲ್ಲ. ಆತನಿಗೆ ಹೇಳುವವರೂ ಇಲ್ಲ. ವ್ಯಕ್ತಿ ಸ್ವಾತಂತ್ರ್ಯಕ್ಕೆ ಆ ದೇಶದಲ್ಲಿ ಕಿಂಚಿತ್ತೂ ಬೆಲೆಯಿಲ್ಲ. ಸ್ವಾತಂತ್ರ್ಯ ಕೇಳಿದವರನ್ನು ಚೆನ್ನಾಗಿ ಥಳಿಸಿ ಕಂಬಿಗಳ ಹಿಂದೆ ತಳ್ಳಲಾಗಿದೆ. ಕಳೆದ ಆರು ವರ್ಷಗಳಿಂದ ದೇಶದ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿ ಬಂದು ನಿಂತಿರುವ 33 ವರ್ಷದ ಸುಂದರ ಮಹಿಳೆಗೆ ಇದೀಗ ನೊಬೆಲ್ ಶಾಂತಿ ಪ್ರಶಸ್ತಿ ಒಲಿದು ಬಂದಿದೆ. ಆಕೆಯ ಹೆಸರು ತವಕ್ಕುಲ್ ಕರ್ಮಾನ್, ಆಕೆಯ ದೇಶದ ಹೆಸರು ಯೆಮನ್, ಆ ದೇಶದ ಸರ್ವಾಧಿಕಾರಿ ಅಧ್ಯಕ್ಷನ ಹೆಸರು ಅಲಿ ಅಬ್ದುಲ್ ಸಾಲೆಹ್.

ತವಕ್ಕುಲ್ ಒಬ್ಬ ಪತ್ರಕರ್ತೆ, 'ಸರಪಳಿ ರಹಿತ ಮಹಿಳಾ ಪತ್ರಕರ್ತರ ಸಂಘ'ದ ಅಧ್ಯಕ್ಷೆ. ಅಭಿವ್ಯಕ್ತಿಗೆ ಸರ್ವಾಧಿಕಾರ

ಹೇಗೆ ಅಡ್ಡಿ ಮಾಡುತ್ತದೆ ಎಂಬುದು ಪತ್ರಕರ್ತರಿಗೇ ಹೆಚ್ಚು ಅರ್ಥವಾಗುತ್ತದೆ. 2005ರಿಂದ ತಮಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಬೇಕು ಎಂದು ತವಕ್ಕುಲ್, ಪ್ರತಿ ಮಂಗಳವಾರ ಯೆಮನ್‌ನ ರಾಜಧಾನಿ ಸನಾ ನಗರದ ವಿಶ್ವವಿದ್ಯಾಲಯದ ಮುಂದೆ ಪ್ರತಿಭಟನೆ ಮಾಡುತ್ತಿದ್ದಾರೆ. ಕಳೆದ ಆರು ವರ್ಷಗಳಲ್ಲಿ ಅದು ನಿರಂತರವಾಗಿ ನಡೆದುಕೊಂಡು ಬಂದಿದೆ. ಅನೇಕ ಸಾರಿ ತವಕ್ಕುಲ್ ಬಂಧನಕ್ಕೆ ಒಳಗಾಗಿದ್ದಾರೆ. ಅವರ ಮೇಲೆ ಸರ್ವಾಧಿಕಾರಿಯ ಬಂಟರು ದೈಹಿಕ ಹಲ್ಲೆ ಮಾಡಿದ್ದಾರೆ. ಆದರೂ ತವಕ್ಕುಲ್ ನಿರಾಶರಾಗಿಲ್ಲ. ಪಕ್ಕದ ಈಜಿಪ್ಟ್‌ನಲ್ಲಿ, ಟ್ಯುನಿಶಿಯಾದಲ್ಲಿ ಸರ್ವಾಧಿಕಾರಿಗಳ ಆಡಳಿತ ಅಂತ್ಯಗೊಂಡುದು ಅವರಿಗೆ ಒಂದು ಆಶಾಕಿರಣದಂತೆ ಗೋಚರಿಸುತ್ತಿದೆ. ಈಜಿಪ್ಟ್‌ನಲ್ಲಿ ಹೋಸ್ನಿ ಮುಬಾರಕ್ ಅಧಿಕಾರ ವಹಿಸಿಕೊಂಡುದು ಯೆಮನ್‌ನಲ್ಲಿ ಸಾಲೆಹ್ ಅಧಿಕಾರ ವಹಿಸಿಕೊಂಡ ಒಂದು ವರ್ಷದ ನಂತರ, ಹಾಗೆ ನೋಡಿದರೆ ಯೆಮನ್‌ನಲ್ಲಿಯೇ ಸರ್ವಾಧಿಕಾರ ಮೊದಲು ಅಂತ್ಯಗೊಳ್ಳಬೇಕಿತ್ತು. ಹೋಸ್ನಿ, ಅಧಿಕಾರ ತ್ಯಾಗ ಮಾಡಲು ಒತ್ತಡ ಹೇರಿದ ಅಮೆರಿಕ, ಯೆಮನ್ ಸರ್ವಾಧಿಕಾರಿ ವಿರುದ್ಧ ಅದೇ ಒತ್ತಡ ಹೇರುತ್ತಿಲ್ಲ. ಅಮೆರಿಕವೇ ಹಾಗೆ. ಅದರ ನಡೆಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ ಅಮೆರಿಕ ಅಲಿ ಅಬ್ದುಲ್ ಸಾಲೆತ್‌ಗೆ ಅಧಿಕಾರ ತ್ಯಜಿಸಲು ಹೇಳುವುದನ್ನು ಬಿಡಲಿ, ಆದರೆ ಯೆಮನ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಯನ್ನೂ ಗೌಣ ಎನ್ನುವಂತೆ ಬಿಂಬಿಸುತ್ತಿದೆ. ಯೆಮನ್‌ನಲ್ಲಿ ಹೆಣ್ಣುಮಕ್ಕಳು ಪ್ರತಿಭಟನೆಯ ಮುಂಚೂಣಿಯಲ್ಲಿ ಇರುವುದನ್ನೂ 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ಸರಿಯಾಗಿ ಬಿಂಬಿಸುತ್ತಿಲ್ಲ ಎಂಬ ಅಳಲು ತವಕ್ಕುಲ್ ಅವರದು.

ಯೆಮನ್ ಅಂಥ ದೊಡ್ಡ ದೇಶವೇನೂ ಅಲ್ಲ. ಗಾತ್ರದಲ್ಲಿ ಫ್ರಾನ್ಸ್‌ನಷ್ಟು ಚಿಕ್ಕದು. ದೇಶದಲ್ಲಿ ಬಡವರೇ ಹೆಚ್ಚು. ಅವರ ಸಂಖ್ಯೆ ಅರ್ಧ ಕೋಟಿಗಿಂತ ಹೆಚ್ಚು ಎಂದು ಒಂದು ಅಂದಾಜು. ಅವರಲ್ಲಿ ಅನಕ್ಷರಸ್ಥರೇ ಜಾಸ್ತಿ. ತೈಲ ಬಾವಿಗಳ ದೃಷ್ಟಿಯಿಂದಲೂ ದೇಶ ಸಮೃದ್ಧವಲ್ಲ. ದೇಶದ ಸಂಪತ್ತನ್ನು ಅಧಿಕಾರಸ್ಥರು ಕೊಳ್ಳೆ ಹೊಡೆದುದೇ ಜಾಸ್ತಿ. 2025ರ ವೇಳೆಗೆ ಆ ದೇಶದಲ್ಲಿ ಕುಡಿಯುವ ನೀರು ಸಿಗುವುದಿಲ್ಲ. ಇಡೀ ವಿಶ್ವದಲ್ಲಿ ಕುಡಿಯುವ ನೀರು ಇಂಗಿ ಹೋಗುವ ಮೊದಲ ದೇಶವದು ಎಂಬ ಕುಖ್ಯಾತಿ ಅದಕ್ಕೆ. ಆದರೂ ಸರ್ವಾಧಿಕಾರಿ ಸಾಲೆಹ್ ಏನೂ ಮಾಡುತ್ತಿಲ್ಲ ಎಂಬ ಆತಂಕ ತವಕ್ಕುಲ್ ಮತ್ತು ಗೆಳತಿಯರದು. ಅಲ್ಲಿನ ಹೆಣ್ಣು ಮಕ್ಕಳ ಸ್ಥಿತಿ ಇನ್ನೂ ದಾರುಣ. ದೇಶದ ಒಟ್ಟು ಜನಸಂಖ್ಯೆಯ ಮೂರರಲ್ಲಿ ಎರಡರಷ್ಟು ಇರುವ ಹೆಣ್ಣು ಮಕ್ಕಳಿಗೆ ಅಲ್ಲಿ ಯಾವ ಸ್ವಾತಂತ್ರ್ಯವೂ ಇಲ್ಲ. ಹುಟ್ಟಿದ ಗಂಡುಮಕ್ಕಳ ಸಲುವಾಗಿ ಹೆಣ್ಣು ಮಕ್ಕಳಿಗೆ ತಂದೆ ತಾಯಿಯರು ಪೌಷ್ಟಿಕ ಆಹಾರ ಕೊಡುವುದಿಲ್ಲ. ಹಾಗಾಗಿ ಮಹಿಳೆಯರಲ್ಲಿ ಪೌಷ್ಟಿಕಾಂಶಗಳ ಕೊರತೆ ಹೆಚ್ಚು. ಬಟ್ಟೆ ಧರಿಸುವ ವಿಚಾರದಲ್ಲಿಯೂ ನಿರ್ಬಂಧ ಜಾಸ್ತಿ. ತವಕ್ಕುಲ್ ಅವಕುಂಠನವನ್ನು ಕಿತ್ತು ಹಾಕುವ ಮೂಲಕವೇ ಪ್ರತಿಭಟನೆ ಆರಂಭಿಸಿದರು. ಅವಕುಂಠನ ಧರಿಸದೆಯೇ ಟಿ.ವಿ ಮಾಧ್ಯಮದ ಮುಂದೆ ಕಾಣಿಸಿಕೊಂಡಾಗ ಇಡೀ ಯೆಮನ್ ಬೆಚ್ಚಿ ಬಿತ್ತು. ಅವಕುಂಠನ ಸಾಂಸ್ಕೃತಿಕವಾದುದೇ ಹೊರತು ಧಾರ್ಮಿಕ ನಿರ್ಬಂಧವಲ್ಲ ಎಂಬುದು ಅವರ ವಾದ. ಹಾಗೆಂದು ಅವಕುಂಠನವನ್ನು ಪೂರ್ತಿ

ತೆಗೆದುಹಾಕಿಲ್ಲ . ಅವರು ತಲೆಗೆ ಸ್ಕಾರ್ಫ್ ಸುತ್ತಿಕೊಳ್ಳುತ್ತಾರೆ. ಆದರೆ, ಮುಖ ಮುಚ್ಚಿಕೊಳ್ಳುವುದಿಲ್ಲ. ಆ ಸ್ಕಾರ್ಫ್ ಸದಾ ಗುಲಾಬಿ ಬಣ್ಣದೇ ಆಗಿರುವಂತೆಯೂ ನೋಡಿಕೊಳ್ಳುತ್ತಾರೆ. ಅದಕ್ಕೆ ವಿಶೇಷ ಅರ್ಥ ಇದ್ದರೂ ಇದ್ದೀತು! 17 ವರ್ಷಕ್ಕಿಂತ ಮುಂಚೆ ಹೆಣ್ಣು ಮಕ್ಕಳಿಗೆ ಮದುವೆ ಮಾಡಬಾರದು ಎಂದೂ ತವಕ್ಕುಲ್ ಅವರೇ ತಮ್ಮ ದೇಶದಲ್ಲಿ ಮೊದಲು ದನಿ ಎತ್ತಿದವರು.

ತವಕ್ಕುಲ್ ನೋಡುತ್ತಲೇ ಇದ್ದರು: ದೇಶದಲ್ಲಿನ ದುರಾಡಳಿತ, ಭ್ರಷ್ಟಾಚಾರ ಅವರ ರಕ್ತವನ್ನು ಕುದಿಸುತ್ತಿತ್ತು. ಒಂದು ದಿನ ಸರ್ವಾಧಿಕಾರಿ ಸಾಲೆಜ್‌ಗೆ ನಿಕಟವಾದ ಬುಡಕಟ್ಟು ನಾಯಕನೊಬ್ಬನಿಗಾಗಿ ಜಾ'ಅಷಿನ್ ಎಂಬ ಸಮುದಾಯದ 30 ಕುಟುಂಬಗಳನ್ನು ಅವರ ಹಳ್ಳಿಯಿಂದ ಎತ್ತಂಗಡಿ ಮಾಡಿ ಅವರು ಉಳುಮೆ ಮಾಡುತ್ತಿದ್ದ ಭೂಮಿಯನ್ನು ಬುಡಕಟ್ಟು ನಾಯಕನಿಗೆ ವಿತರಿಸಲಾಯಿತು. ಜಾ' ಅಷಿನ್ ಸಮುದಾಯದವರು ತಮ್ಮ ಭೂಮಿಯನ್ನು ತಮಗೆ ಮರಳಿ ಕೊಡಿಸಬೇಕು ಎಂದು ಮಾಡಿಕೊಂಡ ಮನವಿ ಸರ್ವಾಧಿಕಾರಿಯ ಕಿವಿಯ ಮೇಲೆ ಬೀಳಲೇ ಇಲ್ಲ. ಬೀಳುವುದು ಸಾಧ್ಯವೂ ಇರಲಿಲ್ಲ. ಏಕೆಂದರೆ, ಆತ ಬೇಕೆಂದೇ ಆ ಕೆಲಸ ಮಾಡಿದ್ದ. ಅವರ ಕಾರಣವನ್ನು ಮುಂದಿಟ್ಟುಕೊಂಡು, ಅವರ ಭೂಮಿಯನ್ನು ಅವರಿಗೆ ಮರಳಿಸಬೇಕು ಎಂದು ತವಕ್ಕುಲ್ ಹೋರಾಟ ಆರಂಭಿಸಿದರು. ಅದು ಅವರಿಗೆ ಒಂದು ನೆಪವಾಗಿತ್ತು. ತಾವು ಒಂದು ಪತ್ರಿಕೆ ಶುರು ಮಾಡಬೇಕು ಎಂದು ತವಕ್ಕುಲ್ ಕೇಳಿದಾಗಲೂ ಅಧ್ಯಕ್ಷರು ಅನುಮತಿ ಕೊಡಲಿಲ್ಲ. ಟ್ಯುನಿಶಿಯಾದಲ್ಲಿ ಮಾಡಿದ ಹಾಗೆ ಸ್ವಾತಂತ್ರ್ಯಪರ ಎಸ್‌ಎಂಎಸ್ ಕಳುಹಿಸಲು ಅನುಮತಿ ಕೊಡಬೇಕು ಎಂದಾಗಲೂ ಅನುಮತಿ ಸಿಗಲಿಲ್ಲ.

ಆದರೂ ಅವರು ನಂಬಿಗೆ ಕಳೆದುಕೊಂಡಿಲ್ಲ. ತವಕ್ಕುಲ್ ಎಂದರೆ ಅರೆಬಿಕ್ ಭಾಷೆಯಲ್ಲಿ ನಂಬಿಗೆ ಎಂದೇ ಅರ್ಥ. ಅಲಿ ಅಬ್ದುಲ್ ಸಾಲೆಹ್ ಅಧಿಕಾರ ಬಿಟ್ಟುಕೊಡದೇ ತನ್ನ ದೇಶದ ಜನರಿಗೆ ನಂಬಿಗೆ ದ್ರೋಹ ಮಾಡಿದ್ದಾರೆ ಎಂದೇ ತವಕ್ಕುಲ್ ವಾದಿಸುತ್ತಿದ್ದಾರೆ. ತಮ್ಮ ಮೇಲೆ ಅನೇಕ ಸಾರಿ ದೈಹಿಕ ಹಲ್ಲೆ ನಡೆದು ತಮ್ಮನ್ನು ಹಲವು ಸಾರಿ ಕಾರಾಗೃಹಕ್ಕೆ ತಳ್ಳಿದಾಗಲೂ, ನಿತ್ಯ ಪ್ರಾಣಭಯದ ಕರೆಗಳು ಬರುತ್ತಿದ್ದರೂ, ಅಂತರ್ ರಾಷ್ಟ್ರೀಯ ಸಮುದಾಯ ನಿರೀಕ್ಷಿತ ರೀತಿಯಲ್ಲಿ ತನ್ನ ದೇಶದ ಹೋರಾಟಗಾರರ ಪರವಾಗಿ ನಿಲ್ಲದ ನಿರಾಶೆಯಿದ್ದಾಗಲೂ ತವಕ್ಕುಲ್ ಅವರಿಗೆ ಹಿಂಸೆಯ ಮಾರ್ಗ ತುಳಿಯಬೇಕು ಎಂದು ಅನಿಸಿಲ್ಲ. ಅವರ ಕಚೇರಿಯಲ್ಲಿ ಮಾರ್ಟಿನ್ ಲೂಥರ್ ಕಿಂಗ್ (ಜೂ), ಮಹಾತ್ಮ ಗಾಂಧಿ ಮತ್ತು ನೆಲ್ಸನ್ ಮಂಡೇಲಾ ಅವರ ಭಾವಚಿತ್ರಗಳು ಇವೆ. ಈ ಮೂವರೂ ಹಾಕಿಕೊಟ್ಟ ಅಹಿಂಸೆಯ ಮಾರ್ಗದಲ್ಲಿಯೇ ಅವರು ತಮ್ಮ ಹೋರಾಟವನ್ನು ನಡೆಸುತ್ತಿದ್ದಾರೆ.

ಈ ಹೆಣ್ಣು ಮಗಳು ತನ್ನ ದೇಶದ ಮಹಿಳೆಯರಲ್ಲಿ ತುಂಬಿದ ನಂಬಿಗೆಯೂ ಅಸಾಧಾರಣವಾದುದು. 'ನಾವು ಸಮಸ್ಯೆಯ ಒಂದು ಭಾಗ ಎಂದು ಭಾವಿಸಬಾರದು. ಬದಲಿಗೆ ಪರಿಹಾರದ ಒಂದು ಭಾಗ ಎಂದು ಭಾವಿಸೋಣ. ಅನೇಕ ವರ್ಷಗಳಿಂದ ಅಂಚಿನಲ್ಲಿಯೇ ಬದುಕು ಸಾಗಿಸುತ್ತಿದ್ದೇವೆ. ಈಗ ಎದ್ದು ನಿಲ್ಲೋಣ. ಯಾರ

ಅನುಮತಿಯನ್ನೂ ಕೇಳದೆ ಅಥವಾ ಅವರು ಒಪ್ಪಿಕೊಳ್ಳುತ್ತಾರೆಯೋ ಇಲ್ಲವೋ ಎಂದು ಚಿಂತಿಸದೇ ಸಕ್ರಿಯರಾಗೋಣ, ಆ ಮೂಲಕ ಇಷ್ಟು ವರ್ಷ ನಮ್ಮನ್ನು ಹತ್ತಿಕ್ಕಿದ ಸಮಾಜಕ್ಕೆ ಬುದ್ಧಿ ಹೇಳೋಣ; ಇಷ್ಟು ವರ್ಷ ಸರ್ವಾಧಿಕಾರಿ ತೊತ್ತಳದುಳಿತಕ್ಕೆ ಸಿಕ್ಕು ನಲುಗಿರುವ ದೇಶ ಮತ್ತೆ ಪ್ರಗತಿ ಪಥದಲ್ಲಿ ಸಾಗುವುದನ್ನು ಕಾಣೋಣ' ಎಂದು ಆಕೆ ಕೊಟ್ಟ ಕರೆ ಎಲ್ಲ ಮಹಿಳೆಯರ ಹೃದಯವನ್ನು ಗೆದ್ದಿದೆ. ಈಗ ಯೆಮನ್‌ನ ಪ್ರತಿಭಟನೆಯಲ್ಲಿ ಹೆಣ್ಣು ಮಕ್ಕಳದೇ ದೊಡ್ಡ ಸಂಖ್ಯೆ, ಪಾತ್ರ

ನಿನ್ನೆ ಮೊನ್ನೆ ವರೆಗೆ ತವಕ್ಕುಲ್ ಅವರಿಗೆ ಭವಿಷ್ಯದಲ್ಲಿ ಏನಾಗಬಹುದು ಎಂಬ ನಂಬಿಕೆ ಇರಲಿಲ್ಲ. ಆದರೆ, ಎಲ್ಲ ಹೋರಾಟಗಾರರಲ್ಲಿ ಇರುವಂಥದೇ ಕೆಚ್ಚೆದೆ, ವಿಶ್ವಾಸ ಅವರಲ್ಲಿಯೂ ಇತ್ತು. 'ನೋಡೋಣ, ಟ್ಯುನಿಶಿಯಾದಲ್ಲಿ, ಈಜಿಪ್ಟ್‌ನಲ್ಲಿ ಆದ ಹಾಗೆ ಇಲ್ಲಿಯೂ ಸರ್ವಾಧಿಕಾರಿಯ ಪತನ ಆದೀತು. ಅಲ್ಲಿನ ಗೆಲುವು ಇಲ್ಲಿನ ಹೋರಾಟಗಾರರ ವಿಶ್ವಾಸವನ್ನು ಹೆಚ್ಚಿಸಿದೆ. ಈಗ ಇರುವುದು ಅಲ್ಜೀರಿಯಾದಲ್ಲಿ ಮೊದಲು ಸರ್ವಾಧಿಕಾರದ ಪತನ ಆಗುತ್ತದೆಯೋ ಅಥವಾ ಯೆಮನ್‌ನಲ್ಲಿ ಆಗುತ್ತದೆಯೋ ಎಂಬ ಕುತೂಹಲ ಅಷ್ಟೇ. ಒಂದು ಸಾರಿ ಅಲ್ಜೀರಿಯಾ ಮತ್ತು ಯೆಮನ್‌ನಲ್ಲಿಯೂ ಸರ್ವಾಧಿಕಾರಿಗಳ ಪತನವಾದರೆ, ಪ್ರತಿ ಅರಬ್ ರಾಷ್ಟ್ರಗಳಲ್ಲಿಯೂ ಇಂಥದೇ ಹೋರಾಟಕ್ಕೆ ಚಾಲನೆ ಸಿಗುತ್ತದೆ' ಎಂಬ ನಂಬಿಗೆಯಲ್ಲಿ ಇದ್ದ ತವಕ್ಕುಲ್ ಅವರಿಗೆ ನೊಬೆಲ್ ಶಾಂತಿ ಪಾರಿತೋಷಕ ದೊಡ್ಡ ಭರವಸೆಯನ್ನು ತುಂಬಿದೆ. ಅಂತರ ರಾಷ್ಟ್ರೀಯ ಸಮುದಾಯ ಇದಕ್ಕಿಂತ ಬೇರೆ ರೀತಿಯಲ್ಲಿ ಅವರ ಬೆಂಬಲಕ್ಕೆ ನಿಲ್ಲಲು ಸಾಧ್ಯವಿರಲಿಲ್ಲ.

ತವಕ್ಕುಲ್, ನೊಬೆಲ್ ಪ್ರಶಸ್ತಿ ಪಡೆಯುತ್ತಿರುವ ಮೊದಲ ಅರಬ್ ಮಹಿಳೆ, ನೊಬೆಲ್ ಇತಿಹಾಸದಲ್ಲಿಯೇ ಇಷ್ಟು ಚಿಕ್ಕ ವಯಸ್ಸಿನಲ್ಲಿ ಪ್ರಶಸ್ತಿ ಪಡೆಯುತ್ತಿರುವ ಎರಡನೇ ವ್ಯಕ್ತಿ. ತವಕ್ಕುಲ್ ತಂದೆ ಅಬ್ದೆಲ್ ಸಲಾಂ ಕರ್ಮಾನ್ ಕೆಲವು ವರ್ಷಗಳ ಹಿಂದೆ ಸರ್ವಾಧಿಕಾರಿ ಸಾಲೆಹ್ ಸರ್ಕಾರದಲ್ಲಿ ಕಾನೂನು ಸಚಿವರಾಗಿ ಕೆಲಸ ಮಾಡಿದ ನಂತರ ರಾಜೀನಾಮೆ ಕೊಟ್ಟು ಹೊರಗೆ ಬಂದವರು. ಸೋದರ ತಾರೀಖ್ ಕರ್ಮಾನ್ ಕವಿಯಾಗಿ ಹೆಸರು ಮಾಡಿದ್ದಾರೆ. ಗಂಡನ ಹೆಸರು ಮೊಹ್ಮದ್ ಅಲ್-ನಮ್ಮ. ತವಕ್ಕುಲ್‌ಗೆ ಮೂವರು ಮಕ್ಕಳೂ ಇದ್ದಾರೆ. ಬರೀ ಪತ್ರಕರ್ತೆ ಮಾತ್ರವೇ ಆಗಿರದ ತವಕ್ಕುಲ್ ರಾಜಕೀಯವಾಗಿಯೂ ಸಕ್ರಿಯರಾಗಿದ್ದಾರೆ. ಅವರು ತಮ್ಮ ದೇಶದ ಸಂಸತ್ತಿನಲ್ಲಿ ವಿರೋಧ ಪಕ್ಷವಾಗಿರುವ ಅಲ್-ಇಸ್ಲಾಹ್ ಪಕ್ಷದ ಪ್ರತಿನಿಧಿ, ದೇಶದ ಶೂರಾ ಕೌನ್ಸಿಲ್‌ನ (ಕೇಂದ್ರ ಸಮಿತಿಯ) ಅಧಿಕಾರ ಹುದ್ದೆಯಲ್ಲಿಯೂ ಇದ್ದಾರೆ.

ಪತ್ರಕರ್ತೆಯೊಬ್ಬರು ಈಚಿನ ದಶಕದಲ್ಲಿ, ಒಂದು ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಹೀಗೆ ಮುಂಚೂಣಿಯಲ್ಲಿ ಇರುವ ನಿದರ್ಶನ ವಿರಳ ಅಥವಾ ಇಲ್ಲವೇ ಇಲ್ಲ. ಎಂದರೂ ನಡೆದೀತು. ಹೋರಾಟವನ್ನು ದೂರ ನಿಂತು ಮಾತ್ರ ವರದಿ ಮಾಡುವ ಸ್ವಾತಂತ್ರ್ಯಕ್ಕಿಂತ ಅದರ ಒಳಗೇ ಇದ್ದು ವರದಿ ಮಾಡುವುದು ಮಹಾತ್ಮ ಗಾಂಧಿ ತೋರಿದ ದಾರಿ, ತವಕ್ಕುಲ್ ನಮ್ಮಂಥ ಎಲ್ಲ ಪತ್ರಕರ್ತರಿಗೆ ಒಂದು ದೊಡ್ಡ ಮಾದರಿ, ಭರವಸೆ ಮತ್ತು ನಂಬಿಗೆ.

16-10-2011

# ಕನ್ನಡದ ಕೆಲಸವನ್ನು

# ಹೀಗೂ ಮಾಡಬಹುದು

ಆ ಇಬ್ಬರೂ ಶಿಕ್ಷಕರು ನನ್ನ ಮುಂದೆ ಹಲವು ಪುಸ್ತಕ, ಕಡತ, ಆಲ್ಬಂಗಳನ್ನು ಇಟ್ಟುಕೊಂಡು ಕುಳಿತಿದ್ದರು. ನಾನು ಕೆಲವು ತಿಂಗಳ ಹಿಂದೆ ಹೊಸ ಹುಡುಗ ಹುಡುಗಿಯರಿಗೆ ಓದುವ, ಬರೆಯುವ ಹವ್ಯಾಸ ಕಡಿಮೆ ಆಗಿರುವ ಕುರಿತು ಅಂಕಣ ಬರೆದುದಕ್ಕೆ ಅವರು ತಮ್ಮದೇ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿದ್ದಂತೆ ಇತ್ತು. ಅವರೇನು ಶಿಕ್ಷಣ ಕ್ಷೇತ್ರಕ್ಕೆ ಹೆಸರಾದ ಬೆಂಗಳೂರು, ಮಂಗಳೂರು, ಮೈಸೂರು, ಧಾರವಾಡದ ಶಿಕ್ಷಕರಲ್ಲ. ಕರ್ನಾಟಕದ ಗಡಿಜಿಲ್ಲೆಯಲ್ಲಿ ಇರುವ ಹಾಳು ಕೊಂಪೆಯಂಥ ಒಂದು ಊರಿನ ಶಿಕ್ಷಕರು. ಒಬ್ಬ ಶಿಕ್ಷಕ ಕಳೆದ 20 ವರ್ಷಗಳಿಂದ ಹೊಸ ಬಗೆಯ ಶಿಕ್ಷಣದ ಕೈಂಕರ್ಯವನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡಿದ್ದರೆ ಇನ್ನೊಬ್ಬರು ಕಳೆದ 10 ವರ್ಷಗಳಿಂದ ಭಿನ್ನ ಬಗೆಯ ಶಿಕ್ಷಕ ವೃತ್ತಿ ನಡೆಸಿಕೊಂಡು ಬರುತ್ತಿದ್ದಾರೆ. ಅವರಿಬ್ಬರೂ ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕು ಕನ್ನಮಂಗಲ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರು. ಅವರಲ್ಲಿ ಹಿರಿಯ ಶಿಕ್ಷಕರ ಹೆಸರು ಎಂ.ದೇವರಾಜ್, ಕಿರಿಯ ಶಿಕ್ಷಕರ ಹೆಸರು ಎಸ್.ಕಲಾಧರ. ದೇವರಾಜ್ ಅವರಿಗೆ ಈಗ ಪಕ್ಕದ ಊರಿಗೆ ವರ್ಗವಾಗಿದೆ.

ಎಲ್ಲರ ಹಾಗೆ ಇವರೂ ಟಿಸಿಎಚ್ ಮಾಡಿ ಶಿಕ್ಷಕ ವೃತ್ತಿ ಆರಿಸಿಕೊಂಡವರು. ಆದರೆ, ಟಿಸಿಎಚ್‌ನಲ್ಲಿ ತಾವು ಕಲಿತುದಕ್ಕೂ 'ಕಲಿಸುವಿಕೆ'ಗೂ ಏನೇನೂ ಸಂಬಂಧವಿಲ್ಲ ಎಂದು ಶಾಲೆಯಲ್ಲಿ ಕೆಲಸ ಪ್ರಾರಂಭಿಸಿದ ಕೆಲವೇ ದಿನಗಳಲ್ಲಿ ಗೊತ್ತಾಯಿತು. ಈಗಿನ ವ್ಯವಸ್ಥೆಯಲ್ಲಿ ಒಳ್ಳೆಯ ವಿದ್ಯಾರ್ಥಿ ಎಂದರೆ ಚೆನ್ನಾಗಿ ಪಾಠ ಕೇಳುವುದು, ಕಲಿಯುವುದು, ಉತ್ತರಗಳನ್ನು ಕಂಠಪಾಠ ಮಾಡುವುದು, ಕೊಟ್ಟ ಹೋಮ್ ವರ್ಕನ್ನು ಅಮ್ಮ ಅಥವಾ ಅಪ್ಪನ ಕಡೆಯಿಂದಲಾದರೂ ಮಾಡಿಸಿಕೊಂಡು ಬರುವುದು ಮತ್ತು ಪರೀಕ್ಷೆಯಲ್ಲಿ ಚೆನ್ನಾಗಿ ಅಂಕ ಗಳಿಸುವುದು. ಶಿಕ್ಷಕರೂ ಹಾಗೆಯೇ ಅಂದುಕೊಂಡಿದ್ದಾರೆ; ತಂದೆ ತಾಯಿಯರ ಅಭಿಪ್ರಾಯವೂ ಅದೇ. ಶೇ 90ಕ್ಕಿಂತ ಕಡಿಮೆ ಅಂಕ ಗಳಿಸುವ ವಿದ್ಯಾರ್ಥಿ ನಾಲಾಯಕ್ ಎಂದೇ ಇಬ್ಬರದೂ ಭಾವನೆ. ಒಟ್ಟು ವಿದ್ಯಾರ್ಥಿ ಜೀವನದಲ್ಲಿ ಆತನಿಗೆ ಅಭಿವ್ಯಕ್ತಿಗೆ ದಾರಿಯೇ ಇಲ್ಲ. ಅಪ್ಪಿತಪ್ಪಿ ಒಬ್ಬ ವಿದ್ಯಾರ್ಥಿ ಬಾಯಿ ಬಿಟ್ಟರೆ ಆತನ ತಲೆ ಬಡಿದು ಕೂಡ್ರಿಸುವ ಶಿಕ್ಷಕರೇ ಹೆಚ್ಚು. ಪ್ರಶ್ನೆ ಕೇಳುವವರನ್ನು ಯಾರೂ ಇಷ್ಟ ಪಡುವುದಿಲ್ಲ. 'ನಿನಗೇನು ಗೊತ್ತು ಹೇಳಿದಷ್ಟನ್ನು ಮಾಡಿಕೊಂಡು ಬಾ' ಎನ್ನುವವರೇ ಎಲ್ಲರೂ.

ಕಲಾಧರ್ ಇದರಲ್ಲಿ ಏನೋ ಐಬಿದೆ ಎನಿಸತೊಡಗಿತು. ದೊಡ್ಡ ದೊಡ್ಡ ಪದವಿ ಪಡೆದವರು ಕೂಡ ವೇದಿಕೆಯ ಮೇಲೆ ನಿಂತು ಮಾತನಾಡುವಾಗ ಥರ ಥರ ನಡುಗುತ್ತಾರೆ. ತನಗೆ ಅನಿಸಿದ್ದನ್ನು ನಾಲ್ಕು ವಾಕ್ಯಗಳಲ್ಲಿ ಬರೆದು ಕೊಡು ಎಂದರೆ ತಡವರಿಸುತ್ತಾರೆ. ಇದು ಪ್ರಾಥಮಿಕ ಮತ್ತು ಪ್ರೌಢ ಹಂತದಲ್ಲಿ ಅಭಿವ್ಯಕ್ತಿಗೆ ಅವಕಾಶವೇ ಇಲ್ಲದ ಶಿಕ್ಷಣ ಕ್ರಮದ ಫಲ ಎಂದು ಅವರಿಗೆ ಭಾಸವಾಗತೊಡಗಿತು. ಶಾಲೆಯಲ್ಲಿ ಗಮನವಿಟ್ಟು ಕಲಿಯದ, ಹೋಮ್ ವರ್ಕ್ ಮಾಡಿಕೊಂಡು ಬರದ, ಪರೀಕ್ಷೆಯಲ್ಲಿ ಸಾಕಷ್ಟು ಅಂಕ ಗಳಿಸದ ವಿದ್ಯಾರ್ಥಿಗೂ ಸಂವೇದನೆಗಳಿವೆ, ಕಾರಣಗಳಿವೆ, ಕತೆಗಳಿವೆ, ಹಾಡುಗಳಿವೆ, ಚಿತ್ರಗಳಿವೆ, ಎದೆಯಾಳದಲ್ಲಿ ಹೊರಹೊಮ್ಮಲಾಗದೆ ಉಳಿದ ನೂರು ಮಾತುಗಳಿವೆ ಎಂದು ಅರ್ಥ ಮಾಡಿಕೊಂಡರು. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಶಾಲೆಯ ಮಕ್ಕಳಿಗೆ ಏನಾದರೂ ಬರೆಯಿರಿ ಎಂದರು. ಅದಕ್ಕೆ ಒಂದು ವೇದಿಕೆ ನಿರ್ಮಿಸಿದರು. 'ನವಿಲ ಗರಿ' ಎಂಬ ತಿಂಗಳ ಪತ್ರಿಕೆ ಹುಟ್ಟು ಹಾಕಿದರು. ಪತ್ರಿಕೆಯ ಪ್ರಕಟಣೆಗೆ ತಾವೇ ಶಿಕ್ಷಕರೆಲ್ಲ ಸೇರಿ ದುಡ್ಡು ಹಾಕಿದರು. ಶಾಲೆಯ ಪಾಟಿಚೀಲದ ಭಾರದಡಿಯಲ್ಲಿ ಮೂಕವಾಗಿದ್ದ ಮಕ್ಕಳು ಮಾತನಾಡಿದ್ದು 'ನವಿಲ ಗರಿ'ಯ ಮೂಲಕ. ಆರಂಭದಲ್ಲಿ ಮಕ್ಕಳು ಶಾಲೆಯ ಪಠ್ಯಪುಸ್ತಕದಲ್ಲಿ ಇದ್ದ ವಸ್ತುಗಳನ್ನೇ ಆರಿಸಿಕೊಂಡು ಬರೆದರು. ಭಾರತ ದೇಶ, ಕನ್ನಡ, ಪರಿಸರ... ಎಂದು ಗೋಳುಗಳನ್ನು ತೋಡಿಕೊಂಡರು. ಅದರ ಆಚೆ ಅವರ ಚಿಂತನೆ ಹರಿದಿರಲಿಲ್ಲ. ಕಲಾಧರ್ ಮಕ್ಕಳಿಗೆ ಹೇಳಿದರು: 'ಭಾರತದ ಬಗ್ಗೆ ಬರೆಯಲು ಬೇಕಾದಷ್ಟು ಜನರು ಇದ್ದಾರೆ ಕಣಯ್ಯ, ನಿಮ್ಮ ಬಚ್ಚಲು ಮನೆಯ ಬಗ್ಗೆ ಬರೆಯಿರಿ, ಒಲೆ ಉರಿಸಲು ನಿಮ್ಮಮ್ಮ ಪಡುವ ಕಷ್ಟದ ಬಗ್ಗೆ ಬರೆಯಿರಿ, ಹೊಲದಲ್ಲಿ ಉಳುವ ನಿಮ್ಮ ತಂದೆಯ ಬಗ್ಗೆ ಬರೆಯಿರಿ. ನಿಮ್ಮ ಗದ್ದೆಯಲ್ಲಿ ತೊನೆಯುವ ಬತ್ತದ ಬಗ್ಗೆ ಬರೆಯಿರಿ, ರಾಗಿಯ ಬಗ್ಗೆ ಬರೆಯಿರಿ...' 'ಹೌದೇ? ಅದನ್ನೆಲ್ಲ ಬರೆಯಬಹುದೇ' ಎಂದುಕೊಂಡು ಮಕ್ಕಳು

ಹೊಸ ಉಮೇದಿಗೆ ಒಳಗಾದರು. ಅವರ ಭಾವ ಜಗತ್ತೇ ಬದಲಾಯಿತು. ತಮ್ಮ ಪರಿಸರದಲ್ಲಿ ಕಂಡುದರ ಬಗ್ಗೆ ಅವರು ಬರೆಯತೊಡಗಿದರು. ತಮ್ಮ ಕಷ್ಟ ಸುಖಗಳ ಬಗ್ಗೆ ಬರೆದರು. ಮಳೆಯ ಬಗ್ಗೆ ಬರೆದರು, ಗಾಳಿಯ ಬಗ್ಗೆ ಬರೆದರು. ಹಕ್ಕಿ, ನಕ್ಷತ್ರಗಳ ಬಗ್ಗೆ ಬರೆದರು... ಹಾಗೆಂದು ಎಲ್ಲವೂ ಅದ್ಭುತವಾಗಿತ್ತು ಎಂದು ಅಲ್ಲ. ಹಳ್ಳಿಯ ಮಗುವಿನ ತೊದಲು, ಕಾಗುಣಿತ ದೋಷ ಎಲ್ಲವೂ ಅದರಲ್ಲಿತ್ತು. ಅದನ್ನು ಗುರುಗಳು ತಿದ್ದಿ ಬರೆಯುವಂತೆ ಬೆನ್ನು ತಟ್ಟಿದರು. ಮಕ್ಕಳು ಮತ್ತೆ ಬರೆದರು. ಈಗಲೂ ಬರೆಯುತ್ತಲೇ ಇದ್ದಾರೆ. ಆರು ವರ್ಷಗಳ ಕಾಲ ಸತತವಾಗಿ 'ನವಿಲ ಗರಿ' ಪ್ರಕಟವಾಯಿತು. ಕಳೆದ ವರ್ಷ 100 ಪುಟದ 'ಶಾಮಂತಿ' ಎಂಬ ಒಂದು ವಿಶೇಷಾಂಕವನ್ನೇ ಮಕ್ಕಳು ಹೊರತಂದರು. 'ಶಾಮಂತಿ' ಎಂದರೆ ಸೇವಂತಿಗೆ ಎಂದು ಅರ್ಥ. ಮಕ್ಕಳೇ ಈ ಪುಸ್ತಕಕ್ಕೆ ಈ ಹೆಸರನ್ನೂ ಕೊಟ್ಟವರು. ಅದರಲ್ಲಿ ಲೇಖನಗಳನ್ನೂ ಅವರೇ ಬರೆದರು. ಅದಕ್ಕೆ ತಕ್ಕ ಚಿತ್ರಗಳನ್ನೂ ಅವರೇ ಬಿಡಿಸಿದರು. ಆ ಪುಸ್ತಕಕ್ಕೆ 'ಆದಿಮ'ದ ಕೋಟಗಾನಹಳ್ಳಿ ರಾಮಯ್ಯ ಪ್ರೀತಿಯಿಂದ ಮುನ್ನುಡಿ ಬರೆದರು.

ಕಲಾಧರ್ ಒಂದು ಕಡೆ ಹೀಗೆ ಮಕ್ಕಳಿಗೆ ಅಭಿವ್ಯಕ್ತಿಯ ದಾರಿಗಳನ್ನು ತೋರಿಸುತ್ತಿದ್ದರೆ ಇತ್ತ ಎಂ.ದೇವರಾಜ್ ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸುವ ಕೆಲಸ ಮಾಡಿದರು. ಕನ್ನಮಂಗಲಕ್ಕೆ ಪತ್ರಿಕೆಗಳು ಬರುವುದಿಲ್ಲ. ತಮ್ಮ ಮನೆಗೆ ತರಿಸುವ 'ಪ್ರಜಾವಾಣಿ' ಪತ್ರಿಕೆಯನ್ನೇ ಶಾಲೆಗೆ ತೆಗೆದುಕೊಂಡು ಹೋಗಿ ಮಕ್ಕಳಿಗೆ ಓದಲು ಕೊಡುತ್ತಾರೆ. ಮುಖಪುಟದ ಮುಖ್ಯಸುದ್ದಿಗಳು ಮಾತ್ರವಲ್ಲದೇ ಅಂಕಣಗಳು, ಸುಭಾಷಿತ, ಕರುಣಾಳು ಬಾ ಬೆಳಕೆ, ಸಾಪ್ತಾಹಿಕ ಪುರವಣಿಯಲ್ಲಿನ ಮಕ್ಕಳ ಪುಟ, ಕರ್ನಾಟಕ ದರ್ಶನ, ಕ್ರೀಡೆ, ಶಿಕ್ಷಣ ಪುರವಣಿಯ ಲೇಖನಗಳನ್ನೆಲ್ಲ ಕತ್ತರಿಸಿ ಒಂದು ಆಲ್ಬಂ ತಯಾರಿಸಿ ಆಗಾಗ ಆ ಲೇಖನಗಳನ್ನು ಓದಲು ಕೊಡುತ್ತಾರೆ. ಕನ್ನಮಂಗಲದ ಮಕ್ಕಳಿಗೆ ಮೈಸೂರು ದಸರಾ ಹೇಗಿರುತ್ತದೆ ಎಂದೂ ಗೊತ್ತಿರಲಿಲ್ಲ. 'ಪ್ರಜಾವಾಣಿ'ಯಲ್ಲಿ ಬಂದ ಚಿತ್ರ ಸಹಿತ ಸುದ್ದಿಯನ್ನೇ ನೋಡಿ ತಿಳಿದುಕೊಂಡರು. ಹೊರಗಿನ ಜಗತ್ತಿಗೆ ತೆರೆದುಕೊಳ್ಳುವ ದಾರಿ ಇದು.

ಒಬ್ಬ ವಿದ್ಯಾರ್ಥಿ ಏಳು ವರ್ಷಗಳ ಕಾಲ ಕನ್ನಮಂಗಲ ಶಾಲೆಯಲ್ಲಿ ಕಲಿತು ಪ್ರೌಢ ಶಿಕ್ಷಣಕ್ಕೆ ಬೇರೆ ಶಾಲೆಗೆ ಹೋಗುವಾಗ ಆತನಿಗೆ ಈ ಶಾಲೆಯ ಶಿಕ್ಷಕರೆಲ್ಲ ಸೇರಿ ಬರೆದ ಒಂದು ಪತ್ರವನ್ನು ಕೊಡುತ್ತಾರೆ. ಆರು ಪುಟಗಳ ಕೈ ಬರಹದ ಈ ಪತ್ರದಲ್ಲಿ ಆ ವಿದ್ಯಾರ್ಥಿ ಭವಿಷ್ಯದಲ್ಲಿ ಸಾಗಬೇಕಾದ ದಾರಿಯ ಕೈಮರ ಇರುತ್ತದೆ... "ಮುಂದಿನ ಶಾಲೆಯಲ್ಲಿ, ಕಾಲೇಜಿನಲ್ಲಿ ಓದುವ ಕಡೆ ನಿನ್ನ ಗಮನವಿರಲಿ, ಹಾಗೆಂದು ಬರೀ ಓದುವ ಹುಳುವೂ ಆಗದೇ ನಿನ್ನ ವ್ಯಕ್ತಿತ್ವವನ್ನು ರೂಪಿಸಿಕೋ, ಏಕೆಂದರೆ ಶಿಕ್ಷಣ ಎನ್ನುವುದು ಬರೀ ಅಂಕಗಳಿಗೆ ಸಂಬಂಧಿಸಿದ್ದಲ್ಲ. ಅದು ನಿನ್ನ ಇಡೀ ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದು, ನಿನ್ನ ಯೋಚನೆ, ಚಿಂತನೆ, ಮಾತು, ಕೆಲಸ, ಮೌನ, ಸಂಬಂಧ, ಸಹವಾಸ, ಅಭ್ಯಾಸ, ಹವ್ಯಾಸ ಇವೆಲ್ಲವೂ ಶಿಕ್ಷಣದ ಪ್ರತಿಫಲ. ಹೀಗೆ ನೀನು ತಯಾರಾದರೆ ಮಾತ್ರ ನೀನು ಹುಟ್ಟಿದ ಈ ದೇಶಕ್ಕೆ ನಿನ್ನಿಂದ ಏನಾದರೂ ಉಪಯೋಗವಾಗಲು ಸಾಧ್ಯ...ನಮ್ಮ ಯಾರ ಜೀವನಗಳೂ ಬರಿಯ ನಮ್ಮ

ಜೀವನಗಳಲ್ಲ. ನಮ್ಮ ವೈಯಕ್ತಿಕ ಕಷ್ಟ-ಸುಖಗಳ ಜತೆಗೆ ಸಮಾಜದಿಂದಲೂ ನಾವು ಬಹಳಷ್ಟು ತೆಗೆದುಕೊಂಡಿರುತ್ತೇವೆ. ಆ ಋಣವನ್ನು ನೀನು ಸಮಾಜಕ್ಕೆ ತೀರಿಸಬೇಕು ಅಲ್ಲವೇ? ವರ್ಷಗಳ ಸಹವಾಸದಲ್ಲಿ ನಾವು ನಿನ್ನ ಮೇಲೆ ಹೂಡಿರುವ ಸಮಯದ ಬಂಡವಾಳ, ಸಮಾಜ ಹೂಡಿರುವ ದುಡ್ಡಿನ ಬಂಡವಾಳ ಇವೆಲ್ಲ ವ್ಯರ್ಥವಾಗಬಾರದು ಎಂದೇ ನಮ್ಮ ಆಸೆ...” ಪತ್ರ ಹೀಗೆಯೇ ಸಾಗುತ್ತದೆ. ಕನ್ನಮಂಗಲ ಶಾಲೆಯಿಂದ ಹೊರ ಹೋಗುವ ವಿದ್ಯಾರ್ಥಿ ಮುಂದೆ ತನ್ನ ಜೀವನದಲ್ಲಿ ಜವಾಬ್ದಾರಿಯ ಪ್ರಜೆಯಾಗಲಿ ಎಂದು ಬಯಸುತ್ತದೆ...

ಈಗ ಆ ಶಾಲೆಯಲ್ಲಿ ಏನೇ ಕಾರ್ಯಕ್ರಮ ನಡೆಯಲಿ ಮಕ್ಕಳೇ ಸ್ವಾಗತಿಸುತ್ತಾರೆ. ಅವರೇ ಅತಿಥಿಗಳನ್ನು ಪರಿಚಯಿಸುತ್ತಾರೆ. ಕಾರ್ಯಕ್ರಮ ಎಷ್ಟೇ ದೊಡ್ಡದಿರಲಿ, ಅಧ್ಯಕ್ಷತೆ ಒಬ್ಬ ಮಗುವಿನದೇ ಆಗಿರುತ್ತದೆ. ಆತನೇ ಅಧ್ಯಕ್ಷ ಭಾಷಣವನ್ನೂ ಮಾಡುತ್ತಾನೆ. ಅಥವಾ ಮಾಡುತ್ತಾಳೆ. ಶಾಲೆಯ ಮುಖ್ಯೋಪಾಧ್ಯಾಯರು ಪಕ್ಕದ ಕುರ್ಚಿಯಲ್ಲಿ ಕುಳಿತುಕೊಂಡಿರುತ್ತಾರೆ ಅಷ್ಟೇ. ಕಲಾಧರ್ ಮತ್ತು ದೇವರಾಜ್ ಅವರ ಅದೃಷ್ಟ ಎಂದರೆ ಅವರ ಜತೆಗೆ ಕೆಲಸ ಮಾಡುವ ಶಾಲೆಯ ಇತರ ಎಲ್ಲ ಶಿಕ್ಷಕರು, ಶಿಡ್ಲಘಟ್ಟ, ಕೋಲಾರಗಳಲ್ಲಿ ಇರುವ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ಇವರ ಬೆನ್ನು ತಟ್ಟಿದರು. ಕನ್ನಮಂಗಲ ಊರಿನ ಜನ ಇವರ ಬೆನ್ನಿಗೆ ನಿಂತರು. ಊರಿನ ಯುವಕರೆಲ್ಲ ಸೇರಿಕೊಂಡು ಕಟ್ಟಿರುವ ಸ್ನೇಹ ಯುವಕರ ಸಂಘ ತನು ಮನ ಧನದ ಸಹಾಯ ಮಾಡಿತು.

ಕಲಾಧರ್ ಮತ್ತು ದೇವರಾಜ್ ಅವರಿಬ್ಬರೂ ಪ್ರಾಥಮಿಕ ಹಂತದ ಕಲಿಕೆಗೆ ಒಂದು ಹೊಸ ಭಾಷ್ಯವನ್ನೇ ಬರೆಯುತ್ತಿದ್ದಾರೆ ಎಂದು ಅನಿಸುತ್ತದೆ. ಶಿಕ್ಷಣ ಇಲಾಖೆಯು ಶಿಕ್ಷಕರ ಕಲಿಸುವ ಸಾಮರ್ಥ್ಯವನ್ನು ಉತ್ತಮ ಪಡಿಸಲು ಹತ್ತು ಹಲವು ಬಗೆಯ ತರಬೇತಿಗಳನ್ನು ಕೊಡುತ್ತಿದೆ. ದುರಂತ ಎಂದರೆ ಶಿಕ್ಷಕರಿಗೆ ಅದು ಇನ್ನೊಂದು ಹೊರೆ ಅನಿಸುತ್ತದೆ. ಜೀವನದ ಅನುಭವಗಳ ಮೂಸೆಯಿಂದ ಹೊರತೆಗೆದ ಇಂಥ ಪ್ರಯೋಗಗಳು ಮಕ್ಕಳ ಮನಸ್ಸಿನಲ್ಲಿ ಹೊಸ ಆತ್ಮವಿಶ್ವಾಸವನ್ನು ಮೂಡಿಸುವಂಥವು. ಹಳ್ಳಿಯಲ್ಲಿ ಓದುವ ಮಕ್ಕಳಲ್ಲಿ ಇರುವ ದೊಡ್ಡ ಕೊರತೆ ಅದು. ಕಲಾಧರ್ ಮತ್ತು ದೇವರಾಜ್ ಅವರ ಕಲಿಕೆಯ ಈ ಪ್ರಯೋಗಗಳು ಕನ್ನಡದ ಮನಸ್ಸುಗಳನ್ನು ಅರಳಿಸುವಲ್ಲಿ ಬಹುಮುಖ್ಯ ಎಂದು ನನಗೆ ಅನಿಸಿತು. ಹಳ್ಳಿಗಳ ಶಾಲೆಗಳಲ್ಲಿ ಮಕ್ಕಳು ಕಡಿಮೆ ಎಂದು ಅವುಗಳನ್ನು ಮುಚ್ಚುತ್ತಿರುವ, ಚಿಕ್ಕ ಪುಟ್ಟ ಊರುಗಳಲ್ಲಿಯೂ ಕಾನ್ವೆಂಟ್‌ಗಳು ತಲೆ ಎತ್ತುತ್ತಿರುವ ಈ ಸಂದರ್ಭದಲ್ಲಿ ಕನ್ನಮಂಗಲದ ಕನ್ನಡ ಮಾಧ್ಯಮ ಶಾಲೆಯಲ್ಲಿ ನಡೆಯುತ್ತಿರುವ ಇಂಥ ಪ್ರಯೋಗಗಳು ನಮ್ಮ ಮಕ್ಕಳನ್ನು ಮತ್ತೆ ಮಾತೃಭಾಷೆ ಮಾಧ್ಯಮದ ಶಿಕ್ಷಣದ ಕಡೆಗೆ ಸೆಳೆಯುವಂತೆ ಆಗಬೇಕು. ರಾಜ್ಯೋತ್ಸವ ಹೊಸ್ತಿಲಲ್ಲಿ ಇರುವ ಈ ಸಂದರ್ಭದಲ್ಲಿ ಕಲಾಧರ್ ಮತ್ತು ದೇವರಾಜ್ ಅವರಂಥ ಎಲೆ ಮರೆಯ ಶಿಕ್ಷಕರನ್ನು ಈ ಕಾರಣಕ್ಕಾಗಿಯೇ ನೆನಪಿಸಿಕೊಳ್ಳಬೇಕು ಎಂದೂ ಅನಿಸಿತು.

30-10-2011

# ಮೆಚ್ಚುಗೆಯ ಮಾತು

ನಾಲ್ಕನೇ ಆಯಮದ ಮೊದಲ ಎರಡು ಸಂಪುಟ ಕುರಿತು

Enjoying reading of your books Naalkne Aayama since morning. Excellant insightful writing. volume -2 has more kalada hangillada lekhanagalu you are simple and direct about many complex issues. This is a difficult position to achieve.

-ವಿವೇಕ ಶಾನಭಾಗ

**ತಿಳಿನೀರಿನ ಗುಣದ ಜೀವಪರ ಬರಹ**

ನಾಲ್ಕನೇ ಆಯಮ ಎರಡು ಸಂಪುಟಗಳಲ್ಲಿ ಪ್ರಕಟವಾದ ಪದ್ಮರಾಜ ದಂಡಾವತಿಯವರ ಅಂಕಣ ಬರಹವಾಗಿದೆ. ದಿನಚಲಯ ಸುದ್ದಿ ವಾರದ ಕೊನೆಯಲ್ಲಿ ರಾಜಕೀಯ ಚರಿತ್ರೆಯಾಗಿ ರೂಪಗೊಂಡ ಅವರ ಬರವಣಿಗೆ ಸಂಜೆ ಸುದ್ದಿಯಾಗಿ ಮರೆತು ಹೋಗುವ ಕಂಟಕಕ್ಕೆ ಗುಲಿಯಾಗಿಲ್ಲ. ವಿವರಗಳಲ್ಲಿ 'ದೇವರನ್ನು ಕಾಣಬಲ್ಲ ಮಾನವೀಯ ಒಳನೋಟದ ಪತ್ರಕರ್ತರಾಗಿರುವುದರಿಂದ ಅವರು ಸುದ್ದಿಸಂತೆಯ ತಾಜಾತನದ ಅವಸರಕ್ಕೆ, ಓದುಗರ ವರ್ತಮಾನದ ತಾತ್ಕಾಲಕ ಹಸಿವನ್ನು ತೃಪ್ತಿಪಡಿಸುವ ಅಮಿಷಕ್ಕೆ ಒಳಗಾಗಿ ತಮ್ಮ ಸಂವೇದನೆಗೆ ಜಡತ್ವ ತಂದುಕೊಂಡವರಲ್ಲ. ತನ್ನ ಕಾಲದ ರಾಜಕೀಯ ವ್ಯವಸ್ಥೆಯ ವಿದ್ಯಮಾನಗಳಿಗೆ, ಸಮುದಾಯ ಕೇಂದ್ರಿತ ಸಾಂಸ್ಕೃತಿಕ 'ಸಂದರ್ಭಸ್ವಂಬ ಸಮಕಾಲೀನ ವಿಶ್ಲೇಷಣೆಗೆ ಮಾತ್ರ ಅವರು ತಮ್ಮ ಬರಹಗಳನ್ನು ಸೀಮಿತಗೊಳಿಸಿಕೊಳ್ಳದೆ ರಾಜಕೀಯ ಚಿಂತನಾ ಪರಂಪರೆಯ ಚಾಲತ್ರಿಕವೂ ಭಏಷ್ಯಮುಖಿಯೂ ಆದ 'ಸಂದರ್ಭಮುಕ್ತ' ಜ್ಞಾನಮೀಮಾಂಸೆಯ ಸಂಶ್ಲೇಷಣೆಯಾಲ ವಿಸ್ಕಲಸಿಕೊಂಡಿದ್ದಾರೆ. ವರ್ತಮಾನದ ಯೋಚನೆಗಳು, ಆಚರಣೆಗಳು, ತೀರ್ಮಾನಗಳು ಮುಂದಿನ ತಲೆಮಾಲನವರ ಇತಿಹಾಸವಾಗಿ ರೂಪುಗೊಳ್ಳುವುದಲಂದ ಕಾಲವನ್ನು ಮೀರುವ ಗುಣವನ್ನು ಲೇಖಕ ಪಡೆಯುವುದು ಅಗತ್ಯ. ವಿಷಯ ವಸ್ತುವಿನ ವೈವಿಧ್ಯದಷ್ಟೇ ನಿರೂಪಣಾ ವಾಸ್ತು ವಿಧಾನದಲ್ಲಿ ಅನನ್ಯತೆ ಕಾಪಾಡಿಕೊಂಡಿದ್ದರಿಂದ 'ನಾಲ್ಕನೇ ಆಯಾಮ' ಉಪಯುಕ್ತ ಆಕರ ಗ್ರಂಥವಾಗಿದೆ.

ಚಲಿಸುವ ಜೀವಂತ ಜಗತ್ತು ವರ್ತಮಾನದ ಕ್ಷಣಗಳಲ್ಲಿ ಮೂರ್ತವಾಗಿ ಜರುಗುವುದನ್ನು ದಾಖಲಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನಿಟ್ಟುಕೊಂಡ ಬರವಣಿಗೆ ಎಡ-ಬಲ, ಹಿಂದೆ-ಮುಂದೆ ಗಮನಿಸುತ್ತ ಸಾಗಬೇಕಾಗುತ್ತದೆ. ಈ ಅರ್ಥದಲ್ಲಿ ದಂಡಾವತಿಯವರ ಬರೆಹ ಚತುಷ್ಪಥ ಕೂಟವಾಗಿದೆ.

ದಾಹವನ್ನು ತೀಲಸಬಲ್ಲ ತಿಆನೀಲನ ಪಾರದರ್ಶಕ ಗುಣದ ಸರಳ ನಿರಾಭರಣ ಛಂದಸ್ಸಿನ ಅವರ ಭಾಷೆ ಪತ್ರಿಕಾ ಪ್ರಪಂಚದ ಸ್ಪಷ್ಟ, ನಿಷ್ಠುರ ಸಂವಹನಕ್ಕೆ ಒಂದು ಅನುಕರಣೀಯ ಮಾದಲಯಾಲಿ ನನಗೆ ಕಂಡಿದೆ.

**-ಶ್ರೀಧರ ಬಳಗಾರ, ಪ್ರಜಾವಾಣಿಯಲ್ಲಿ ವಿಮರ್ಶೆ ಮಾಡುತ್ತ**

**ಒಟ್ಟಾರೆ ಲೇಖನಗಳ ಬಗ್ಗೆ**

ಬಹಳ ದಿನಗಳಿಂದ ನಿಮಗೆ ಬರೆಯಬೇಕು ಅನಿಸುತ್ತಿತ್ತು. ನಿಮ್ಮ ಅಂಕಣ ಅದ್ಭುತವಾಗಿರುತ್ತದೆ. ಶೈಲಿ-ಚಿಂತನೆ-ಗ್ರಹಣ ಶಕ್ತಿ-ಅಳ-ಗಾಂಭೀರ್ಯ ಯಾವುದೇ ದೃಷ್ಟಿಯಿಂದ ನೋಡಿದರೂ ಫಲಪೂರ್ಣ ಲೇಖನ ಅನಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ಇಷ್ಟು ಚೆನ್ನಾಗಿ ಬರೆಯುವ ಲೇಖಕರನ್ನು ನಾನು ಕಂಡಿಲ್ಲ. ನಿಮ್ಮ ಬರಹ ಇದೇ ರೀತಿ ಮುಂದುವಲಯ ಎಂದು ಹಾರೈಸುತ್ತೇನೆ. ಸಾಧ್ಯವಾದರೆ ಬಿಡುವಾದಾಗ ಭೇಟಿ ಮಾಡೋಣ. ನಿಮ್ಮ ಅಭಿಮಾನಿ.

**-ಡಾ.ಕೆ.ಎಂ.ಮಹೇಂದ್ರನಾಥ**

**ಸ್ಥಾಪಕ : ಬೆಂಗಳೂರು ಆರ್ಥರೈಟಿಸ್ ರಿಸೋರ್ಸ್ ಸೆಂಟರ್**

ಮುರುಘಾ ಶರಣರು ನಿಜವನ್ನೇ ಹೇಳಿದ್ದಾರೆ

ವೃತ್ತಿ ಆತ್ಮಾವಲೋಕನ ಪ್ರಾಮಾಣಿಕಲಿಂದ ಮಾತ್ರ ಸಾಧ್ಯ ಸರ್. ಈ ಸಂದರ್ಭದಲ್ಲಿ ನಿಮ್ಮಿಂದ ಲೇಖನ ನಿರೀಕ್ಷಿಸಿದ್ದೆ. ಸಂತೋಷವಾಯ್ತು.

**-ರೂಪ ಹಾಸನ್**

ಭೇಷ್! ನಿಮ್ಮ ಕರೇಜ್ ದೊಡ್ಡದು.

**-ಎನ್.ಆರ್.ವಿಶುಕುಮಾರ್**

Journalists are suckers. Thank god, you have shown atlast.

**- ರಾಜೇಂದ್ರ ಜಂಟಿ ಸಂಪಾದಕ ಹೊಸ ದಿಗಂತ**

ನೀವು ಇರುವ ಕ್ಷೇತ್ರದ ವಿಮರ್ಶೆ ಮಾಡಿದ್ದು ಪ್ರಶಂಸನೀಯ... ನಿಮ್ಮ ಬರಹವನ್ನು ಎರಡು ಸಲ ನಿಧಾನವಾಗಿ ಓದಿ ಮನನ ಮಾಡಿಕೊಂಡು ಬರೆದಿರುವೆ. ನಿಜದ ನೇರಕ್ಕೆ ನಡೆಯುವ ನಿಮ್ಮ ನಿಲುವು ನಿರಂತರ ಮುನ್ನಡೆಯಲಿ.

**-ಪ್ರೊ.ಅಲ್ಲಮಪ್ರಭು ಬೆಟ್ಟದೂರು**

ಪತ್ರಿಕಾ ಕ್ಷೇತ್ರದಲ್ಲಿನ ನಿಮ್ಮ ಸುದೀರ್ಘ ಅನುಭವದಿಂದಾಗಿ 'ಅಂಕಣ'ದ ಸಾಲುಗಳೆಲ್ಲ ಎದೆಯ ಕದ ತಟ್ಟುತ್ತೆ. ನಿಮ್ಮ ಈ ಲೇಖನ ಕೂಡ 'ಕೆಲವರ' ಕೆಂಗಣ್ಣಿಗೆ ಗುರಿಯಾದರೆ ಅಚ್ಚಲಯೇನಿಲ್ಲ. ನಿಮ್ಮ ಪ್ರತಿ ಭಾನುವಾರದ ಬರಹಗಳನ್ನು ಕಾತರದಿಂದ ಕಾಯುವವರಲ್ಲಿ ನಾನೂ ಒಬ್ಬ.

**-ಆರೂರು ಲಕ್ಷಣ ಶೇಟ್**

ಪತ್ರಕರ್ತರು ಬಿಡಿ. ಮಠಾಧೀಶರು ಕಡಿಮೆ ಇಲ್ಲವಲ್ಲ? ಪರಿಸ್ಥಿತಿ ಸುಧಾರಿಸಬಹುದೇ?

**-ಧರಣೀಂದ್ರ ಕುರಕುಲ**

ನಿಮ್ಮ ಲೇಖನ ಸತ್ಯದ ಅನಾವರಣ. ಅಭಿನಂದನೆಗಳು.

**-ಬರಗೂರು ರಾಮಚಂದ್ರಪ್ಪ**

Compliments for the honest submission.

**-ಜೆ.ಆರ್.ರಾಮಮೂರ್ತಿ**

ಅದ್ಭುತವಾದ ಲೇಖನ, ಪತ್ರಿಕೋದ್ಯಮದ ಘಾತಕಲಗೆ ಎಚ್ಚಲಕೆಯ ಪಾಠ.

**-ಬಿ.ಕೆ.ಶಿವರಾಂ**

Really boldest. candid, introspective column that exposes the hypocrasy of politics and media. My salutes to you.

**-ಸುರೇಶ್‌ಕುಮಾರ್**

ನ್ಯಾಯನಿಷ್ಠುರ ಪದ್ಮರಾಜ ಯಾರಿಗೂ ಅಂಜುವುದಿಲ್ಲ. Marvellous unique article. Only you can wirte this.

**-ಮನು ಬಳಿಗಾರ್**

ಇಂದಿನ ನಿಮ್ಮ ಅಂಕಣ ತುಂಬಾ ಚೆನ್ನಾಗಿದೆ. ಚಿಂತನೆ, ವಿವೇಕ, ಸತ್ಯಪ್ರಿಯತೆ ಹಾಗೂ ದೂರದೃಷ್ಟಿ ಉಳ್ಳ ಗಂಭೀರ ಬರಹ, ಅಭಿನಂದನೆಗಳು.

**-ಪ್ರೊ.ಎಂ.ವಿ.ಸುಬ್ರಹ್ಮಣ್ಯ**

ಭೀಮಸೇನ ಜೋಷಿ ಹಾಡಿದರೆಂದರೆ...

ಲೇಖನ ಓದಿದೆ. ಮೊನ್ನೆ ನಾನೂ ಗಾಯನ ಸಮಾಜಕ್ಕೆ ಬಂದಿದ್ದೆ. ಭೀಮಸೇನರ ಹಾಡುಗಾಲಕೆ ಕೇಳಿ ನನಗೂ ಬದುಕು ಸಾಕೆನಿಸಿತು.

**-ಜಿ.ಎ.ಅಡಗಟ್ಟಿ (ಹಿರಿಯ ಕೆ.ಎ.ಎಸ್ ಅಧಿಕಾರಿ)**

ನಿಮ್ಮ ನಾಲ್ಕನೇ ಆಯಾಮದ ಅಂಕಣಗಳನ್ನು ನಿಯಮಿತವಾಗಿ ಓದುತ್ತೇನೆ. ಭೀಮಸೇನ ಜೋಶಿ ಹಾಡಿದರೆಂದರೆ... ಓದುತ್ತ ಹೋದಂತೆ ನನಗೆ ಭೀಮಸೇನ ಜೋಶಿಯವರ ಹಾಡು ಕೇಆದಷ್ಟೇ ಆನಂದವಾಯಿತು! ಅಭಿವ್ಯಕ್ತಿಸುವಾಗ ಬರಹಗಾರನ, ಹಾಡುಗಾರನ, ಕಲಾವಿದನ ನೋವು ಅಥವಾ ಸಂತೋಷ 'ಹೆಣ್ಣು ಗಂಡಿನ ಸಂಗಮದ ಹಾಗೆ', ಒಮ್ಮೆ ತೃಪ್ತಿ, ಮತ್ತೊಮ್ಮೆ ಅತೃಪ್ತಿ ನೀಡುತ್ತ ಒಮ್ಮೆ ಅರಕೆಯ ಕಾಟ, ಮತ್ತೊಮ್ಮೆ 'ಸಿದ್ಧಿ'ಯ ಸಂತೃಪ್ತಿ ಅನುಭವ ಕೊಡುತ್ತ ಹೋಗುವ ಪಲ ಅವರ್ಣನೀಯ, ಜುಳು ಜುಳು ಹಲಯುವ ತಿಳಿನೀಲನ ಹಾಗೆ ಹಲದ ನಿಮ್ಮ ಬರಹದ ಭಾಷೆಯ ಸೊಗಸು ಆಪ್ಯಾಯಮಾನಕರವೆನಿಸಿತು. ಅಭಿನಂದನೆಗಳು.

**ಪ್ರೊ.ಆರ್.ವಿ.ಹೊರಡಿ**

Beautifully written piece on Bheemasena Joshi.

**-ಶ್ರೀದೇವಿ ರಾವ್**

ಇಂದಿನ ನಾಲ್ಕನೇ ಆಯಾಮ ಅದ್ಭುತ ಸರ್. ಅಕ್ಷರದ ಮೂಲಕ ಅತ್ಯುತ್ತಮ ಅಭಿವೃತ್ತಿ ಸಾಧಿಸಿದ್ದೀರ. ಅನುಭವ ಹಂಚಿಕೊಂಡ ಪಲ ಓದುಗರಲ್ಲಿ ರೋಮಾಂಚನವುಂಟುಮಾಡುತ್ತದೆ.

**-ಬಾಲಕೃಷ್ಣ ಪುತ್ತಿಗೆ**

Sir, your write-up is too good. My family members enjoyed reading it as well.

**-ವಿಶಾಖ**

ಬೆಳಗ್ಗೆ ಅವಸರದಲ್ಲಿ ಎರಡು ಪ್ಯಾರಾ ಓದಿದೆ. ಅಮೇಲೆ ಓದೋಣ ಎಂದರೂ ತಡೆಯದೆ ಕೊನೆಯ ಪ್ಯಾರಾವನ್ನೂ ಓದಿದೆ. ಈಗ ಜೊರಾಗಿ ಅತ್ತೆಗೆ ಓದಿ ಮುಣಸೊ ಹೊತ್ತಿಗೆ ಕಂಪಿಸಿ ಹೋದೆ...

**-ಶೈಲಜಾ ಹೂಗಾರ್**

ಹೇಳದ್ದನ್ನೇ ಹೇಳುತ್ತ... ತಿದ್ದಿದ್ದನ್ನೇ ತಿದ್ದುತ್ತ...

ಈ ಸಲದ ನಿಮ್ಮ ಅಂಕಣ ಬಹಳ ಹಿಡಿಸಿತು. ವೈಯಕ್ತಿಕವಾಗಿ ನಾನೂ ಇಂತಹ ತಪ್ಪುಗಳನ್ನು ಬಹಳ ಮಾಡಿದವನು!

**-ರಹಮತ್ ತರೀಕೆರೆ**

The column is good text book for media students.

**-ನಾಗೇಶ ಹೆಗಡೆ**

My hearty congratulations. You have touched the cord of kannada journalism.

**-ಭರತ್‌ಕುಮಾರ್**

Even I write Janardhan like you only. Your article is a good guideline for young writers.

ಆಮಿಷಗಳ ಹರಾಜನಲ್ಲಿ...

**-ಸುರೇಶ್ ಹೆಚ್ಚಿಕ**

Your article today is excellant one. I pray god to give all strength health peace and everything to you and your family so that you can contribute more to the society.

**-ಎಂ. ರಾಮಯ್ಯ**

Sir, what a fine timely article! Hats off to you. Please keep it

up.

**ತುಮಕೂರು ಚಂದ್ರಕಾಂತ್**

ಮಧ್ಯಪ್ರಾಚ್ಯದಲ್ಲಿ ಪತ್ರಕರ್ತನಾಗಿರುವುದು ಎಂದರೆ...

A chill entered my spine after reading Suleiman's plight. Thanks for this glimpse about brutal dictatorship and bold journalism.

**-ಸುರೇಶಕುಮಾರ್**

ಸರ್, ತುಂಬಾ ಚೆನ್ನಾಗಿದೆ ನಾಲ್ಕನೇ ಆಯಾಮ. ನಾವಿಲ್ಲ 'ಪ್ರೆಸ್' ಅಂತ ಹಾಕಿಕೊಂಡು ಬೇಕಾದ ಹಾಗೆ ಆಟ ಆಡ್ತೀವಿ. ಲೇಖನ ಓದಿದ ಮೇಲೆ ನಮಗೆ ಸ್ವಾತಂತ್ರ್ಯ ಜಾಸ್ತಿ ಆಯಿತು ಎಂದು ಅನಿಸುವುದಿಲ್ಲವೇ?

**-ಸಿದ್ದಲಿಂಗಯ್ಯ ಕಣಕಾಲಮಠ**

ಪ್ರೇಮ ಎಂದರೆ ಸಾಮಾನ್ಯವೇ?

ನಿಮ್ಮ ಅಗಾಧ ಜೀವನಾನುಭವ ಮತ್ತು ಜೀವನಪ್ರೀತಿ 'ರಸವು ರಸಬಲ್ಲ ರಸಿಕನದು' ಎಂಬ ಬೇಂದ್ರೆ ನುಡಿಯಂತೆ ರಸಿಕಮನದ ಆಹ್ಲಾದವಾಗಿ ಲೇಖನದ ರೂಹು ಪಡೆಲದೆ, ಜಗದ ಮೂಲೆ ಮೊಡಕಿನ ಅಗಾಧ ಜೀವನಸ್ಪಂದನವನ್ನು ತಮ್ಮ ಲೇಖನಿ ಹೊರ ಹಾಕುತ್ತಿರು. ಜನಕ್ಕೆ ನಿಜ ಒಲವಿನ ಬಿಸಿ ಅಪ್ಪುಗೆ ನೀಡುತ್ತಿರಲಿ ಎಂದು ಅನಂತಶಕ್ತನಲ್ಲಿ ಪ್ರಾರ್ಥಿಸುತ್ತೇನೆ.

**-ಡಾ.ಜಿ.ಕೃಷ್ಣಪ್ಪ**

ಅಷ್ಟು ಒಳ್ಳೆ ಮೇಡಂನ ಅಂಕಣದಲ್ಲೂ ಗೋಳು ಹೊಯ್ಕೊಂಡಿದ್ದು ಸಲೀನಾ? ನಿಮ್ಮನ್ನು ಇಷ್ಟು ವರ್ಷ ಸಹಿಸಿಕೊಂಡಿಲ್ವಾ? She is really great, ನಾನು ಮೇಡಂ ಪಾರ್ಟಿ!

**-ರೋಹಿಣಿ ಮುಂಡಾಜೆ**

Today's story of Margret and the old man Abdulla is an interesting read. Made my morning coffee taste better.

**-ಸತ್ಯೇಶ್ ಬೆಳ್ಳೂರ್**

Sir, Naalkane aayama suuperrb!

**-ಸಂಧ್ಯಾ ಹೆಗಡೆ**

ಅಂಕಣ ಮನ ಮುಟ್ಟಿತು. ಮನೆಯಲ್ಲಿ ಎಲ್ಲರಿಗೂ ಜೋರಾಗಿ ಓದಿ ಹೇಳಿದೆ. ಎಲ್ಲರೂ ಸಂತೋಷಪಟ್ಟರು ಸರ್.

**-ದಿಗಂಬರ ಗರುಡ.**

Good column today, you should take up humour writing.

**-ನಾಗೇಶ ಹೆಗಡೆ**

Dear friend, want to read 'Married to Boduvian'. Did not my sister hit your bald head with lattanige?

**-ಗೋಪಾಲ ಹೆಗಡೆ**

ಹೊಸ ಹುಡುಗ ಹುಡುಗಿಯರಿಗೆ ಮನೋಭಾವದ ಸಮಸ್ಯೆಯೇ?

ಮೊದಲ ಸಾಅನ ಬುದ್ಧಿವಂತ ವಿದ್ಯಾರ್ಥಿಯೆಂದು ತೋರುವ ತಾವು ತಮ್ಮ ವೈಯಕ್ತಿಕ ಅನುಭವ ಹಾಗೂ ಎಳೆ ವಯಸ್ಸಿನ ನೆನಪುಗಳ ಆಧಾರದ ಮೇಲೆ ಈಣನ ಯುವಜನರ ಮನೋಭಾವದ ಸಮಸ್ಯೆಯನ್ನು ವಿಶ್ಲೇಷಿಸಿದ್ದೀರಿ.

**-ಕುಚ್ಚಣ್ಣ ಶ್ರೀನಿವಾಸನ್ (ನಿವೃತ್ತ ಪೊಲೀಸ್ ಮಹಾ ನಿರ್ದೇಶಕರು)**

ನ್ಯಾಯದ ಹೆಜ್ಜೆ ನಿಧಾನ. ಆದರೆ...

Your article on Hiremath is excellant.

**-ರಹಮತ್ ತರೀಕೆರೆ**

ಅಧಿಕಾರದ ಅಮಲು...

Today's column made my morning good.

**-ವಿಶ್ವೇಶ್ವರ್ ಭಟ್**

ಎಲ್ಲಿಯ ಕೆಮರಾನ್ ಎಲ್ಲಿಯ ಯಡಿಯೂರಪ್ಪ! Good article sir.

**-ಪೂರ್ಣಿಮಾ ಬಳಗುಳಿ**

ಇವರಿಗೆ ಆತ್ಮಹತ್ಯೆ ಬಿಟ್ಟು ಬೇರೆ ಏನು ದಾಲಿ ಇದೆ?

Panchayat Raj system has taken the corruption to grass root level. Though it is said power to the people, we never thought that what kind of people we are empowering!

**-ಎಸ್.ಪ್ರಕಾಶ್**

ಅತ್ಯುತ್ತಮ ಅಂಕಣ, ಶೆಟ್ಟರ್ ಉತ್ತಲಸಬೇಕು.

**-ಬಿ.ಎಂ.ಹನೀಫ್**

ಅಂಕಣದ ಕೊನೆಯ ಸಾಲು ಶೀರ್ಷಿಕೆ ಆಗಬೇಕಿತ್ತು.

**-ಪ್ರೊ.ಎಸ್.ಎಲ್.ಎಂ.ಪಾಟೀಲ್**

Very relevant and appropriate article today by you. It depicts the depth of corruption and comments on Anna movement without analysing anything unnecessarily. You must think of writing fiction. You have a story teller in you.

**-ವಿವೇಕ್ ಶಾನಭಾಗ**

ಬೆಳಗ್ಗೆ ನಿಮ್ಮ ಅಂಕಣ ಓದಿದಾಗಿನಿಂದ ಮನಸ್ಸೇ ಚೆನ್ನವಾಗಿದೆ. ನಮ್ಮ ದೇಶಕ್ಕೆ ಭವಿಷ್ಯವೇ ಇಲ್ಲವೇನೋ ಎಂದು ಬೇಸರ ಆಗುತ್ತಿದೆ. ಹೇಗೆ ಇದನ್ನು ಸಲ ಮಾಡುವುದೋ ಏನೋ..? ಗೊತ್ತಾಗುವುದಿಲ್ಲ. ನಿಜಕ್ಕೂ ಒಳ್ಳೆಯ ಬರಹ. ಕನ್ನಡಕ್ಕೇ ಹೊಸದು.

**-ಡಾ.ಆರ್.ಪೂರ್ಣಿಮಾ**

ನಿಮ್ಮ ಪ್ರಶ್ನೆಗೆ ಶೆಟ್ಟರ್ ಉತ್ತಲಸುವರೇ? ಆತ್ಮಹತ್ಯೆಗಳನ್ನು ತಡೆಯುವರೇ? ನಿಮ್ಮ ಪ್ರಶ್ನೆಗೆ

ಕೋಟಿ ಧ್ವನಿಗಳ ಬಲವಿದೆ.

**-ಡಾ.ರಾಮಕೃಷ್ಣ ಮರಾಠ**

ಚೂರು ಚೂರಾದ ಊರಿಗೆ ಯಾರು ದೊರೆ?

Looking at the photo I thought it was some African city. It is sad that our own Raichur is in that state of affairs. Hope the establishment wakes to its call of duty.

**-ಸತ್ಯೇಶ್ ಬೆಳ್ಳೂರ್**

Thanks a lot for still remembering me and acknowledging my small effort in Bidar. In today's times when good seems to be forgotten quickly, its rare to find people who remember.

**-ಹರ್ಷ ಗುಪ್ತ**


ಈ ವಾರದ ನಾಲ್ಕನೇ ಆಯಮ ಅರ್ಥಪೂರ್ಣ. good example for social responsibility write up.

**-ಕೃಷ್ಣಪ್ರಸಾದ್**

ಮಣ್ಣು ಎಂಬ ಮಾಯೆಯ ಬೆನ್ನಟ್ಟಿ

Your article take stock of past and provides a comprehensive view of the present. Also it has necessary warning for the future. It reads well too.

**-ವಿವೇಕ್ ಶಾನಭಾಗ**



ಪತ್ರಿಕೋದ್ಯಮ ಸ್ವಂತಕ್ಕೆ ಇಹಪರ ಸಾಧನವಲ್ಲ, ಅದೊಂದು ಜನಪರ ಸಾಧನ ಎಂದು ನಂಬಿ ನಡೆವ ಪತ್ರಕರ್ತ ಪದ್ಮರಾಜ ದಂಡಾವತಿ. ಆದ್ದರಿಂದಲೇ ಅವರ ಕಣ್ಣೋಟಕ್ಕೆ ನಮ್ಮ ನಾಡಿನ ಹತ್ತಾರು ವಿದ್ಯಮಾನಗಳು ಹಲವಾರು ಆಯಾಮಗಳಲ್ಲಿ ಕಾಣಿಸಿಕೊಳ್ಳುತ್ತವೆ. ಎಲ್ಲೋ ಮರೆಯಲ್ಲಿರುವ ಸಂಗತಿಗಳೂ ಅವರನ್ನು ಕೈಬೀಸಿ ಕರೆದು ತಮ್ಮ ಇರವಿನ ಬಗ್ಗೆ ಬರೆಸಿಕೊಳ್ಳುತ್ತವೆ. ಬದುಕಿನ ಅನೇಕ ಸಣ್ಣ ವಿಷಯಗಳಿಗಿರುವ ದೊಡ್ಡ ವಿಸ್ತಾರವನ್ನು ಹಿಡಿದಿಡಲು ಅವರ ಬರಹಗಳು ಪ್ರಯತ್ನಿಸುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಅವರ ಅಂಕಣಗಳು ಓದುಗರ ಅಂತಃಕರಣವನ್ನು ಕಲಕುತ್ತವೆ.

ಪದ್ಮರಾಜ ದಂಡಾವತಿ ಮೂಲತಃ ರಾಜಕೀಯ ವಿಶ್ಲೇಷಕ; ಕರ್ನಾಟಕದ ಸಮಕಾಲೀನ ರಾಜಕಾರಣದ ನೂರೆಂಟು ಆಟಗಳನ್ನು ವಿಶ್ಲೇಷಿಸಿ ಅವರು ಕೊಟ್ಟ ತೀರ್ಪುಗಳಲ್ಲಿ ಅದೆಷ್ಟು ರಾಜಕಾರಣಿಗಳು ಔಟಾದರು! ಹಾಗೆಯೇ ಕಿರಿಯ ಪತ್ರಕರ್ತರಿಗೂ ಅದೆಷ್ಟು ಪಾಠಗಳಾದವು! ಆದರೆ ಇಷ್ಟು ಮಾತ್ರವಲ್ಲ, ಸಮಕಾಲೀನ ಸಾಮಾಜಿಕ ಮತ್ತು ಸಾಂಸ್ಕೃತಿಕ ರಾಜಕಾರಣವನ್ನು ಕುರಿತು ಅವರಷ್ಟು ಬರೆದವರು ವಿರಳ. ಈ ಸಂಕಲನದ ಹಲವು ಬರಹಗಳು ಅದರ ಸೂಕ್ಷ್ಮ ಪದರಗಳನ್ನು ಅನಾವರಣ ಮಾಡುತ್ತವೆ.

ಎರಡು ಅಂಶಗಳಿಂದ ಈ ಅಂಕಣ ಬರಹಗಳಿಗೆ ಪ್ರಾಪ್ತವಾಗುವ ಅಪೇಕ್ಷಣೀಯ ಪಾಕ ಮತ್ತು ಇರಲೇಬೇಕಾದ ತೂಕವನ್ನು ಗಮನಿಸದೇ ಇರಲು ಸಾಧ್ಯವಿಲ್ಲ. ಮೊದಲಿಗೆ, ಯಾವ ಸಂಗತಿಯಾದರೂ ಆಗಲಿ ಅದನ್ನು ಬೆನ್ನ ಹಿಂದಿನ ಬೆಳಕಿನಲ್ಲಿ ಹಿಡಿದು ನೋಡುವಂಥ ಅಗತ್ಯದ ಕೆಲಸ ಇಲ್ಲಿ ನಡೆದಿದೆ. ಇತಿಹಾಸದ ಮಾರ್ಗದಲ್ಲಿ ಇಲ್ಲವೆ ನೆನಪಿನ ಓಣಿಯಲ್ಲಿ ಹಾಕುವ ನಾಲ್ಕು ಹೆಜ್ಜೆಯಿಂದ, ಯಾವ ವಿಷಯಕ್ಕಾದರೂ ಹಳೆಯದರಿಂದ ಹೆಕ್ಕಿದ ಏನಾದರೊಂದು ಹೊಸತು ಸೇರಿಕೊಂಡಿದೆ. ಇನ್ನೊಂದು, ಎಲ್ಲವನ್ನೂ ಸಾಮಾಜಿಕ ನ್ಯಾಯದ ಚೌಕಟ್ಟಿನಲ್ಲಿ ಇಟ್ಟು ನೋಡುವ ಕಾರಣ ಯಾರನ್ನೂ ಓಲೈಸದ ಪಕ್ಷಾತೀತವಾದ ನಿಲುವು ಕಾಣುತ್ತದೆ; ಅಷ್ಟರ ಮೇಲೆ ಅದ್ದಕ್ಕೂ ಪಕ್ಷಪಾತ ಕಂಡರೆ, ಅದು ಜನಗಳ ಪರವಾಗಿ ಇರುವುದರಿಂದ ಇರಲಿ ಬಿಡಿ!

-ಆರ್. ಪೂರ್ಣಿಮಾ

ಸಪ್ನ ಬುಕ್ ಹೌಸ್

3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009
ದೂರವಾಣಿ : 40114455

Shop online : www.sapnaonline.com

ISBN : 978-81-280-2149-7

ಬೆಲೆ : ₹95/-